ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಆಗಸ್ಟ್ 28, 2013 ಪುಟ 20 ರೂ. 14/-

ರಂಗತಂಡ
ಮಂಡ್ಯ ಗೆಳೆಯರ ಬಳಗ

ಸಂದರ್ಶನ
ಕಾಮರೂಪಿ

BJP-KJP ಜೊತೆ ಮೈತ್ರಿ ಎಂಜಲು ಎಲೆ ಮೇಲೆ ಜೆಡಿಎಸ್ ಉರುಳು ಸೇವೆ





ಸತೀಶ್ ರೆಡ್ಡಿ ಮಗಳ ಮರ್ಯಾದಾ ಆತ್ಮ'ಹತ್ಯೆ'



ಹುಬ್ಬಳ್ಳಿ ಎಂಎಲ್‌ಸಿ ಚುನಾವಣೆ

ಬೆಂಗಳೂರು ಹತನಾದ ಸರ್ಕಲ್‌ಗಿರಿ

ಶಾಸಕ ಐಹೊಳೆ ದುರ್ಯೋಧನನ ಲಂಚಾವತಾರ

ಸಚಿವ ಆಂಜನೇಯಗೆ ಷಣ್ಮುಖಪ್ಪನ ಕಿರುಕುಳ

ವಿ ನಟಿಯೊಂದಿಗೆ ಪೊಲೀಸ್ ಯದುಕುಮಾರನ ಪ್ರೇಮಪ್ರಸಂಗ



• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು

ಸಂಪಾದಕ

ಟೋನಿ ಸಿನಿಮಾಗೆ 'ನೀಲು' ಟಾನಿಕ್...!

'ಬರವಣಿಗೆಯನ್ನು ಗಂಭೀರವಾಗಿ ಪ್ರೀತಿಸುವ ಲೇಖಕ ಅದರ ಮೇಲೆ ತನ್ನದೇ ಆದ ಹತೋಟಿಯನ್ನು ಸ್ಥಾಪಿಸಿಕೊಳ್ಳುತ್ತಾನೆ. ಆಶಯ, ಹೇಳಲೇಬೇಕಾದ ಒತ್ತಡ, ತನ್ನ ಸಾಮರ್ಥ್ಯದ ಸಾಧ್ಯತೆ ಹಾಗೂ ಮಿತಿಗಳನ್ನೂ ಬಲ್ಲವನಾಗಿರುತ್ತಾನೆ...!'

-ಇದು ಲಂಕೇಶರ 'ನೀಲು' ಪದ್ಯಗಳ ಮೊದಲ ಸಂಕಲನಕ್ಕೆ ಮುನ್ನುಡಿ ಬರೆಯುವಾಗ ಕಿ.ರಂ. ನಾಗರಾಜರು ದಾಖಲಿಸಿರುವ ಸಾಲುಗಳು. ಬರಹಗಾರರ ಕುರಿತಂತೆ ಕಿರಂ ಮೇಷ್ಟ್ರು ಹೇಳಿರುವ ಮಾತುಗಳನ್ನು ಒಬ್ಬ ರಾಜಕಾರಣಿ, ಸಿನಿಮಾ ನಿರ್ದೇಶಕ, ನಟ ಅಥವಾ ಕ್ರೀಡಾಪಟುವಿನ ಆಯಾ ಕ್ಷೇತ್ರಗಳಿಗೆ ಅನ್ವಯಿಸಿಯೂ ಅರ್ಥೈಸಬಹುದು.

ಜನ ಕೆಲಸ ಮಾಡುವ ರಂಗಗಳಲ್ಲಿ ಹೀಗೆ ಏರ್ಪಡುವ ಸನ್ನಿವೇಶಗಳು ನಂತರದಲ್ಲಿ ತನ್ನದೇ ಛಾಪು ಮೂಡಿಸುತ್ತಾ, ಮತ್ತದರ ಪರಿಮಳ ನಿಧಾನಕ್ಕೆ ಹಬ್ಬುತ್ತಾ ಹೋಗುತ್ತವೆ. ಹೊಸ ಟ್ರೆಂಡ್ ಶುರುವಾಗುತ್ತದೆ. ವಿಭಿನ್ನ ಯೋಚನೆಗಳು, ಕನಸು ಕಾಣುವ ಧೈರ್ಯವೂ ಬರಬಹುದು.

ಕನ್ನಡ ಸಿನಿಮಾ ಇಂಡಸ್ಟ್ರಿಯಲ್ಲೀಗ ಅನೇಕ ಹೊಸಬರ ಬಗ್ಗೆ ಹೊಗಳಿಕೆಯ ಮಾತುಗಳು ಕೇಳಿಬರುತ್ತಿವೆ.

ನಿರ್ದೇಶಕ ಜಯತೀರ್ಥ ಅಂತವರಲ್ಲಿ ಒಬ್ಬರು. ಅವರ ಟೋನಿ ಸಿನಿಮಾ ಬಗ್ಗೆ ಪತ್ರಿಕೆಗಳಲ್ಲಿ ಮೆಚ್ಚುಗೆಯ ವಿಮರ್ಶೆಗಳು ಬಂದಿವೆ.

ಈಗೊಂದು ಆರು ತಿಂಗಳ ಹಿಂದೆ ಲಂಕೇಶ್ ಕಚೇರಿಗೆ ಬಂದಿದ್ದ ಜಯತೀರ್ಥ ತಮ್ಮ ಕನಸಿನ ಹೊಸ ಸಿನಿಮಾ 'ಟೋನಿ' ಬಗ್ಗೆ ಕೊಂಚ ವಿವರಿಸಿದ್ದರು. 'ಶ್ರೀನಗರ ಕಿಟ್ಟಿಗಿರುವ ನಟನಾ ಸಾಮರ್ಥ್ಯವನ್ನು ಟೋನಿಯಲ್ಲಿ ತೋರಿಸುತ್ತೇನೆ ನೋಡಿ' ಅಂತಲೂ ಹೇಳಿದ್ದರು.

ಜಯತೀರ್ಥ ಅವತ್ತು ನಮ್ಮಲ್ಲಿಗೆ ಬಂದಿದ್ದುದು ಲಂಕೇಶರ ನೀಲು ಪದ್ಯಗಳಲ್ಲಿ ಕೆಲವನ್ನು ಟೋನಿ ಸಿನಿಮಾದಲ್ಲಿ ಬಳಸಲು ಅನುಮತಿ ಕೇಳಲು,

ಅದೇನೋ ಸ್ಥಳದಲ್ಲೇ ಸಿಕ್ಕಿತು. ಆದರೆ

ಅದುವರೆಗೂ ಸಾಹಿತ್ಯ ಪ್ರಿಯರ ತೋಳಿನಲ್ಲಿದ್ದ ನೀಲು ಈಗ ಸಿನಿಮಾ ಜನರನ್ನೂ ಸೆಳೆಯುತ್ತಿರುವುದನ್ನು ನೋಡಿ ನಮಗೆಲ್ಲಾ ಆಶ್ಚರ್ಯ-ಖುಷಿಯೂ ಆಯಿತು.

'ನಾವೆಲ್ಲಾ ಸುಖದ ಕನಸನ್ನು ಕಾಣುತ್ತೇವೆ.

ಆದರೆ ಸುಖವಾಗಿ ಬದುಕುವುದನ್ನೇ ಮರೆತುಬಿಡುತ್ತೇವೆ'

-ಎನ್ನುವ ಒಂದು ನೀಲು ಪದ್ಯದ ನಾಲ್ಕು ಪುಟ್ಟ ಸಾಲುಗಳ ಎಳೆಯನ್ನೇ ಹಿಡಿದು ಕತೆ ಹೆಣೆದ ಜಯತೀರ್ಥ ಈಗ ಗೆದ್ದಿದ್ದಾರೆ. ಬದುಕಿನ ಅರ್ಥ-ಅನರ್ಥಗಳನ್ನೆಲ್ಲಾ ಥಟ್ ಅಂತ ಹೇಳಿಬಿಡುವ ಇಂತಾ ಸಾಲುಗಳನ್ನೇ ಒಂದು ದೊಡ್ಡ ಸಿನಿಮಾ ಆಗಿಸಲು ನಿರ್ದೇಶಕನಾದವರಿಗೆ ಅಪಾರ **imagination**, ಜೀವನಾನುಭವ, ಸೂಕ್ಷ್ಮ ಗ್ರಹಿಕೆಗಳೆಲ್ಲಾ ಬೇಕಾಗುತ್ತವೆ... ಜೊತೆಗೆ ಓದು ಕೂಡಾ.


'ಒಲವೇ ಮಂದಾರ'ದಂತಹ ಕೇವಲ ಒಂದೇ ಸಿನಿಮಾ ನಿರ್ದೇಶಿಸಿದ್ದ ಜಯತೀರ್ಥ ಆಗಲೇ 'ಈತ ಬೇರೆ ತರ' ಅನಿಸಿಕೊಂಡಿದ್ದರು. ಅರ್ಥಾತ್ ಸಿನಿಮಾವನ್ನು ಗಂಭೀರವಾಗಿ ಪ್ರೀತಿಸುವ ಒಬ್ಬ ನಿರ್ದೇಶಕನಾಗಿ ಅದರ ಮೇಲೆ ತಮ್ಮದೇ ಹತೋಟಿ ಸ್ಥಾಪಿಸಿಕೊಂಡಿದ್ದರು. ಹಾಗೆ ಅವರು ರೂಪಿಸಿದ್ದ ಒಲವೇ ಮಂದಾರ ಗೆದ್ದಿತಾದ್ದರಿಂದ 'ಟೋನಿ' ತರದ ವಿಭಿನ್ನ ರೀತಿಯ, ಪ್ರಯೋಗಾತ್ಮಕ ಕಮರ್ಷಿಯಲ್ ಸಿನಿಮಾ ಮಾಡುವ ಅವಕಾಶ ಜಯತೀರ್ಥ ತರದವರಿಗೆ ಸಿಗುತ್ತದೆ. ಶ್ರೀನಗರ ಕಿಟ್ಟಿಗೆ ತಾನು ಇಂತಾ ಸಿನಿಮಾದಲ್ಲಿ ನಟಿಸಬೇಕು ಅನಿಸುವುದರ ಜೊತೆಗೆ ತಾವೇ ಧೈರ್ಯ ಮಾಡಿ ಹಣ ಹೂಡಿ ನಿರ್ಮಾಪಕರೂ ಆಗುತ್ತಾರೆ.


ಕನ್ನಡ ಸಿನಿಮಾಗೆ ಈಗ ಬೇಕಿರುವುದು ಇದೇನೆ.


ಪಕ್ಕದ ತೆಲುಗು-ತಮಿಳರ ಸಿನಿಮಾಗಳ ಮೇಲೆ ಕಣ್ಣಿಟ್ಟು ಅಲ್ಲಿ ಗೆದ್ದ ಸಿನಿಮಾಗಳನ್ನೇ ಪಿಕ್‌ಪಾಕೆಟ್ ಚೋರರಂತೆ ರಿಮೇಕ್ ಮಾಡುತ್ತಾ ತಮ್ಮ ಜೀವನವನ್ನು ಪಾವನಗೊಳಿಸಿಕೊಳ್ಳುತ್ತಿರುವವರೇ ನಮ್ಮಲ್ಲಿ ಜಾಸ್ತಿ ಜನ ಇದ್ದಾರೆ. ಅಂತವರ ನಡುವೆ ಜಯತೀರ್ಥ, ಸೂರಿ, ಗುರುಪ್ರಸಾದ್, ಯೋಗರಾಜ ಭಟ್, ಶಶಾಂಕ್ ತರದವರ ಸಿನಿಮಾಗಳು ಬಾಯಿ ಕೆಟ್ಟವರ ಪಾಲಿಗೆ ಸಿಗುವ ಚಿಕನ್ ಬಿರಿಯಾನಿ ತರ ಖುಷಿ ನೀಡುತ್ತಿವೆ, ಗೆಲ್ಲುತ್ತಿವೆ.


ದಶಕಗಳ ಕಾಲ ಒಂದೇ ಮನಸ್ಥಿತಿಯಲ್ಲಿ ಪ್ರೇಕ್ಷಕರನ್ನು ಕಟ್ಟಿಹಾಕಿರುವ ಕನ್ನಡ ಸಿನಿಮಾರಂಗಕ್ಕೆ ಜನರ ಅಭಿರುಚಿಯನ್ನು ಕದಲಿಸಿ ಹೊಸದನ್ನು ಸ್ವೀಕರಿಸುವ ಮನೋಭಾವ ಬೆಳೆಸಲು ಹೊಸ ತರದ ಸಿನಿಮಾಗಳೇ ಬೇಕಾಗುತ್ತವೆ. ಇಂತಹ ಸವಾಲನ್ನು ಸ್ವೀಕರಿಸಲು ನಟ-ನಿರ್ದೇಶಕರಿಗೆ ಧೈರ್ಯ ಬೇಕೇಬೇಕು.


ನೀಲು ಪದ್ಯಗಳನ್ನು ಬಹಳ ಇಷ್ಟಪಡುವ ಸೂರಿ ತಾವು ಬಾಲ್ಯದಿಂದಲೂ ಕಂಡು, ಕೇಳಿದ ಜನಜೀವನವನ್ನೇ ಸಿನಿಮಾ ಪಾತ್ರಗಳಾಗಿಸಿ, ಸಂಭಾಷಣೆಯಾಗಿಸಿ ಜನರಿಗೆ ಇಷ್ಟದ ನಿರ್ದೇಶಕರಾದರು.














ಬದುಕಿನಲ್ಲಿ ಅಪಾರ ಕಹಿ, ನೋವನುಭವಿಸಿರುವ ಸೂರಿ ಅದನ್ನೆಲ್ಲಾ ಮಾಗಿದ ಕತೆಯಾಗಿಸಿ, ಸಂಯಮ ಹಾಗೂ ಹರಿತ ಒಳನೋಟಗಳ ಸಿನಿಮಾ ಆಗಿಸಿ ವಿಭಿನ್ನ ಅನುಭವ ಕೊಡುತ್ತಿದ್ದಾರೆ.

ಇದೇ ಸಾಲಿನಲ್ಲಿ ನಿಲ್ಲುವ ಗುರುಪ್ರಸಾದ್ ಹಣ ಮತ್ತು ಮನುಷ್ಯ ಗುಣವನ್ನು ಅದ್ಭುತವಾಗಿ ಬಿಂಬಿಸುವ, ಗೇಲಿ ಮಾಡುವ ಕಥಾವಸ್ತುಗಳ ಸಿನಿಮಾ ಕೊಟ್ಟು ತಮ್ಮದೇ ಛಾಪು ಮೂಡಿಸಿದ್ದಾರೆ. ಅವರ 'ಡೈರೆಕ್ಟರ್ ಸ್ಪೆಷಲ್' ಬಂದಾಗ ಪಡ್ಡೆ ಹುಡುಗರಂತೆ ನಾವೊಂದಿಷ್ಟು ಗೆಳೆಯರು ಮೊದಲ ದಿನವೇ ಹೋಗಿ ಸಿನಿಮಾ ನೋಡಿ ಬಂದಿದ್ದೆವು.

ಆ ನಂತರ ಫೋನಿಗೆ ಸಿಕ್ಕ ಗುರುಪ್ರಸಾದ್ ''ಸಿನಿಮಾ ಹೇಗನಿಸಿತು?' ಅಂತ ಕೇಳಿದ್ದರು.

'ಕತೆ ಚೆನ್ನಾಗಿದೆ, ಆದರೆ ಸಿನಿಮಾದ ಕೊನೆಯ ಭಾಗದಲ್ಲಿ ನೀವು ಡೈರೆಕ್ಟರ್ ಆಗಿ ಬರುವುದು ಕೃತಕ ಅನಿಸಿತು. ಪ್ರೇಕ್ಷಕರಿಗೆ ಅಂದರೆ ಜನಸಾಮಾನ್ಯರಿಗೆ ನ್ಯಾಯ-ಅನ್ಯಾಯದ ಪರಿಕಲ್ಪನೆ ಇರುತ್ತೆ, ಅದನ್ನು ನೀವೇ ಬಂದುಹೇಳುವುದು ಬೇಕಿರಲಿಲ್ಲ' ಅಂದಿದ್ದೆ.

ಗುರುಪ್ರಸಾದ್ ಆ ಸಿನಿಮಾದ ಸಹ ನಿರ್ಮಾಪಕರೂ ಆಗಿದ್ದರು. ಅವರಿಗೆಲ್ಲ ಖರ್ಚಾಗಿದ್ದ ಹಣ ವಾಪಸ್ ಬಂದಿತ್ತು, ಆದರೆ ಜನ ಥಿಯೇಟರ್‌ಗೆ ಬರಲಿಲ್ಲ, ಆ ಲೆಕ್ಕದಲ್ಲಿ 'ಸ್ಪೆಷಲ್' ಸಿನಿಮಾ ಸೋತಿತ್ತು,

ಈ ಸೋಲು ಗುರುಪ್ರಸಾದ್‌ರನ್ನು ಕೆಲದಿನ ಡಿಸ್ಟರ್ಬ್ ಮಾಡಿತ್ತು, ಹಾಗೆ ನೋಡಿದರೆ ಸೂರಿಯ ಇಂತಿ ನಿನ್ನ ಪ್ರೀತಿಯ, ಅಣ್ಣಾ ಬಾಂಡ್ ಅನ್ನು ಕೂಡ ಜನ ಇಷ್ಟಪಡಲಿಲ್ಲ,

ಇದನ್ನೆಲ್ಲಾ ಕೇವಲ ಬಿಡಿ ಬಿಡಿ ಘಟನೆಯಾಗಿ ನಾವಾಗಲಿ, ಇಂಡಸ್ಟ್ರಿಯವರಾಗಲೀ ನೋಡಕೂಡದು. ಕಳೆದ ಇಪ್ಪತ್ತು ವರ್ಷಗಳಿಂದ ಏಕತಾನತೆಯಲ್ಲೇ ಮುಳುಗಿದ್ದಂತೆ ಕಾಣುವ ಕನ್ನಡ ಸಿನಿಮಾಗೆ ಆಗಿನ ಹೀರೋಗಳ 'ಇಮೇಜ್ ಹ್ಯಾಂಗೋವರ್' ಒಂದು ದೊಡ್ಡ ತೊಡಕಾಗಿತ್ತು, ನಿರ್ಮಾಪಕರು, ಫೈನಾನ್ಷಿಯರ್‌ಗಳ ಹತ್ತಿರ ಕೋಟಿಗಟ್ಟಲೆ ಹಣವಿದ್ದರೂ ಅವರಿಗೆ ಸೂರಿ, ಯೋಗರಾಜ ಭಟ್, ಗುರುಪ್ರಸಾದ್ ತರದವರ ಕನಸು ತಹತಹಗಳೇ ಅರ್ಥವಾಗುತ್ತಿರಲಿಲ್ಲ, ಆದರೆ ಕಳೆದ ಆರೆಂಟು ವರ್ಷಗಳಿಂದೀಚೆಗೆ ಇದೆಲ್ಲಾ ಕದಲುತ್ತಾ, ಹೊಸದೇನೋ **shape** ಪಡೆಯುತ್ತಿರುವುದು ಕಾಣುತ್ತಿದೆ.

ಕನ್ನಡದ ಮಟ್ಟಿಗೆ ಇದು ಬಹಳ ತಡವಾಯಿತೇನೊ. ಹಿಂದಿ, ಮಲೆಯಾಳಂ. ತೆಲುಗು; ತಮಿಳು ಸಿನಿಮಾ ಜನ ಈಗಾಗಲೇ ಹೊಸ ಕಮರ್ಷಿಯಲ್ ಪ್ರಯೋಗಾತ್ಮಕ ಸಿನಿಮಾ ರೇಸ್‌ನಲ್ಲಿ ಮೈಲುಗಟ್ಟಲೆ ಮುಂದಿದ್ದಾರೆ.

ಕನ್ನಡ ಸಿನಿಮಾ ಕ್ಷೇತ್ರಕ್ಕೆ ಈಗ ಹೊಸ ಕನಸುಗಳ ಅಭಿರುಚಿಯ ನಿರ್ಮಾಪಕರು, ನಿರ್ದೇಶಕರು, ಕತೆಗಾರರು, ಹಾಡು ಬರೆಯುವವರು ಕಾಲಿಡುತ್ತಿದ್ದಾರೆ. ಹೀರೋಗಳ ತಮ್ಮ ಇಮೇಜ್ ಬಗ್ಗೆ ತಲೆ ಕೆಡಿಸಿಕೊಳ್ಳ **fullfillment** ನ ಖುಷಿ, ಗೆಲುವು ಎರಡಿದ್ದರೆ ಸಾಕು ಎಂದು ಹೊರಟಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕೆಲವು ಸಿನಿಮಾ ಸೋಲಬಹುದು, ಕೆಲವು ಗೆಲ್ಲುತ್ತವೆ. ಒಟ್ಟಾರೆಯಾಗಿ ಒಂದು ಕಾಲಾವಧಿಯಲ್ಲಿ ಇವೆಲ್ಲ ಸೇ ಸಿನಿಮಾಗಳ ಹಾಗೂ ಪ್ರೇಕ್ಷಕನ ಮನಸ್ಥಿತಿ ಹಾಗೂ ಗುಣಮಟ್ಟವನ್ನೂ ಹೆಚ್ಚಿಸುವ ಕಡೆ ಸಾಗುತ್ತವೆ.

ಕನ್ನಡ ಸಿನಿಮಾಗಳಲ್ಲಿ ಆಗುತ್ತಿರುವಂತೆಯೇ ಟಿವಿ ಧಾರಾವಾಹಿಗಳೂ ತಮ್ಮ ಹಳೇ ಪೊರೆ ಕಳಚಿಕೊಳ್ಳುವುದರ ಅನಿವಾರ್ಯತೆಯನ್ನು ಯಾವ ಅರ್ಥ ಮಾಡಿಕೊಳ್ಳುತ್ತಾರೋ ಕಾದು ನೋಡಬೇಕು. ಈಗ ಪ್ರಸಾರವಾಗುತ್ತಿರುವ ಕೆಲವು ಸೀರಿಯಲ್‌ಗಳ ಪಾತ್ರ-ಕತೆಗಳು ಇಡೀ ಕರ್ನಾಟಕದ ಯಾವ ಊರಿನಲ್ಲೂ ಇರುವಂತೆ ಜನರಿಗೆ ಅನಿಸುತ್ತಿಲ್ಲ,

ಜನರ ನಿತ್ಯಬದುಕಿನ ಬವಣೆ, ಖುಷಿ, ತಲ್ಲಣಗಳನ್ನು ಬಿಂಬಿಸುವ ಧಾರಾವಾಹಿಗಳು ಬರುವಂತಾದರೆ ಅದರ ಸೊಗಸೇ ಬೇರೆ.

ಈಗೊಂದು ದಶಕದ ಹಿಂದೆ ಕೋಟಿಗಾನಹಳ್ಳಿ ರಾಮಯ್ಯ ತಮ್ಮ 'ಸಂಕ್ರಾಂತಿ' ಸೀರಿಯಲ್‌ನಲ್ಲಿ ಅಂತಾದ್ದೊಂದು ಪ್ರಯತ್ನ ಮಾಡಿದ್ದರು. ನೈಸ್ ರಸ್ತೆ ಜನರ ಬದುಕನ್ನು ಹೆಬ್ಬಾವಿನಂತೆ ನುಂಗುತ್ತಾ ಬಂದದ್ದನ್ನು ಸಂಕ್ರಾಂತಿ ನಿರೂಪಿಸಿತ್ತು.

ಟಿ.ಎನ್. ಸೀತಾರಾಂ ತಮ್ಮ 'ಮುಕ್ತಾ' ಸೀರಿಯಲ್‌ನಲ್ಲಿ ನಕ್ಸಲರ ಪಾತ್ರಗಳನ್ನು ತಂದು ವಿಭಿನ್ನ ರೀತಿಯಲ್ಲಿ ಕತೆ ಹೇಳಲು ಪ್ರಯತ್ನಿಸಿದ್ದರು ಆದರೆ ಆಗಲೇ ಸಾಕೇತ್ ಎನ್‌ಕೌಂಟರ್ ಆಯಿತು. ಆಗ ಕೊಂಚ ಗಾಬರಿಯಾದಂತೆ ಕಂಡ ಸೀತಾರಾಂ ತಕ್ಷಣ ಆ ಪಾತ್ರಗಳನ್ನೇ ಅಳಿಸಿ ಹಾಕಿಬಿಟ್ಟಿದ್ದರು.

ಅದೀಗ ಇನ್ನೊಂದು ರೀತಿಯಲ್ಲಿ ಟಿವಿಯಲ್ಲಿ ಕಾಣಿಸಿಕೊಳ್ಳುತ್ತಿದೆ. ಮೊನ್ನೆ ಫೋನ್‌ಗೆ ಸಿಕ್ಕ ನಟ-ನಿರ್ಮಾಪಕ ಬಿ. ಸುರೇಶ್ ತಮ್ಮ 'ಅಳಗುಳಿಮನೆ' ಸೀರಿಯಲ್ ಬಗ್ಗೆ ಮಾತನಾಡುತ್ತಾ 'ನಿಮ್ಮ ಜಂಗಲ್‌ನಾಮ ಪುಸ್ತಕದ ವಿಷಯವೆಲ್ಲಾ ಈ ಸೀರಿಯಲ್‌ನಲ್ಲಿದೆ' ಅಂದರು

ಈಗ ರಾಯಚೂರಿನಲ್ಲಿರುವ **'The Hindu'** ಪತ್ರಿಕೆಯ ವರದಿಗಾರ ಮಿತ್ರ ಕುಮಾರ್ ಬುರಡಿಕಟ್ಟಿ ಅನುವಾದಿಸಿರುವ 'ಜಂಗಲ್ ನಾಮ'ವನ್ನು ನಾನೇ ಪ್ರಕಟಿಸಿದ್ದೆ. ಅದೀಗ ಅಳಗುಳಿಮನೆಯ ಕಥಾಹಂದರದ ಒಂದು ಭಾಗವಾಗಿ ಜನರಿಗೆ ವಿಭಿನ್ನ ಅನುಭವ ನೀಡು ಸೀರಿಯಲ್ ಆಗಿ ಪಾಪುಲರ್ ಆಗಿದೆ.

ಸಿನಿಮಾ ಪ್ರೇಕ್ಷಕರಾಗಲಿ, ಟೀವಿ ವೀಕ್ಷಕರಾಗಲಿ ಅವರ ಮನಸ್ಥಿತಿ ಹಾಗೂ ಅಭಿರುಚಿಗಳನ್ನು ಕದಲಿಸಿ ಹೊಸದನ್ನು ಸ್ವೀಕರಿಸುವಂತೆ ನೋಡಿಕೊಳ್ಳುವುದು ದೊಡ್ಡ ಸಾಹಸದ ಕೆಲಸ.

ಆದರೆ ಇದಾಗದಿದ್ದರೆ ಇಲ್ಲಿ ಯಾರೂ ಹೊಸದೇನನ್ನಾದರೂ ಸಾಧಿಸುವುದು ಕಷ್ಟವಾಗಬಹುದು.

ಇದು ಪತ್ರಿಕೆಗಳಿಗೂ ಅನ್ವಯಿಸುವ ಮಾತು.

ದಕ್ಷರನ್ನು ಭಸ್ಮ ಮಾಡುವ ಭ್ರಷ್ಟರು

ಇತ್ತೀಚೆಗೆ ಅಮಾನತ್ತುಗೊಂಡಿರುವ ಉತ್ತರ ಪ್ರದೇಶದ ಐಎಎಸ್ ಅಧಿಕಾರಿಣಿ ದುರ್ಗಾ ಶಕ್ತಿ ನಾಗ್ಪಾಲ್ ಕುರಿತು ಚರ್ಚೆ ಈಗ ಎಲ್ಲೆಡೆ ನಡೆಯುತ್ತಿದೆ. ಈಕೆಯ ಅಮಾನತ್ತಿನ ಹಿಂದೆ ಹುಂಬತನದ ಪಾತ್ರವೆಷ್ಟು ಮತ್ತು ಭ್ರಷ್ಟರ ಪ್ರಭಾವ ಎಷ್ಟು ಎಂದು ನೋಡಿದರೆ ನಮ್ಮ ಪ್ರಜಾಪ್ರಭುತ್ವದಲ್ಲಿ ಜನನಾಯಕರು ಎನಿಸಿಕೊಂಡಿರುವವರ ದುಷ್ಟತನ ಎದ್ದು ಕಾಣಿಸುತ್ತದೆ.

ಇನ್ನೂ 28ರ ಹರೆಯದ ದುರ್ಗಾ ಶಕ್ತಿ ನಾಗ್ಪಾಲ್ ಸಾಮಾನ್ಯ ಮಹಿಳೆಯಲ್ಲ. ಆಕೆ ದಿಟ್ಟ ಮಹಿಳೆ. ಬಾಲ್ಯವಳಾಗಿದ್ದಾಗಿನಿಂದ ಚೆನ್ನಾಗಿ ಓದಬೇಕೆಂಬ ಆಶಯ ಹೊಂದಿದ್ದವಳು. ಆ ನಿಟ್ಟಿನಲ್ಲಿ ಶ್ರದ್ಧೆವಹಿಸಿ ಓದಿದ್ದರಿಂದ ಎಲ್ಲಾ ತರಗತಿಗಳಲ್ಲೂ ಮೊದಲ ಸ್ಥಾನ ಪಡೆದವಳು. ಮಧ್ಯಮವರ್ಗದ ಕುಟುಂಬದ ದುರ್ಗಾ ಆ ವಲಯದವರ ಬಹುತೇಕ ಚಿಣ್ಣರಂತೆ ಕಂಪ್ಯೂಟರ್ ಎಂಜಿನಿಯರಿಂಗ್ ಓದಿದಳು. ಆಕೆ ಯಾವುದಾದರೂ ಐಟಿ ಕಂಪನಿ ಸೇರಿ ಕೈತುಂಬ ಸಂಭಾವನೆ ಪಡೆದು ನೆಮ್ಮದಿಯ ಬದುಕನ್ನು ನಡೆಸಬಹುದಿತ್ತು. ಆದರೆ ಆಕೆ ಹಾಗೆ ಮಾಡಲಿಲ್ಲ. ಜನಸಾಮಾನ್ಯರಿಗೆ ನೆರವಾಗಲೆಂದು ಯುಪಿಎಸ್‌ಸಿ ಪರೀಕ್ಷೆ ಬರೆದಳು. ಮೊದಲ ಪ್ರಯತ್ನದಲ್ಲಿ ಆಕೆ ಪಾಸ್ ಆದರೂ ಐಎಎಸ್ ಗ್ರೇಡ್ ಆಕೆಗೆ ಸಿಗಲಿಲ್ಲ. ಆಗಲೂ ಆಕೆ ಸುಮ್ಮನಾಗಲಿಲ್ಲ. ಎರಡನೆ ಬಾರಿಗೆ ಯುಪಿಎಸ್‌ಸಿ ಪರೀಕ್ಷೆ ಬರೆದ ದುರ್ಗಾ ಆ ಯತ್ನದಲ್ಲಿ ದೇಶಕ್ಕೇ 20ನೇ ರ್‍ಯಾಂಕ್ ಪಡೆದು ಐಎಎಸ್ ಅಧಿಕಾರಿಣಿಯಾದಳು.

ದುರ್ಗಾ ಆರಂಭದಲ್ಲಿ ಹರ್ಯಾಣ ರಾಜ್ಯದಲ್ಲಿ ಕಾರ್ಯ ನಿರ್ವಹಿಸಲಾರಂಭಿಸಿದಳು. ಆನಂತರ ಆಕೆ ತನ್ನ ಗೆಳೆಯ ಹಾಗು ಉತ್ತರ ಪ್ರದೇಶದಲ್ಲಿ ಐಎಎಸ್ ಅಧಿಕಾರಿಯೂ ಆಗಿದ್ದ ಅಭಿಷೇಕ್ ಸಿಂಗ್ ಎಂಬಾತನನ್ನು ವಿವಾಹವಾಗಿದ್ದರಿಂದ ಅದೇ ರಾಜ್ಯಕ್ಕೆ ವರ್ಗಾವಣೆ ಪಡೆದಳು. ಆಕೆ ಇನ್ನೂ ಎಳಸು, ಆದ್ದರಿಂದ ಈಕೆಯಿಂದ ಯಾವ ಅಪಾಯವೂ ಇಲ್ಲ ಎಂದು ಭಾವಿಸಿದ ಉತ್ತರ ಪ್ರದೇಶದ ಮುಖ್ಯಮಂತ್ರಿ ದುರ್ಗಾಳನ್ನು ಗೌತಮ್ ಭುದ್ಧ್ ನಗರ್ ಜಿಲ್ಲೆಯ ಸುಬ್ ಡಿವಿಜಿನಲ್ ಮ್ಯಾಜಿಸ್ಟ್ರೇಟ್ ಆಗಿ ನೇಮಿಸಿದ.

ಮುಖ್ಯಮಂತ್ರಿಯಾಗಿದ್ದಾಗ ಮರಳು ಮಾಫಿಯಾ ದಲಿತರ ಕೈಯಲ್ಲಿತ್ತು. ಆದರೆ ಯಾವಾಗ ಕಳೆದ ವರ್ಷ ಮಾಯಾವತಿಯ ಬಿಎಸ್‌ಪಿ ಪಕ್ಷ ಸೋತು ಮುಲಾಯಂ ಸಿಂಗ್ ಯಾದವ್ ಅವರ ಸಮಾಜವಾದಿ ಪಕ್ಷ ಅಧಿಕಾರದ



ಚುಕ್ಕಾಣಿ ಹಿಡಿಯಿತೋ ಮರಳು ಮಾಫಿಯಾ ಕೂಡ ಕೈಬದಲಾಯಿತು. ಈಗ ಅದರ ಮೇಲೆ ಹಿಡಿತ ಸಾಧಿಸಿರುವವನು ನರೇಂದ್ರ ಭಟ್ಟಿ ಎಂಬ ಸಮಾಜವಾದಿ ಪಕ್ಷದ ನಾಯಕ. ಈತನನ್ನು ಬರಲಿರುವ ಲೋಕಸಭೆ ಚುನಾವಣೆಯಲ್ಲಿ ಗ್ರೇಟರ್ ನೊಯಿಡಾ ಮತ್ತು ಗೌತಮ್ ಬುದ್ಧ್ ನಗರ್ ಪ್ರದೇಶಗಳನ್ನು ಒಳಗೊಂಡಿರುವ ಖುಜ್ರಾ ಮತ ಕ್ಷೇತ್ರದಿಂದ ತನ್ನ ಪಕ್ಷದ ಅಧಿಕೃತ ಅಭ್ಯರ್ಥಿ ಎಂದು ಸಮಾಜವಾದಿ ಪಕ್ಷ ಈಗಾಗಲೇ ಘೋಷಿಸಿಯಾಗಿದೆ.

ವಾಸ್ತವವಾಗಿ ಗೌತಮ್‌ಬುದ್ಧ್ ನಗರ್ ಜಿಲ್ಲೆಯಲ್ಲಿ ಇಪ್ಪತ್ತು ಕಿಲೋಮಿಟರ್ ಉದ್ದ ಹರಿಯುವ ಯಮುನ ಮತ್ತು ಹಿಂಡನ್ ಎಂಬ ನದಿಗಳ ಪಾತ್ರದಲ್ಲಿ ಮರಳನ್ನು ಎತ್ತಲು ಒಬ್ಬ ವ್ಯಕ್ತಿಗೆ ಮಾತ್ರ ಅಧಿಕೃತ ಪರವಾನಗಿ ನೀಡಲಾಗಿದೆಯಾದರೂ ಆತನ ಮೇಲೆ ಹಿಡಿತ ಸಾಧಿಸಿರುವ

ದುರ್ಗಾ ತಾನು ಮರಳು ಕಳ್ಳರಿಂದ ವಶಪಡಿಸಿಕೊಂಡಿದ್ದ ಮರಳನ್ನು ಹರಾಜು ಹಾಕಲು ಪ್ರಯತ್ನಿಸಿದಳು. ಆದರೆ ಆಗ ಆಕೆಗೆ ಒಂದು ಆಘಾತ ಕಾದಿತ್ತು ಅವತ್ತಿನ ಹರಾಜಿನಲ್ಲಿ ಓಪೇಂದ್ರ ಖರಿ ಎಂಬಾತ ಎಂಟು ಕೋಟಿ ರೂಪಾಯಿಗಳನ್ನು ಕೂಗಿದ. ಆದರೆ ಕೊನೆಗೆ ಆ ಖರಿ ನಯಾಪೈಸೆಯನ್ನೂ ಸರ್ಕಾರಕ್ಕೆ ಕೊಡದೆ ನಾಪತ್ತೆಯಾದ. ಆಗ ಮತ್ತೊಬ್ಬ ಅದೇ ಮರಳಿಗೆ ಕೇವಲ ಒಂದು ಕೋಟಿ ರೂಪಾಯಿಗಳನ್ನು ಕೂಗಿದ. ಇದರ ಹಿಂದೆ ಯಾವುದೋ ಮಸಲತ್ತಿದೆ ಎಂದು ಅರಿತ ದುರ್ಗಾ ಹರಾಜು ಪ್ರಕ್ರಿಯೆಯನ್ನೇ ರದ್ದುಗೊಳಿಸಿದಳು. ಆನಂತರ ಆಕೆಗೆ ಗೊತ್ತಾಗಿದ್ದೇನೆಂದರೆ ಮೊದಲು ಎಂಟು ಕೋಟಿ ಕೂಗಿದ್ದ ಖರಿ ಮತ್ತು ಆನಂತರ ಒಂದು ಕೋಟಿ ಕೊಡಲು ಮುಂದಾಗಿದ್ದ ವ್ಯಕ್ತಿ ಇಬ್ಬರೂ ಎಸ್‌ಪಿ ಪಕ್ಷದ ಭಟ್ಟಿಯ ಬೆಂಬಲಿಗರಾಗಿದ್ದರೆಂಬುದು. ಆಗ ಇನ್ನಷ್ಟು ಕೋಪಗೊಂಡ ದುರ್ಗಾ ಖರಿಯ ವಿರುದ್ಧ ದೂರು ದಾಖಲಿಸಿಕೊಳ್ಳಲು ಮುಂದಾದಳು. ತನ್ನ ಅನುಯಾಯಿಯ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳಕೂಡದೆಂದು ಭಟ್ಟಿ ಅದೆಷ್ಟೇ ಒತ್ತಡ ತಂದರೂ ದುರ್ಗಾ ಜಪ್ಪಯ್ಯಾ ಅನ್ನಲಿಲ್ಲ. ಖರಿ ವಿರುದ್ಧ ಎಫ್‌ಐಆರ್‌ಅನ್ನು ದಾಖಲಿಸಿಯೇ ಬಿಟ್ಟಳು.

ದುರ್ಗಾ ಶಕ್ತಿಯಿಂದಾಗಿ ಭಟ್ಟಿಗೆ ಎರಡು ರೀತಿಯ ಬಿಕ್ಕಟ್ಟುಗಳು ಎದುರಾದವು. ಒಂದೆಡೆ ಕೋಟ್ಯಾಂತರ ರೂಪಾಯಿಗಳನ್ನು ತಂದು ಕೊಡುತ್ತಿದ್ದ ಅಕ್ರಮ ಮರಳು ದಂಧೆಗೆ ಹೊಡೆತ, ಇನ್ನೊಂದೆಡೆ ಖರಿ ತರಹದ ತನ್ನ ಹಿಂಬಾಲಕರ ಮೇಲೆ ಕೇಸು, ಜೈಲು, ಇತ್ಯಾದಿ 'ಕಿರುಕುಳ'. ಸಹಜವಾಗಿಯೇ ಭಟ್ಟಿ ದುರ್ಗಾ ವಿರುದ್ಧ ಹಲ್ಲುಮಸೆಯಲಾರಂಭಿಸಿದ. ತನ್ನ ಪಕ್ಷದ ನಾಯಕ ಮತ್ತು ಮುಖ್ಯಮಂತ್ರಿ ಅಖಿಲೇಶ್ ಯಾದವ್ ಮೇಲೆ ಒತ್ತಡ ತಂದು ದುರ್ಗಾಳನ್ನು ಗೌತಮ್ ಬುದ್ಧ್ ನಗರ್ ಜಿಲ್ಲೆಯಿಂದ ವರ್ಗಾವಣೆ ಮಾಡಿಸಲು ಯತ್ನಿಸಿದ. ಆದರೆ ಆಗ ಆಕೆಯನ್ನು ಅಲ್ಲಿಂದ ಒಕ್ಕಲೆಬ್ಬಿಸಿದ್ದರೆ ರಾಜ್ಯಕ್ಕೆ ಲಾಭ ತರುತ್ತಿದ್ದ ಓರ್ವ



ಕಂಡಹಾಗೆ

• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಬರುವ ಚುನಾವಣೆಯಲ್ಲಿ ಕದಲ್ಪುರ್ ಹಳ್ಳಿಯ ಮುಸಲ್ಮಾನರಲ್ಲದೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸಿಸುವ ಮುಸಲ್ಮಾನರ ಬೆಂಬಲ ತನಗೆ ಸಿಗುತ್ತದೆ ಎಂಬುದು. ಅಕಸ್ಮಾತ್ ಈ ಅಕ್ರಮ ಮಸೀದಿಯನ್ನು 'ಕಟ್ಟರ್' ಅಧಿಕಾರಿಣಿಯಾದ ದುರ್ಗಾ ಶಕ್ತಿ ಕೆಡವಿ ಹಾಕಿದರೆ ಅದನ್ನೇ ಉಪಯೋಗಿಸಿಕೊಂಡು ಆಕೆಯನ್ನು ಜಿಲ್ಲೆಯಿಂದ ಒಕ್ಕಲೆಬ್ಬಿಸಬಹುದು ಎಂಬುದು ಎರಡನೆಯ ಲೆಕ್ಕಾಚಾರವಾಗಿತ್ತು.

ಭಟ್ಟಿಯ ಪಿತೂರಿಯ ಬಗ್ಗೆ ಕದಲ್ಪುರ್ ಗ್ರಾಮದ ಜನರಿಗೆ ಕಿಂಚಿತ್ತೂ ಅರಿವಿರಲಿಲ್ಲ. ಅವರು ಹಿಂದೆಮುಂದೆ ಯೋಚಿಸದೆ ಸರ್ಕಾರಿ ಭೂಮಿಯಲ್ಲಿ ಹರಡಿಕೊಂಡಿದ್ದ ಇಟ್ಟಿಗೆ ಮತ್ತು ಮರಳನ್ನು ಉಪಯೋಗಿಸಿ ಆರಡಿ ಎತ್ತರದ ಗೋಡೆಯನ್ನು ನಿರ್ಮಿಸಿದರು. ನೆನಪಿಡಿ, ಇದೊಂದು ಗೋಡೆಯಾಗಿತ್ತೆ ವಿನಃ ಇದಕ್ಕೆ ಗುಮ್ಮಟವಾಗಲಿ, ಸ್ತಂಭಗೋಪುರವಾಗಲಿ ಇರಲಿಲ್ಲವಾದ್ದರಿಂದ ಇದನ್ನು ಮಸೀದಿಯ ಕಟ್ಟಡ ಎಂದು ಯಾವ ನಿಟ್ಟಿನಲ್ಲೂ ಕರೆಯಲಾಗುವುದಿಲ್ಲ.

ಇಂತಹ ಒಂದು ಅಕ್ರಮ ಕಟ್ಟಡ ನಿರ್ಮಾಣದ ಬಗ್ಗೆ ಮತ್ತು ಅದರ ಹಿಂದೆ ಭಟ್ಟಿ ಇರುವ ಬಗ್ಗೆ ಅದ್ಯಾರು ದುರ್ಗಾ ಶಕ್ತಿಗೆ ತಿಳಿಸಿದರೋ ಗೊತ್ತಿಲ್ಲ, ಆಕೆ ಕದಲ್ಪುರ್ ಗ್ರಾಮಕ್ಕೆ ಬಂದು 'ಸುಪ್ರೀಂಕೋರ್ಟಿನ ಆದೇಶದ ಪ್ರಕಾರ ಸರ್ಕಾರಿ ಭೂಮಿಯಲ್ಲಿ ಸರ್ಕಾರಿ ಅನುಮತಿ ಇಲ್ಲದೆ ಯಾವ ಪ್ರಾರ್ಥನಾ ಕಟ್ಟಡವನ್ನೂ ಕಟ್ಟಲಾಗುವುದಿಲ್ಲ, ಆದ್ದರಿಂದ ಈ ಗೋಡೆಯನ್ನು ತಕ್ಷಣವೇ ತೊಡೆದು ಹಾಕಿ' ಎಂದು ಆ ಗ್ರಾಮದ ಮುಸಲ್ಮಾನರಿಗೇ ಹೇಳಿದಳು. ಅಷ್ಟು ಹೊತ್ತಿಗೆ ಇದೆಲ್ಲದರ ಹಿಂದೆ ಯಾವುದೋ ಷಡ್ಯಂತ್ರವಿದೆ ಎಂದು ಅರ್ಥ ಮಾಡಿಕೊಂಡಿದ್ದ ಗ್ರಾಮಸ್ಥರು ಸುಮ್ಮನಾದರು. ಆನಂತರ ದುರ್ಗಾ ಶಕ್ತಿ ಹಲವು ಪೊಲೀಸರ ನೆರವಿನಿಂದಲೇ ಗೋಡೆಯನ್ನು ಕೆಡವಿ ಅಲ್ಲಿಂದ ಹೊರಟುಹೋದರು.

ಆಕೆ ಅಲ್ಲಿಂದ ಹೊರಟುಹೋಗಿದ್ದೇ ತಡ, ಭಟ್ಟಿ ಕಾರ್ಯೋನ್ಮುಖನಾದ. ತಕ್ಷಣ ಅಖಿಲೇಶ್ ಯಾದವ್‌ಗೆ ಫೋನ್ ಮಾಡಿದ ಭಟ್ಟಿ ದುರ್ಗಾ ಶಕ್ತಿ ಮಸೀದಿ ಒಂದನ್ನು ಕೆಡವಿ ಹಾಕಿದ್ದಾಳೆಂದೂ, ಆ ಮೂಲಕ ಕೋಮು ಗಲಭೆಗೆ ಕಾರಣವಾಗಿದ್ದಾಳೆಂದೂ ಅಖಿಲೇಶ್ ಯಾದವ್‌ನ ಕಿವಿ ಕಚ್ಚಿದ. ಮುಖ್ಯಮಂತ್ರಿ ಅಖಿಲೇಶ್ ಯಾದವ್‌ಗೆ ಅಷ್ಟು ಸಾಕಾಗಿತ್ತು. ತಕ್ಷಣವೇ ಆತ ದುರ್ಗಾ ಶಕ್ತಿಯನ್ನು ಎಸ್‌ಡಿಎಂ ಹುದ್ದೆಯಿಂದಲೇ ಅಮಾನತ್ತುಗೊಳಿಸಿದ. ಇದಾದ ಮಾರನೆ ದಿನ ಕದಲ್ಪುರ್ ಗ್ರಾಮಕ್ಕೆ ಭೇಟಿ ನೀಡಿದ ಭಟ್ಟಿ ತನ್ನ ಮೊಬೈಲ್ ಫೋನ್‌ಅನ್ನು ಹೊರ ತೆಗೆದು "ನನಗೆ ನಲವತ್ತು ನಿಮಿಷಗಳ ಸಾಕಾದವು ದುರ್ಗಾ ಶಕ್ತಿಯನ್ನು ಒದ್ದೋಡಿಸಲು" ಎಂದು ಕೊಚ್ಚಿಕೊಂಡ. ಇನ್ನು ಮುಂದೆ ಭಟ್ಟಿಯ ಅಕ್ರಮ ಮರಳು ದಂಧೆ ಯಾವ ಅಡೆತಡೆಯಿಲ್ಲದೆ ಮುಂದುವರೆಯುವುದರ ಬಗ್ಗೆ ಯಾರಲ್ಲೂ ಸಂಶಯ ಇರುವುದು ಬೇಡ ಎಂಬ ವಾತಾವರಣ ಈಗ ಅಲ್ಲಿ ನಿರ್ಮಾಣವಾಗಿದೆ.

ಈಗ ಹೇಳಿ, ಸುಪ್ರೀಂಕೋರ್ಟ್ ಆದೇಶವನ್ನು ಪಾಲಿಸಿದ್ದು ದುರ್ಗಾ ಶಕ್ತಿಯ ತಪ್ಪೇ? ಹಾಗೆ ಮಾಡಿದ್ದರ ಹಿಂದೆ ಹುಂಬತನವಿತ್ತೇ? ಅಥವಾ ಇದೆಲ್ಲದರ ಹಿಂದೆ ನೈಸರ್ಗಿಕ ಸಂಪತ್ತನ್ನು ಲೂಟಿ ಹೊಡೆಯುವ ಮಾಫಿಯಾ ಮತ್ತು ಅಂತಹ ಮಾಫಿಯಾಗಳಿಗೆ ರಾಜಕೀಯ ಆಶ್ರಯ ನೀಡುವ ಜನನಾಯಕರ ಹಕೀಕತ್ತು ಇತ್ತೇ?

ನಮ್ಮದು ಜಗತ್ತಿನಲ್ಲೇ ಅತಿ ದೊಡ್ಡದಾದ ಪ್ರಜಾಪ್ರಭುತ್ವ. ಇಲ್ಲಿ ಪ್ರಜೆಗಳೇ ಮುಖ್ಯ ಎಂಬುದೆಲ್ಲ ಎಂತಹ ಢೋಂಗಿ ಮಾತುಗಳಲ್ಲವೇ? ಇಲ್ಲಿ ದುರ್ಗಾ ಶಕ್ತಿ ನಾಗ್ಪಾಲ್ ಎಂಬ ಅಧಿಕಾರಿಣಿ ಮಾತು ಬದಿಗಿರಲಿ, ಸ್ವತಃ ದುರ್ಗಾ ಮಾತೆ ಬಂದರೂ ಆಕೆಯನ್ನೇ ಭಸ್ಮ ಮಾಡುವ ದುಷ್ಟಶಕ್ತಿಗಳು ನಮ್ಮ ದೇಶದಲ್ಲಿ ಇಂದು ತಲೆ ಎತ್ತಿನಿಂತಿವೆ ಎಂಬುದಕ್ಕೆ ಇದೊಂದು ಚಿಕ್ಕ ನಿದರ್ಶನವಷ್ಟೇ. ■



ಮರಳು ಮಾಫಿಯಾ



ದುರ್ಗಾಶಕ್ತಿ ಉರುಳಿಸಿದ ಗೋಡೆ

ಈ ಗೌತಮ್ ಬುದ್ಧ್ ನಗರ್ ಜಿಲ್ಲೆಯು ಉತ್ತರ ಪ್ರದೇಶದ ಭಾಗವಾಗಿದ್ದರೂ ಇದು ದೆಹಲಿಗೆ ಅಂಟಿಕೊಂಡಿದ್ದು ಈ ಜಿಲ್ಲೆಯಲ್ಲಿ ನೋಯಿಡಾ ಮತ್ತು ಗ್ರೇಟರ್ ನಾಯಿಡಾ ಪ್ರದೇಶಗಳಿವೆ.

ಇವತ್ತು ನೋಯಿಡಾ ಮತ್ತು ಗ್ರೇಟರ್ ನಾಯಿಡಾ ಪ್ರದೇಶಗಳು ಅದೆಷ್ಟು 'ಅಭಿವೃದ್ಧಿ'ಗೊಂಡಿದೆ ಎಂದರೆ ಅಲ್ಲಿ ದೊಡ್ಡದೊಡ್ಡ ಮಾಲ್‌ಗಳು, ಅಂತರರಾಷ್ಟ್ರೀಯ ಕಂಪನಿಗಳ ಆಫೀಸುಗಳು, ಅಲ್ಲಿ ಕೆಲಸಮಾಡುವವರಿಗೆ ಐಷಾರಾಮಿ ಫ್ಲಾಟ್‌ಗಳು, ಮನರಂಜನಾ ಕೇಂದ್ರಗಳು ತಲೆಯೆತ್ತಿ ಗಮನಿಸುತ್ತಿವೆ. ಭಾರತದಲ್ಲಿರುವ ಏಕೈಕ ಮೋಟಾರ್ ರೇಸಿಂಗ್ ಬುದ್ಧ್ ಇಂಟರ್‌ನ್ಯಾಷನಲ್ ಸರ್ಕ್ಯೂಟ್ ಇರುವುದೂ ಇದೇ ಗೌತಮ್ ಬುದ್ಧ್ ನಗರ್ ಜಿಲ್ಲೆಯಲ್ಲಿ! ಒಟ್ಟಾರೆ ಹೇಳುವುದಾದರೆ ಇವತ್ತು ಗ್ರೇಟರ್ ನಾಯಿಡಾ ಬಡ ಭಾರತ'ದ ಭಾಗದಂತಿರದೆ ಅಮೆರಿಕೆಯ ಯಾವುದಾದರೂ ನೂತನ ನಗರಕ್ಕೆ ಪೈಪೋಟಿ ನೀಡುವಂತಿದೆ.

ಇಷ್ಟೆಲ್ಲ ಬೆಳೆದಿದ್ದರೂ 'ಅಭಿವೃದ್ಧಿ' ಕಡೆಗಿನ ಗ್ರೇಟರ್ ನಾಯಿಡಾದ ನಾಗಾಲೋಟ ಕ್ಷೀಣಿಸಿಲ್ಲ. ಬದಲಾಗಿ ಈಗಲೂ ಅಲ್ಲಿ ಒಂದು ಕ್ರೀಡಾ ನಗರ, ಸುಮಾರು 100 ಕಾಲೇಜು ಮತ್ತು ಶಾಲೆಗಳು, ನಾಲ್ಕು ವಿಶ್ವವಿದ್ಯಾಲಯಗಳು, ಗ್ರೇಟರ್ ನಾಯಿಡಾ ಎಕ್ಸ್‌ಪ್ರೆಸ್‌ವೇ ತಲೆ ಎತ್ತುತ್ತಿವೆಯಲ್ಲದೆ ಸಾವಿರಾರು ಸಂಖ್ಯೆಯಲ್ಲಿ ಫ್ಲಾಟ್‌ಗಳ ನಿರ್ಮಾಣ ಕಾರ್ಯ ಮುಂದುವರೆದಿದೆ. ಇದೆಲ್ಲದರಿಂದಾಗಿ ಇವತ್ತು ಗ್ರೇಟರ್ ನಾಯಿಡಾವನ್ನು ದೇಶದಲ್ಲಿ ಅತಿಹೆಚ್ಚು ಕಟ್ಟಡ ಕಾಮಗಾರಿ ನಡೆಯುತ್ತಿರುವ ಪ್ರದೇಶ ಎಂದು ಪರಿಗಣಿಸಲಾಗಿದೆ. ಈ ಎಲ್ಲ ಕಾಮಗಾರಿಗಳಿಗೆ ಅತ್ಯಗತ್ಯವಾದದ್ದು ಕೋಟ್ಯಾಂತರ ರೂಪಾಯಿ ಮೌಲ್ಯದ ಸಾವಿರಾರು ಟನ್‌ಗಳಷ್ಟು ಮರಳು.

ಈ ಮರಳು ಎಲ್ಲಿಂದ ಬರುತ್ತಿತ್ತು?

ದುರ್ಗಾ ಎಸ್‌ಡಿಎಂ ಆಗಿದ್ದ ಗೌತಮ್ ಬುದ್ಧ್ ನಗರ್ ಜಿಲ್ಲೆಯಿಂದ! ಅದೂ ಅಕ್ರಮವಾಗಿ!

ಈ ಹಿಂದೆ ಮಾಯಾವತಿ ಉತ್ತರ ಪ್ರದೇಶದ

ನರೇಂದ್ರ ಭಟ್ಟಿಯೇ ಇಲ್ಲಿ ನಡೆಯುತ್ತಿದ್ದ ಅಕ್ರಮ ಮರಳು ಮಾಫಿಯಾದ ದೊರೆ. ಇದು ಒಂದು ರೀತಿಯಲ್ಲಿ ನಮ್ಮ ಬಳ್ಳಾರಿಯ ಅದಿರು ಗಣಿಗಳ ಮೇಲೆ ತನ್ನ ತೋಳ್ಬಲ ಮತ್ತು ರಾಜಕೀಯ ಶಕ್ತಿಯನ್ನು ಉಪಯೋಗಿಸಿಕೊಂಡು ಗಣಿ ಕಳ್ಳ ಜನಾರ್ದನ ರೆಡ್ಡಿ ಸಾಧಿಸಿದ್ದ ಏಕಮೇವಾಧಿಪತ್ಯದ ತರಹ.

ನಮ್ಮ ದೇಶದಲ್ಲಿ ಯಾವುದೇ ಮಾಫಿಯಾ - ಅದು ಮೆಡಿಕಲ್ ಕಾಲೇಜ್ ಮಾಫಿಯಾ ಆಗಲಿ, ಸಕ್ಕರೆ ಕಾರ್ಖಾನೆಗಳ ಮಾಫಿಯಾ ಆಗಲಿ, ಕಲ್ಲು-ಮರಳು-ಅದಿರು ಮಾಫಿಯಾ ಆಗಲಿ - ಅದ್ಯಾವುದೂ ಸರ್ವಸ್ವತಂತ್ರವಾಗಿರುವುದಿಲ್ಲ, ಬದಲಾಗಿ ಅವುಗಳ ಹಿಂದೆ ಬಲಾಢ್ಯ ರಾಜಕೀಯ ಶಕ್ತಿಗಳು ಇದ್ದೇ ಇರುತ್ತವೆ. ಇಂತಹ ಮಾಫಿಯಾಗಳು ನೈಸರ್ಗಿಕ ಸಂಪತ್ತನ್ನು ದೋಚಿದ ಮೂಲಕ ಗಳಿಸಿದ ಅಕ್ರಮ ಹಣವೇ, ರಾಜಕೀಯ ಪಕ್ಷಗಳಿಗೆ ಚುನಾವಣೆಗಳನ್ನು ಎದುರಿಸಲು ಫಂಡ್ ಆಗುತ್ತವೆ ಎಂಬುದು ಈಗ ಎಲ್ಲರಿಗೂ ಗೊತ್ತಿರುವ ಸತ್ಯ.

ದುರ್ಗಾ ಶಕ್ತಿಗೆ ಇದು ಗೊತ್ತಿರಲಿಲ್ಲ ಎಂದು ಹೇಳಲಾಗುವುದಿಲ್ಲ, ಆದರೂ ಅಕ್ರಮವಾಗಿ ಮರಳನ್ನು ದೋಚುತ್ತಿದ್ದ ಆ ಮೂಲಕ ಪ್ರಕೃತಿಯ ಏರುಪೇರುಗಳಿಗೆ ಬುನಾದಿ ಹಾಕುತ್ತಿದ್ದ ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುತ್ತಿದ್ದ ಮಾಫಿಯಾಗೆ ಕಡಿವಾಣ ಹಾಕಲು ದುರ್ಗಾ ನಿರ್ಧರಿಸಿದಳು. ತನ್ನ ಅಧಿಕಾರ ಮತ್ತು ಪೊಲೀಸ್ ನೆರವನ್ನು ಪಡೆದು ಆಕೆ ರಾತ್ರಿಯ ಕತ್ತಲಿನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಮರಳು ಕಳ್ಳರ ವಿರುದ್ಧ ರೇಡುಗಳನ್ನು ಪ್ರಾರಂಭಿಸಿದಳು. ಇದರಲ್ಲಿ ಆಕೆ ಅದೆಷ್ಟು ಯಶಸ್ವಿಯಾದಳೆಂದರೆ ಕೇವಲ ಐದು ತಿಂಗಳುಗಳಲ್ಲಿ ಆಕೆ ನೂರಾರು ಜೆಸಿಬಿ ಮೆಷಿನ್‌ಗಳನ್ನು, ಲಾರಿಗಳನ್ನು ವಶಪಡಿಸಿಕೊಂಡಳು, 66 ಎಫ್‌ಐಆರ್‌ಗಳನ್ನು ದಾಖಲಿಸಿದಳು, 104 ಜನರನ್ನು ಬಂಧಿಸಿದಳು, ಕೊನೆಗೆ ಮರಳು ಕಳ್ಳರ ಮೇಲೆ ದಂಡ ವಿಧಿಸಿ 80 ಕೋಟಿ ರೂಪಾಯಿಗಳು ರಾಜ್ಯ ಬೊಕ್ಕಸಕ್ಕೆ ಬರುವಂತೆ ನೋಡಿಕೊಂಡಳು.

ದಕ್ಷ ಅಧಿಕಾರಿಣಿಯ ವಿರುದ್ಧ ಕ್ರಮಕೈಗೊಂಡ ಆರೋಪವನ್ನು ಅಖಿಲೇಶ್ ಸರ್ಕಾರ ಎದುರಿಸಬೇಕಾಗುತ್ತಿತ್ತು. ಆದ್ದರಿಂದ ಆಗ ಆಕೆಯನ್ನು ವರ್ಗಾ ಮಾಡಲು ಸಾಧ್ಯವಿಲ್ಲ ಎಂದು ಅಖಿಲೇಶ್ ಹೇಳಿದರು.

ಆಗ ರೂಪುಗೊಂಡಿದ್ದೇ 'ಅಧಿಕಪ್ರಸಂಗಿ ದುರ್ಗಾ ಶಕ್ತಿ ಒಂದು ಮಸೀದಿಯನ್ನು ಕೆಡವಿ ಕೋಮುಗಲಭೆಗೆ ಅವಕಾಶ ಮಾಡಿಕೊಟ್ಟಳು' ಎಂಬ ಪಿತೂರಿ. ಅದಕ್ಕೆ ಕಾರಣವೂ ಇತ್ತು. ಈ ಹಿಂದೆ ಅಕ್ರಮವಾಗಿ ಸರ್ಕಾರಿ ಭೂಮಿಯಲ್ಲಿ ತಲೆ ಎತ್ತುತ್ತಿದ್ದ ದೇವಸ್ಥಾನವೊಂದನ್ನು ಇದೇ ದುರ್ಗಾ ಶಕ್ತಿ ಕೆಡವಿಹಾಕಿಸಿದ್ದಳು.

ಗೌತಮ್ ಗುದ್ಧ್ ನಗರ್ ಜಿಲ್ಲೆಯಲ್ಲಿ ಕದಲ್ಪುರ್ ಎಂಬ ಗ್ರಾಮವಿದೆ. ಆ ಗ್ರಾಮದ ಶೇ 75ರಷ್ಟು ಜನಸಂಖ್ಯೆ ಮುಸಲ್ಮಾನರು. ಹಲವು ವರ್ಷಗಳ ಹಿಂದೆ ಇದೇ ಗ್ರಾಮದ ಹಿಂದೂಗಳು ಒಂದು ದೇವಸ್ಥಾನವನ್ನು ನಿರ್ಮಿಸಲು ಹೊರಟಾಗ ಸ್ಥಳೀಯ ಮುಸಲ್ಮಾನರೂ ಆರ್ಥಿಕ ನೆರವು ನೀಡಿದ್ದರು. ಹಾಗೆಯೇ ಇತ್ತೀಚೆಗೆ ಮುಸಲ್ಮಾನರು ಒಂದು ಮಸೀದಿಯನ್ನು ಕಟ್ಟಿಕೊಳ್ಳಲು ಮುಂದಾದಾಗ ಹಿಂದೂಗಳೂ ಸಹಕರಿಸಿದ್ದರು. ಅಷ್ಟರಮಟ್ಟಿಗೆ ಈ ಹಳ್ಳಿಯಲ್ಲಿ ಕೋಮು ಸೌಹಾರ್ದ ನೆಲೆಸಿದೆ.

ಮಸೀದಿಗೆಂದು ಎಲ್ಲ ಧರ್ಮಗಳ ಜನರು ಕೊಟ್ಟಿದ್ದ ಹಣದಲ್ಲಿ ಒಂದಿಷ್ಟು ಇಟ್ಟಿಗೆ ಮತ್ತು ಮರಳನ್ನು ತಂದು ಸರ್ಕಾರಿ ಜಾಗದಲ್ಲಿ ಹಾಕಿದ್ದರು. ಮಳೆಗಾಲ ಶುರುವಾಗಿದ್ದರಿಂದ ಮರಳಿನ ಮೇಲೆ ಒಂದು ಟಾರ್ಪಾಲಿನ್ ಶೀಟನ್ನು ಹೊದಿಸಿದ್ದರು. ಮಸೀದಿ ನಿರ್ಮಾಣದ ಬಗ್ಗೆ ಗೊತ್ತಾಗುತ್ತಿದ್ದಂತೆ ಭಟ್ಟಿ ಚುರುಕಾದ. ಇದ್ದಕ್ಕಿದ್ದಂತೆ ಕದಲ್ಪುರ್ ಗ್ರಾಮಕ್ಕೆ ಬಂದ ಆತ ಮಸೀದಿ ನಿರ್ಮಾಣಕ್ಕೆಂದು 51,000 ರೂಪಾಯಿಗಳನ್ನು ಕೊಟ್ಟನಲ್ಲದೆ, 'ಮಸೀದಿಯನ್ನು ಸರ್ಕಾರಿ ಭೂಮಿಯಲ್ಲೇ ಕಟ್ಟಿಕೊಳ್ಳಿ - ಯಾವ ಸಮಸ್ಯೆಯೂ ಆಗುವುದಿಲ್ಲ' ಎಂದು ಹೇಳಿದ.

ಹಾಗೆ ಭಟ್ಟಿ ಹೇಳಿದ್ದರ ಹಿಂದೆ ಎರಡು ಲೆಕ್ಕಾಚಾರಗಳು ಇದ್ದವು. ಮೊದಲನೆಯದಾಗಿ, ಮಸೀದಿ ನಿರ್ಮಾಣಗೊಂಡರೆ


ದಾವಣಗೆರೆ: ಸಂಸದ ಸಿದ್ದೇಶಿಯ ಅಂತರ ಪಿಶಾಚಿ ರಾಜಕೀಯ

ದಾವಣಗೆರೆಯಲ್ಲಿ ಕೆಜೆಪಿಯ ದಂಡನಾಯಕ ಯಡಿಯೂರಪ್ಪನಿಗೆ ಆತನ ಪಕ್ಷದವರೇ ಕೈಕೊಡಲು ಸಕಲ ಸಿದ್ಧತೆಗಳು ಶುರುವಾಗಿವೆ. ಬಿಜೆಪಿ ಸಂಸದ ಸಿದ್ದೇಶ್ವರರೇ ಅಂತಹದ್ದೊಂದು ಸಾಹಸಕ್ಕೆ ಕೈಹಾಕಿದ್ದಾರೆ.

ಪ್ರತಿಬಾರಿ ಪಾರ್ಲಿಮೆಂಟ್ ಎಲೆಕ್ಷನ್ ಹತ್ತಿರವಾಗುತ್ತಿದ್ದಂತೆ ಸಿದ್ದೇಶ್ವರರ ಹುನ್ನಾರದ ರಾಜಕಾರಣವೂ ಗರಿಗೆದರತೊಡಗುತ್ತದೆ. 2013ರ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿಯಲ್ಲಿದ್ದರೂ ಪರೋಕ್ಷವಾಗಿ ಕೆಜೆಪಿಗೆ ಸಾತ್ ನೀಡಿದ್ದರು ಸಿದ್ದೇಶ್ವರ. ಆ ನಿಟ್ಟಿನಲ್ಲಿ ಹರಿಹರದ ಶಾಸಕ ಹರೀಶ, ಜಗಳೂರಿನ ರಾಮಚಂದ್ರ, ಚನ್ನಗಿರಿಯ ಮಾಡಾಳು ವಿರುಪಾಕ್ಷಪ್ಪ ಹೊನ್ನಾಳಿಯ ನರ್ಸ್ ರೇಣುಕಾಚಾರ್ಯನನ್ನು ಕೆಜೆಪಿಗೆ ತಳ್ಳಿದ್ದರು. ಆದರೆ ಚುನಾವಣಾ ಫಲಿತಾಂಶ ಬಂದು ಬಿಜೆಪಿ-ಕೆಜೆಪಿಗಳು ತರಗೆಲೆಯಂತೆ ನೆಲಕ್ಕುರುಳಿದ್ದೇ ತಡ ಸಿದ್ದೇಶ್ವರ ಕುಸಿದುಹೋದರು. ವಿಧಾನಸಭೆ ಚುನಾವಣೆಯಲ್ಲಿ ಒಂದು ವೇಳೆ ಕೆಜೆಪಿ ಗೆದ್ದು ಬಿಜೆಪಿ ನೆಲಕಚ್ಚಿದ್ದರೆ ಬರಲಿರುವ ಪಾರ್ಲಿಮೆಂಟ್ ಚುನಾವಣೆಯಲ್ಲಿ ಕೆಜೆಪಿಯಿಂದಲೇ ಸ್ಪರ್ಧಿಸುವ ಆಶೆ ಇತ್ತು ಸಿದ್ದೇಶ್ವರರಿಗೆ. ಆದರೆ ಮತದಾರ ಸಿದ್ದೇಶ್ವರರ

ಎರಡೂ ಕೆನ್ನೆಗೆ ಭಾರಿಸಿದ ಭರ್ಜರಿ ಹೊಡೆತದಿಂದ ತತ್ತರಿಸಿದ ಅವರು ಈಗ ಮತ್ತೊಂದು ಹಂತದ ಸಮಯಸಾಧಕ ರಾಜಕಾರಣಕ್ಕೆ ಕೈಹಾಕಿದ್ದಾರೆ.

ಇತ್ತೀಚೆಗೆ ಹರಿಹರದಲ್ಲಿ ತುಂಬಿ ಹರಿದ ತುಂಗಭದ್ರೆಗೆ ಬಾಗಿನ ಅರ್ಪಿಸುವ ನೆಪದಲ್ಲಿ ಸಿದ್ದೇಶ್ವರ



ತನ್ನ ಹೊಸ ರಾಜಕೀಯ ನಾಟಕಕ್ಕೆ ರಂಗ ಸಜ್ಜುಗೊಳಿಸಿದ್ದರು. ತುಂಗಭದ್ರೆಯ ತಟದಲ್ಲಿ ನೆಟ್ಟ ಚಪ್ಪರದಡಿ ಬಿಜೆಪಿ ಮತ್ತು ಕೆಜೆಪಿಯಿಂದ ಸೋತು ಸುಸ್ತಾಗಿರುವವರನ್ನು ಕೂರಿಸಿ "ಈಗ ನಾವೆಲ್ಲ ಹಿಂದೂ ಧರ್ಮದ ಮಕ್ಕಳು" ಎಂಬ ಸ್ಲೋಗನ್ ಹಾಕಿದರು. ಆದರೇನಂತೆ, ದಾವಣಗೆರೆ ಉತ್ತರದಿಂದ ಸೋತು ಸುಣ್ಣಾಗಿರುವ ಮಾಜಿ ತರಕಾರಿ ಮಂತ್ರಿ ರವೀಂದ್ರನಾಥ ಉತ್ಸಾಹವನ್ನೇ ಕಳೆದುಕೊಂಡು ಹ್ಯಾಪು ಮೋರೆ ಹಾಕಿ ಕೂತಿದ್ದರು. ರಾಮಚಂದ್ರ, ಹರೀಶ, ಮಾಡಾಳು ವಿರುಪಾಕ್ಷಪ್ಪ, ರೇಣುಕಾಚಾರ್ಯ ಮಾತ್ರ ಸಿದ್ದೇಶಿಯ ಡೈಲಾಗಿಗೆ ಉಘೇ-ಉಘೇ ಅನ್ನುತ್ತಿದ್ದರು. ಎಂಎಲ್‌ಸಿ ಶಿವಯೋಗಿಸ್ವಾಮಿ ಎಂಬ ಗಿರಾಕಿ ಕೂಡ ಸಿದ್ದೇಶಿಯ ನಾಟಕವನ್ನು ಮೆಚ್ಚುತ್ತಾ ಕೂತಿದ್ದರು.

"ಯಡಿಯೂರಪ್ಪ ಬಿಜೆಪಿಗೆ ಮರಳಿ ಬರ್ತಾರೆ" ಎನ್ನುವ ಸಿದ್ದೇಶ್ವರರ ಮಾತು ಕೂಡ ರವೀಂದ್ರನಾಥರ ಕಿವಿಗಳಲ್ಲಿ ಕಾಯಿಸಿದ ತುಪ್ಪ ಸುರಿದಂತಿತ್ತು. ಅನಂತಕುಮಾರನ ಬಾಲದಂತಿರುವ ರವೀಂದ್ರನಾಥರಿಗೆ ಬಿಜೆಪಿಗೆ ಯಡಿಯೂರಪ್ಪ ಮತ್ತವರ ಹಿಂಬಾಲಕರು ವಾಪಸ್ ಬರುವುದು ಇಷ್ಟವಿಲ್ಲದ ಮಾತಾಗಿದೆ.

ಸಿದ್ದೇಶ್ವರರ ಗೋಸುಂಬೆ ರಾಜಕಾರಣದ ತಂತ್ರಗಾರಿಕೆಯನ್ನು ಚೆನ್ನಾಗಿ ಬಲ್ಲ ರವೀಂದ್ರನಾಥ ಸಮಾರಂಭ ಮುಗಿಸಿ ಹೊರಬಂದಿದ್ದೇ ತಡ "ಮಾಡಿದ್ದೆಲ್ಲ ಮನೆಮುರುಕ ಕೆಲಸ. ಈಗ ತಾನೇ ಒಡೆದ ಮನೆ ಕಟ್ಟುವ ಸಾಹಸಕ್ಕೆ ಕೈಹಾಕಿದ್ದಾನೆ. ಅದೆಂಗೆ ಗೆಲ್ತಾನೆ ನೋಡೋಣ" ಎಂದು ಗೊಣಗಿದರು.

ಈಗ ದಾವಣಗೆರೆಯಲ್ಲಿ ಪಾರ್ಲಿಮೆಂಟ್ ಹವಾ ಬಿಸಿಯಾಗಿ ಬೀಸುತ್ತಿದೆ. ಕಾಂಗ್ರೆಸ್‌ನಿಂದ ಶಾಮನೂರು ಶಿವಶಂಕರಪ್ಪನವರ ಕುಟುಂಬದವರು ಪಾರ್ಲಿಮೆಂಟ್ ಚುನಾವಣೆಗೆ ಬರಲಾರರು ಎನ್ನುವ ಧೈರ್ಯ ಇಲ್ಲಿಯತನಕ ಸಿದ್ದೇಶ್ವರರಿಗೆ ಇತ್ತು. ಶಿವಶಂಕರಪ್ಪನವರ ಓರ್ವ ಪುತ್ರ ಗಣೇಶ್ ಈ ಬಾರಿ ಸಂಸತ್ತನ್ನು ಪ್ರವೇಶಿಸಲು ಯತ್ನಿಸಬಹುದು ಎಂಬ ಮಾತು ಕೇಳಿಬಂದಿತ್ತಾದರೂ ಗಣೇಶರ ಎಂಟ್ರಿಯಿಂದಾಗಿ ತನಗೇನು ತೊಂದರೆ ಇಲ್ಲ ಎಂಬ ನೆಮ್ಮದಿಯಲ್ಲಿ ಸಿದ್ದೇಶ್ವರ ಇದ್ದರು. ಆದರೀಗ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯ ರವೀಂದ್ರನಾಥರನ್ನು ಸೋಲಿಸಿದ ಹಾಲಿ ಶಾಸಕ ಮತ್ತು ಶಾಮನೂರರ ಹಿರಿಯ ಪುತ್ರ ಮಲ್ಲಿಕಾರ್ಜುನರೇ ಕಣಕ್ಕಿಳಿಯುವ ಬಗ್ಗೆ ಮಾತು ಕೇಳಿಬರುತ್ತಿದ್ದು ಸಿದ್ದೇಶ್ವರರ ನಿದ್ದೆ ಕೆಡಿಸಿದೆ.

ಈಗ ಮಂತ್ರಿ ಶಾಮನೂರು ಮತ್ತು ಶಾಸಕ ಮಲ್ಲಿಕಾರ್ಜುನ ಇಬ್ಬರೂ ಬರಲಿರುವ ಪಾರ್ಲಿಮೆಂಟ್ ಚುನಾವಣೆಯನ್ನು ಸವಾಲಾಗಿಯೇ ಸ್ವೀಕರಿಸಿದ್ದಾರೆ. ಕಳೆದ ಎಂಟು ವರ್ಷಗಳ ಕಾಲ ಕಳೆದುಹೋಗಿದ್ದ ತಮ್ಮ ರಾಜಕೀಯ ಅಸ್ತಿತ್ವವನ್ನು ಮತ್ತೆ ಪಡೆದಿರುವ ಈ ತಂದೆ-ಮಗನ ಜೋಡಿ ಅದನ್ನು ಸುಲಭವಾಗಿ ಮತ್ತೆ ಕಳೆದುಕೊಳ್ಳುವ ಇರಾದೆಯಲ್ಲಿಲ್ಲ. ತಮ್ಮ ಗೆಲುವಿನ ನಾಗಾಲೋಟವನ್ನು ಪಾರ್ಲಿಮೆಂಟ್ ಚುನಾವಣೆಯಲ್ಲೂ ಮುಂದುವರೆಸುವ ಹುರುಪಿನಲ್ಲಿದ್ದಾರೆ.

ಸಿದ್ದೇಶ್ವರರು ಬರುವ ಚುನಾವಣೆಯಲ್ಲಿ ಮತ್ತೆ ಗೆದ್ದು ಪಾರ್ಲಿಮೆಂಟಿಗೆ ಹೋಗುವ ತವಕದಲ್ಲಿದ್ದಾರೆ. ಆದರೆ ಅವರು ಸಂಸದರಾಗಿ ದಾವಣಗೆರೆ ಪಾರ್ಲಿಮೆಂಟ್ ಕ್ಷೇತ್ರಕ್ಕೆ ಕಡಿದು ಗುಡ್ಡೆ ಹಾಕಿದ್ದು ಅಷ್ಟರಲ್ಲೇ ಇದೆ. ದಾವಣಗೆರೆ ನಗರಕ್ಕೆ ಸಿಂಗಾಪುರದ ಟಚ್ ನೀಡುವ ಅವರ ಹತ್ತು ವರ್ಷಗಳ ಹಿಂದಿನ ಮಾತು ಈಗ ಅವರನ್ನೇ ಅಣಕಿಸುತ್ತಿದೆ. ಅಶೋಕ ಚಿತ್ರಮಂದಿರದ ಹತ್ತಿರವಿರುವ ರೈಲ್ವೆ ಕ್ರಾಸಿಗೆ

ಅತಂತ್ರರಾದವರು

ಮಾಜಿ ಶಾಸಕರಾದ ರಾಮಚಂದ್ರ, ಹರೀಶ, ಮಾಡಾಳು ವಿರುಪಾಕ್ಷಪ್ಪ, ರೇಣುಕಾಚಾರ್ಯ - ಇವರೆಲ್ಲ ಕೆಲವು ತಿಂಗಳುಗಳ ಹಿಂದೆ ಬಿಜೆಪಿ ಬಿಟ್ಟು ಕೆಜೆಪಿ ಸೇರಿಕೊಂಡಾಗ 'ಯಡಿಯೂರಪ್ಪನ ನೇತೃತ್ವದಲ್ಲಿ ಮತ್ತೆ ಗೆದ್ದು ಬರುತ್ತೇವೆ' ಎಂದು ಬೀಗಿದ್ದರು. ಆದರೀಗ ಇವರೆಲ್ಲ ಯಡ್ಡಿಗೆ ಗುಡ್‌ಬೈ ಹೇಳಲು ವೇದಿಕೆ ಸಿದ್ಧ ಮಾಡಿಕೊಂಡಿದ್ದಾರೆ. 'ಕೆಜೆಪಿಗೆ ಹೋಗಿ ಕೆಟ್ಟೆವು' ಎಂಬ ಜ್ಞಾನೋದಯವಾಗುತ್ತಲೇ ಇವರೆಲ್ಲರಿಗೆ ಬಿಜೆಪಿ ಸಂಸದ ಸಿದ್ದೇಶ್ವರರೇ ಈಗ ಆಸರೆಯಾಗಿದ್ದಾರೆ.


ರಾಮಚಂದ್ರ, ಹರೀಶ, ರೇಣುಕ, ವಿರುಪಾಕ್ಷಪ್ಪಂದಿರು ಕೆಜೆಪಿಗೆ ಹೋಗದೆ ಬಿಜೆಪಿಯಲ್ಲೇ ಇದ್ದಿದ್ದರೂ ಮತದಾರರು ಇವರನ್ನೆಲ್ಲ ಸೋಲಿಸುವುದು ಆಗಲೇ ಗ್ಯಾರಂಟಿಯಾಗಿತ್ತು, ಯಾಕೆಂದರೆ ಇವರಂತೆ ಕೆಜೆಪಿಗೆ ಹೋಗದೆ ಬಿಜೆಪಿಯಲ್ಲೇ ಉಳಿದುಕೊಂಡ ಮಾಜಿ ತರಕಾರಿ ಮಂತ್ರಿ ರವೀಂದ್ರನಾಥ, ಬಸವರಾಜನಾಯ್ಕ ಮತ್ತು ಕರುಣಾಕರ ರೆಡ್ಡಿಯನ್ನು ಜನ ಸೋಲಿಸಿದರು.

ಈಗ ಅನಿವಾರ್ಯವಾಗಿ ರಾಜಕೀಯ ವಿಶ್ರಾಂತಿ ಪಡೆಯುತ್ತಿರುವ ಇವರ್‍ಯಾರಿಗೂ ಸದ್ಯ ಚುನಾವಣೆಯೆಂಬ ತಕರಾರು ಬೇಡವಾಗಿದೆ. ಬರಲಿರುವ ಐದು ವರ್ಷಗಳನ್ನು ಕಳೆಯುವುದೇ ಅವರೆಲ್ಲರಿಗೆ ತ್ರಾಸದ ಸಂಗತಿಯಾಗಿದೆ. ಬಿಜೆಪಿ ಸಂಸದ ಸಿದ್ದೇಶ್ವರರನ್ನು ನಂಬಿ ಕೆಜೆಪಿಗೆ ಹೋದ ಇವರೆಲ್ಲರಿಗೆ ಮತ್ತೆ ಸಿದ್ದೇಶ್ವರರನ್ನು ನಂಬಿ ಬಿಜೆಪಿಗೆ ವಾಪಸ್ ಬರುವ ಬಗ್ಗೆ ಸಂಶಯಗಳಿವೆ. ಈಗ ಮತ್ತೆ ಬಿಜೆಪಿಯ ಚೆಡ್ಡಿ ತೊಟ್ಟರೆ ಬರುವ ದಿನಗಳಲ್ಲಿ ಇನ್ನೆಂತಹ ರಾಜಕೀಯ ದುರಂತ ಕಾಣಬೇಕೋ ಎಂಬ ಆತಂಕ ಅವರನ್ನೆಲ್ಲ ಕಾಡುತ್ತಿದೆ. ಉತ್ತರ ಕರ್ನಾಟಕ ಮತ್ತು ಹೈದರಾಬಾದ್-ಕರ್ನಾಟಕದ ಕಡೆಯಿಂದ ಕೆಜೆಪಿಗೆ ಒಬ್ಬೊಬ್ಬರೇ ರಾಜೀನಾಮೆ ಬಿಸಾಕುತ್ತಿರುವುದನ್ನು ಕಂಡು ಅವರೆಲ್ಲರಿಗೆ ಆಘಾತವಾಗಿದೆ. ಆದ್ದರಿಂದ ಈಗ ಯಡ್ಡಿಯೂ ಬೇಡ, ಸಿದ್ದೇಶಿಯೂ ಬೇಡ ಎಂಬ ಸ್ಥಿತಿಯಲ್ಲಿ ಅವರು ಇರುವಂತಿದೆ.

ರಾಯಭಾಗ: ಪರ್ಸೆಂಟೇಜ್ ಶಾಸಕ ದುರ್ಯೋಧನನ ಲಂಚಾವತಾರ

ರಾಯಭಾಗದ ಬಿಜೆಪಿ ಶಾಸಕ ದುರ್ಯೋಧನ ಐಹೊಳೆ ಲಂಚಕ್ಕೆ ಕೈಚಾಚಿ ರೆಡ್‌ಹ್ಯಾಂಡಾಗಿ ತಗುಲಿಕೊಂಡಿದ್ದಾನೆ. ಎಂಟು ಕಿಲೋಮೀಟರ್ ಉದ್ದದ ರಸ್ತೆಯೊಂದಕ್ಕೆ ಡಾಂಬರು ಬಳಿಯುವ ಗುತ್ತಿಗೆ ನೀಡಲು ರಾಮನಗೌಡ ಪಾಟೀಲ್ ಎನ್ನುವ ಕಂಟ್ರ್ಯಾಕ್ಟರ್‌ನಿಂದ ಪರ್ಸೆಂಟೇಜ್ ಲೆಕ್ಕದಲ್ಲಿ 25,000 ಗಿಂಜಲುಹೋದ ದುರ್ಯೋಧನನ ಲಂಚಾವತಾರವನ್ನು ಅದೇ ಕಂಟ್ರ್ಯಾಕ್ಟರ್ ತನ್ನ ಮೊಬೈಲ್‌ನಲ್ಲಿ ಸೆರೆಹಿಡಿದು ಬಯಲು ಮಾಡಿದ್ದಾನೆ. ಇಷ್ಟೆಲ್ಲಾ ಆದರೂ ಐಹೊಳೆಯ ಮಿತ್ರಮಂಡಳಿ ಮಾತ್ರ ತಮ್ಮ ನಾಯಕ ಸಾಚಾ, ಇದೆಲ್ಲಾ ಯಾರದೋ ಹಕೀಕತ್ತು ಅಂತಲೇ ಮೂತಿ ಒರೆಸಿಕೊಳ್ಳುವ ಪ್ರಯತ್ನದಲ್ಲಿದೆ. ಖಾದಿ ಕಸುಬಿಗೆ ಕಾಲಿಡುವುದಕ್ಕೂ ಮುನ್ನ ತಾನೆ ಒಬ್ಬ ಕಂಟ್ರ್ಯಾಕ್ಟರ್ ಆಗಿದ್ದ ದುರ್ಯೋಧನ ಐಹೊಳೆಯ ಪರ್ಸೆಂಟೇಜ್ ಪುರಾಣ ಪ್ರತಿಯೊಬ್ಬರಿಗೂ ಗೊತ್ತಿರುವಂತದ್ದೆ.

ಸಂಸದ ರಮೇಶ್ ಜಿಗಜಿಣಗಿಯ ಆತ್ಮೀಯತೆಯೇ ಇವನ ರಾಜಕಾರಣದ ಟ್ರಂಪ್‌ಕಾರ್ಡ್. ಆರಂಭದಲ್ಲಿ ಸಣ್ಣಪುಟ್ಟ ಕಂಟ್ರ್ಯಾಕ್ಟ್ ಮಾಡಿಕೊಂಡಿದ್ದ ದುರ್ಯೋಧನ ಐಹೊಳೆಗೆ 2008ರ ವಿಧಾನಸಭಾ ಚುನಾವಣೆಯಲ್ಲಿ



ಎಮ್ಮೆಲ್ಲೆ ಆದ್ಮೇಲೆ ಎಸ್ಸೆಸ್ಸೆಲ್ಸಿ ಪಾಸು!?

ಕಂಟ್ರ್ಯಾಕ್ಟು, ಪರ್ಸೆಂಟೇಜುಗಳಲ್ಲಿ ಪ್ರಳಯಾಂತಕ ಎನಿಸಿರುವ ದುರ್ಯೋಧನ ಐಹೊಳೆಯ qualification ಎಸ್.ಎಸ್.ಎಲ್.ಸಿ ಮಾತ್ರ. ಅದೂ ತಾನು ಎಂ.ಎಲ್.ಎ ಆದ ಮೇಲೆ ಪಾಸಾದದ್ದು. ಹಾಗಂತ ಆತನೇ ತನ್ನ ಅಫಿಡವಿಟ್‌ನಲ್ಲಿ ಘೋಷಿಸಿಕೊಂಡಿದ್ದಾನೆ. 2008ರ ಅಫಿಡವಿಟ್‌ನಲ್ಲಿ ವಿದ್ಯಾರ್ಹತೆ ಕಲಂನಲ್ಲಿ 1971ರಲ್ಲಿ ಹರುಗೇರಿ ವಿದ್ಯಾಲಯದಲ್ಲಿ 8ನೇ ತರಗತಿ ಪಾಸಾಗಿರುವುದಷ್ಟೆ ತನ್ನ ಯೋಗ್ಯತೆ ಎಂದು ಹೇಳಿಕೊಂಡಿದ್ದ. ಆದರೆ 2013ರ ಅಫಿಡವಿಟ್‌ನ ವೇಳೆಗಾಗಲೆ ಅದೇ ಹರುಗೇರಿ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ ಪಾಸ್ ಮಾಡಿಕೊಂಡಿದ್ದಾಗಿ ಹೇಳಿಕೊಂಡಿದ್ದಾನೆ. ಶಾಸಕನಾಗಿ ಈತ ಅದ್ಯಾವ ಎಕ್ಸಾಮ್ ಸೆಂಟರ್‌ನಲ್ಲಿ ಅದೆಷ್ಟು ಪ್ರಾಮಾಣಿಕವಾಗಿ ಪರೀಕ್ಷೆ ಬರೆದನೊ ದೇವರೆ ಬಲ್ಲ.

ಪಬ್ಲಿಕ್ ಟಿವಿಯಲ್ಲಿ ಬಂತು ಶಾಸಕನ ಲಂಚ ಪುರಾಣ

ರಾಯಭಾಗದಿಂದ ಬಿಜೆಪಿ ಟಿಕೆಟ್ ಕೊಡಿಸಿದ್ದು ಇದೇ ಜಿಗಜಿಣಗಿ. ಮಾಜಿ ಮಂತ್ರಿ ಗೋವಿಂದ ಕಾರಜೋಳರ ಜೊತೆಗಿನ ದೂರದ ನೆಂಟಸ್ತಿಕೆ ಇವನ ಮತ್ತೊಂದು ಬಂಡವಾಳ. ನಿಡಗುಂದಿ ಫ್ಯಾಮಿಲಿಯ ಆರು ಜನ ಸಹೋದರರಲ್ಲಿ ಇವನೇ ಕೊಂಚ educated, ಭಾರೀ ಏನಲ್ಲ just ಎಸ್ಸೆಸ್ಸೆಲ್ಸಿ ಪಾಸು! ಪಿತ್ರಾರ್ಜಿತವಾಗಿ ಬಂದ ಮೂರು ಎಕರೆಯಲ್ಲಿ ಆರು ಜನರ ಬದುಕು ಬರ್ಕತ್ತಾಗುವುದಿಲ್ಲ ಎನ್ನುವುದು ತಿಳಿದವನೆ ಗುತ್ತಿಗೆದಾರನ ಗೆಟಪ್ಪು ತೊಟ್ಟ ದುರ್ಯೋಧನ ತನಗಿದ್ದ ಹೈ-ಲೆವೆಲ್ ಸಂಬಂಧಗಳನ್ನೇ ನೆಪ ಮಾಡಿಕೊಂಡು ಗುತ್ತಿಗೆ ಗಿಟ್ಟಿಸಿಕೊಂಡು ಐದಾರು ವರ್ಷದಲ್ಲಿ ಭಾರೀ ಕುಳವಾಗಿ ಬೆಳೆದು ನಿಂತ.

ನೂರಾರು ಕಾಮಗಾರಿಗಳಿಗೆ ಬೋಗಸ್ ಬಿಲ್ಲುಗಳನ್ನು ತೋರಿಸುತ್ತ ಕೋಟಿಗಟ್ಟಲೆ ಗಂಟು ಮಾಡಿಕೊಂಡ ಐಹೊಳೆಗೆ ಹಡಬಿಟ್ಟಿ ದುಡ್ಡು ರಾಜಕಾರಣದ ತೆವಲು ಹಿಡಿಸಿತು. ಆತನಿಗಿದ್ದ ಖಾದಿ ದೋಸ್ತಿಗಳ ತಲೆ ನೇವರಿ ಟಿಕೆಟ್ ದಕ್ಕಿಸಿಕೊಳ್ಳುವುದು ಕಷ್ಟವೇನು ಆಗಿರಲಿಲ್ಲ. ಖರ್ಚು ಮಾಡಲು ಕಂಟ್ರ್ಯಾಕ್ಟ್ ಕಾಸು ದಂಡಿಯಾಗಿ ಬಿದ್ದಿತ್ತು. ಹಾಗಾ 2008ರ ಎಂ.ಎಲ್.ಎ ಎಲೆಕ್ಷನ್‌ನಲ್ಲಿ ಬಿಜೆ ಹುರಿಯಾಳಾಗಿ ಅಖಾಡಕ್ಕೆ ಇಳಿದೇಬಿಟ್ಟ. ಬಿಜೆಪಿ ಸೇ ಯಡ್ಡಿಯ ಕಣ್ಣೀರು ಅಲೆ, ಖುದ್ದು ದುರ್ಯೋಧನ ಐಹೊ ಹರಿಸಿದ ಹಣದ ಹೊಳೆ...ಇನ್ನು ಏನೇನೊ ಯಡವಟ್ಟುಗಳಾಗಿ ಆ ಚುನಾವಣೆಯಲ್ಲಿ ಗೆದ್ದ ಆತ ಮೊದ ಬಾರಿಗೆ ಶಾಸಕನಾಗಿ ರಾಯಭಾಗಕ್ಕೆ ವಕ್ಕರಿಸಿದ.

ಪರ್ಸೆಂಟೇಜ್ ಶಾಸಕಗಿರಿ

ಶಾಸಕನಾಗಿ ಆಯ್ಕೆಯಾಗುತ್ತಿದ್ದಂತೆಯೇ ತ ಸಹೋದರರು, ಸಂಬಂಧಿಕರು, ಆಪ್ತ ಚೇಲಾಗ ಕೂಟವೊಂದನ್ನು ಸೃಷ್ಟಿಸಿಕೊಂಡ ದುರ್ಯೋಧನ ಎಲ ಕಾಂಟ್ರ್ಯಾಕ್ಟುಗಳು ತಮ್ಮೊಳಗೇ ಉಳಿಯುವಂ ನೋಡಿಕೊಂಡ. ಅವನ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿ ಅಂತ 500 ಕೋಟಿಯ ಬೃಹತ್ ಅನುದಾ ಬಿಡುಗಡೆಯಾಗಿತ್ತು. ಕ್ಷೇತ್ರಕ್ಕೆ ಆ ಐನೂರು ಕೋ ಅದೆಷ್ಟರಮಟ್ಟಿಗೆ ಅನುಕೂಲವಾಯಿತೊ ಗೊತ್ತಿಲ್ಲ, ಆದ ದುರ್ಯೋಧನನ ಕೂಟಕ್ಕೆ ಭರ್ಜರಿ ಔತಣವಾಗಿಹೋಗಿತ ಗುತ್ತಿಗೆ ಟೆಂಡರ್‌ಗೆ ತಮ್ಮವರಲ್ಲದ ಬೇರೆ ಯಾರೇ ಅರ್ಜಿ ಗುಜರಾಯಿಸಿದರು ಅವರನ್ನು ಬೆದರಿಸಿ ಮನೆಗ ಕಾಮಗಾರಿಯನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳೋದು


ಧ್ವಜಾರೋಹಣದ ಗಲಾಟೆ


ರಾಯಭಾಗದ ಶಾಸಕ ದುರ್ಯೋಧನ ಅದೆಂತಹ ದರ್ಪಿಷ್ಟ ಕೂಟ ರಚಿಸಿಕೊಂಡಿದ್ದಾನೆ ಎನ್ನುವುದಕ್ಕೆ ಆಗಸ್ಟ್ 15 ರಂದು ನಡೆದ ಧ್ವಜಾರೋಹಣ ಅವಾಂತರವೇ ಸಾಕ್ಷಿ. ಪಟ್ಟಣ ಪಂಚಾಯಿತ್ತಿಯ ವಿ.ಎಲ್.ಪಾಟೀಲ್ ಅಬಾಜಿ ವೃತ್ತದಲ್ಲಿರುವ ಧ್ವಜಸ್ತಂಭದಲ್ಲಿ ಪ್ರತಿ ವರ್ಷ ಸ್ವಾತಂತ್ರ್ಯ ದಿನಾಚರಣೆಯಂದು ತ್ರಿವರ್ಣ ಧ್ವಜ ಹಾರಿಸಲಾಗುತ್ತದೆ. ಪಂಚಾಯತಿಯ ಅಧಿಕೃತ ಅಧ್ಯಕ್ಷರು ಅಥವಾ ಆಡಳಿತಾಧಿಕಾರಿ ಧ್ವಜಾರೋಹಣ ಮಾಡುವುದು ಶಿಷ್ಟಾಚಾರ. ಆದರೆ ದುರ್ಯೋಧನ ಐಹೊಳೆ ಅಂತಃಪುರದ ಸಖಿಸಂತೆ ವರ್ತಿಸುವ ತಹಶೀಲ್ದಾರ್ ಶಿವಾನಂದ ಸಾಗರ್ ಹಳೆಯ ಶಿಷ್ಟಾಚಾರಕ್ಕೆ ಬೆಂಕಿ ಇಟ್ಟು ದುರ್ಯೋಧನ ಐಹೊಳೆಯಿಂದ ಧ್ವಜಾರೋಹಣ ಮಾಡಿಸಲು ಮುಂದಾಗಿದ್ದ. ಆಗ ಪಂಚಾಯತಿಯ ಸದಸ್ಯರು ಮತ್ತು ನೌಕರರು ಶಾಸಕರಿಂದ ಧ್ವಜಾರೋಹಣ ಮಾಡಿಸಿ ಶಿಷ್ಟಾಚಾರ ಮುರಿಯುವುದಕ್ಕಿಂತ ಆಡಳಿತಾಧಿಕಾರಿಯಾದ ನೀವೇ ಧ್ವಜ ಹಾರಿಸಿ ಎಂದು ಪ್ರತಿಭಟಿಸಿದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ 'ಇವರಿಂದಲೇ ನಾನು ಧ್ವಜಾರೋಹಣ ಮಾಡಿಸ್ತೀನಿ, ನೀವು ಏನು ಬೇಕಾದರು ಮಾಡ್ಕೊಳ್ಳಿ' ಅಂತ ಉದ್ಧಟತನದಲ್ಲೇ ಐಹೊಳೆಯಿಂದಲೇ ಧ್ವಜಾ ಹಾರಿಸಿದ್ದ. ಲಂಚಾವತಾರದ ಮಸಿ ಮುಖಕ್ಕೆ ಮೆತ್ತಿಕೊಂಡಿದ್ದರೂ ಬಿಳಿ ಶುಭ್ರ ಬಟ್ಟೆಯಲ್ಲಿ ರಾರಾಜಿಸುತ್ತಲೇ ಬಂದ ಐಹೊಳೆ ಕಿಂಚಿತ್ತೂ ಪಾಪಪ್ರಜ್ಞೆಯಿಲ್ಲದೆ ತಾನೆ ಹಾರಿಸಿದ ತಿರಂಗಕ್ಕೆ ಸೆಲ್ಯೂಟ್ ಹೊಡೆಯುತ್ತಾ ನಿಂತಿದ್ದ.

ಸ್ಸೈಓವರ್ ಮಾಡಿಸುತ್ತೇನೆಂದು ಅವರು ಕೊಟ್ಟಿದ್ದ ಭರವಸೆಯ ಗ್ಗೆ ಈಗ ಅವರಿಗೆ ನೆನಪೇ ಇಲ್ಲದಂತಾಗಿದೆ. ದಾವಣಗೆರೆ-ಚಿತ್ರದುರ್ಗ ಮಾರ್ಗದಲ್ಲಿದ್ದ ರೈಲ್ವೆ ಕ್ರಾಸಿಂಗ್‌ಗೆ ಅಂಡರ್‌ಪಾಸ್ ಸೇತುವೆ ನೂರ್‍ಹಾರು ಕೋಟಿಯಲ್ಲಿ ನಿರ್ಮಾಣವಾಗಿತ್ತು. ಈಗ ಅದನ್ನೇ ಕೆಡವಿ ಪುನರ್ ನಿರ್ಮಾಣ ಮಾಡುವ ಮುನೆಮುರುಕು ಕೆಲಸ ಶುರುವಾಗಿದೆ.

ಹತ್ತು ವರ್ಷ ಸಂಸದನಾಗಿ ಸಿದ್ದೇಶ್ವರ ಕ್ಷೇತ್ರಕ್ಕೆ ಮಾಡಿದ್ದೇನು ಎಂದು ಹುಡುಕಹೊರಟರೆ ಹಳ್ಳಿಗಳಲ್ಲಿ ಕಿತ್ತುಹೋದ ಬಸ್ ನಿಲ್ದಾಣಗಳ ಕಳಪೆ ಕಾಮಗಾರಿಯ ಹೆಗ್ಗುರುತುಗಳು ಎದ್ದು ಕಾಣುತ್ತವೆ. ಕೇಂದ್ರ ಸರಕಾರದಿಂದ ಬಂದ ಕೋಟ್ಯಾಂತರ ಅನುದಾನ ಅದ್ಯಾವ ಘನಂಧಾರಿ ಕಾಮಗಾರಿಗೆ ವ್ಯಯವಾಯಿತೋ ಭಗವಂತನೇ ಬಲ್ಲ. ಯಾವ ಗ್ರಾಮಗಳಲ್ಲಿ ಪ್ರಧಾನಮಂತ್ರಿ ಸಡಕ್ ಯೋಜನೆ ಬೆಳಕು ಕಂಡಿತೋ ಮರುಳುಸಿದ್ದನೇ ಬಲ್ಲ. ಈಗಲೂ ದಾವಣಗೆರೆ ಪಾರ್ಲಿಮೆಂಟ್ ಕ್ಷೇತ್ರದ ನೂರಾರು ಹಳ್ಳಿಗಳು ಕೇಂದ್ರ ಸರಕಾರದ ಯೋಜನೆಗಳಿಂದ ವಂಚನೆಗೊಳಗಾಗಿವೆ. ಸಿದ್ದೇಶ್ವರರು ಭ್ರಷ್ಟರಲ್ಲ ಎಂಬುದೇ ಸಮಾಧಾನದ ಸಂಗತಿಯಾದರೂ ರಾಜಕಾರಣಿಯಾಗಿ ಅವರು ವಿಫಲರಾಗಿದ್ದಾರೆ ಎಂಬುದು ಸತ್ಯ. ಅವರು ಜನಪ್ರತಿನಿಧಿ ಎಂಬುದಕ್ಕಿಂತ ಅಡಿಕೆ ವ್ಯಾಪಾರಿಯಾಗಿ ವರ್ತಿಸಿದ್ದೇ ಹೆಚ್ಚು.







ಕಳೆದ ಎರಡು ಚುನಾವಣೆಗಳ ಸಂದರ್ಭಗಳಲ್ಲಿ ಸ್ಥಳೀಯ ಬಿಜೆಪಿ ಕಾರ್ಯಕರ್ತರು ಸಿದ್ದೇಶ್ವರರ ಗೆಲುವಿಗೆ ಶ್ರಮಿಸಿದ್ದರೂ, ಸಂಸದರಾದ ನಂತರ ಸಿದ್ದೇಶ್ವರ ಅವರನ್ನೆಲ್ಲ ಅಡಿಕೆ ದಂಧೆಯ ಕಮೀಶನ್ ಏಜಂಟರಂತೆ ಪರಿಗಣಿಸಿದ್ದರು. ನಕಲಿ ಪೈಲ್ವಾನ ಯಶವಂತನನ್ನು ಅಸಲಿಯೆಂದು ಪ್ರತಿಪಾದಿಸುತ್ತಲೇ ಜಿಲ್ಲೆಯಲ್ಲಿ ಬಿಜೆಪಿಯ ನಾಶಕ್ಕೆ ನೆರವಾದರು. ಸ್ವಜಾತಿ ನಾಗರಾಜಪ್ಪನಂತಹ ಕಡು ಭ್ರಷ್ಟನನ್ನು ದಾವಣಗೆರೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನನ್ನಾಗಿಸಿ ಆತ ಪ್ರಾಧಿಕಾರವನ್ನು ಮುಂಡಾಯಿಸಲು ಸಹಕರಿಸಿದ್ದರು.

ಈ ಎಲ್ಲ ಕಾರಣಗಳಿಗೆ ಮುಂದಿನ ಚುನಾವಣೆಯಲ್ಲಿ ಸಿದ್ದೇಶ್ವರರ ಸೋಲಿನ ಚಟ್ಟ ಕಟ್ಟಲು ಸ್ಥಳೀಯ ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರೇ ಈಗ ಸಿದ್ಧರಾಗಿದ್ದಾರೆ. ಇದನ್ನು ಅರಿತಿರುವ ಸಿದ್ದೇಶ್ವರ ಈಗಲೇ ಕಾಲಿಗೆ ಗಾಲಿಕಟ್ಟಿಕೊಂಡವರಂತೆ ಕ್ಷೇತ್ರದ ಹಳ್ಳಿಗಳನ್ನು ಎಡತಾಕತೊಡಗಿದ್ದಾರೆ. ಜೊತೆಗೆ ತಮ್ಮ ಗೆಲುವಿಗೆ ನೆರವಾಗಲೆಂದು ಕೆಜೆಪಿಯ ಪಾಲಾಗಿದ್ದ ಮಾಜಿ ಚೆಡ್ಡಿಗಳನ್ನು ಮತ್ತೆ ಬಿಜೆಪಿಗೆ ಕರೆತರಲು ಹರಸಾಹಸ ಮಾಡುತ್ತಿದ್ದಾರೆ.

ಆದರೆ ಕ್ಷೇತ್ರದಲ್ಲಿ ಮತದಾರರ ಮನೋಭಾವ ಈಗ ಹೇಗಿದೆ ಎಂದರೆ ಸಿದ್ದೇಶ್ವರರಿಗೂ, ಅವರ ಬಿಜೆಪಿ ಪಕ್ಷಕ್ಕೂ ಜನ ಮತ್ತೊಮ್ಮೆ ಸೋಲಿನ ಬರೆ ಎಳೆಯುವ ತವಕದಲ್ಲಿದ್ದಾರೆ.

■ ಟಿ.ಎನ್.ಷಣ್ಮುಖ

ೂಟದ ಕಾಯಂ ಕೆಲಸ.

ಮೊದಲಿನಿಂದಲೂ ಕಾಂಟ್ರ್ಯಾಕ್ಟನಲ್ಲೇ ಕಾಸು ತಿಂದ ದುರ್ಯೋಧನನಿಗೆ ಇದೆಲ್ಲ ಸಲೀಸಾಗಿ ಸಾಗಬೇಕೆಂದರೆ ಅಧಿಕಾರಿಗಳನ್ನು ಚೆನ್ನಾಗಿ ಗಮನಿಸಿಕೊಳ್ಳಬೇಕೆಂಬ ಪ್ರೈಮರಿ ಪಾಠ ಮನದಟ್ಟಾಗಿತ್ತು. ಹಾಗಾಗಿ ತಾನು ಅಧಿಕಾರಕ್ಕೆ ಬರುತ್ತಿದ್ದಂತೆಯೇ ತನ್ನ ಸಂಬಂಧಿಕರು, ಅತ್ಮೀಯರನ್ನೇ ಕ್ಷೇತ್ರದ ಆಯಕಟ್ಟಿನ ಹುದ್ದೆಗಳಿಗೆ ತಂದು ಕೂರಿಸಿದ. ಈಗ ರಾಯಭಾಗ್‌ನ ತಹಶೀಲ್ದಾರ್ ಆಗಿರುವ ಶಿವಾನಂದ ಾಗರ ಕೂಡಾ ಐಹೊಳೆಯ ದೂರದ ಸಂಬಂಧಿ. ಅಲ್ಲದೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿರುವ ಶ್ರೀಪಾದ್ ಜಲ್ಡೆ ದುರ್ಯೋಧನನ ರಕ್ಷಕ ಗೋವಿಂದ ಕಾರಜೋಳನ ಾಮೈದ. ಹೀಗೆ ತನಗೆ ಬೇಕಾದಂತೆ ಪಿಚ್ ರೆಡಿ ಮಾಡಿಕೊಂಡ ಐಹೊಳೆ, ಅಧಿಕಾರಿಗಳ ಜೊತೆ ಮ್ಯಾಚ್ ಫಿಕ್ಸಿಂಗ್ ಕುದುರಿಸಿಕೊಂಡು ಬೇಕಾಬಿಟ್ಟಿಯಾಗಿ ಬ್ಯಾಟ್ ಮಾಡಲು ಶುರು ಮಾಡಿದ್ದ.

ತನ್ನವರಿಗೇ ಕಾಂಟ್ರ್ಯಾಕ್ಟ್ ಸಿಕ್ಕರೂ ಪರ್ಸೆಂಟೇಜ್ ವಿಷಯದಲ್ಲಿ ಈತ ಬಲು ಕಟ್ಟುನಿಟ್ಟು. ಇಂತಿಂಥ ಕಾಮಗಾರಿಗೆ ಇಷ್ಟಿಷ್ಟು ಪರ್ಸೆಂಟೇಜ್ ಬಂದು ಬಿದ್ದರೆ ಮಾತ್ರ ಬಿಲ್ಲುಗಳಿಗೆ ಸಹಿ ಮಾಡುತ್ತಿದ್ದ. ಹಾಗಾಗಿ ಕೇವಲ ಐದೇ ವರ್ಷದ ಅವಧಿಯಲ್ಲಿ ಅನಾಮತ್ತು ನೂರಾರು ಕೋಟಿಗೆ ಒಡೆಯನಾಗಿದ್ದ. ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ಬಳಿ ತನ್ನ ಭಾಮೈದ ಬಸವರಾಜ್ ಸಣದಿಯ ಹೆಸರಲ್ಲಿ ಖರೀದಿಸಿರೋ 350 ಎಕರೆ ಜಮೀನೇ ಸಾಕು ಇವನ ಪರ್ಸೆಂಟೇಜ್ ಪುರಾಣವನ್ನು ಬಯಲು ಮಾಡಲು. ಇದಲ್ಲದೆ ಬಡಿಕುರ್ಲಿಯಲ್ಲಿ 7 ಎಕರೆ 62 ಗುಂಟೆ, ಅಲಗವಾಡಿಯಲ್ಲಿ 8 ಎಕರೆ 32 ಗುಂಟೆ ಜಮೀನುಗಳು, ನಿಡಗುಂದಿ, ರಾಯಭಾಗ, ಹಿರೇಕೋಡಿ, ಅಲಗವಾಡಿ ಮೊದಲಾದೆಡೆ 50 ಕೋಟಿಗೂ ಮೀರಿದ ಬಂಗಲೆಗಳು, ರಾಯಭಾಗದಲ್ಲಿ ಎರಡು ಪೆಟ್ರೋಲ್ ಬಂಕ್, 8 ಜೆಸಿಬಿ... ಇವೆಲ್ಲ ದುರ್ಯೋಧನನ ಅಧಿಕೃತ ಆಸ್ತಿಗಳು. ಇನ್ನು ಬೇನಾಮಿ ಆಸ್ತಿಗೆ ಲೆಕ್ಕವೇ ಇಲ್ಲ. ಅಂದಹಾಗೆ ಇವೆಲ್ಲ 2008ರಿಂದ ಈಚೆಗೆ ಖರೀದಿಸಿದಂತವು.

ಈತ ಮೊದಲ ಬಾರಿ ಚುನಾವಣೆಗೆ ನಿಂತಾಗ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಅಫಿಡವಿಟ್ಟು ಮತ್ತು 2013ರಲ್ಲಿ ಸಲ್ಲಿಸಿರುವ ಅಫಿಡವಿಟ್‌ಗೂ ತಾಳೆ ಮಾಡಿದರೆ ಐದೇ ವರ್ಷದಲ್ಲಿ ಈತ ಅದೆಷ್ಟು ಗಂಭೀರವಾಗಿ ಧನಿಕನಾಗಿದ್ದಾನೆ ಎನ್ನುವುದು ಅರ್ಥವಾಗುತ್ತದೆ. 2008ರ ಘೋಷಣೆಯಂತೆ ಇವನ ಒಟ್ಟು ಆಸ್ತಿ 52,95,000 ರೂಪಾಯಿ ಮೌಲ್ಯದ್ದು ಮಾತ್ರ. ಆದರೆ 2013ರ ವೇಳೆಗಾಗಲೆ ಬರೋಬ್ಬರಿ 4,48,23,402 ರೂಪಾಯಿಗೆ ಇವನ ಆಸ್ತಿ ಬೆಳೆದು ನಿಂತಿತ್ತು. ಅಂದರೆ ಹತ್ತು ಪಟ್ಟು ಧನಿಕನಾಗಿದ್ದ! ತಾನೇ ಘೋಷಿಸಿಕೊಂಡಂತೆ ಅವನದು ಸಮಾಜಸೇವೆ(?)ಯ ಹೊರತಾಗಿ ಕೃಷಿ ಕಾಯಕವಂತೆ. ಈ ದೇಶದ ರೈತನೊಬ್ಬ ಐದು ವರ್ಷದಲ್ಲಿ ಈ ಪರಿ ಪೈರು ಕೀಳುತ್ತಾನೆಂದರೆ ಅಚ್ಚರಿಯಲ್ಲವೆ. ಅಂದಹಾಗೆ 2008ರಲ್ಲಿ 20 ಲಕ್ಷ ಚರಾಸ್ತಿ, 32 ಲಕ್ಷ ಸ್ಥಿರಾಸ್ತಿ ಹೊಂದಿದ್ದ ದುರ್ಯೋಧನ ಐಹೊಳೆ ಈಗ 1 ಕೋಟಿ 41 ಲಕ್ಷ ಘೋಷಿತ ಚರಾಸ್ತಿ ಮತ್ತು 3 ಕೋಟಿ 83 ಲಕ್ಷ ಘೋಷಿತ ಸ್ಥಿರಾಸ್ತಿಗೆ ಯಜಮಾನ!

ಸಲುಗೆಯವರ ಮೇಲೂ ಸವಾರಿ

2013ರ ಚುನಾವಣೆಯಲ್ಲೂ ಗೆದ್ದು ಎರಡನೇ ಬಾರಿ ಶಾಸಕನಾದ ಮೇಲಂತೂ ದುರ್ಯೋಧನ ಐಹೊಳೆಯ ದುಡ್ಡಿನ ದಾಹ ಮತ್ತಷ್ಟೂ ಹೆಚ್ಚಾಗಿಹೋಗಿತ್ತು. ಅವನದೇ ಕೂಟಸ್ಥರಿಗೆ ಮಾತ್ರವೇ ಕಾಂಟ್ರ್ಯಾಕ್ಟ್‌ಗಳು ಸಿಗುತ್ತಿದ್ದರೂ ತನ್ನವರಿಂದಲೇ ದುಬಾರಿ ಪರ್ಸೆಂಟೇಜ್ ಸುಲಿಯಲು ನಿಂತಿದ್ದ. ಅದೇ ಇವತ್ತು ಅವನಿಗೆ ಮುಳುವಾಗಿದೆ. ದುರ್ಯೋಧನ ಐಹೊಳೆಯ ಭ್ರಷ್ಟ ಕೈಗಳನ್ನು ಮೊಬೈಲ್‌ನಲ್ಲಿ ಚಿತ್ರಿಸಿಕೊಂಡು ಬಿತ್ತರಿಸಿದ ರಾಮನಗೌಡ ಪಾಟೀಲನು ಅವನ ಆಪ್ತನೆ. ಆದರೆ ಈಗ್ಗೆ ಐದಾರು ವರ್ಷಗಳ ಹಿಂದೆ ತನ್ನ ಜೊತೆಗೇ ಕಂಟ್ರ್ಯಾಕ್ಟ್ ಮಾಡಿಕೊಂಡಿದ್ದ ಐಹೊಳೆ ಈಗ ತನ್ನಿಂದಲೇ ದುಪ್ಪಟ್ಟು ಪರ್ಸೆಂಟೇಜ್ ಸುಲಿಯುತ್ತಿರುವುದಕ್ಕೆ ರೋಸಿಹೋಗಿ ಹೀಗೆ ಸಿಲುಕಿಸಿದ್ದಾನೆ.


ದುರ್ಯೋಧನ ಐಹೊಳೆ ಭ್ರಷ್ಟ ಎನ್ನುವುದು ಮೊದಲಿನಿಂದಲೂ ಎಲ್ಲರಿಗೂ ಗೊತ್ತು. ಆದರೆ ಈಗೊಂದು ಅಧಿಕೃತ ಕ್ಲಿಪ್ಪಿಂಗ್ ಹೊರಬಂದಿದೆಯಷ್ಟೆ. ಅಷ್ಟಕ್ಕೇ ಜಗ್ಗುವ-ಬಗ್ಗುವ-ತಗ್ಗುವ ಜಾಯಮಾನ ದುರ್ಯೋಧನ ಆಸಾಮಿಯದ್ದಲ್ಲ. ಇದಕ್ಕೂ ತನಗೂ ಸಂಬಂಧವೇ ಇಲ್ಲದಂತೆ ವರದಾಡಿಕೊಂಡಿದ್ದಾನೆ. ಪೊಲೀಸ್ ಠಾಣೆಯಿಂದ ತಹಶೀಲ್ದಾರ್ ಕಚೇರಿವರೆಗೂ ತನಗೆ ಬೇಕಾದವರನ್ನೆ ಸಾಕಿಕೊಂಡಿರುವ ದುರ್ಯೋಧನನ ಅಟ್ಟಹಾಸಕ್ಕೆ ಕಂಟ್ರ್ಯಾಕ್ಟರ್ ರಾಮನಗೌಡ ಪಾಟೀಲನೆ ಭೂಗತನಾಗಿ ಹೋಗಿದ್ದಾನೆ.

■ ವರದಿಗಾರ

ಚಿಮೂ ಕಿತಾಪತಿ


ಉತ್ತರ ಕನ್ನಡವೋ? ಕಾರವಾರವೋ?

ಕನ್ನಡ ಕರಾವಳಿ ಮೇಲೀಗ ಇತಿಹಾಸ 'ವಿಧ್ವಂಸ' ಚಿಮೂ ವಿಕೃತ ಚಿತ್ತ ಬಿದ್ದಿದೆ! ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಹೆಸರನ್ನು ಕಾರವಾರ ಜಿಲ್ಲೆ ಮತ್ತು ಮಂಗಳೂರು ಜಿಲ್ಲೆ ಎಂದು ಬದಲಿಸಬೇಕೆಂಬ ಮನೆಮುರುಕವಾದ 'ಪಂಡಿತೋತ್ತಮ' ಚಿಮೂ ಮಂಡಿಸಿದ್ದಾರೆ. ಇದಾತನ ಪ್ರಾಚೀನ ಸಂಶೋಧನೆಗಳಲ್ಲಿ ಒಂದು. ಇತ್ತೀಚೆಗೆ ಈ ಮರುನಾಮಕರಣದ ತೆವಲೇಕೋ ಆತನಿಗೆ ಜೋರಾಗಿ ಹೋಗಿದೆ. ಉತ್ತರ ಕನ್ನಡ ಎಂಬ ಹೆಸರು ತೆಗೆದು ಕಾರವಾರ ಜಿಲ್ಲೆಯೆಂದು ಅಧಿಕೃತ ಘೋಷಣೆ ಮಾಡುವಂತೆ ಸರ್ಕಾರಕ್ಕೆ ಚಿಮೂ ಕಾಗದ ಗೀಚಿರುವುದು ಗೊಂದಲ-ಗಲಾಟೆ ಎಬ್ಬಿಸಿಬಿಟ್ಟಿದೆ!



ಮಗನ ಹೆಸರನ್ನು ಅಪ್ಪನಿಗಿಡುವ ತಿಕ್ಕಲುತನ ಉತ್ತರ ಕನ್ನಡಿಗರನ್ನು ಕೆರಳಿಸಿದೆ. ಉತ್ತರ ಕನ್ನಡದ ಹಿನ್ನೆಲೆ-ಮುನ್ನೆಲೆ ಗೊತ್ತಿಲ್ಲದ ಚಿಮೂ ಜಿಲ್ಲೆಯ ಚಾರಿತ್ರಿಕ-ಜನಪದೀಯ ಮತ್ತು ಭಾವನಾತ್ಮಕ ಸಂಬಂಧ-ಋಣಾನುಬಂಧಕ್ಕೆ ಅಪಚಾರ ಎಸಗಿ ಅಸ್ತಿತ್ವವನ್ನೇ ಅಲುಗಿಸುವ ಅಧಿಕಪ್ರಸಂಗಕ್ಕೆ ಕೈಹಾಕಿರುವುದು ಜಿಲ್ಲೆಯ ಜನರನ್ನು ಚಿಂತೆಗೀಡುಮಾಡಿದೆ. ಇದು ಚಿಮೂರ ಹುಡುಕಾಟವಲ್ಲ; ಪಕ್ಕಾ ಹುಚ್ಚಾಟ ಎಂಬುದು ಕರಾವಳಿಯವರಿಗೆ ಖಾತ್ರಿಯಾಗಿ ಹೋಗಿದೆ. ಚಿಮೂ ಜಾಯಮಾನವೇ ಅಂಥದ್ದು. ಚರಿತ್ರೆಯನ್ನೇ ಮುರಿದು ತನ್ನ 'ತತ್ವ'ಕ್ಕೆ ತಕ್ಕಂತೆ ಕಟ್ಟುವ ಕೆಟ್ಟ ಹಠ; ಚರಿತ್ರೆಯ ಸಾಂಸ್ಕೃತಿಕ ಇತಿಹಾಸವನ್ನೇ ತಿರುಚುವ ತರಲೆ! ಮತಾಂಧತೆಯ ಮದದಲ್ಲಿ ಸತ್ಯವನ್ನೇ ಅಲ್ಲಗಳೆಯುವ ಅನಾಹುತ ಹಲವು ಬಾರಿ ಮಾಡಿರುವ ಚಿಮೂ ಹುಸಿ ಸಂಶೋಧನೆಯ ರಣಕಹಳೆಯೂದಿ ಮಾಹಿತಿ ಕೊರತೆಯಿಂದ ಹಾಸ್ಯಾಸ್ಪದನಾಗಿದ್ದೂ ಇದೆ! ಉತ್ತರ ಕನ್ನಡದ ಹೆಸರು 'ಕೆಡಿಸುವ' ಕುಚೋದ್ಯ ಈಗಾತ ಮಾಡುತ್ತಿರುವುದೂ ಮಾಹಿತಿ ಕೊರತೆಯ ಮಳ್ಳಾಟ ಪರಮಾವಧಿಯೇ!!

ಚಿಮೂ ಉತ್ತರ ಕನ್ನಡ ಹೆಸರು ಬದಲಿಸಬೇಕೆಂದು ಸರ್ಕಾರಕ್ಕೆ ಪತ್ರ ಬರೆದದ್ದು ಮೂರು ತಿಂಗಳ ಹಿಂದೆ. ಈಗ ಜಿಲ್ಲಾಡಳಿತಕ್ಕೆ ಈ ಬಗ್ಗೆ ಅಭಿಪ್ರಾಯ-ಪ್ರಸ್ತಾವನೆ ಕಳಿಸುವಂತೆ ಸರ್ಕಾರ ಹೇಳಿದೆ. ಚಿಮೂ ಕಿತಾಪತಿ ಮಾಡಿದ್ದು ಚೆಡ್ಡಿ ಸರ್ಕಾರದ ಕಾಲಾವಧಿಯಲ್ಲಿ ಎಂಬುದು ಅನೇಕ ಗೂಢಾರ್ಥಗಳನ್ನು ಬಿಂಬಿಸುವಂತಿದೆ. ಜಿಲ್ಲೆಗೆ ಅಂಟಿಕೊಂಡಿರುವ 'ಕನ್ನಡ' ಎಂಬ ಶಬ್ದ ಸಹಿಸಲು ಚಿಮೂನಂಥ ದಕ್ಷಿಣ ಕರ್ನಾಟಕದ ಮಂದಿಗೆ ಲಾಗಾಯ್ತಿನಿಂದಲೂ ಆಗುತ್ತಿಲ್ಲ. ಅವರೆಂದಿಗೂ 'ಕಾರವಾರ ಜಿಲ್ಲೆ', 'ಮಂಗಳೂರು ಜಿಲ್ಲೆ' ಎಂದೇ ಮಾತಾಡುತ್ತಾರೆ. ಇಂಥವರ ಸಂಚಿಗೆ ಚಿಮೂ ಮುಂದಾಳತ್ವ ವಹಿಸಿದ್ದಾರಷ್ಟೇ. ಇದಕ್ಕವರ ಚಿತ್ರ-ವಿಚಿತ್ರ ಸಂಶೋಧನೆಯ ಆಧಾರ ಬೇರೆ! ಆದರೆ ಇದನ್ನು ಒಪ್ಪಲು ಉತ್ತರ ಕರ್ನಾಟಕದ ಜನರು ಸಿದ್ಧರಿಲ್ಲ. ಉತ್ತರ ಕನ್ನಡಿಗರಿಗಂತೂ 'ಕಾರವಾರ ಜಿಲ್ಲೆ' ಎಂದು ಕರೆಯುವುದು ಕರಳು ಬಳ್ಳಿಯನ್ನೇ ಹಿಡಿದೆಳೆದಂಥ ಯಾತನೆಯ ಸಂಗತಿ!!



ಉತ್ತರ ಕನ್ನಡದ ಇತಿಹಾಸ-ಭೂಗೋಳ ಅದನ್ನು ಎಂದಿಗೂ ಕಾರವಾರ ಜಿಲ್ಲೆಯೆಂದು ಕರೆಯಲು ಬಿಲ್‌ಕುಲ್ ಒಪ್ಪದು. ಹನ್ನೊಂದು ತಾಲ್ಲೂಕುಗಳಿರುವ 10,291 ಚ.ಕಿ. ವಿಸ್ತೀರ್ಣದ ಜಿಲ್ಲೆಯನ್ನು ಉತ್ತರ ಕನ್ನಡವೆಂದು ಕರೆಯುವುದೇ ಸೂಕ್ತ ಎಂಬುದಕ್ಕೆ ಬಲವಾದ ಹಲವು ವಾದ-ಆಧಾರ ಇದೆ; ಚಾರಿತ್ರಿಕ-ಜನಪದೀಯ ಮತ್ತು ಭಾವನಾತ್ಮಕ ಸಂಬಂಧಗಳೂ ಈ ಜಿಲ್ಲೆ ಉತ್ತರ ಕನ್ನಡವೆಂದೇ ಹೇಳುತ್ತವೆ. ಹಲವು ರಾಜವಂಶಸ್ಥರು ಆಳಿರುವ ಈ ಕರಾವಳಿ ಮತ್ತು ಮಲೆನಾಡಿನಿಂದಾವೃತವಾದ ಪ್ರಾಂತ್ಯವನ್ನು ಟಿಪ್ಪು ಸುಲ್ತಾನ್ ಪತನದ ನಂತರ ಬ್ರಿಟಿಷ್ ಕಂಪನಿ ಸರ್ಕಾರ ತೆಕ್ಕೆಗೆ ತೆಗೆದುಕೊಂಡಿತು. 'ಕೆನರಾ' (ಕನ್ನಡಿಗರು ಇರುವ) ಎಂಬ ಹೆಸರು ಸದ್ರಿ ಪ್ರದೇಶಕ್ಕೆ 18ನೇ ಶತಮಾನದ ಕೊನೆಯಲ್ಲಿದ್ದ ಬ್ರಿಟಿಷ್ ಆಡಳಿತದಲ್ಲಿ ಬಂತು. ಕೆನರಾ ಜಿಲ್ಲೆಯಲ್ಲಿ ಕೇರಳದ ಮಲಬಾರ್ ಉತ್ತರ ತುದಿಯಿಂದ ಗೋವಾದ ದಕ್ಷಿಣದ ಗಡಿವರೆಗಿನ ಪಶ್ಚಿಮ ಕರಾವಳಿಗೆ ಸೇರಿಸಲಾಗಿತ್ತು. ಆಗ ಹೊನ್ನಾವರ ಕೆನರಾದ ಜಿಲ್ಲಾಡಳಿತದ ಕೇಂದ್ರವಾಗಿತ್ತು.

ಅಂದು ಕೆನರಾದ ಕಲೆಕ್ಟರ್ ಆಗಿದ್ದ ಥಾಮಸ್ ಮನ್ರೋ 'ಕೆನರಾ' ಬದಲು 'ಹೊನ್ನಾವರ' ಜಿಲ್ಲೆ ಎಂದು ಬದಲಿಸಬಹುದಿತ್ತು. ಹೊನ್ನಾವರ ಅಂತಾರಾಷ್ಟ್ರೀಯ ಮಹತ್ವದ ಬಂದರಾಗಿದ್ದರೂ ಮನ್ರೋ ಹಾಗೆ ಮಾಡಲಿಲ್ಲ. ಕೆನರಾ ಜಿಲ್ಲೆ ಎಂಬುದು ಸರಿಯಾದ ಹೆಸರೆಂಬುದು ಆತನ ನಿಲುವಾಗಿತ್ತು. 1800 ರಲ್ಲಿ ಕೆನರಾ ಜಿಲ್ಲೆಯನ್ನು ಎರಡಾಗಿ ಒಡೆಯಲಾಗಿತ್ತು. 1817ರಲ್ಲಿ ಮತ್ತೆ ಒಂದಾಗಿಸಲಾಗಿತ್ತು. ಒಂದೇ ಕಲೆಕ್ಟರ್ ಹುದ್ದೆ ಇತ್ತು. ಕರಾವಳಿಯ ಕುಂದಾಪುರ, ಹೊನ್ನಾವರ, ಅಂಕೋಲಾ ಮತ್ತು ಘಟ್ಟದ ಮೇಲಿನ ಬಳಗಿ, ಬನವಾಸಿ, ಸೋಂದಾ, ಸೂಪಾ ಎಂಬ ಏಳು ತಾಲ್ಲೂಕುಗಳ ಉತ್ತರ ಕನ್ನಡ ಜಿಲ್ಲೆ ರಚಿಸಲಾಗಿತ್ತು. 1862 ಕೆನರಾ ಎರಡು ಜಿಲ್ಲೆಯಾಗಿ ವಿಂಗಡಿಸಿದಾಗಲೂ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಎಂದೇ ಹೆಸರಿಡಲಾಗಿತ್ತು. ಅಂದರೆ 'ಕನ್ನಡ' ಎಂಬ ಕೊಂಡಿ ಕಳಚಿರಲಿಲ್ಲ. ಆಗ ಕಾರವಾರ, ಮಂಗಳೂರು, ಕುಂದಾಪುರ, ಹೊನ್ನಾವರ... ಹೀಗೆ ಯಾವುದೇ ತಾಲ್ಲೂಕು ಕೇಂದ್ರದ ಹೆಸರನ್ನೇ ಜಿಲ್ಲೆಗೆ ಇಡುವ ಪ್ರಯತ್ನ ಆಗಿರಲೇ ಇಲ್ಲ!

ಹಾಗೆ 'ಕನ್ನಡ' ಎಂಬುದನ್ನು ಜಿಲ್ಲೆಯ ಹೆಸರಿಂದ ತೆಗೆದಿದ್ದೇ ಆಗಿದ್ದರೆ ದೊಡ್ಡ ಪ್ರತಿಭಟನೆಯೇ ಆಗುತ್ತಿತ್ತು. ಏಕೆಂದರೆ 'ಕನ್ನಡ' ಎಂಬ ಶಬ್ಧ ಎರಡೂ ಜಿಲ್ಲೆಯ ಜನ ಮನದಲ್ಲಿ ಭಾವನಾತ್ಮಕ-ಜನಪದ-ಚಾರಿತ್ರಿಕ ಬಂಧ-ಅನುಬಂಧ ಹೊಂದಿತ್ತು! 16-04-1862 ರಲ್ಲಿ ಕೆನರಾ ಮುಂಬೈ ಪ್ರೆಸಿಡೆನ್ಸಿಗೆ ಸೇರಿಸಲಾಗಿತ್ತು. ಆಗ ಹೊಸದಾಗಿ ರಚಿಸಲಾದ ಜಿಲ್ಲೆಗಳನ್ನು ಅವುಗಳ ರಾಜಧಾನಿ ಹೆಸರಿಂದಲೇ ಕರೆಯಲಾಯ್ತು. ಆದರೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಮೂಲ ಹೆಸರಿಂದಲೇ ಮುಂದುವರಿಯಿತು. 1973 ರಲ್ಲಿ ದೇವರಾಜ ಅರಸು ಸರ್ಕಾರ ಉತ್ತರ ಕರ್ನಾಟಕದವರ ಆಗ್ರಹಕ್ಕೆ ಮಣಿದು ಮೈಸೂರು ರಾಜ್ಯವನ್ನು 'ಕರ್ನಾಟಕ' ಎಂದು ಅಧಿಕೃತವಾಗಿ ಘೋಷಿಸಿತ್ತು. ಈ ಕರ್ನಾಟಕದ ಒಳಗಡೆ ಇರುವ ಎರಡು ಕನ್ನಡ ಜಿಲ್ಲೆಗಳೆಂದರೆ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ.

ಬೇರೆ-ಬೇರೆ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಕಾರಣಗಳಿಗಾಗಿ ಬೆಂಗಳೂರು, ಮೈಸೂರು, ಮಂಡ್ಯ, ಧಾರವಾಡ, ಬೀದರ್, ರಾಯಚೂರು, ಬಾಗಲಕೋಟೆ, ಬೆಳಗಾವಿ, ಶಿವಮೊಗ್ಗ ಚಿತ್ರದುರ್ಗ... ಹೀಗೆ ವಿವಿಧ ಹೆಸರಿನ ಜಿಲ್ಲೆಗಳು ರಚನೆ ಆಗಿರಬಹುದು. ಆದರೆ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಹೆಸರು ಹಾಗೇ ಉಳಿದುಕೊಂಡಿದೆ. ಕನ್ನಡ ನಾಡಿಗೆ ಬಂದಿದ್ದ ಪಶ್ಚಿಮ ದೇಶಗಳ ಕಿಟೆಲ್, ಮೋಗಲಿಂಗ್, ರೈಸ್ ಮುಂತಾದ ವಿದ್ವಾಂಸರೂ ಈ ಪ್ರದೇಶವನ್ನು 'ಕೆನರಾ' ಎಂದು ಗುರುತಿಸಿ ಕರೆದು ಚರಿತ್ರೆಯಲ್ಲಿ ಅದಕ್ಕೊಂದು ಸಾಂಸ್ಕೃತಿಕ-ಚಾರಿತ್ರಿಕ ಅಸ್ತಿತ್ವ ಕೊಟ್ಟಿದ್ದಾರೆ. 1498ರಲ್ಲಿ ವಾಸ್ಕೋಡಿಗಾಮ ಕಾರವಾರದ ಬಳಿಯ ಅಂಜು ದ್ವೀಪದಲ್ಲಿ ತನ್ನ ಹಡಗಿಗೆ ನೀರು ತುಂಬಿಕೊಂಡಿದ್ದನಂತೆ. ಅವನ ಭೂಪಟದಲ್ಲೂ ಕೆನರಾವನ್ನು 'ಟೆಓರಾ-ಡಾಕೆನರಾ' ಎಂದು ಗುರುತಿಸಿದ್ದ.

ವಿಭಜಕ ಸಂಸ್ಕೃತಿಯ ಬಿಜೆಪಿ ಸರ್ಕಾರದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದ ಕಾಗೇರಿ ಹೆಗಡೆಯ ಕಾಲಕೀರ್ದಿಯಲ್ಲಿ ಉತ್ತರ ಕನ್ನಡ ಒಡೆಯುವ ಮಸಲತ್ತು ಒಳಗೊಳಗೇ ನಡೆದಿತ್ತು. ಕಾಗೇರಿ ಸ್ವ-ಜಾತಿ ಹೈಗರ (ಬ್ರಾಹ್ಮಣ) ಸಾಮ್ರಾಜ್ಯ ಕಟ್ಟುವ ತರಾತುರಿಯಲ್ಲಿದ್ದರು. ಈ 'ಕೆಡಹುವ' ಕಾರ್ಯಾಚರಣೆಗೆ ಆಧಾರವಾಗಿ ಚೆಡ್ಡಿ ಸಂಶೋಧಕ ಚಿಮೂ ಚಿತಾವಣೆ ನಡೆದಿರುವ ಸಾಧ್ಯತೆಗಳ ಬಗ್ಗೀಗ ಚರ್ಚೆಗಳು ನಡೆಯುತ್ತಿದೆ. ಚಿಮೂ ಉತ್ತರ ಕನ್ನಡ ಹೆಸರು ಬದಲಿಸುವ ಪ್ರಸ್ತಾಪ ಸರ್ಕಾರ ಮುಂದಿಟ್ಟಿದ್ದೂ ಬಿಜೆಪಿ ಸರ್ಕಾರದ ಅವಧಿಯಲ್ಲೇ ಎಂಬುದಿಲ್ಲಿ ಮಹತ್ವದ ಅಂಶ!

ಏನೇ ಇರಲಿ, ಉತ್ತರ ಕನ್ನಡಿಗರಿಗೆ ತಮ್ಮ ಜಿಲ್ಲೆಯ ಹೆಸರು ಬದಲಾಗುವುದು ಬೇಕಾಗಿಲ್ಲ. ಶತ-ಶತಮಾನದ ಚರಿತ್ರೆ ಇರುವ ಉತ್ತರ ಕನ್ನಡ ಹೆಸರು ಬದಲಾಗಬಾರದೆಂಬ ಕೂಗು ಬಲವಾಗುತ್ತಿದೆ. ಇದು ಹೈಗರ ಕುಲತಿಲಕ ಕಾಗೇರಿ, ಸಂಸದ ಅನಂತ್ಕುಮಾರಗಳಿಗೆ ಬೇಡದ ಉಸಾಬರಿ. ಆದರೆ ಜಿಲ್ಲಾ ಮಂತ್ರಿ ದೇಶಪಾಂಡೆ, ಇನ್ನಿತರ ಶಾಸಕರು ನಿದ್ದೆಯಿಂದೇಳಬೇಕಾಗಿದೆ. ಜಿಲ್ಲೆಯ ಜನರ ಅಭಿಪ್ರಾಯ ವಿಧಾನಸೌಧದಲ್ಲಿರುವ ಪೆದ್ದು ಪ್ರಭೃತಿಗಳಿಗೆ ಅರುಹಬೇಕಿದೆ. ಜಿಲ್ಲೆಯ ಸಾಹಿತಿ-ಚಿಂತಕ-ಮಾಧ್ಯಮ-ಪ್ರತಿನಿಧಿ-ಕಲಾವಿದರೆಲ್ಲ ಜಿಲ್ಲೆಯ ಹೆಸರು ಬದಲಾವಣೆಯಿಂದಾಗುವ ಅಪಾಯ ಆಳುವವರಿಗೆ ಅರ್ಥ ಮಾಡಿಸಲು ಮುಂದಾಗಬೇಕಿದೆ. ಚಿಮೂ ಹೇಳಿದ ಹಾಗೆ 'ಕಾರವಾರ ಜಿಲ್ಲೆ' ಎಂದಾದರೆ ಮುಂದೆ ಹೊನ್ನಾವರವೋ, ಶಿರಸಿಯೋ ಎಂದು ಪುನರ್ ನಾಮಕರಣದ ಕಿತಾಪತಿ ಭುಗಿಲೇಳಬಹುದು. ಬನವಾಸಿಗಳು ತಮ್ಮ ಮಯೂರವರ್ಮ ಆಳಿದ 'ಬನವಾಸಿ'ಯೇ ಉತ್ತರ ಕನ್ನಡಕ್ಕೆ ಯೋಗ್ಯ ಹೆಸರೆಂದು ಕೂಗಾಡಬಹುದು.


ಇದೆಲ್ಲ ದೇಶಪಾಂಡೆಯ ಜಿಲ್ಲಾಡಳಿತಕ್ಕೆ ಅರ್ಥವಾದೀತಾ?

■ ನತುಹ


ಪರಿಷತ್ ಚುನಾವಣೆ

ಕಾಂಗ್ರೆಸ್ ಛಬ್ಬಿ ಅಬ್ಬರದಲ್ಲಿ ಸೈಡಾದ ಪ್ರದೀಪ ಶೆಟ್ಟರ್!


ನಾಗರಾಜ್ ಛಬ್ಬಿ





ಪ್ರದೀಪ್ ಶೆಟ್ಟರ್

ಹಳೆಯ ಧಾರವಾಡದ ಮೂರು ಜಿಲ್ಲೆಗಳ ಸ್ಥಳೀಯ ಸಂಸ್ಥೆಯ ಚುನಾಯಿತ ಜನಪ್ರತಿನಿಧಿಗಳ ಕ್ಷೇತ್ರದ ಪರಿಷತ್ ಚುನಾವಣೆಯ ಫಲಿತಾಂಶ ಅಡ್ವಾನ್ಸ್ಆಗಿ ಹೊರಬಂದಂತಾಗಿದೆ. ಕಾಂಗ್ರೆಸ್ಸಿನ ನಾಗರಾಜ ಛಬ್ಬಿ ಗೆಲುವು ನಿಶ್ಚಿತಗೊಳ್ಳುತ್ತಿದೆ. ಮಾಜಿ ಸಿಎಂ ಜಗದೀಶ ಶೆಟ್ಟರ್‌ರ ತಂತ್ರಗಾರಿಕೆ ತಲೆಕೆಳಗಾಗಲಿದ್ದು ತನ್ನ ತಮ್ಮ ಬಿಜೆಪಿ ಅಭ್ಯರ್ಥಿ ಪ್ರದೀಪ ಶೆಟ್ಟರ್‌ರ ಸೋಲಿಗೆ ತಾವೇ ಮುನ್ನುಡಿ ಬರೆದಿದ್ದಾರೆ. ಒಳಒಪ್ಪಂದಕ್ಕೆ ಜೈ ಎಂದು ಕಣದಿಂದ ಹಿಂದೆ ಸರಿದಿರುವ ಕೆಜೆಪಿ ಶೆಟ್ಟಿ ಸೋಲಿಗೆ ಒಳಗೊಳಗೆ ಬತ್ತಿ ಇಡುತ್ತಿದೆ.



ಅಖಂಡ ಧಾರವಾಡ ಜಿಲ್ಲೆಯಲ್ಲಿ ಸತ್ತು ಶವಾಗಾರ ಸೇರಿರುವ ಬಿಜೆಪಿ ಲೀಡರ್‌ಗಳು ಅಲ್ಪಾವಧಿಗಾಗಿ ನಡೆಯುತ್ತಿರುವ ಮೂರು ಜಿಲ್ಲೆಗಳ ಪರಿಷತ್ ಚುನಾವಣೆಯನ್ನು ಇತ್ತೀಚೆಗಿನ ವಿಧಾನಸಭೆಯ ಚುನಾವಣೆಯಲ್ಲಿನ ಸೋಲಿಗೆ ಸೇಡು ತೀರಿಸಿಕೊಳ್ಳುವ ರೀತಿಯಲ್ಲಿ ಫೀಲ್ಡಿಗಿಳಿದಿದ್ದಾರೆ. ಹಣ, ಹೆಂಡದ ಜೊತೆಗೆ ದುಬಾರಿ ಗಿಫ್ಟ್‌ಗಳನ್ನು ನೀಡುವ ತನ್ನ ಹಳೆಯ ಸಂಪ್ರದಾಯದ ಮೇಲೆ ನಂಬಿಕೆ ಇದ್ದರೂ ಸೋಲು ಗ್ಯಾರಂಟಿ ಎನ್ನುವದನ್ನು ಅರಿತು ಯಡ್ಡಿಯ ಕಾಲಿಗೆ ಬಿದ್ದು ಕೆಜೆಪಿ ಅಭ್ಯರ್ಥಿ ಶಿವರಾಜ ಸಜ್ಜನ ಕಣದಿಂದ ಹಿಂದೆ ಸರಿಯುವಂತೆ ಮಾಡಿದ್ದಾರೆ. ಜೆಡಿಎಸ್ ಬಹಿರಂಗವಾಗಿಯೇ ಬೆಂಬಲ ನೀಡುತ್ತಿದೆ. ಆದರೆ ಇದ್ಯಾವುದೂ ಚೆಡ್ಡಿಗಳಿಗೆ ವರ್ಕೌಟ್ ಆಗುವದಿಲ್ಲ, ಯಾಕೆಂದರೆ ಇತ್ತೀಚೆಗೆ ಚಡ್ಡಿ ಕಳಚಿದ್ದ ಕೆಜೆಪಿಗಳು ಒಳಗೊಳಗೆ ಕೈಜೊತೆ ಡೀಲ್ ಕುದುರಿಸಿಕೊಳ್ಳುತ್ತಿರುವ ರೂಮರ್‌ಗಳು ತೇಲಿಬರುತ್ತಿವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲುಂಡು ಸುಸ್ತಾಗಿರುವ ಬಿಜೆಪಿಯ ಮುಖಂಡರುಗಳು ಈ ಚುನಾವಣೆ ಬಗ್ಗೆ ಅಷ್ಟೇನು ತಲೆ ಕೆಡಿಸಿಕೊಳ್ಳುತ್ತಿಲ್ಲ, ಆದರೆ ಮುಖ್ಯಮಂತ್ರಿಯಾಗಿದ್ದುಕೊಂಡು ಹೀನಾಯ ಸೋಲುಂಡು, ಪ್ರತಿಪಕ್ಷಕ್ಕೂ ಲಾಯಕ್ ಆಗದಂತೆ

ನೆಲಕ್ಕುರುಳಿದ ಜಗದೀಶ ಶೆಟ್ಟರ್‌ಗೆ ತಮ್ಮ ತಮ್ಮನನ್ನ ಮೇಲ್ಮನೆಗೆ ಕಳುಹಿಸುವುದು ಸವಾಲಾಗಿದೆ. ಹಾಗೆಯೇ ಬಿಜೆಪಿಯ ರಾಜ್ಯಾಧ್ಯಕ್ಷ ಪ್ರಹ್ಲಾದ ಜೋಷಿಗೆ ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ತನ್ನ ಸ್ಥಾನ ಉಳಿಸಿಕೊಳ್ಳಲು ಶೆಟ್ಟರ್‌ಗೆ ಅನಿವಾರ್ಯವಾಗಿ ಜೈ ಎನ್ನಬೇಕಾದ ಪರಿಸ್ಥಿತಿ ಎದುರಾಗಿದೆ. ರಾಜಕೀಯದ ಗಂಧ ಗಾಳಿ ಇಲ್ಲದ, ರಿಯಲ್ ಎಸ್ಟೇಟ್, ಟ್ರಾನ್ಸ್‌ಫರ್ ದಂಧೆಯಿಂದ ಹೆಚ್ಚು ಕುಖ್ಯಾತಿ ಹೊಂದಿರುವ ಪ್ರದೀಪ ಶೆಟ್ಟರ್‌ಗೆ ಬಿಜೆಪಿ ನಾಯಕರೇ ಸೈಡ್ ಹೊಡೆಯುತ್ತಿರುವುದು ಸೋಲಿನ ಬಿಸಿ ಮುಟ್ಟಿಸುತ್ತಿದೆ.

ಅಸಲಿಗೆ ಬಿಜೆಪಿಯಿಂದ ನವಲಗುಂದದ ಮಾಜಿ ಶಾಸಕ ಶಂಕರಪಾಟೀಲ ಮುನೇನಕೊಪ್ಪ ಅಥವಾ ರೋಣದ ಮಾಜಿ ಮಂತ್ರಿ ಕಳಕಪ್ಪ ಬಂಡಿ ಇಬ್ಬರಲ್ಲಿ ಒಬ್ಬರು ಅಭ್ಯರ್ಥಿಯಾಗುವುದು ಬಹುತೇಕ ನಿಶ್ಚಯವಾಗಿತ್ತು, ಆದರೆ ಅಲ್ಪಾವಧಿ ಚುನಾವಣೆಯಲ್ಲಿ ಗೆಲ್ಲುವುದಕ್ಕೋಸ್ಕರ ಹತ್ತಾರು ಕೋಟಿ ಸುರುವಿ ಹಾಳಾಗುವುದಕ್ಕಿಂತ ಜೈಅನ್ನುವುದೇ ಲೇಸು ಎಂದು ರೇಸಿನಿಂದ ಈ ಇಬ್ಬರೂ ಲೀಡರ್‌ಗಳು ಹಿಂದಕ್ಕೆ ಸರಿದರು. ಒಂದು ವೇಳೆ ಈ ಇಬ್ಬರಲ್ಲಿ ಯಾರೇ ಒಬ್ಬರು ನಿಂತಿದ್ದರೂ ಕಣ ರಂಗೇರುತ್ತಿತ್ತು, ಧಾರವಾಡ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ.ಆರ್. ಪಾಟೀಲರು ಹಿಂದೆ ಪರಿಷತ್ ಚುನಾವಣೆಗೆ ನಿಂತು ಸೋತವರು. ಅವರ ಹೆಸರು ಕೂಡ ಚೆಡ್ಡಿಯ ವಲಯದಲ್ಲಿತ್ತು, ಆದರೆ ಏಕಾಏಕಿ ಎಲ್ಲರ ಹೆಸರು ಮಾಯವಾಗಿ ದುಡ್ಡು ಸುರಿಯುವ ಭರ್ತಿ ಕುಳ ಎನಿಸಿದ ಪ್ರದೀಪ ಶೆಟ್ಟರ್‌ಗೆ ಅಧಿಕೃತ ಮುದ್ರೆ ಒತ್ತಲಾಯಿತು.

ಇದೇ ಕ್ಷೇತ್ರದಿಂದ ಸತತ ಎರಡು ..13

ಶೆಟ್ಟರ್ ಸಹೋದರರ ಭೂ 'ವ್ಯವಹಾರ'

ತನ್ನ ಮಕ್ಕಳು ಅರ್ಜಿ ಸಲ್ಲಿಸಿದ 28 ದಿನಕ್ಕೆ ಚೆಡ್ಡಿ ಮುಖ್ಯಮಂತ್ರಿ ಯಡಿಯೂರಪ್ಪ ಕೆಐಎಡಿಬಿಯಿಂದ ಭೂಮಿ ಮಂಜೂರು ಮಾಡಿಸಿದ್ದರು. ಮತ್ತೋರ್ವ ಚೆಡ್ಡಿ ನಾಯಕ ಈಶ್ವರಪ್ಪ ಕೂಡ ತನ್ನ ಮಗನಿಗೆ 15 ದಿನಗಳಲ್ಲಿ ಸರ್ಕಾರಿ ಭೂಮಿಯನ್ನು ದಯಪಾಲಿಸಿದ್ದರು. ಅವರಿಬ್ಬರಿಗಿಂತ ತಾನೇನು ಕಡಿಮೆ ಇಲ್ಲ ಎಂಬಂತೆ ಬಿಜೆಪಿಯ ಮೂರನೆ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ತನ್ನ ತಮ್ಮ ಪ್ರದೀಪ ಶೆಟ್ಟರ್‌ಗೆ ಕೇವಲ ಎಂಟು ದಿನಗಳಲ್ಲಿ ಎರಡೂವರೆ ಎಕರೆ ಜಾಗವನ್ನು ಮಂಜೂರ್ ಮಾಡಿಸಿ ತನ್ನ 'ಪವರ್' ತೋರಿಸಿದ್ದರು.

ಕಳೆದ ಹಲವು ವರ್ಷಗಳಿಂದ ಹುಬ್ಬಳ್ಳಿ ತಾರಿಹಾಳ ಕೈಗಾರಿಕಾ ಪ್ರದೇಶದಲ್ಲಿ 'ಕೋರ ಎಂಜಿನಿಯರಿಂಗ್' ಎಂಬ ಹೆಸರಿನ ವಾಲ್ವ್ ಇಂಡಸ್ಟ್ರಿಯನ್ನು ನಡೆಸುತ್ತಿರುವ ಪ್ರದೀಪ ಶೆಟ್ಟರ್ ಇದರ ವಿಸ್ತರಣೆಗಾಗಿ ಹುಬ್ಬಳ್ಳಿ-ಧಾರವಾಡ ಮಧ್ಯದ ರಾಯಾಪೂರ ಕೈಗಾರಿಕಾ ಪ್ರದೇಶದಲ್ಲಿ ಎರಡೂವರೆ ಎಕರೆ ಜಮೀನು ನೀಡುವಂತೆ ಕೆಐಎಡಿಬಿಗೆ 25 ಆಗಸ್ಟ್ 2010 ರಂದು ಅರ್ಜಿ ಸಲ್ಲಿಸಿದ್ದರು. ಉದ್ಯೋಗ ಮಿತ್ರ ಸ್ಕೀಂನಲ್ಲಿ ಐದು ಲಕ್ಷ ರೂಪಾಯಿಗಳ ಡಿ.ಡಿ.ಯನ್ನೂ ಅದೇ ದಿನಾಂಕದಂದೇ ಇಲಾಖೆಗೆ ಸಂದಾಯ ಮಾಡಿದ್ದರು. ಯಾವುದೇ ಸರ್ಕಸ್ ಇಲ್ಲದೆ ಕೆಐಎಡಿಬಿ ಪ್ರದೀಪ ಶೆಟ್ಟರರ 'ಕೋರ ಎಂಜಿನಿಯರಿಂಗ್' ಕಂಪನಿಗೆ 31 ಆಗಸ್ಟ್ 2010 ರಂದು 2.5 ಎಕರೆ ಭೂಮಿ ಮಂಜೂರು ಮಾಡಿ ಆದೇಶ ಹೊರಡಿಸಿತ್ತು.

ಹತ್ತಾರು ಕಂಪನಿಗಳು ಜಮೀನಿಗಾಗಿ ಅರ್ಜಿ ಕೊಟ್ಟು ವರ್ಷಾನುಗಟ್ಟಲೆ ಕಾದು ಕುಳಿತಿರುವಾಗ ಪ್ರದೀಪ ಶೆಟ್ಟರ್‌ಗೆ ಕೇವಲ ಒಂದೇ ವಾರದಲ್ಲಿ ಭೂಮಿ ಹಂಚಿಕೆ ಮಾಡಿದ್ದು ಜಗದೀಶ್ ಶೆಟ್ಟರ್ ಅವರ 'ದಕ್ಷತೆ'ಯನ್ನು ತೋರುತ್ತದೆ.

ಒಟ್ಟು 312 ಎಕರೆ ವಿಸ್ತಾರದ ರಾಯಾಪೂರ ಕೈಗಾರಿಕಾ ಪ್ರದೇಶ ಹುಬ್ಬಳ್ಳಿ-ಧಾರವಾಡ ಮಧ್ಯದ ರಾಷ್ಟ್ರೀಯ ಹೆದ್ದಾರಿ 4 ಕ್ಕೆ ಮತ್ತು ರೇಲ್ವೆ ನಿಲ್ದಾಣಕ್ಕೆ ಅಂಟಿಕೊಂಡಿದೆ. ಇದಕ್ಕೆ ಅಣತಿ ದೂರದಲ್ಲಿ ಕರ್ನಾಟಕ ಕಾನೂನು ವಿಶ್ವವಿದ್ಯಾಲಯ, ಇಂಡಿಯನ್ ಆಯಿಲ್ ಕಾರ್ಪೋರೇಷನ್ ವಲಯ ಬಂಕ್, ಎಸ್.ಡಿ.ಎಮ್. ಮೆಡಿಕಲ್ ಕಾಲೇಜು, ಡೆಂಟಲ್ ಕಾಲೇಜು ಸೇರಿದಂತೆ ಬಹುತೇಕ ಸರ್ಕಾರಿ ವಿಭಾಗೀಯ ಕಚೇರಿಗಳು ಇವೆ. ಇವತ್ತಿನ ಮಾರುಕಟ್ಟೆಯಲ್ಲಿ ಇಲ್ಲಿನ ಭೂಮಿಯ ಬೆಲೆ ಎಕರೆಗೆ ಒಂದೂವರೆ ಕೋಟಿ ರೂಪಾಯಿಗಳು. ಈ ಹಿಂದೆ ಇದೇ ಕೆಐಎಡಿಬಿ ಹೆಚ್ಚಿನ ದರಕ್ಕೆ ಇಲ್ಲಿನ ಭೂಮಿಯನ್ನು ಇತರೆ ಉದ್ಯಮಿಗಳಿಗೆ ವಿತರಿಸಿತ್ತು, ಆದರೆ ಪ್ರದೀಪ ಶೆಟ್ಟರ್‌ರಿಂದ ಕೆಐಎಡಿಬಿ ಪಡೆದದ್ದು ಎಕರೆಗೆ 16 ಲಕ್ಷ ಮಾತ್ರ. ಇಷ್ಟು ಕಡಿಮೆ ದರವನ್ನು ಯಾವ ಮಾನದಂಡದ ಮೇಲೆ ನಿರ್ಧರಿಸಲಾಯಿತು ಎಂಬ ಮರ್ಮವನ್ನು ಜಗದೀಶ ಶೆಟ್ಟರ್ ಮಾತ್ರ ಬಲ್ಲರು!

ಮಾರಿಷಸ್ ಎಂಬ ಮಾಯಾಜಿಂಕೆ

ದೇಶದ ಅಭಿವೃದ್ಧಿಗಾಗಿ ವಿದೇಶಿ ಬಂಡವಾಳವನ್ನು ಆಕರ್ಷಿಸಬೇಕು ಎಂಬುದು ಈಗ ಚಲಾವಣೆಯಲ್ಲಿರುವ ಒಂದು ಪ್ರಮುಖ ಆರ್ಥಿಕ ನೀತಿ. ಆದರೆ ವಿದೇಶಿ ಬಂಡವಾಳದ ಹೆಸರಿನಲ್ಲಿ ನಡೆಯುತ್ತಿರುವ ಒಂದು ಘನಘೋರ ದಂಧೆಯ ಸಂಕ್ಷಿಪ್ತ ಚಿತ್ರಣ ಇಲ್ಲಿದೆ.

2010ರ ಏಪ್ರಿಲ್‌ನಿಂದ 2013ರ ಮಾರ್ಚ್‌ವರೆಗಿನ ಮೂರು ವರ್ಷಗಳಲ್ಲಿ 8,78,962 ಕೋಟಿ ಬಂಡವಾಳ ಹರಿದು ಬಂದಿದೆ. ಅದರಲ್ಲಿ ಅತಿಹೆಚ್ಚಿನ ಹೂಡಿಕೆ ಮಾಡಿರುವ ವಿದೇಶ ಯಾವುದಿರಬಹುದೆಂದು ಯಾರಾದರೂ ಪ್ರಶ್ನಿಸಿದರೆ ಥಟ್ಟನೆ ಅಮೆರಿಕಾ ಎಂದೋ ಅಥವ ಚೀನಾ ಎಂದೋ ಊಹಿಸಿಬಿಡುತ್ತೇವೆ. ಆದರೆ ನಮ್ಮ ಊಹೆ ತಪ್ಪು.

ವಾಸ್ತವದಲ್ಲಿ ಅಮೆರಿಕದ ಹೂಡಿಕೆಗಿಂತಲೂ ಆರು ಪಟ್ಟು ಹೆಚ್ಚು ಹೂಡಿಕೆ ಹರಿದುಬಂದಿರುವುದು ಪುಟ್ಟ ಮಾರಿಷಸ್ ದೇಶದಿಂದ. ಇತ್ತೀಚೆಗೆ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ ಈ ಅವಧಿಯಲ್ಲಿ ಅಮೆರಿಕದಿಂದ ಬಂದ ಬಂಡವಾಳ 50,615 ಕೋಟಿಗಳು, ಅಂದರೆ ಒಟ್ಟು ವಿದೇಶಿ ಬಂಡವಾಳದ ಶೇಕಡ 6ರಷ್ಟು ಮಾತ್ರ. ಆದರೆ ಈ ಪುಟ್ಟ ದ್ವೀಪ ರಾಷ್ಟ್ರದಿಂದ ಬಂದ ಹೂಡಿಕೆ ಬರೋಬ್ಬರಿ 3,33,979 ಕೋಟಿಗಳು! ಇದು ಈ ಅವಧಿಯ ಒಟ್ಟು ವಿದೇಶಿ ಬಂಡವಾಳದ ಶೇಕಡ 38ರಷ್ಟು, 2000ದಿಂದ 2011ರ ನಡುವೆ ಈ ಪ್ರಮಾಣ ಶೇ 41.8 ರಷ್ಟು!


ಸುಮಾರು 13 ಲಕ್ಷ ಜನಸಂಖ್ಯೆ ಹೊಂದಿರುವ ಈ ದೇಶದ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ) 243 ಕೋಟಿ ಡಾಲರ್, ಅರ್ಥಾತ್ 14,500 ಕೋಟಿ ರೂಪಾಯಿಗಳು ಮಾತ್ರ. ಹಾಗಾದರೆ ಅಂಥ ಪುಟ್ಟ ಬಡ ದೇಶದಿಂದ ಲಕ್ಷಾಂತರ ಕೋಟಿಗಳು ಹರಿದ್ದಾದರೂ ಹೇಗೆ? ಇಲ್ಲೇ ಇರುವುದು 'ಗೋಲ್‌ಮಾಲ್'!

ಹಾಲಿ ಮಾರಿಷಸ್ ಹಾಗೂ ಭಾರತದ ನಡುವೆ ಇರುವ ಒಪ್ಪಂದದ ಪ್ರಕಾರ ಬಂಡವಾಳ ಹೂಡಿಕೆಯನ್ನು ಉತ್ತೇಜಿಸುವ ನಾನಾ ತೆರಿಗೆ ರಿಯಾಯಿತಿ ಕ್ರಮಗಳು ಜಾರಿಯಲ್ಲಿವೆ. ಹೀಗಾಗಿ ಮಾರಿಷಸ್‌ನಿಂದ ಒಳಬರುವ ಬಂಡವಾಳಕ್ಕೆ ಭಾರತದಲ್ಲಿ ಹೆಚ್ಚುವರಿ ತೆರಿಗೆ ಕಟ್ಟಬೇಕಿಲ್ಲ. ಭಾರತದ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು ಹಾಗೂ ಅಕ್ರಮ ದಂಧೆಗಳಲ್ಲಿ ತೊಡಗಿರುವ ಕೆಲವು ಉದ್ಯಮಿಗಳು ತಮ್ಮ ಕಪ್ಪುಹಣವನ್ನು ಮರುಹೂಡಿಕೆ ಮಾಡಲು ಇಂಥಾ ವಾಮಮಾರ್ಗವನ್ನು ಸಂಶೋಧಿಸಿದ್ದಾರೆ. ತೆರಿಗೆ ತಪ್ಪಿಸುವ ಉದ್ದೇಶದಿಂದ ಕೆಲ ವಿದೇಶಿ ಕಂಪನಿಗಳೂ ಕೂಡ ಮಾರಿಷಸ್ ಎಂಬ ಕಳ್ಳದಾರಿಯ ಮೂಲಕ ಭಾರತ ಪ್ರವೇಶಿಸುತ್ತಿದ್ದಾರೆ.

ಮಾರಿಷಸ್‌ನಲ್ಲಿ ಒಂದು ಬೇನಾಮಿ ಕಂಪನಿ ನೋಂದಾಯಿಸುವುದು, ತಮ್ಮ ಬಳಿಯಿರುವ ಕಳ್ಳಹಣವನ್ನು ಆ ಕಂಪನಿಯಲ್ಲಿ ತೊಡಗಿಸುವುದು, ಅಲ್ಲಿಂದ ಆ ಹಣ ಮತ್ತೆ ಭಾರತಕ್ಕೆ ವಿದೇಶಿ ಬಂಡವಾಳವೆಂಬ ಹಣೆಪಟ್ಟಿಯೊಂದಿಗೆ ವಾಪಸ್ ಬಂದು ರಾಜಾರೋಷವಾಗಿ ಹೂಡಿಕೆಯಾಗುತ್ತದೆ. ಈ ಗೋಲ್‌ಮಾಲ್ ವ್ಯವಹಾರವನ್ನು 'ರೌಂಡ್ ಟ್ರಿಪ್ಪಿಂಗ್' ಎಂದು ಕರೆಯಲಾಗುತ್ತದೆ.

ನಮ್ಮ ದೇಶದ ಹಲವಾರು ಭ್ರಷ್ಟ ರಾಜಕಾರಣಿಗಳು, ಅಧಿಕಾರಿಗಳು ಆಗಾಗ್ಗೆ ಮಾರಿಷಸ್ ಪ್ರವಾಸ ಮಾಡುತ್ತಿರುತ್ತಾರೆ. ಇದು ಮೋಜಿನ ಪ್ರವಾಸವಾಗಿರದೆ 'ಬ್ಯುಸಿನೆಸ್ ಟೂರ್' ಆಗಿರುತ್ತದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಮಾಜಿ ಸಿಎಂ ಯಡಿಯೂರಪ್ಪನವರ ರಾಜೀನಾಮೆ ಪರ್ವ ಬಿಸಿಬಿಸಿಯಾಗಿದ್ದಾಗಲೇ ಮಾನ್ಯರು ದಿಢೀರ್ ಮಾರಿಷಸ್ ಪ್ರವಾಸ ಹೋಗಿಬಂದಿದ್ದರು.

ಇನ್ನೂ ತಮಾಷೆ ನೋಡಿ; ಮಾರಿಷಸ್‌ನ ರಾಜಧಾನಿ ಪೋರ್ಟ್ ಲೂಯಿಸ್ ಎಂಬ ಪುಟ್ಟ ಪಟ್ಟಣ. ಇದರ ಜನಸಂಖ್ಯೆ ಒಂದು ಲಕ್ಷದ ನಲವತ್ತು ಸಾವಿರ. ಅಂದರೆ ನಮ್ಮ ತಾಲೂಕು ಕೇಂದ್ರಗಳಿಗಿಂತಲೂ ಸಣ್ಣದು. ಇಲ್ಲಿನ ಜೆ.ಕೆ.ಸ್ಟ್ರೀಟ್‌ನಲ್ಲಿ



'ಒನ್ ಕೆಥಡ್ರಲ್ ಸ್ಕ್ವೇರ್' ಎಂಬ 12 ಅಂತಸ್ತುಗಳ ಕಟ್ಟಡವಿದೆ. ಈ ಕಟ್ಟಡವೇ 'ರೌಂಡ್ ಟ್ರಿಪ್ಪಿಂಗ್' ವ್ಯವಹಾರದ ಕೇಂದ್ರಬಿಂದು. ಬೋರ್ಡ್ ಆಫ್ ಇನ್‌ವೆಸ್ಟ್‌ಮೆಂಟ್ ಮತ್ತು ರಿಜಿಸ್ಟ್ರಾರ್ ಆಫ್ ಬ್ಯುಸಿನೆಸ್‌ನ ಅಧಿಕೃತ ಸರ್ಕಾರಿ ಕಚೇರಿಗಳೂ ಹಾಗೂ ಹೀಗೆ ವಿದೇಶಿ ಹೂಡಿಕೆಯನ್ನು ಸುಗಮಗೊಳಿಸುವ ಏಜೆಂಟ್ ಕಂಪನಿಗಳೂ ಈ ಒಂದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಭಾರತಕ್ಕೆ ಹರಿದುಬರುವ ಒಟ್ಟು ವಿದೇಶಿ ಬಂಡವಾಳದ ಶೇಕಡ 40 ಭಾಗ ಹರಿದು ಬರುವುದು ಈ ಕಟ್ಟಡದಿಂದಲೇ.

ಅಂದಹಾಗೆ ಒಂದು ವಿಷಯವನ್ನು ಇಲ್ಲಿ ನೆನಪಿಸಲೇಬೇಕು. ಕಾಳಸಂತೆಯ ವ್ಯವಹಾರದಂತಿರುವ ಈ ದಂಧೆಯನ್ನು ಸರ್ಕಾರದ ಅಧಿಕೃತ ಪರಿಭಾಷೆಯಲ್ಲಿ 'ದೇಶದ ಅಭಿವೃದ್ಧಿಗಾಗಿ ವಿದೇಶಿ ಬಂಡವಾಳದ ಹೂಡಿಕೆ' ಎಂದು ಕರೆಯಲಾಗುತ್ತದೆ.

• ದೊಡ್ಡಿಪಾಳ್ಯ ನರಸಿಂಹ



ಟೀವಿ ನಟಿಯೂ ಗಿರಿನಗರದ ಪೇದೆಯೂ...!

ಗಿರಿನಗರದ ದುರುಳ ಪೇದೆ ಯದುಕುಮಾರ್ ಟೀವಿ ಟಿ ಜೊತೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದು ಮಹಿಳಾ ಸಂಘಟನೆ ಯಿಂದ ಒದೆ ತಿಂದು ಪರಾರಿಯಾಗಿದ್ದಾನೆ!

ಟೀವಿ ನಟಿಯೊಬ್ಬಳು ಪೊಲೀಸ್ ಪೇದೆಯ ಜೊತೆ ದ್ದೂಮುಚ್ಚಿ ನಡೆಸುತ್ತಿದ್ದ ಸಂಸಾರ, ಅಲ್ಲಿಗೆ ಟೀವಿ ಪೋರ್ಟರ್‌ಗಳ ಸಮೇತ ಮಹಿಳಾ ಸಂಘಟನೆಗಳು ಸಿದ ದಾಳಿ, ಬಿಡಿಸಲು ಬಂದ ಬ್ಯಾಟರಾಯನಪುರ ಲೀಸರೇ ನಿಂತು ಪೇದೆಯನ್ನು ಬಚಾವು ಮಾಡಿದ್ದು, ನಂತರ ಪೇದೆ ಯದುಕುಮಾರ್ ಇದ್ದಕ್ಕಿದ್ದಂತೆ ಪತ್ತೆಯಾಗಿದ್ದು ಇತ್ಯಾದಿಗಳೆಲ್ಲ ಟೀವಿಗಳ ಪಾಲಿಗೆ ರಸವತ್ತು ಳವಾಗಿ ದ್ದೇನೋ ನಿಜ. ಆದರೆ ಇಷ್ಟಕ್ಕೆ ಈ ಪ್ರಕರಣ ಂಗಿಯುವುದಿಲ್ಲ.

ಏಕೆಂದರೆ ಗಿರಿನಗರದ ಪೊಲೀಸ್ ಪೇದೆ ಯದು ಮಾರ್ ಮಾಡಿದ ಅನಾಹುತ -ಹಾವಳಿ, ಅಟ್ಟಹಾಸ ಂದಾಗಿ ಬೆಂಗಳೂರು ಮಹಾನಗರ ಪಾಲಿಕೆಯ ೀಯರ್ ವೆಂಕಟೇಶ್ ಮೂರ್ತಿಯವರ ಮಗನ ಮೇಲೇ ಫ ಬಿತ್ತು. ಬಳ್ಳಾರಿಯ ಕುಖ್ಯಾತ ಗಣಿ ಕಳ್ಳ ಸ್ವಾಸ್ತಿಕ್ ಗರಾಜ್‌ನ ಪ್ರೇಯಸಿಯನ್ನೇ ಪಟಾಯಿಸಿ ಆಕೆಯ ಜೊತೆ ದ್ದೂ ಮುಚ್ಚಿ ಸಂಸಾರಕ್ಕೆ ಪೇದೆ ಯದುಕುಮಾರನೇ ತುಬಿಟ್ಟ. ಕೃಷ್ಣಭಟ್ಟನ ವಿಶ್ವಭಾರತಿ ಹೌಸಿಂಗ್ ಸೈಟಿಯ ಭೂಕಬಳಿಕೆಗೆ ಗಿರಿನಗರ ಪೊಲೀಸ್ ಠಾಣೆಯೇ ಗಾವಲಾಗಿ ನಿಲ್ಲುವಂತಾಯ್ತು. ಕುಖ್ಯಾತ ಪಾತಕಿ ಸೈಕಲ್ ಯ ಹಂತಕ ಪಡೆಯಂತೂ ಗಿರಿನಗರ ಪೊಲೀಸ್ ಣೆಯನ್ನೇ ತನ್ನ ಅಡ್ಡೆಯನ್ನಾಗಿ ಮಾಡಿಕೊಳ್ಳುವಂತಾಯ್ತು.

ಇಂಥ ಹಲವಾರು ಭಾನಗಡಿಗಳ ಮೂಲ ಹಿಸುತಿದ್ದವನೇ ಗಿರಿನಗರ ಪೊಲೀಸ್ ಠಾಣೆಯ ದುರುಳ ದೆ ಯದುಕುಮಾರ್-

ಇಲ್ಲಿಗೆ ವರ್ಷದ ಹಿಂದೆ ಬಳ್ಳಾರಿಯ ಗಣಿಕಳ್ಳ ಮತ್ತು ಿ ಜನಾರ್ದನ ರೆಡ್ಡಿಯ ಬಲಗೈ ಬಂಟನಂತಿದ್ದ ಸ್ತಿಕ್ ನಾಗರಾಜ್ ವಿರುದ್ಧ ಟೀವಿ ನಟಿ ಸವಿತಾ (ಹೆಸರು ಲಿಸಿದೆ) ಗಿರಿನಗರ ಪೊಲೀಸ್ ಠಾಣೆಯಲ್ಲೊಂದು ರು ದಾಖಲಿಸುತ್ತಾಳೆ. ಬಳ್ಳಾರಿಯ ಗಣಿಕಳ್ಳ ಮಂತ್ರಿ ರ್ದನ ರೆಡ್ಡಿಯ ಎಡಗೈ-ಬಲಗೈಗಳಂತಿದ್ದವರೇ ಖಾರದ ಿ ಮಹೇಶ್ ಮತ್ತು ಸ್ವಾಸ್ತಿಕ್ ನಾಗರಾಜ್. ಎಲ್ಲಿಯ ್ಳಾರಿ? ಎಲ್ಲಿಯ ಬೆಂಗಳೂರು? ಟೀವಿ ಯೊಬ್ಬಳ ಮುಖಕ್ಕೆ ಆಸಿಡ್ ಹಾಕಿಸು ಂದು ಗಣಿ ಕಳ್ಳ ಸ್ವಾಸ್ತಿಕ್ ನಾಗರಾಜ್ ಗಳೂರಿಗೆ ಬಂದು ಏಕೆ ರೌಡಿ ಪಡೆ ೀತ ಹಿಂಸೆಗಿಳಿದ? ಇತ್ಯಾದಿಗಳೆಲ್ಲ ಕ್ಷಣ ವೃತ್ತಾಂತವೊಂದನ್ನು ತೆರೆದಿಟ್ಟದ್ದವು.

ಅದು ಗಣಿ ಕಳ್ಳ ಸ್ವಾಸ್ತಿಕ್ ಮತ್ತು ಿ ನಟಿ ಸವಿತಾಳ ರಹಸ್ಯ ಪ್ರೇಮ ಂಗ. ಒಂದಷ್ಟು ದಿನ ಕಾಲ ಬನಶಂಕರಿ ೂರನೆ ಹಂತದಲ್ಲಿರುವ ಬಾಡಿಗೆ ೆಯೊಂದರಲ್ಲಿ ಟೀವಿ ನಟಿ ಜೊತೆ ಸಂಸಾರ ನಡೆಸಿದ ಸ್ವಾಸ್ತಿಕ್ ನಾಗರಾಜ್ ಇನ್ನೇನು ಕೈಕೊಡುತ್ತಾನೆಂಬ ಪರಿಸ್ಥಿತಿಯಲ್ಲೇ ಸವಿತಾ ಪ್ರತಿಭಟನೆಗಿಳಿದಿದ್ದಳು. ಆಕೆಯನ್ನು ಮನೆಯಿಂದ ಹೊರದಬ್ಬಲು ನಾಗರಾಜ್ ಶುರುವಿಟ್ಟು ಗೂಂಡಾಗಿರಿಯ ವಿರುದ್ಧ ಸವಿತಾ ಮೊರೆ ಹೋಗಿದ್ದು ಗಿರಿನಗರ ಪೊಲೀಸರನ್ನು.

ರಕ್ಷಣೆ ಕೋರಿ ಪೊಲೀಸ್ ಠಾಣೆಗೆ ದೂರು ಕೊಡಲೆಂದು ಬಂದರೆ ಪೊಲೀಸರೇ ಸೆರಗಿಗೆ ಕೈ ಹಾಕಿ ದಂತಾಯ್ತು ಯದುಕುಮಾರ್-ಸವಿತಾ ಪ್ರಣಯ ಪ್ರಸಂಗ!

ಸ್ವಾಸ್ತಿಕ್ ನಾಗರಾಜ್‌ನ ಗೂಂಡಾಪಡೆಯಿಂದ ರಕ್ಷಣೆ ಕೋರಿ ದೂರು ಕೊಟ್ಟ ಸವಿತಾ ಪರ ಗಿರಿನಗರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದೇನೋ ನಿಜ. ಅಂದರೆ ಆಸರೆಗಿದ್ದ ಗಣಿ ಧಣಿಯಿಂದ ಟೀವಿ ನಟಿಯನ್ನು ದೂರ ಮಾಡಿ ಮೊದಲಿನಿಂದಲೂ ಪೇದೆ ಯದುಕುಮಾರ್ ಮತ್ತು ಸೈಕಲ್ ರವಿ ಮಧ್ಯೆ ದೋಸ್ತಿಯಿತ್ತು, ಜೈಲಲ್ಲಿ ಕೂತೇ ಸೈಕಲ್ ರವಿ ಯದುಕುಮಾರ್ ಜೊತೆ 50 ಸಾವಿರಕ್ಕೆ ಡೀಲು ಕುದುರಿಸಿದ ಫಲವಾಗಿ ಕೊಂದ ಸೈಕಲ್ ರವಿಯ ಬಂಟರನ್ನು ಕರೆದೊಯ್ದಿದ್ದೇ ಇನ್ಸ್‌ಪೆಕ್ಟರ್ ಮುಂದೆ ಸರೆಂಡರ್ ಮಾಡಿಸಿ ಸೇಫಾಗಿ ಜೈಲು ಸೇರಿಕೊಳ್ಳುವಂತೆ ಯದುಕುಮಾರ್ ನೋಡಿಕೊಂಡ.


ಬಂದ 50 ಸಾವಿರವನ್ನು ಜೇಬಿಗಿಳಿಸಿದ ಯದುಕುಮಾರ್ ವಿದ್ಯಾಪೀಠ ಸರ್ಕಲ್ಲಿನ ನರಸಿಂಹಸ್ವಾಮಿ ದೇವಾಲಯದ ಅರ್ಚಕನ ಪತ್ನಿಯನ್ನೂ ಬಿಡದೆ ವಂಚಿಸಿದ. ಹೊಸಕೆರೆ ಹಳ್ಳಿಯಲ್ಲಿ ಮನೆಯೊಂದನ್ನು ಖರೀದಿಸಿದ್ದ ಅರ್ಚಕನ ಪತ್ನಿಗೆ ಮನೆ ಬಾಡಿಗಿದ್ದವರನ್ನು ಖಾಲಿ ಮಾಡಿಸಲೇಬೇಕಿತ್ತು. ಅದಕ್ಕೆಂದು ಎರಡೂವರೆ ಲಕ್ಷದ

ಆತನ ಸ್ಥಾನವನ್ನಾಕ್ರಮಿಸಿದ್ದು ಇದೇ ಗಿರಿನಗರ ಪೊಲೀಸ್ ಠಾಣೆಯ ಪೇದೆ ಇನ್‌ವೆಸ್ಟಿಗೇಷನ್ ರೈಟರ್ ಯದುಕುಮಾರ್!

ಒಬ್ಬ ಟೀವಿ ನಟಿ ಯಕಶ್ಚಿತ್ ಪೇದೆಯ ಪ್ರೇಯಸಿಯಾದದ್ದು ಎಂಥವರಿಗೂ ವಿಚಿತ್ರವೆನಿಸಬಹುದು. ಆದರೆ ವಾಸ್ತವವೇನೆಂದರೆ ಪೇದೆ ಯದುಕುಮಾರನೇ ಗಿರಿನಗರದ ಪಾಲಿಗೆ ಇನ್ಸ್‌ಪೆಕ್ಟರ್, ಎಸಿಪಿ, ಡಿಸಿಪಿ, ಕಮೀಷನರ್ ಎಲ್ಲವೂ ಆಗಿಬಿಟ್ಟಿದ್ದ.


ಮೂಲತಃ ರಾಮನಗರ ತಾಲ್ಲೂಕು ಕಾಕರಾಮನಹಳ್ಳಿಯ ರಾಮಣ್ಣ-ಚಿಕ್ಕ ತಾಯಮ್ಮ ದಂಪತಿಗಳ ಮಗನಾದ ಯದುಕುಮಾರ್‌ಗೆ ಆ ಹೊತ್ತಿಗಾಗಲೇ ಮದುವೆಯಾಗಿತ್ತು. ಬಿಡದಿ ಹೋಬಳಿಯ ಸಂಗಬಸವನದೊಡ್ಡಿಯ ಕೃಷ್ಣಪ್ಪನ ಮಗಳು ಭುವನೇಶ್ವರಿಯನ್ನು ಸಾಕಷ್ಟು ವರದಕ್ಷಿಣೆ ಪಡೆದೇ ಮದುವೆಯಾಗಿದ್ದ ಯದುಕುಮಾರ್‌ಗೆ ಸದ್ಯ ಐದು ತಿಂಗಳ ಹೆಣ್ಣು ಮಗುವಿದೆ. ಟೀವಿ ನಟಿ ಸವಿತಾ ನ್ಯಾಯ ಕೋರಿ ಠಾಣೆಗೆ ಬಂದರೆ ಯಕಶ್ಚಿತ್ ಪೇದೆಯೊಬ್ಬ ದೂರು ನೀಡಲು ಬಂದವಳನ್ನೇ ತನ್ನ ಪಶುವಾಂಛೆಗೆ ಅಟಕಾಯಿಸಿಕೊಳ್ಳುತ್ತಾನೆಂದರೆ ಗಿರಿನಗರ ಪೊಲೀಸ್ ಠಾಣೆಯ ಕಾನೂನು ಮತ್ತು ಸುವ್ಯವಸ್ಥೆ ಇನ್ನೆಂಥಾ ಘನಂಧಾರಿಯಾಗಿರಬೇಡ?

ವಿಕಟವೆಂದರೆ ಸದ್ಯ ಗಿರಿನಗರ ಪೊಲೀಸ್ ಠಾಣೆಗೆ ಶ್ರೀನಿವಾಸ್ ಇನ್ಸ್‌ಪೆಕ್ಟರಾದರೂ ಪೊಲೀಸ್ ಠಾಣೆಯ ಅನಭಿಷಕ್ತ ದೊರೆಯಂತೆ ಮೆರೆಯುತ್ತಿರುವುದು ಇದೇ ಪೇದೆ ಯದುಕುಮಾರ್. ಕೊಲೆ ನಡೆದಷ್ಟೂ ಲಾಭ. ವರದಕ್ಷಿಣೆ ಸಾವಾದರೂ ಅದರಿಂದ ರೊಕ್ಕ. ಏನೇ ಕ್ರೈಮು, ಎಷ್ಟೇ ಹೊಡೆದಾಟ, ಇಸ್ಪೀಟ್ ಕ್ಲಬ್ಬುಗಳು, ವೇಶ್ಯಾವಾಟಿಕೆ, ರಿಯಲ್ ಎಸ್ಟೇಟ್ ದಂಧೆ- ಹೀಗೆ ಗಿರಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಠಾಣೆಗೆ ಬರುವ ಪ್ರತಿ ಪ್ರಕರಣದಲ್ಲೂ ಯಾರನ್ನು ಯಾವ ಮಟ್ಟದಲ್ಲಿ ಸುಲಿದರೆ ಎಷ್ಟೆಷ್ಟು ರೊಕ್ಕ ಹುಟ್ಟುತ್ತದೆಯೆಂದು ಲೆಕ್ಕ ಹಾಕಿಯೇ ಸುಲಿಗೆಗಿಳಿದವನು ಯದುಕುಮಾರ್.



ಗಿರಿನಗರ ಠಾಣೆಯ ಮಿಕ್ಕೆಲ್ಲ ಪೊಲೀಸರದ್ದು ಒಂದು ಟೈಪಾದರೆ ಯದುಕುಮಾರನದ್ದೇ ಪ್ರತ್ಯೇಕ ವೈಖರಿ. ಇಲ್ಲಿಗೆ ತಿಂಗಳ ಹಿಂದೆ ಗಿರಿನಗರದ ಮಾರುತಿ ಸರ್ಕಲ್ಲಿನ ಬಾರೊಂದರಲ್ಲಿ ವಿನಯ್ ಎಂಬ ಯುವಕನ ಕೊಲೆಯಾಯಿತು. ಕೊಂದವರು ಕುಖ್ಯಾತ ಪಾತಕಿ ಮತ್ತು ಕತ್ರಿಗುಪ್ಪೆ ಲಿಂಗನ ಹಂತಕ ಸೈಕಲ್ ರವಿಯ ಶಿಷ್ಯರು. ಸೈಕಲ್ ರವಿ ಹೇಳಿಕೇಳಿ ಬೆಂಗಳೂರು ಕಂಡ ಭಯಾನಕ ಸುಪಾರಿ ಕಿಲ್ಲರ್. ಅದೇನು ಡೀಲೋ ಡೀಲು ಕುದುರಿಸಿದ ಪೇದೆ ಯದುಕುಮಾರ್ ಕೊನೆಗೆ ಅರ್ಚಕನ ಪತ್ನಿಯನ್ನೇ ಪೀಡಿಸಲಾರಂಭಿಸಿದ.

ಗಿರಿನಗರ ಪೊಲೀಸ್ ಠಾಣೆಯಲ್ಲಿ ಏನೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಾಖಲಾದ ಎಫ್‌ಐಆರ್‌ಗೆ ಇಂತಿಷ್ಟೆಂದು ನಿಗದಿಯಾದರೆ ಸಾಕು ಯದುಕುಮಾರ್ 'ಬಿ' ರಿಪೋರ್ಟ್



ರೆಡಿ ಮಾಡುತ್ತಿದ್ದ. ಕೊಲೆ ಕೇಸಿಗೆ ಸಿಲುಕಿಸಬೇಕೆಂದರೆ ಇಂತಿಷ್ಟು - ಕೊಲೆ ಕೇಸಿನಿಂದ ಹೆಸರು ತೆಗೆಸುವುದಕ್ಕೂ ಇಂತಿಷ್ಟು.

ಹೀಗೆ ಯದುಕುಮಾರ್ ಆಡಿದ್ದೇ ಆಟ, ಇದು ಇವನ ನಿತ್ಯದಂಧೆ. ಆತನ ಮಾತೇ ವೇದವಾಕ್ಯ ಎಂಬ ಪರಿಸ್ಥಿತಿ ಗಿರಿನಗರದಲ್ಲಿ ನಿರ್ಮಾಣವಾಯಿತು. ಬೇಕಾಬಿಟ್ಟಿ ಬರುತ್ತಿದ್ದ ಲಂಚದ ದುಡ್ಡಿನಿಂದಾಗಿ ಯದುಕುಮಾರನ ಶೋಕಿ, ಖಯಾಲಿ, ವಿಕೃತಿಗಳೂ ಹೆಚ್ಚಾದವು. ಇಂಥಾ ಅವ್ಯವಸ್ಥೆಯಲ್ಲೇ ಟೀವಿ ನಟಿ ಸವಿತಾ ರಕ್ಷಣೆ ಕೋರಿ ಗಿರಿನಗರ ಪೊಲೀಸ್ ಠಾಣೆಗೆ ಬಂದದ್ದು. ಪಾಪ, ಅಸಹಾಯಕ ಹೆಣ್ಣುಮಗಳು ತಾನೇ ಏನು ಮಾಡಲು ಸಾಧ್ಯ?



ಸ್ವಾಸ್ತಿಕ್ ನಾಗರಾಜ್ ವಿರುದ್ಧ ಎಫ್‌ಐಆರ್ ದಾಖಲಾಗಿದ್ದೇ ಕೊನೆ ಆನಂತರ ಶುರುವಾಗಿದ್ದು ಪೇದೆ ಯದುಕುಮಾರನ ಪೀಡನೆ. ಆ ತನಿಖೆ, ಈ ಹೇಳಿಕೆ, ಇಂಥಾ ದಾಖಲೆ ಬೇಕು, ಎಂದೆಲ್ಲ ಪದೇಪದೇ ಸವಿತಾಳ ಮನೆಗೆ ಬರಲಾರಂಭಿಸಿದ ಯದುಕುಮಾರ್ ಇನ್ಸ್‌ಪೆಕ್ಟರ್ ತಾನು ಹಾಕಿದ ಗೆರೆ ದಾಟಲ್ಲ... ಎಂದೇ ನಂಬಿಸಿ ಕ್ರಮೇಣ ರಾತ್ರಿ ಹೊತ್ತೂ ಬರಲಾರಂಭಿಸಿದ. ಪದೇ ಪದೇ ತನ್ನ ಮನೆಗೂ ಕರೆದೊಯ್ದು ಪತ್ನಿ ಭುವನೇಶ್ವರಿಗೆ 'ಇವರು ಟೀವಿ ನಟಿ, ತುಂಬಾ ಫೇಮಸ್ಸು' ಎಂದು ಭೋಂಗು ಬಿಟ್ಟ. ಅದೇ ಹೊತ್ತಿಗೆ ತುಂಬು ಗರ್ಭಿಣಿಯಾಗಿದ್ದ ಪತ್ನಿ ಭುವನೇಶ್ವರಿಯನ್ನು ಹೆರಿಗೆಗೆಂದು ಬಿಟ್ಟು ಬಂದಿದ್ದೇ ಕೊನೆ.

ಹುಟ್ಟಿದ್ದು ಗಂಡಾ ಹೆಣ್ಣಾ? ಪತ್ನಿ ಬದುಕಿದ್ದಾಳಾ ಸತ್ತಿದ್ದಾಳಾ? ಇತ್ಯಾದಿ ಏನೊಂದಕ್ಕೂ ತಲೆ ಕೆಡಿಸಿಕೊಳ್ಳದೆ ಪೇದೆ ಯದುಕುಮಾರ್ ಒಂದೂವರೆ ವರ್ಷವಾದರೂ ಪತ್ನಿಯ ತವರಿನತ್ತ ತಲೆ ಹಾಕಲೇ ಇಲ್ಲ. ಭುವನೇಶ್ವರಿಯ ತಂದೆ ಪಂಚಾಯತಿ ಮುಖಂಡರನ್ನೆಲ್ಲ ಸೇರಿಸಿ ನ್ಯಾಯ ಕೇಳಿದರೂ ಯದುಕುಮಾರ್ ಜಗ್ಗಲಿಲ್ಲ. ಏಕೆಂದರೆ ಟೀವಿ ನಟಿಯನ್ನೇ ತನ್ನ ಆಸ್ತಿಯೆಂಬಂತೆ ಯದುಕುಮಾರ್ ಮನೆ ಮಾಡಿಟ್ಟಿದ್ದ. ಪಟ್ಟಣಗೆರೆಯಿಂದ ಹೊಸಕೆರೆಹಳ್ಳಿಗೆ, ಅಲ್ಲಿಂದ ಪ್ರಮೋದ್ ಲೇಔಟ್‌ಗೆ ಮನೆ ಬದಲಿಸುತ್ತಲೇ ಟೀವಿ ನಟಿಯೊಡನೆ ಕದ್ದೂ ಮುಚ್ಚಿ ಸಂಸಾರ ಶುರುವಿಟ್ಟ ಯದುಕುಮಾರನ ಗ್ರಹಚಾರ ಕೆಟ್ಟದ್ದು ಜುಲೈ 29ರ ಸೋಮವಾರದಂದು.

ರಾಮನಗರದ ಜಿಲ್ಲಾ ಜೆಡಿಎಸ್ ನಾಯಕಿ ಉಮಾ ಮಂಜಪ್ಪರ ಜೊತೆ ಹತ್ತಾರು ಮಹಿಳೆಯರ ಸಮೇತ ಪತ್ನಿ ಭುವನೇಶ್ವರಿ ಯದುಕುಮಾರನ ಪ್ರಮೋದ್ ಲೇಔಟ್ ಮನೆ ಮೇಲೆ ದಾಳಿಯಿಟ್ಟರೆ ದುರುಳ ಪೇದೆ ರೆಡ್‌ಹ್ಯಾಂಡ್ ಸಿಕ್ಕಿಬಿದ್ದ!

ದುರಂತವೆಂದರೆ ಬ್ಯಾಟರಾಯನಪುರ ಪೊಲೀಸರೇ ಕಾರೊಂದನ್ನು ವ್ಯವಸ್ಥೆ ಮಾಡಿ ಟೀವಿ ನಟಿ ಸಮೇತ ಯದುಕುಮಾರನನ್ನು ಎಸ್ಕೇಪ್ ಮಾಡಿಸಿಬಿಟ್ಟರು. ಕೊನೆಗೂ ವಿವಾಹಬಾಹಿರ ಸಂಬಂಧದ ಆರೋಪದ ಮೇಲೆ ಯದುಕುಮಾರನ ವಿರುದ್ಧ ಕೇಸು ದಾಖಲಿಸಿದ್ದು ಬಿಡದಿ ಠಾಣೆಯ ನಿಷ್ಠುರಿ ಪೊಲೀಸ್ ಇನ್ಸ್‌ಪೆಕ್ಟರ್ ಭಾಸ್ಕರ್ ವಕ್ಕಲಿಗ. ಸದ್ಯ ಯದುಕುಮಾರ್ ಪರಾರಿಯಾಗಿದ್ದಾನೆ. ಜೊತೆಗಿದ್ದ ಟೀವಿ ನಟಿಯ ಕತೆ ಏನಾಗಿದೆಯೋ ಗೊತ್ತಿಲ್ಲ. ಪೊಲೀಸ್ ಠಾಣೆಯೊಂದರ ಪಾಪದ ಕೊಡ ತುಂಬಿಬಂದರೆ ಏನೆಲ್ಲ ಅನಾಹುತಗಳಾಗುತ್ತವೆ ಎಂಬುದಕ್ಕೆ ಇದಕ್ಕಿಂತ ಬೇಕೆ?

ಇಷ್ಟಾದ ಮೇಲೂ ಆತನನ್ನು ಸಸ್ಪೆಂಡ್ ಮಾಡದ ಪೊಲೀಸ್ ವ್ಯವಸ್ಥೆಗೆ ಏನನ್ನಬೇಕು?


● ರಾ. ಸೋಮನಾಥ್



ಮೇಯರ್ ಮಗನ ಮೇಲೆ ಎಫ್‌ಐಆರ್ ದಾಖಲಿಸಿದ್ದೂ ಈತನೇ...!

ಇತ್ತೀಚೆಗಷ್ಟೇ ಮೇಯರ್ ವೆಂಕಟೇಶ್‌ಮೂರ್ತಿಯವರ ಮಗ ಕ್ ಮತ್ತು ತಮ್ಮ ರಮೇಶ್‌ಬಾಬು ವಿರುದ್ಧ ಗಿರಿನಗರ ಲೀಸ್ ಠಾಣೆಯಲ್ಲೊಂದು ಮೊಕದ್ದಮೆ ದಾಖಲಾಯಿತಲ್ಲವೇ? ಹೀಗೆ ಬೆಂಗಳೂರಿನ ಮೇಯರ್ ಮಗ ಮತ್ತು ತಮ್ಮನ ದ್ಧ ದಾಖಲಾದ ಎಫ್‌ಐಆರ್‌ನ ಹಿಂದಿದ್ದವನೂ ಇದೇ ೆ ಯದುಕುಮಾರ್. ಗಿರಿನಗರದ ಪೊಲೀಸರೇ ಹೇಳುವಂತೆ ಿ ಎರಡು ಲಕ್ಷದ ಡೀಲು!


ಸದ್ಯ ಗಿರಿನಗರದ ಪೊಲೀಸರ ಪಾಲಿಗೆ ಕಾಮಧೇನು ಅಂತಿದ್ದರೆ ವಿಶ್ವಭಾರತಿ ಹೌಸಿಂಗ್ ಸೊಸೈಟಿಯ ಖದೀಮ ಮಂಜ ಿ ಭೂವಂಚಕ. ತನ್ನ ಗೂಂಡಾಗಿರಿ ಮೂಲಕವೇ ವಿಶ್ವಭಾರತಿ ಿಂಗ್ ಸೊಸೈಟಿಗೆ ಪಕ್ಷರಿಸಿದ ಸೊಸೈಟಿ ಮಂಜ ವಂಚಕನೂ ಮ. ರೌಡಿಯೂ ಕೂಡ. ಒಂದೇ ಸೈಟನ್ನು ಐದಾರು ಜನರಿಗೆ ಮಾರಿದ್ದಾನೆ. ದ ಮನೆ ಕಿತ್ತುತ್ತಾನೆ. ಪಾರ್ಕ್, ಗ್ರೌಂಡು, ಮೋರಿ ಏನೊಂದನ್ನು ದೆ ಕಬಳಿಸಿದ್ದಾನೆ. ಇಂಥ ಸೊಸೈಟಿ ಮಂಜನ ವಂಚನೆಯ ವಿರುದ್ಧ ೇ ನಿವೇಶನದಾರರು ದೂರುತ್ತಿದ್ದರೆಂದರೆ ಅಂಥವರ ಮೇಲೆ ಪೊಲೀಸರನ್ನು



ಛೂಬಿಡುವುದು ಮಂಜನ ತಂತ್ರ.

ವಂಚನೆಗೀಡಾದ ನಿವೇಶನದಾರರೆಲ್ಲ ನ್ಯಾಯ ಕೇಳಿ ಮೇಯರ್ ವೆಂಕಟೇಶ್ ಮೂರ್ತಿಗೆ ಮನವಿ ಸಲ್ಲಿಸಿದ್ದಾರೆ. ಅದಕ್ಕೆ ಸೊಸೈಟಿಯನ್ನೇ ಸೂಪರ್ ಸೀಡ್ ಮಾಡುವಂತೆ ಮುಖ್ಯಮಂತ್ರಿಗೆ ಒತ್ತಾಯ ಮಾಡಿದ ಮೇಯರ್ ಸೊಸೈಟಿ ಮಂಜನ ವಿರುದ್ಧ ಲಿಖಿತ ದೂರನ್ನೂ ಸಲ್ಲಿಸಿದ್ದಾರೆ. ಮೇಯರ್ ವಿರುದ್ಧ ಏನಾದರೂ ಮಾಡಲೇಬೇಕಲ್ಲ, ಯಾರದೋ ಸೈಟಿಗೆ ಮೇಯರ್ ತಮ್ಮ ರಮೇಶ್‌ಬಾಬು ಮತ್ತು ಮಗ ಕಾರ್ತಿಕ್ ಬೇಲಿ ಹಾಕಲು ಬಂದರೆಂದೂ, ಪ್ರಶ್ನಿಸಿದ್ದಕ್ಕೆ ಕೊಲೆ ಬೆದರಿಕೆ ಹಾಕಿದರೆಂದೂ ಖೊಟ್ಟಿ ಕಂಪ್ಲೆಂಟೊಂದನ್ನು ಕೊಡಿಸಿದ ಸೊಸೈಟಿ ಮಂಜು ಪೇದೆ ಯದುಕುಮಾರ್ ಮೂಲಕವೇ ಎಫ್‌ಐಆರ್ ಹಾಕಿಸಿದ್ದೂ ಅಲ್ಲದೆ ಅದನ್ನು ಪತ್ರಿಕೆಗಳಲ್ಲಿ ಬರುವಂತೆ ನೋಡಿಕೊಂಡ.


ವಾಸ್ತವವೇನೆಂದರೆ ಈ ಥರದ ಘಟನೆಯೇ ನಡೆದಿರಲಿಲ್ಲ, ದೂರಿನಲ್ಲಿ




ಹೇಳಿದ ಘಟನೆಯ ಹೊತ್ತಿಗೆ ಮೇಯರ್ ಮಗನಾಗಲಿ, ತಮ್ಮನಾಗಲಿ ಆ ಸ್ಥಳದಲ್ಲೇ ಇರಲಿಲ್ಲ ಎಂಬುದಕ್ಕೆ ಯಥೇಚ್ಛ ದಾಖಲೆಗಳಿದ್ದರೂ ಗಿರಿನಗರ ಪೊಲೀಸರು ಎಫ್‌ಐಆರ್ ಹಾಕಿದ್ದೇಕೆ?

ಅದು ಮೇಯರ್ ವೆಂಕಟೇಶ್ ಮೂರ್ತಿ ಮತ್ತು ಮಾಜಿ ಡಿಸಿಎಂ ಅಶೋಕ್ ನಡುವಿನ ಜಿದ್ದಾಜಿದ್ದಿ. ವೆಂಕಟೇಶ್ ಮೂರ್ತಿ ಬಿಜೆಪಿ ನಾಯಕ ಈಶ್ವರಪ್ಪನ ಅನುಯಾಯಿ ಮತ್ತು ಕುಲಬಾಂಧವ ಕೂಡ. ಈಶ್ವರಪ್ಪ ಬೆಂಬಲದಿಂದಲೇ ಮೇಯರ್ ಆಗಿದ್ದು, ಇದೇ ಕಾರಣಕ್ಕೆ ಅಶೋಕ್‌ಗೆ ವೆಂಕಟೇಶ್ ಮೂರ್ತಿ ವಿರುದ್ಧ ಸಿಟ್ಟಿದೆ. ತನ್ನ ಯಾವ ಮಾತಿಗೂ ಕಿಮ್ಮತ್ತು ಕೊಡದ ಮೇಯರ್ ವಿರುದ್ಧ ಕತ್ತಿ ಮಸೆಯುತ್ತಲೇ ಇದ್ದ ಅಶೋಕ್ ತಾನೇ ಎಫ್‌ಐಆರ್ ದಾಖಲಾಗುವಂತೆ ಮಾಡಿದ್ದಾರೆ.

ಸೊಸೈಟಿ ಮಂಜನ ಬಂಟ, ಆರ್. ಅಶೋಕ್ ಕುತಂತ್ರ, ಎರಡೂ ಒಟ್ಟೊಟ್ಟಿಗೆ ನೆರವೇರುವಂತೆ ಮಾಡಿದ್ದು ಮಾತ್ರ ಖದೀಮ ಪೇದೆ ಯದುಕುಮಾರ!



ಎಮ್ಮೆಲ್ಲೆ ಸತೀಶ್ ರೆಡ್ಡಿ ಮಗಳ ಮರ್ಯಾದಾ ಆತ್ಮ'ಹತ್ಯೆ?'



ಸತ್ತವನು ಮಂತ್ರಿಯಾಗಿದ್ದರೂ ರಾತ್ರಿಯಿಡೀ ಹೆಣ ಕೊಳೆಹಾಕಿ ಪೋಸ್ಟ್‌ಮಾರ್ಟಂ ನೆಪದಲ್ಲಿ ದಿನವಿಡೀ ಸಂಬಂಧಿಕರನ್ನು ಕಾಯುವಂತೆ ಮಾಡುವ ಸರ್ಕಾರಿ ಶವಾಗಾರದ ಡಾಕ್ಟರ್‌ಗಳು ನಡುರಾತ್ರಿ ನಿದ್ದೆಯಿಂದೆದ್ದು ಬಂದು ಚಿಟಿಕೆ ಹೊಡೆದಷ್ಟೇ ವೇಗವಾಗಿ ಯುವತಿಯೊಬ್ಬಳ ಶವದ ಪೋಸ್ಟ್‌ಮಾರ್ಟಂ ಮಾಡಿಕೊಟ್ಟಿದ್ದರ ಹಿಂದಿನ ಚಿದಂಬರ ರಹಸ್ಯವೇನು?

ಪ್ರಶ್ನೆಯಿದು ವಿಚಿತ್ರ ಎನಿಸಬಹುದಲ್ಲವೆ? ನೀವು ನಂಬಿ ಬಿಡಿ... ಬೆಂಗಳೂರಿನ ಪರಮ ಸೋಮಾರಿ ಸರ್ಕಾರಿ ಆಸ್ಪತ್ರೆಯೆಂದೇ ಕುಖ್ಯಾತಿ ಗಳಿಸಿರುವ ವಿಕ್ಟೋರಿಯಾ ಆಸ್ಪತ್ರೆಯಲ್ಲೊಂದು ಪೋಸ್ಟ್‌ಮಾರ್ಟಂ ಕ್ರಾಂತಿ ನಡೆದಿದೆ!

ಹಿಂದ್ಯಾವತ್ತೂ ಮುಂದ್ಯಾವತ್ತೂ ಇಲ್ಲದಂತೆ ಅವಿವಾಹಿತ ಯುವತಿಯೊಬ್ಬಳು ಹೆಣವಾದ ಕೇವಲ ಎರಡು ಗಂಟೆಗಳೊಳಗೆ ಆಕೆಯ ಶವದ ಪೋಸ್ಟ್‌ಮಾರ್ಟಂ ಮುಗಿಸಿಕೊಟ್ಟು ವಿಕ್ಟೋರಿಯಾ ಶವಾಗಾರದ ಡಾಕ್ಟರ್‌ಗಳು ಗಿನ್ನಿಸ್ ದಾಖಲೆಗೂ ಕಾರಣರಾಗಿದ್ದಾರೆ. ಯಾವ ಮಾಯೆಯಿಂದ ರಾಕೆಟ್ ವೇಗದಲ್ಲಿ ಯುವತಿಯೊಬ್ಬಳ ಶವದ ಪೋಸ್ಟ್‌ಮಾರ್ಟಂ ನಡೆಯಿತೋ ಅಷ್ಟೇ ವೇಗವಾಗಿ ಆ ಯುವತಿಯ ಹೆಣವನ್ನು ಸುಟ್ಟೂ ಹಾಕಲಾಯ್ತು. ರಾಮ್‌ಗೋಪಾಲ್ ವರ್ಮಾ ಚಿತ್ರದ ಕತೆಯಂತೆಯೋ ಇನ್ನಾವುದೋ ಹಾಲಿವುಡ್‌ನ ಹಾರರ್ ಸಿನಿಮಾ ಹೋಲುವ ಮೇಲ್ಕಂಡ ವಿವರಗಳ ಕಥಾವಸ್ತುವೇ ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಸತೀಶ್ ರೆಡ್ಡಿ ಮತ್ತವರ ಮಗಳ ನಿಗೂಢ ಸಾವು.

ಮೊನ್ನೆ ಅಂದರೆ 2013 ರ ಆಗಸ್ಟ್ 9 ರ ಬೆಳಿಗ್ಗೆ ಕನ್ನಡದ ಬಹುತೇಕ ನ್ಯೂಸ್ ಚಾನಲ್ಲುಗಳೆಲ್ಲ ಶಾಸಕ ಸತೀಶ್ ರೆಡ್ಡಿ ಮಗಳ ದುರ್ಮರಣದ ಕುರಿತಂತೆ ಯಮೋನ್ಮಾದದಲ್ಲೇ ಸುದ್ದಿ ಬಿತ್ತರಿಸುತ್ತಿದ್ದದ್ದು ಮಧ್ಯಾಹ್ನದ ಹೊತ್ತಿಗೆಲ್ಲಾ ಠುಸ್ ಪಟಾಕಿಯಂತೆ ಸದ್ದಡಗಿದಂತಾಗಿತ್ತು. ಯಾರೋ ಅಬ್ಬೇಪಾರಿಯ ಆತ್ಮಹತ್ಯೆ, ಯಕಶ್ಚಿತ್ ಹುಡುಗಿಯೊಬ್ಬಳ ಕಣ್ಮರೆ, ಹೇಳಹೆಸರಿಲ್ಲದವರ ಸಾವು, ಕೊಲೆಗಳ ಕುರಿತಂತೆ ಗಂಟೆಗಳ ಲೆಕ್ಕದಲ್ಲಿ ಕಾರ್ಯಕ್ರಮ ಪ್ರಸಾರಗೈಯುವ ನ್ಯೂಸ್ ಟೀವಿಗಳೆಲ್ಲ ಶಾಸಕ ಸತೀಶ್‌ರೆಡ್ಡಿ ಮಗಳ ಸೋಕಾಲ್ಡ್ ಆತ್ಮಹತ್ಯೆಯ ಕುರಿತಂತೆ ಕಾಲಕ್ರಮೇಣ ಆಸಕ್ತಿಯನ್ನೇ ಕಳಕೊಂಡಿದ್ದು ಕೂಡ ಇವತ್ತಿಗೂ ಪ್ರಶ್ನೆಯೆ!

ಮರುದಿನದ ಪತ್ರಿಕೆಗಳಲ್ಲೂ ಕಾಟಾಚಾರದ ಆತ್ಮಹತ್ಯೆಯ ಕತೆಯೇ ಪ್ರಕಟವಾಗಿತ್ತು. ಒಂದೆರಡು ಪತ್ರಿಕೆಗಳ ಹೊರತಾಗಿ ಬೇರೆಲ್ಲವೂ ನಿಮಿತ್ತ ಮಾತ್ರದ ಸುದ್ದಿ ಮಾಡಿ ಕೈತೊಳಕೊಂಡಿದ್ದವು. ಬೊಮ್ಮನಹಳ್ಳಿ ಬಿಜೆಪಿ ಶಾಸಕ ಸತೀಶ್ ರೆಡ್ಡಿ ಸಾಮಾನ್ಯನಲ್ಲ, ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ಡಿಸಿಎಂ ಅಶೋಕ್‌ರ ಬಲಗೈ ಬಂಟನಂತೆ ಮೆರೆದವರು. ಕೋರಮಂಗಲ, ಬೆಳ್ಳಂದೂರು, ಹೊಸೂರು ರಸ್ತೆ ಬೊಮ್ಮನಹಳ್ಳಿ, ಮಡಿವಾಳ, ಬನ್ನೇರುಘಟ್ಟ ರಸ್ತೆ ಸೇರಿದಂತೆ ಬೆಂಗಳೂರಿನ ಕಾಲುಭಾಗವನ್ನು ಬಿಜೆಪಿ ಆಳ್ವಿಕೆಯಿದ್ದಷ್ಟೂ ದಿನ ಅನಭಿಷಕ್ತ ದೊರೆಯಂತೆ ವಿಜೃಂಭಿಸಿದ ಸತೀಶ್ ರೆಡ್ಡಿ ಕಾಂಗ್ರೆಸ್ ಅಲೆಯನ್ನೂ ಮುರಿದು ಗೆದ್ದುಬಂದ ತಾಕತ್ತುದಾರ. ಇಂಥವನ ಮುದ್ದಿನ ಮಗಳೇಕೆ ಇದ್ದಕ್ಕಿದ್ದಂತೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ?

ಹಿರಿಮಗಳು ಗಗನಾ

ಈ ಪ್ರಶ್ನೆಯ ಹಿನ್ನೆಲೆಯಲ್ಲೇ ಸತೀಶ್ ರೆಡ್ಡಿಯ ಕುಟುಂಬದ ಸ್ಥಿತಿಗತಿ ಕೆದಕ ಹೊರಟರೆ ಅದು ಕೂಡ ನಿಗೂಢವೆ. ಸದ್ಯ ನಂ. 123, ಹೊಂಗಸಂದ್ರ, ಬೇಗೂರು ರಸ್ತೆ ಬೆಂಗಳೂರು-68 ರ ವಾಸಿ ಸತೀಶ್ ರೆಡ್ಡಿ ಐಷಾರಾಮಿ ಬಂಗಲೆಯನ್ನೇ ಕಟ್ಟಿಸಿಕೊಂಡಿದ್ದಾರೆ. ಮೂರಂತಸ್ತಿನ ಹತ್ತಕ್ಕೂ ಅಧಿಕ ಕೊಠಡಿಗಳುಳ್ಳ ಎಮ್ಮೆಲ್ಲೇ ಬಂಗಲೆ ಪಕ್ಕದ್ದೇ ಅವರ ರಾಜಕೀಯ ಎದುರಾಳಿ ನಾಗಭೂಷಣ ರೆಡ್ಡಿಯ ಬಂಗಲೆ. ಕಳೆದ ಚುನಾವಣೆಯಲ್ಲಿ ಸತೀಶ್ ರೆಡ್ಡಿ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ನಾಗಭೂಷಣ ರೆಡ್ಡಿ ಶಾಸಕರ ಮತ್ತೊಬ್ಬ ಎದುರಾಳಿ ಕುಪೇಂದ್ರ ರೆಡ್ಡಿಯ ಶಿಷ್ಯ.

ಬೊಮ್ಮನಹಳ್ಳಿ ಹೊಂಗಸಂದ್ರದ ಜಮೀನ್ದಾರ ಮುನಿರೆಡ್ಡಿ-ಪಾಪಮ್ಮ ದಂಪತಿಗಳ ಹಿರಿಮಗ ಸತೀಶ್ ರೆಡ್ಡಿ ತಮ್ಮ ಸಂಬಂಧಿಯೇ ಆದ ಆಶಾರನ್ನು ಮದುವೆಯಾಗಿದ್ದು 1994ರ ಡಿಸೆಂಬರ್ 8ರಂದು. ನೆಟ್ಟಗೆ ಎಸ್‌ಎಸ್‌ಎಲ್‌ಸಿಯನ್ನೂ ಪಾಸು ಮಾಡಲಾಗದೆ ಕಾಲೇಜು ಮೆಟ್ಟಲು ಕೂಡ ನೋಡದ ಸತೀಶ್ ರೆಡ್ಡಿ-ಆಶಾ ದಂಪತಿಗಳ ಮೂವರು ಮಕ್ಕಳ ಪೈಕಿ ದೊಡ್ಡವಳೇ ಗಗನಾ. ಸಾಯುವುದಕ್ಕೂ ಮುನ್ನ ಅಥವಾ ಇನ್ನೊಂದು ವಾರವಾದರೂ ಹೆಚ್ಚಿಗೆ ಆಕೆ ಬದುಕಿದ್ದರೆ ಆ ಹೊತ್ತಿಗಾಕೆಗೆ ಹದಿನೆಂಟು ತುಂಬಿರುತ್ತಿತ್ತು. ಎರಡನೇ ಮಗಳು ಮೇಘನಾಗಿನ್ನೂ ಏಳು ವರ್ಷ. ಕೊನೆಯವನೇ ನಾಲ್ಕೂವರೆ ವರ್ಷದ ಮಗು ನಿಶಾಂತ್!

ಮೊನ್ನೆ ಆಗಸ್ಟ್ 8 ರ ರಾತ್ರಿ ಎಂಟೂವರೆ ಹೊತ್ತಿಗೆ ಟೀವಿ ನೋಡುವ ವಿಷಯವಾಗಿ ತಂಗಿ ಮೇಘನಾ ಜೊತೆ ಗಗನಾ ಜಗಳ ಕಾದಳೆಂದೂ, ರಿಮೋಟ್ ಹಿಡಿದು ಕಿತ್ತಾಡುತ್ತಿದ್ದ ಅಕ್ಕತಂಗಿಯರನ್ನು ಕಂಡಿದ್ದೇ ತಾಯಿ ಆಶಾ ಬಂದು ಜಗಳ ಬಿಡಿಸಿದರೆಂದೂ, ತಂಗಿಯನ್ನು ಹೊಡೆದದ್ದಕ್ಕಾಗಿ ಗಗನಾಳಿಗೆ ತಾಯಿ ಆಶಾ ಮೊಟುಕಿದರೆಂದೂ ಇದರಿಂದ ಅವಮಾನಿತಳಾದ ಗಗನಾ ಮಹಡಿಯ ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡವಳು ರಾತ್ರಿ 9.30 ರ ಹೊತ್ತಿಗೆ ಊಟಕ್ಕೆಂದು ಎಬ್ಬಿಸಹೊರಟರೆ ಹೆಣವಾಗಿ ಫ್ಯಾನಿಗೆ ನೇತಾಡುತ್ತಿದ್ದಾಳಂತೆ. ತಾಯಿಯದ್ದೇ ಸೀರೆಯಿಂದ ಫ್ಯಾನಿಗೆ ನೇಣಾಕಿಕೊಂಡಿದ್ದಳಂತೆ!

ಪ್ರಕಟಿಸಿವೆ. ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕೆ, ಅಪ್ಪ-ಅಮ್ಮ ಬೈದಿದ್ದಕ್ಕೆ, ಬಟ್ಟೆ ಕೊಡಿಸದ್ದಕ್ಕೆ, ಕಾಸು ಕೊಡದಿದ್ದಕ್ಕೆ ಎಳೇ ಹುಡುಗ-ಹುಡುಗಿಯರ ಆತ್ಮಹತ್ಯೆ ಮಾಡಿಕೊಳ್ಳುವುದು ಸರ್ವೇಸಾಧಾರಣ ನಿಜ. ಹಾಗೇ ಟೀವಿ ನೋಡುವ ವಿಷಯದಲ್ಲಿ ನಡೆದ ಅಕ್ಕತಂಗಿಯರ ಜಗಳ, ಅಂತಿಮವಾಗಿ ಅಕ್ಕನ ಆತ್ಮಹತ್ಯೆಯಲ್ಲಿ ಅಂತ್ಯಗೊಂಡಿದೆಯೆಂದೇ ಪ್ರತಿಯೊಬ್ಬರೂ ಭಾವಿಸಿರಬೇಕು. ಹೆತ್ತ ಕುಡಿಯ ಬಗ್ಗೆ ತಂದೆತಾಯಂದಿರೇ ತಪ್ಪಾದ ಮೇಲೆ ಪ್ರಶ್ನಿಸುವ ಅಧಿಕಾರ ತಾನೇ ಯಾರಿಗಿದೆ?

ಆದರೆ ಗಗನಾಳ ಸಾವಿನ ಸುದ್ದಿಯಲ್ಲೇ ಹಲವಾರು ಪ್ರಶ್ನೆಗಳು ನಾಮುಂದು ತಾಮುಂದು ಎಂಬಂತೆ ಎದ್ದೆದ್ದು ನಿಲ್ಲುತ್ತಿದ್ದವು. ರಾಜಧಾನಿ ಬೆಂಗಳೂರಿನ ಪ್ರತಿಷ್ಠಿತ ಕ್ಷೇತ್ರವೊಂದರ ಬಲಾಢ್ಯ ಶಾಸಕ ಸತೀಶ್ ರೆಡ್ಡಿಯ ಆಪಾಟೀ ಐಷಾರಾಮಿ ಬಂಗಲೆಯಲ್ಲಿರುವುದು ಕೇವಲ ಒಂದೇ ಟೀವಿಯೆ? ಟೀವಿ ನೋಡುವ ಸಲುವಾಗಿ ಅಕ್ಕತಂಗಿಯರಿಬ್ಬರು ಕಿತ್ತಾಡುವಂತ ದುರ್ಗತಿ ಶಾಸಕ ಸತೀಶ್ ರೆಡ್ಡಿಗಿದೆಯೇ? ಆ ಪಾಟ ಬಂಗಲೆ ಕಟ್ಟಿಸಿದ, ಗೆಲ್ಲಲು ಚುನಾವಣೆಯಲ್ಲಿ ಹಣವನ್ನು ನೀರಿನಂತೆ ವ್ಯಯಿಸಿದ ಸತೀಶ್ ರೆಡ್ಡಿ ಬೇರೆಲ್ಲ ಶ್ರೀಮಂತರಂತೆ ಕೊಠಡಿಗೊಂದು ಟೀವಿ ಇಡುವುದನ್ನು ಬಿಟ್ಟು ಇಡೀ ಬಂಗಲೆಯಲ್ಲಿ ಒಂದೇ ಟೀವಿ ಇಟ್ಟಿದ್ದ ಅಂದರೆ ನಂಬುವ ಮಾತೆ?

ಇಂಥ ಪ್ರಶ್ನೆಗಳಲ್ಲೇ ಶಾಸಕರ ಮಗಳ ಸಾವಿನ ಕುರಿತ ಉತ್ತರಗಳೂ ಅಡಗಿದ್ದವು. ಸತೀಶ್‌ರೆಡ್ಡಿಯನ್ನು ಬಲ್ಲವರ್‍ಯಾರಿಗೂ ಟೀವಿ ನೋಡುವ ವಿಷಯವಾಗಿ ಮಗಳು ಆತ್ಮಹತ್ಯೆ ಮಾಡಿಕೊಂಡಳೆಂಬುದೇ ಅರ್ಥವಾಗದ್ದಾಗಿತ್ತು, ಏಕೆಂದರೆ ಸತೀಶ್ ರೆಡ್ಡಿಯ ಬಂಗಲೆಯೊಂದರಲ್ಲೇ ಎಂಟಕ್ಕೂ ಅಧಿಕ ಟೀವಿ ಸೆಟ್ಟುಗಳಿದ್ದವು. ಪ್ರತಿ ಕೊಠಡಿ, ಹಾಲಿನಲ್ಲೂ ದುಬಾರಿಯ ಟೀವಿ ಕಂಗೊಳಿಸುತ್ತಿತ್ತು. ಹಾಗೊಮ್ಮೆ ತಂಗಿ ನೋಡುತ್ತಿದ್ದ ಟೀವಿಯಲ್ಲೇ ಗಗನಾ ನೋಡಬೇಕೆಂದಿದ್ದರೆ ತಂಗಿಗಾದರೂ ಬೇರೆ ಟೀವಿಯಿತ್ತು.

ನಡುರಾತ್ರಿಯ ಅಂತ್ಯಕ್ರಿಯೆ

ಅಲ್ಲಿಗೆ ಟೀವಿ ನೋಡುವ ವಿಷಯಕ್ಕೆ ಮಗಳು ಆತ್ಮಹತ್ಯೆ ಮಾಡಿಕೊಂಡಳೆಂಬುದೇ ಸುಳ್ಳಾಗಿತ್ತು. ಗಗನಾಳ ಕುರಿತಂತೆ ಆಕೆಯ ಗೆಳತಿಯರು, ಸಹಪಾಠಿಗಳು ಹೇಳುತ್ತಿದ್ದದ್ದೇ ಮತ್ತೊಂದು ಕತೆಯನ್ನು, ಮಡಿವಾಳದ ಹೊಸೂರು ರಸ್ತೆಯ ಪ್ರತಿಷ್ಠಿತ ಕ್ರೈಸ್ಟ್ ಕಾಲೇಜಿನಲ್ಲಿ ಪಿಯೂಸಿ ಓದುತ್ತಿದ್ದ ಗಗನಾ ಧೈರ್ಯವಂತೆ. ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿ ಬುದ್ಧಿಯವಳಾಗಿರಲಿಲ್ಲ. ಹಾಗೊಮ್ಮೆ ಟೀವಿ ನೋಡುವ ವಿಷಯಕ್ಕೇ ಆತ್ಮಹತ್ಯೆ ಮಾಡಿಕೊಂಡಿದ್ದರೂ ಆಕೆಯ ಸಾವಿನ ಕುರಿತಂತೆ ಶಾಸಕ ಸತೀಶ್ ರೆಡ್ಡಿ, ತಾಯಿ ಆಶಾ, ಸಂಬಂಧಿ ಆನಂದ ರೆಡ್ಡಿ, ಮಡಿವಾಳ ಪೊಲೀಸರು, ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರ ಪರಸ್ಪರ ಸಂಬಂಧವೇ ಇಲ್ಲದ ಕತೆ ಹೇಳುತ್ತಿರಲಿಲ್ಲ.

ಪತ್ನಿ ಆಶಾ ತಮ್ಮ ಆನಂದ ರೆಡ್ಡಿ ಪ್ರಕಾರ ಟೀವಿ ನೋಡುವುದಕ್ಕಾದ ಜಗಳವೇ ಆತ್ಮಹತ್ಯೆಗೆ ಕಾರಣವಾದರೆ, ತಂದೆ ಸತೀಶ್ ರೆಡ್ಡಿ ತನ್ನ ಸಂಬಂಧಿಯೊಬ್ಬರ ಬಳಿ ತಡವಾಗಿ ಬಂದದ್ದಕ್ಕೆ ಬೈದೆ, ಅದನ್ನೇ ಸೀರಿಯಸ್ಸಾಗಿ ತಗೊಂಡು ನೇಣಾಕಿಕೊಂಡಿದ್ದಾಳೆ ಎಂದಿದ್ದಾರೆ. ರಾತ್ರಿ 9.30 ಕ...





ಸತೀಶ್ ರೆಡ್ಡಿ ಅವರ ಬಂಗ...

ಇದು ಗಗನಾ ಸಾವಿನ ಕುರಿತಂತೆ ಮಡಿವಾಳ ಪೊಲೀಸರಿಗೆ ಆನಂದ ರೆಡ್ಡಿ ಎಂಬಾತ ನೀಡಿರುವ ಲಿಖಿತ ದೂರಿನ ಸಾರಾಂಶ. ಆ ಆನಂದ ರೆಡ್ಡಿ ಬೇರೆ ಯಾರೂ ಅಲ್ಲ ಶಾಸಕ ಸತೀಶ್ ರೆಡ್ಡಿಯ ಪತ್ನಿ ಆಶಾರ ಸ್ವಂತ ತಮ್ಮ. ಅಂದರೆ ಮಡಿವಾಳ ಪೊಲೀಸರ ಗಮನಕ್ಕೆ ಶಾಸಕರ ಪುತ್ರಿಯ ಸಾವಿನ ಸಂಗತಿ ಗೊತ್ತಾಗಿದ್ದೇ ಆಕೆಯ ಹೆಣ ಸುಟ್ಟು ಅಂತ್ಯಕ್ರಿಯೆ ಮುಗಿಸಿದ ನಂತರ!

ಒಂದೇ ಟೀವಿ....?

ಮೇಲುನೋಟಕ್ಕಿದು ಬುದ್ಧಿ ಬಲಿಯದ ಅವಿವೇಕಿ ವಿದ್ಯಾರ್ಥಿನಿಯೊಬ್ಬಳ ತಥಾಗತ ಆತ್ಮಹತ್ಯೆಯಂತೆಯೇ ಕಾಣುತ್ತದೆ. ಹಾಗೆಂದೇ ಭಾವಿಸಿ ಪತ್ರಿಕೆ-ಟೀವಿಗಳೂ ಸುದ್ದಿ

ಮುಗಿಸಿಕೊಂಡಿದ್ದ ಮಗಳನ್ನು ಊಟಕ್ಕೆಂದು ತಾಯಿ... ಎಬ್ಬಿಸಹೋದರೆ ಆಕೆ ತಾಯಿಯ ಸೀರೆಯನ್ನೇ ಬಳ... ನೇಣು ಬಿಗಿದುಕೊಂಡಿದ್ದಳಂತೆ. ತಂದೆ ಸತೀಶ್ ರೆಡ್ಡಿಯ... ಬಂದು ನೇಣಿನಿಂದ ಇಳಿಸುವ ಹೊತ್ತಿಗೆ ಆ... ಉಸಿರಾಡುತ್ತಿದ್ದಳಂತೆ. ಪಕ್ಕದಲ್ಲೇ ಇದ್ದ ಪ್ರಶಾಂತ್ ನರ್ಸಿಂಗ್... ಹೋಮಿಗೆ ಕರೆದೊಯ್ಯಲಾಗಿ ಪರೀಕ್ಷಿಸಿದ ಅಲ್ಲಿನ ವೈದ್ಯರ... ವಿಕ್ಟೋರಿಯಾಗೆ ಕರೆದೊಯ್ಯುವಂತೆ ಸೂಚಿಸಿದರಂತೆ... ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯುವ ಹೊತ್ತಿಗೆ ಗಗನಾ... ಕೊನೆಯುಸಿರೆಳೆದಿದ್ದಳಂತೆ.


ಇದು ಶಾಸಕ ಸತೀಶ್ ರೆಡ್ಡಿಯವರೇ ತಮ್ಮ ಪರಮಾ... ಚಾನಲ್‌ಕೋರರ ಜೊತೆ ಹೇಳಿಕೊಂಡ ರೀತಿ. ಇದಿಷ್ಟೆ... ಆಗಿದ್ದರೆ ಯಾರಿಗೂ ತಕರಾರಿರುತ್ತಿರಲಿಲ್ಲ. ಆದರೆ ಪತ್ರಿ... ಗಳಲ್ಲದು ಸುದ್ದಿಯಾಗುವ ಮೊದಲೇ ಹೆಣದ ಪೋಸ್ಟ್... ಮಾರ್ಟಂ, ಅಂತ್ಯಕ್ರಿಯೆ; ಎಲ್ಲವೂ ಮುಗಿದುಹೋಗಿತು...

ಸತೀಶ್ ರೆಡ್ಡಿ ಓರ್ವ ವೃತ್ತಿನಿರತ ರಾಜಕಾರಣಿ... ಹಾಗೊಮ್ಮೆ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದೇ ಆಗಿ... ಪಕ್ಷದಲ್ಲಿ ಮಗಳ ಶವವನ್ನು ಊರ ತುಂಬಾ ಮೆರವಣಿ... ಮಾಡಿ ಕಣ್ಣೀರಿಟ್ಟು ಮತದಾರರ ಅನುಕಂಪ ಗಿಟ್ಟಿಸುವುದ... ಗೊತ್ತಿಲ್ಲವೆಂದೇನಲ್ಲ. ವಿಚಿತ್ರವೆಂದರೆ ತನ್ನ ಒಡಹುಟ್ಟಿದ್ದವರು... ಸಂಬಂಧಿಕರು, ಅಣ್ಣತಮ್ಮಂದಿರಿಗೂ ಸತ್ತ ಮಗಳ ಮು... ನೋಡುವ ಅವಕಾಶವನ್ನೇ ನೀಡದೆ ರಾತ್ರೋರಾ... ಅಂತ್ಯಕ್ರಿಯೆ ಮುಗಿಸುವಷ್ಟು ಅವಸರವಂತೂ ಖಂಡಿ... ಇರಲಿಲ್ಲ. ಅನುಮಾನ, ಗುಮಾನಿಗಳ ಒಂದರಮೇಲೊಂದ... ಪ್ರಶ್ನೆಗಳು ತಲೆ ಎತ್ತಿದ್ದೇ ಇಲ್ಲಿಂದ.

ವಿಚಿತ್ರ ಶವ ಪರೀಕ್ಷೆ

ಶಾಸಕ ಸತೀಶ್ ರೆಡ್ಡಿಯೇ ಕುಣಿಕೆಯಿಂದ ಮಗಳನ್... ಇಳಿಸಿದಾಗ ಆಕೆ ಉಸಿರಾಡುತ್ತಿದ್ದದ್ದು ನಿಜವಾಗಿದ್ದರೆ ಸಾಯಲ... ಬೇರೆ ಕಾರಣಗಳೇ ಇರಲಿಲ್ಲ, ಸಾಮಾನ್ಯವಾಗಿ ವಿಕ್ಟೋರಿಯ... ಶವಾಗಾರದಲ್ಲಿ ಸಂಜೆ 6 ರ ನಂತರ ಯಾವುದ... ಪೋಸ್ಟ್‌ಮಾರ್ಟಂ ಮಾಡಿದ ಉದಾಹರಣೆಯಿಲ್ಲ, ಗಗನಾ...

ಹೆಣ ಸುಟ್ಟ ಮೇಲೆ ಪೊಲೀಸರು ಬಂದರಂತೆ



ಗಗನಾಳ ಮೊಬೈಲಿಗೆ ಬರುತ್ತಿದ್ದ ಅನಾಮಿಕ ಕರೆಯೊಂದರ ಬಗ್ಗೆ ತಂದೆ ಸತೀಶ್ ರೆಡ್ಡಿ ಸಿಕ್ಕಾಪಟ್ಟೆ ತಲೆ ಕೆಡಿಸಿಕೊಂಡಿದ್ದರೆಂದೂ ಆಗಾಗ ಆಕೆಯ ಮೊಬೈಲಿನ ಕರೆ ಮತ್ತು ಮೆಸೇಜುಗಳನ್ನು ತಂದೆ ಪರೀಕ್ಷಿಸುತ್ತಿದ್ದರೆಂದೂ ಶಾಸಕರ ಮನೆ ಕೆಲಸದವರು ಹೇಳುತ್ತಾರೆಂದು ಆ ಭಾಗದ ಜನ ಹೇಳುವುದರಲ್ಲಿ ಸುಳ್ಳೆಷ್ಟೋ-

ಆದರೆ ಗಗನಾ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಹೇಡಿಯಾಗಿರಲಿಲ್ಲ ಎಂಬ ಆಕೆಯ ಸಹಪಾಠಿಗಳ ಮಾತಂತೂ ಸತ್ಯವೆ. ಇನ್ನು ನಾಲ್ಕೇ ನಾಲ್ಕು ದಿನ ಆಕೆ ಬದುಕಿದ್ದರೆ ಆಕೆಗೆ ವಯಸ್ಸು ಹದಿನೆಂಟಾಗುತ್ತಿತ್ತು. ಅಂದರೆ ಸ್ವಂತ ನಿರ್ಧಾರ ಕೈಗೊಳ್ಳುವ ಎಲ್ಲಾ ಹಕ್ಕುಗಳು ಸಿಗುತ್ತಿತ್ತು. ಅಷ್ಟರೊಳಗೆ ಆಕೆಯನ್ನು ಮುಗಿಸಬೇಕಾದ ಅದೆಂಥಾ ಸಂದಿಗ್ಧವಿತ್ತೊ. ಇನ್ನು ಪೊಲೀಸರಿಂದೇನಾದರೂ ನ್ಯಾಯ ನಿರೀಕ್ಷಿಸಬಹುದೆಂದರೆ ಅದಿಲ್ಲಿದು ದುಸ್ಸಾಧ್ಯ. ಏಕೆಂದರೆ ಸದ್ಯ ಮಡಿವಾಳ ಪೊಲೀಸ್ ಠಾಣೆಯ ಪ್ರತಿ ಪೇದೆಯೂ ಶಾಸಕರ ಮರ್ಜಿಯಲ್ಲಿರುವವನೆ. ಈಗ ಇನ್ಸ್‌ಪೆಕ್ಟರಾಗಿರುವ ಎಂ.ಕೆ. ಗಣಪತಿಯಂತೂ ಶಾಸಕರ ಪರಮನಿಷ್ಠ ಆಜ್ಞಾಪಾಲಕ.

ಗಗನಾ ರೆಡ್ಡಿ ಸಾವಿನ ಕುರಿತಂತೆ ಕನಿಷ್ಠ ಮಹಿಳಾ ಸಂಘಟನೆಗಳಾದರೂ ದೂರು ಕೊಡಬೇಕೆಂದರೆ ದೂರು ಕೊಟ್ಟು ಮಡಿವಾಳ ಪೊಲೀಸ್ ಠಾಣೆಯಿಂದ ಹೊರಬೀಳುವುದೂ ಕಷ್ಟ. ಯಾವುದೇ ಆತ್ಮಹತ್ಯೆಯಾದರೂ ಸ್ಥಳ ಪರೀಕ್ಷೆ, ಮಹಜರು ನಡೆದ ನಂತರವೇ ಶವಸಂಸ್ಕಾರವಾಗಬೇಕು. ಆದರೆ ಪೊಲೀಸರಿಗೆ ವಿಷಯ ತಲುಪುವ ಮೊದಲೇ ಹೆಣ ಸುಟ್ಟು ಮುಗಿಸುತ್ತಾರೆಂದರೆ, ಈ ಬಗ್ಗೆ ಪೊಲೀಸರು ಕಾಟಾಚಾರದ ತನಿಖೆ ಕೂಡ ನಡೆಸುವುದಿಲ್ಲವೆಂದರೆ ನೆಲದ ಕಾನೂನಿಗಿಲ್ಲಿ ಯಾವ ಬೆಲೆಯಿದೆ? ಬಹುಶಃ ಸಿಬಿಐ ತನಿಖೆಯಾದರಷ್ಟೇ ಸತ್ಯ ಹೊರಬಹುದೇನೊ. ಆದರೆ ನ್ಯಾಯ ಕೇಳುವವರ್‍ಯಾರು? ಬೀದಿಗಿಳಿಯುವವರ್‍ಯಾರು?

ವವನ್ನು ಆಗಸ್ಟ್ 8 ರ ರಾತ್ರಿ ಮರಣೋತ್ತರ ಪರೀಕ್ಷೆಗೆ ಒಳಪಡಿಸಿದ್ದು ಅದೇ ವಿಕ್ಟೋರಿಯಾ ಶವಾಗಾರದ ಡಾ. ದಿಲೀಪ್ ಕುಮಾರ್. ವಾಸ್ತವವಾಗಿ ವಿಕ್ಟೋರಿಯಾ ಶವಾಗಾರದ ಮುಖ್ಯಸ್ಥರಾದ ಡಾ. ದೇವದಾಸ್ ಹಗಲು ಹೊತ್ತು ಶವಪರೀಕ್ಷೆ ನಡೆಸುವುದುಂಟು. ಆದರೆ ಆಗಸ್ಟ್ 8 ರ ನಡುರಾತ್ರಿ ಅಷ್ಟೊಂದು ಆತುರಾತುರವಾಗಿ ಡಾ. ದಿಲೀಪ್‌ಕುಮಾರ್ ಪೋಸ್ಟ್‌ಮಾರ್ಟಂ ಮಾಡಿದ್ದೇ ವಿಚಿತ್ರ ಮತ್ತು ಆಶ್ಚರ್ಯಕರ!

ಯಥಾವತ್ ನೇಣು ಬಿಗಿದುಕೊಂಡವರ ಶವದಲ್ಲಿ ಕಂಡುಬರುವಂತೆ ಗಗನಾಳ ಕತ್ತಿನ ಮೂಳೆ ಮುರಿದಿತ್ತೆಂದೂ, ಶ್ವಾಸನಾಳವೇ ತಿರುಗಿ ಗಂಟಾಗಿತ್ತೆಂದೂ ಶವಪರೀಕ್ಷೆಯ ವರದಿಯಲ್ಲಿ ನಮೂದಿಸುತ್ತಾರೆ. ಇಷ್ಟೊಂದು ಆತುರಾತುರವಾಗಿ ಡಾ. ದಿಲೀಪ್ ಕುಮಾರ್ ಶವಪರೀಕ್ಷೆ ನಡೆಸಿರುವುದೇ ಅನುಮಾನವನ್ನು ಮತ್ತಷ್ಟು ಬಲಪಡಿಸುತ್ತದೆ.

ಆಗಸ್ಟ್ 8 ರ ರಾತ್ರಿ 9.30 ರ ಹೊತ್ತಿಗೆ ಗಗನಾ ನೇಣು ಹಾಕಿಕೊಂಡಿದ್ದೇ ಆಗಿದ್ದರೆ ಪಕ್ಕದ ಪ್ರಶಾಂತ್ ನರ್ಸಿಂಗ್ ಹೋಮಿಗೆ ಆಕೆಯನ್ನು ಕರೆದೊಯ್ದದ್ದೇ ಆಗಿದ್ದರೆ ಉಸಿರಾಡುತ್ತಿದ್ದ ಆಕೆ ನಿಸ್ಸಂಶಯವಾಗಿ ಬದುಕಬೇಕಿತ್ತು. ಇಲ್ಲಿ ಇನ್ನೂ ಒಂದು ಅನುಮಾನ ಹುಟ್ಟಿಕೊಳ್ಳಲು ಕಾರಣ ಕೂಂಗಸಂದ್ರದ ಪ್ರಶಾಂತ್ ನರ್ಸಿಂಗ್ ಹೋಮ್ ಶಾಸಕ ಸತೀಶ್ ರೆಡ್ಡಿಯ ರಕ್ತ ಸಂಬಂಧಿಗೆ ಸೇರಿದ್ದು!

ಪ್ರಶಾಂತ್ ನರ್ಸಿಂಗ್ ಹೋಮಿನಿಂದ ರಾತ್ರಿ 10.30 ಕ್ಕೆ ಗಗನಾಳ ಶವವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಹೊತ್ತು ತಂದರೂ, ವಿಕ್ಟೋರಿಯಾ ತಲುಪುವ ಹೊತ್ತಿಗೆ ಕನಿಷ್ಠವೆಂದರೂ ಒಂದು ಗಂಟೆ ಬೇಕೇಬೇಕು. ಶವಾಗಾರಕ್ಕೆ ತಂದು ಅಲ್ಲಿಂದ ಸಂಬಂಧಪಟ್ಟ ವೈದ್ಯರಿಗೆ ಫೋನ್ ಮಾಡಿ ಅವರು ತಮ್ಮ ಮನೆಯಿಂದ ವಿಕ್ಟೋರಿಯಾಗೆ ಬಂದು, ರೆಡಿಯಾಗಿ ಪೋಸ್ಟ್‌ಮಾರ್ಟಂ ನಡೆಸಿದ್ದೇ ಆದ ಪಕ್ಷದಲ್ಲಿ, ಆನಂತರ ರಿಪೋರ್ಟ್ ಬರೆದುಕೊಟ್ಟು ವರದಿ ಮಾಡಲು ಕಮ್ಮಿಯೆಂದರೂ ಐದು ಗಂಟೆ ಬೇಕೇಬೇಕು. ಹಾಗೆ ವಿಕ್ಟೋರಿಯಾ ಶವಾಗಾರರಿಂದ ನಸುಕಿನ ನಾಲ್ಕು ಗಂಟೆಗೆ ಹೆಣ ಹೊತ್ತುಕೊಂಡು ಸತೀಶ್ ರೆಡ್ಡಿಯ ಬೇಗೂರಿನ ತೋಟಕ್ಕೆ ತಂದು ಅಲ್ಲಿ ಗುಣಿತೋಡುವುದೋ, ಸುಡುವುದೋ ಮಾಡಿದರೂ ಬೆಳಿಗ್ಗೆ ಐದರ ನಸುಕಿನೊಳಗೇ ಅಂತ್ಯಕ್ರಿಯೆ ಮುಗಿಸಿ ಮನೆಗೆ ವಾಪಸ್ಸಾಗುವುದು ಸಾಧ್ಯವೇ ಇಲ್ಲ.

ಹೆಣ ಏನಾಯಿತು?

ಆದರೆ ಶಾಸಕರ ಮಗಳ ಈ ಪ್ರಕರಣದಲ್ಲಿ ನಸುಕಿನ ಐದರ ನಾಲ್ಕರ ಒಳಗೇ ಶವವನ್ನು ಬೇಗೂರಿನ ಫಾರ್ಮ್ ಹೌಸಿಗೆ ತಂದು ಸುಟ್ಟು ಬೂದಿ ಮಾಡಲಾಗಿದೆ. ಎತ್ತಿಂದೆತ್ತ ಲೆಕ್ಕ ಹಾಕಿದರೂ ರಾತ್ರಿ 9.30 ರಿಂದ ಪ್ರಶಾಂತ್ ಆಸ್ಪತ್ರೆ, ವಿಕ್ಟೋರಿಯಾ ಶವಾಗಾರ, ಶವ ಪರೀಕ್ಷೆ, ತದನಂತರ ಮತ್ತೆ ಫಾರ್ಮ್ ಹೌಸಿಗೆ ವಾಪಸ್ಸು, ಅಲ್ಲಿ ಸೌದೆಗಳ ಚಿತೆ, ಅಂತ್ಯಕ್ರಿಯೆ ಎಲ್ಲವೂ ನಸುಕಿನ ನಾಲ್ಕೋ ಐದೋ ಗಂಟೆಯೊಳಗೆ ಮುಗಿಸಲು ಸಾಧ್ಯವಿಲ್ಲ. ಹಾಗೊಮ್ಮೆ ಶವಾಗಾರದಲ್ಲಿ ಡಾ. ದಿಲೀಪ್‌ಕುಮಾರ್ ಮೊದಲೇ ಹಾಜರಿದ್ದರೆ ಅವರಿಗೆ ಗಗನಾ ಕೊಲೆಯಾಗುವುದು ಮೊದಲೇ ಗೊತ್ತಿತ್ತೆ? ಅಥವಾ ಅಷ್ಟೊಂದು ವೇಗವಾಗಿ ಶವಪರೀಕ್ಷೆಯ ವರದಿಯನ್ನು ಬರೆದುಕೊಟ್ಟರೆಂದರೆ ಗಗನಾಳ ಶವ ವಿಕ್ಟೋರಿಯಾಕ್ಕೆ ತಂದಿದ್ದೇ ಸುಳ್ಳೆ? ಶವವನ್ನೇ ನೋಡದೆ, ಪರೀಕ್ಷೆ ಕೂಡ ನಡೆಸದೆ ಶಾಸಕರ ಆಮಿಷಕ್ಕೆ ಬಲಿಯಾಗಿ ಡಾ. ದಿಲೀಪ್‌ಕುಮಾರ್ ಕಪೋಲಕಲ್ಪಿತ ವರದಿ ಬರೆದು ಕೊಟ್ಟರೆ?

ಶವಸಂಸ್ಕಾರದ ಗೌಪ್ಯ ಮತ್ತು ಸಮಯದ ಆಧಾರದ ಮೇಲೇ ಹೇಳಬೇಕೆಂದರೆ ಮೇಲ್ಕಂಡ ಯಾವುದಾದರೂ ಒಂದು ಸಾಧ್ಯತೆಯಂತೂ ಇರಲೇಬೇಕು. ತನ್ನ ಸ್ವಂತ ಮಗಳ ಸಾವಿಗೆ ದುಃಖವನ್ನೂ ವ್ಯಕ್ತಪಡಿಸದ, ಕಣ್ಣೀರಿಡದ ಕಲ್ಲು ಮನಸ್ಸಿನ ತಂದೆಯೊಬ್ಬ ಇರಲು ಸಾಧ್ಯವೆ? ಮಗಳ ಸಾವಿನ ದುಃಖ ನಿಜವಾಗಿದ್ದ ಪಕ್ಷದಲ್ಲಿ ಬೆಳಗಿನತನಕ ಕಾಯಬೇಕಿತ್ತು, ನೆಂಟರಿಷ್ಟರಿಗೆಲ್ಲ ಅಂತಿಮದರ್ಶನದ ಅವಕಾಶ ಕಲ್ಪಿಸಬಹುದಿತ್ತು, ಆದರೆ ಶಾಸಕ ಸತೀಶ್ ರೆಡ್ಡಿಯ ಯಾವ ವರ್ತನೆಯಲ್ಲೂ ಇದು ವ್ಯಕ್ತವಾಗುವುದಿಲ್ಲ.

ಸಾಮಾನ್ಯವಾಗಿ ಹೊಸೂರು ರಸ್ತೆ ಬೆಂಗಳೂರು ಭಾಗದ ರೆಡ್ಡಿಗಳ್ಯಾರೂ ಹೆಣವನ್ನು ಸುಡುವುದಿಲ್ಲ, ಹೂಳುತ್ತಾರೆ. ಆದರೆ ಸತೀಶ್ ರೆಡ್ಡಿ ತನ್ನ ಕುಲ ಸಂಪ್ರದಾಯವನ್ನೇ ಉಲ್ಲಂಘಿಸಿ ಮಗಳ ಶವವನ್ನು ಆತುರಾತುರವಾಗಿ ಕದ್ದೂ ಮುಚ್ಚಿ ಸುಟ್ಟುಹಾಕಿದ್ದಾರೆ. ಇದರರ್ಥ ಹೂತ ಪಕ್ಷದಲ್ಲಿ ಸಾವಿನ ಸತ್ಯ ಹೊರಬರಬಹುದೆಂಬ ಭೀತಿ ಸತೀಶ್ ರೆಡ್ಡಿಗಿತ್ತು?

ಅದೊಂದು ಮರ್ಯಾದಾ ಹತ್ಯೆಯೆ? ಅಥವಾ ಮರ್ಯಾದೆಗೆ ಅಂಜಿದ ಆತ್ಮಹತ್ಯೆಯೆ? ಒಬ್ಬ ತಂದೆಯಾಗಿ ಬೇಡ ಕನಿಷ್ಠ ಮನುಷ್ಯನಾಗಿ ಕೂಡ ಕಾಣದ ಕ್ರೌರ್ಯ, ದುಷ್ಟತನವನ್ನು ಮಗಳ ಸಾವಿನಲ್ಲಿ ಮೆರೆದ ಸತೀಶ್ ರೆಡ್ಡಿಗೆ ಮಗಳ ಸಾವೇ ಲಾಭವಾಗಿ ಪರಿಣಮಿಸಿತೆ? ನಿಜಕ್ಕೂ ಆತ್ಮಹತ್ಯೆಯಾಗಿದ್ದರೆ ಶವವನ್ನು ಮುಚ್ಚಿಡುವ ಅಗತ್ಯವಿರಲಿಲ್ಲ, ಅಂದಮೇಲೆ ಅದೊಂದು ಕೊಲೆಯೆ?

ಈ ಬಗ್ಗೆ ತನಿಖೆ ಮಾಡುವವರ್ಯಾರು? ಶಾಸಕನ ಮಗಳಾಗಿ ಹುಟ್ಟಿದ ತಪ್ಪಿಗೆ ತನ್ನ ಹತ್ಯೆಗೆ ನ್ಯಾಯ ಕೇಳುವ ಹಕ್ಕೂ ಆಕೆಗಿಲ್ಲವೆ? ಅನ್ಯಾಯವಾಗಿ ಹೆಣವಾದ ಹೆಣ್ಣು ಮಗಳಿಗಾಗಿ ನ್ಯಾಯ ಕೇಳಲು ಈ ನಾಡಿನಲ್ಲಿ ಯಾರಿಗೂ ಇಲ್ಲವೆ?


■ ರಾ. ಸೋಮನಾಥ್

ಸಹಚರರಿಂದಲೇ ಹತನಾದ ಸರ್ಕಲ್‌ಗಿರಿ

ಜೊತೆಗಿದ್ದವನೇ ಜೀವಕ್ಕೆ ಕುತ್ತೆಂಬುದು ಕೊಲ್ಲುವುದನ್ನೇ ಕಸುಬಾಗಿಸಿಕೊಂಡವರ ಅನುಭವದ ಮಾತು.

ಎಂತೆಂಥವರೆಲ್ಲ ಜೊತೆಗಿದ್ದವರಿಂದಲೇ ಹೆಣವಾಗಿಲ್ಲ? ಹಾಗೇ ತನ್ನ ಸಹಚರರಿಂದಲೇ ಪರಿಸಮಾಪ್ತಿಗೊಂಡ ಮತ್ತೊಂದು ಹೆಸರು ಸರ್ಕಲ್ ಗಿರಿ. ಆತ ಬೆಳೆದ ವೇಗ, ಮಾಡಿದ ಅನಾಹುತಗಳನ್ನೆಲ್ಲ ಲೆಕ್ಕ ಹಾಕಿದರೆ ಅಷ್ಟು ಸುಲಭಕ್ಕೆ ಆತನನ್ನು ಮುಗಿಸಲು ಸಾಧ್ಯವೇ ಇಲ್ಲ ಎಂಬ ಮಾತು ಬೆಂಗಳೂರು ಪಾಪ ಕೂಪದಲ್ಲಿ ಸರ್ವೇಸಾಮಾನ್ಯವಾಗಿತ್ತು. ಸೈಕಲ್ ರವಿಯನ್ನ ಮುಗಿಸಿಬಿಡ್ತೀನಿ ಎಂದೇ ಕಂಡಕಂಡಲ್ಲಿ ಹಾವಳಿಯಿಟ್ಟ. ರಾಮ-ಲಕ್ಷ್ಮಣರೇ ತನ್ನನ್ನು 'ಗುರು' ಅಂತಾರೆ ಎಂದು ಭಡಾಯಿ ಕೊಚ್ಚುತ್ತಿದ್ದ. ಯಾರದೋ ಸೈಟು ಕಿತ್ತುಕೊಂಡ. ಇನ್ನೆಲ್ಲೋ ಇಸ್ಪೀಟು ಕ್ಲಬ್ಬು ತೆರೆದ. ಸಿಕ್ಕಸಿಕ್ಕವರನ್ನು ಹಿಡಿದು ಬಡಿದ. ಬೇಕಾಬಿಟ್ಟಿ ರಕ್ತ ಹರಿಸಿದವನು ತನ್ನ ಕೈಗಂಟಿದ ರಕ್ತ ತೊಳೆದುಕೊಳ್ಳುವ ಮೊದಲೇ ತಾನೇ ಹೆಣವಾಗಿ ಹೋದ.

ಅದೂ ತನ್ನ ಬಲಗೈ ಬಂಟನಂತಿದ್ದ ತಂಗಳು ಚಂದ್ರನ ಕೈಯಿಂದಲೇ ಗಿರಿ ಕೊಲೆಯಾಗುತ್ತಾನೆಂದರೆ ಇಡೀ ಚಾಮರಾಜಪೇಟೆಯಲ್ಲಿ ಈ ಮಾತನ್ನು ಯಾರೊಬ್ಬರೂ ನಂಬುತ್ತಿರಲಿಲ್ಲ.



ಗಿರಿ ಅಲಿಯಾಸ್ ಸರ್ಕಲ್ ಗಿರಿ ಯಾನೇ ಕೊತ್ತಾಗಿರಿ ಉರ್ಫ್ ಗಿರೀಶನನ್ನು ಆತನ ಎಡಗೈ-ಬಲಗೈಯಂತಿದ್ದ ತಂಗಳು ಚಂದ್ರನೇ ಮುಗಿಸಿದ್ದಾನೆಂಬ ಮಾತನ್ನು ಅನೇಕರಿಂದ ನಂಬಲಾಗುತ್ತಿಲ್ಲ. ಗಿರಿ, ಚಂದ್ರ, ಗಂಗಾ, ಮರಿಯಾ, ರಘು, ವಸಂತ, ಲೋಕಿ; ಇತ್ಯಾದಿ ಅರೆಕಾಲಿಕ ಉಂಡಾಡಿಗಳೆಲ್ಲ ಮೂಲತಃ ಆಟೋಡ್ರೈವರ್‌ಗಳಾಗಿದ್ದವರು. ಕಪಾಲಿ ಆನಂದನಿಂದ ಕೊಲೆಯಾದ ಮಾರ್ಕೆಟ್ ದೇವಿ 'ಭಂಟ' ಪೂಣೆಯ ಮನೆಯಿದ್ದ ಆಜಾದ್‌ನಗರದ ಪಕ್ಕದ ನಂಜಾಂಬ ಅಗ್ರಹಾರವೇ ಈ ಗ್ಯಾಂಗಿನ ಕರ್ಮಭೂಮಿಯಾಗಿತ್ತು. ಆ ಹೊತ್ತಿಗೆ ಟಿಆರ್ ಮಿಲ್, ಚಾಮರಾಜಪೇಟೆ, ಸಿರ್ಸಿ ಸರ್ಕಲ್ ಇತ್ಯಾದಿ ಏರಿಯಾಗಳಲ್ಲಿ ಹಾವಳಿಯಿಡುತ್ತಿದ್ದವನು ಪಾಪಣ್ಣಿ.

ಯಾರೋ ಹುಡುಗಿಯೊಬ್ಬಳ ವಿಷಯಕ್ಕೆ ಅನಗತ್ಯವಾಗಿ ತಲೆಯಿಟ್ಟ ಗಿರಿ ಬುದ್ಧಿ ಹೇಳಲು ಬಂದ ಪಾಪಣ್ಣಿಯನ್ನೇ ನಡುರಸ್ತೆಯಲ್ಲಿ ಇರಿದು ಕೊಂದು ಬಿಟ್ಟ. ಆ ನಂತರ ರಾಬರಿ ಸೋಮ ಎಂಬ ಮತ್ತೊಬ್ಬ ರೌಡಿಯನ್ನು ಮಚ್ಚಲ್ಲಿ ಕತ್ತರಿಸಿದ್ದ. ಕಿಡ್ನಾಪು, ರಾಬರಿಗಳನ್ನೇ ತಮ್ಮ ಫುಲ್‌ಟೈಮ್ ಕಾಯಕವನ್ನಾಗಿಸಿಕೊಂಡ ಗಿರಿ ಗ್ಯಾಂಗಿಗೆ ಆತ ದೊರೆಯಾದರೂ ಸೇನಾಪತಿಯಂತಿದ್ದವನು ತಂಗಳು ಚಂದ್ರ!

ಅನ್ನ ತಂಗಳಾಗಿದ್ದರೂ ಅದನ್ನು ಬಿಸಾಡಕೊಡದೆಂದು ತಿಂದು ಮುಗಿಸುತ್ತಿದ್ದ ಚಂದ್ರನಿಗೆ 'ತಂಗಳು' ಎಂಬ ಹೆಸರು ಬಂದದ್ದೇ ಈ ರೀತಿ. ಚಂದ್ರ ಕೂಡ ಗಿರಿಯಂತೆ ಆಜಾನುಬಾಹು ಮತ್ತು ಒರಟ. ಗಿರಿಯ ಶಿಷ್ಯನೊಬ್ಬನ ತಂಗಿಯನ್ನು ಆಂಜನಪ್ಪ ಗಾರ್ಡನ್ನಿನ ರೌಡಿ ಗುಪ್ಪನ ಶಿಷ್ಯ ವೇಡಿಯಪ್ಪ ಪೀಡಿಸುತ್ತಿದ್ದಾನೆಂದು ಗೊತ್ತಾಗಿದ್ದೇ ಆತನ ಜೊತೆಗಿದ್ದ 10 ಮಂದಿ ಹುಡುಗರನ್ನೂ ಲೆಕ್ಕಿಸದೆ ಬರೀ ಕೈಯಿಂದ ಆತನನ್ನು ಗುದ್ದಿ ಸಾಯಿಸಿದ್ದ.

ತಂಗಳು ಚಂದ್ರ ಜೊತೆಗಿದ್ದಷ್ಟೂ ದಿನ ಮದವೇರಿದ ಹೋರಿಯಂತೆ ಹಾವಳಿಯಿಟ್ಟ ಗಿರಿ ಪುಡಿ ರೌಡಿ ಸೋಮನನ್ನು ವಿನಾಕಾರಣ ಅಟ್ಟಾಡಿಸಿ ಆತನ ಬಾಸ್ ಸೈಕಲ್ ರವಿಯನ್ನು ಮೇಲೆಳೆದುಕೊಳ್ಳದಿದ್ದರೆ ಸುಖವಾಗೇ ಇರುತ್ತಿದ್ದನೇನೊ.

ನಂಜಾಂಬ ಅಗ್ರಹಾರದ ಸ್ಮಶಾನದ ಪಕ್ಕ ಇದ್ದ ಬಸ್‌ಸ್ಟ್ಯಾಂಡ್‌ನಲ್ಲಿ ಮೂರ್‍ನಾಲ್ಕು ಬಸ್ಸುಗಳನ್ನು ನಿಲ್ಲಿಸಿಕೊಂಡಿರುತ್ತಿದ್ದ ಸೋಮನ ಅಣ್ಣ ಕೂಡ ರೌಡಿಯಾಗಿದ್ದ. ಅದು ಗೊತ್ತಿದ್ದೂ ತನಗೆ ಮಂತ್ಲಿ ಕೊಡಬೇಕೆಂದು ಹಾವಳಿಯಿಟ್ಟ ಗಿರಿ ರೋಲ್‌ಕಾಲ್ ಕೊಡಲೊಪ್ಪದ ಸೋಮನನ್ನೇ ಅಟ್ಟಾಡಿಸಿ ಕತ್ತರಿಸಿಬಿಟ್ಟ. ಇದು ಗೊತ್ತಾಗಿದ್ದೇ ಸೈಕಲ್ ರವಿ ಜೈಲಿಂದಲೇ ಗಿರಿಗೆ ಧಮಕಿಕೊಟ್ಟ. ಅದೊಮ್ಮೆ 30ಕ್ಕೂ ಅಧಿಕ ಸೈಕಲ್ ರವಿ ಶಿಷ್ಯರು ಗಿರಿಯನ್ನು ಮುಗಿಸಲು ರೌಂಡಿಂಗ್ ಶುರುವಿಟ್ಟರಾದರೂ ಗಿರಿ ಅದೃಷ್ಟವಶಾತ್ ಬಚಾವಾಗಿದ್ದ. ಆವತ್ತೇ ಚಾಮರಾಜಪೇಟೆಯಿಂದ ಕೆಂಗೇರಿಗೆ ತನ್ನ ವಾಸ್ತವ್ಯ ಬದಲಿಸಿದ.

ಕೆಂಗೇರಿ, ಮೈಸೂರು ರಸ್ತೆ, ರಾಜರಾಜೇಶ್ವರಿ ನಗರ, ನಾಯಂಡಹಳ್ಳಿ ಏರಿಯಾಗಳನ್ನೊಳಗೊಂಡಂತೆ ತನ್ನದೇ ರಿಯಲ್ ಎಸ್ಟೇಟ್ ಸಾಮ್ರಾಜ್ಯವೊಂದನ್ನು ಸ್ಥಾಪಿಸಿದ ಗಿರಿಗೆ ಯಾವ್ಯಾವುದೋ ಮೂಲಗಳಿಂದ ದುಡ್ಡು ಹುಟ್ಟಲಾರಂಭಿಸಿತ್ತು. ಪಾಪಣ್ಣಿ ಮತ್ತು ಗುಪ್ಪ ಶಿಷ್ಯ ವೇಡಿಯ ಹತ್ಯೆಯಲ್ಲಿ ಸೇನಾಧಿಪತಿಯಂತಿದ್ದ ಚಂದ್ರನನ್ನು ಇನ್ನಿಲ್ಲದಂತೆ ಬಳಸಿಕೊಂಡ ಗಿರಿ ದುಡ್ಡು ಸೇರುತ್ತಿದ್ದಂತೆ ಜೊತೆಗಿದ್ದವರನ್ನು ಕೈಬಿಟ್ಟು ಹೊಸಬರನ್ನು ಜೊತೆ ಹಾಕಿಕೊಳ್ಳುತ್ತಿದ್ದ. ಇದು ಗೊತ್ತಾಗಿಯೋ ಗಿರಿಯಿಂದ ದೂರಾದ ಚಂದ್ರ ಪದ್ಮನಾಭನಗರದಲ್ಲಿ ತನ್ನದೇ ಟ್ರಾವೆಲ್ಸ್ ಅಡ್ಡೆಯೊಂದನ್ನು ಆರಂಭಿಸಿದ. ತನಗಿನ್ನು ರೌಡಿಜಮ್ಮಿನ ಉಸಾಬರಿಯೇ ಬೇಡವೆಂದು ಪ್ರೀತಿಸಿದ ಹುಡುಗಿಯನ್ನು ಮದುವೆಯಾಗಿ ತನ್ನ ಪಾಡಿಗಿದ್ದುಬಿಟ್ಟ.



ತಂಗಳು ಚಂದ್ರನ ಹಂತಕ ಪಡೆ

ಆದರೆ ಗಿರಿ ತನ್ನ ಚಾಳಿ ಬಿಡಲಿಲ್ಲ. ಮೈಸೂರು ರಸ್ತೆಯ 'ದಿ ಕ್ಲಬ್' ಎದುರಿನ ಐಟಿಐ ಲೇಔಟ್ ಮತ್ತು ಗುರುಸಾರ್ವಭೌಮನಗರದ ನಡುವಿದ್ದ ಹೈಟೆನ್ಷನ್ ವಿದ್ಯುತ್ ತಂತಿ ಕೆಳಗಿದ್ದ ಸೈಟೊಂದಕ್ಕೆ ವಕ್ಕರಿಸಿದ. ಅದರ ಮಾಲಿಕ ಪುರುಷೋತ್ತಮನಿಗೆ ಧಮಕಿ ಹಾಕಿ ಆತನ ಸೈಟಲ್ಲೇ ನಾಲ್ಕಂತಸ್ತಿನ ಬಂಗಲೆಯೆಬ್ಬಿಸಿದ. ಪ್ಲಾನು, ಪರವಾನಗಿ ದಾಖಲೆ ಏನೊಂದೂ ಇಲ್ಲದೆ ಬೇಕಾಬಿಟ್ಟಿ ಮನೆ ಕಟ್ಟಿಸಲಾರಂಭಿಸಿದ ಗಿರಿಯ ವಿರುದ್ಧ ಪಾಲಿಕೆ ಇಂಜಿನಿಯರ್‌ಗಳು ಕಾರ್ಯಾಚರಣೆಗಿಳಿದರೆ ಅವರ ವಿರುದ್ಧವೇ ಗೂಂಡಾಗಿರಿಗಿಳಿದ. ಕೊನೆಗೆ ಪಾಲಿಕೆ ಸದಸ್ಯೆ ರಾಜೇಶ್ವರಿಯವರೇ ನಿಂತು ಅಕ್ರಮ ಕಟ್ಟಡದ ನಿರ್ಮಾಣದ ವಿರುದ್ಧ ಕಾರ್ಯಾಚರಣೆಗಿಳಿದರೆ ಅವರ ಪತಿ ಉಮೇಶ್ ಬೆಳಗೋಡು ವಿರುದ್ಧವೇ ರೌಡಿಗಳನ್ನು ಛೂ ಬಿಟ್ಟಿದ್ದ.

ರಾಜರಾಜೇಶ್ವರಿನಗರದ ಗೋಪಾಲನ್ ಮಾಲ್‌ಗೆ ಕೂಗಳತೆಯಲ್ಲೇ ಇಸ್ಪೀಟ್ ಕ್ಲಬ್ ಒಂದನ್ನು ಆರಂಭಿಸಿ ಅದಕ್ಕೆ ಸ್ಯಾಂಟ್ರೊ ಮಹೇಶ್, ಗಂಗಾ ಮುಂತಾದ ಪುಡಿರೌಡಿಗಳನ್ನು ಪಾರ್ಟನರ್‌ಗಳಾಗಿ ಮಾಡಿಕೊಂಡ. ತಲಘಟ್ಟಪುರದ ಪಂಚಾಯ್ತಿ ಮೆಂಬರ್ ಒಬ್ಬನನ್ನು ಕಿಡ್ನಾಪ್ ಮಾಡಿ ಸತತ ಮೂರು ದಿನಗಳ ಕಾಲ ಆತನನ್ನು ಹಿಂಸಿಸಿ 20 ಲಕ್ಷದ ಬೇಡಿಕೆಯಿಟ್ಟ. ಆತ ದುಡ್ಡು ಕೊಡುತ್ತೇನೆಂದು ಉಪಾಯವಾಗಿ ಜಾರಿಕೊಂಡವನು ನೇರವಾಗಿ ತಲಘಟ್ಟಪುರ ಪೊಲೀಸ್ ಠಾಣೆಗೆ ದೂರುಕೊಟ್ಟ. ಇದರಿಂದಾಗಿ ಗಿರಿ ಐದನೇ ಬಾರಿಗೆ ಜೈಲು ಪಾಲಾದ.

ಯಾವತ್ತು ಜೊತೆಗಿದ್ದ ಒಬ್ಬೊಬ್ಬರೇ ಹುಡುಗರು ದೂರಾಗಲಾರಂಭಿಸಿದರೋ ಗಿರಿಗೆ ಆತಂಕ ಶುರುವಾಗಿದೆ. ತನಗೆ ಬಲಗೈ ಬಂಟನಂತಿದ್ದ ಆಜಾನುಬಾಹು ಮತ್ತು ಗ್ರೇಟ್ ಫೈಟರ್ ತಂಗಳು ಚಂದ್ರನನ್ನು ಮತ್ತೆ ತನ್ನ ಜೊತೆ ಸೇರಿಕೊಳ್ಳುವಂತೆ ಪೀಡಿಸಲಾರಂಭಿಸಿದ್ದಾನೆ. ವಿನಾಕಾರಣ ಪದೇಪದೇ ಚಂದ್ರನ ಮೇಲೆ ದಾಳಿಯಿಟ್ಟಿದ್ದಾನೆ. ಇದಕ್ಕೆ ಸರಿಯಾಗಿ ನಾಯಂಡಹಳ್ಳಿ, ಪಂತರಪಾಳ್ಯದ ಸೆವೆನ್ ವಿಜಿ ಎಂಬಾತ ಇಸ್ಪೀಟ್ ಕ್ಲಬ್ ಒಂದನ್ನು ಆರಂಭಿಸಿದ್ದ. ಮುಸ್ಸಂಜೆ ನವೀನ, ಸೊಪ್ಪು ಉರ್ಫ್ ಮಾಂಸದ ಅಂಗಡಿ ಮಂಜ, ತಿಗಳರ ತೋಟದ ಸೋನಿ, ಡ್ರೈವರ್ ಕುಮಾರ, ಜೋಗಿ ಮುಂತಾದ ಪುಡಿರೌಡಿಗಳ ಪ್ರತ್ಯೇಕ ತಂಡವೊಂದನ್ನು ಕಟ್ಟಿಕೊಂಡ ಗಿರಿ, ಅಡ್ಡೆಹಾಕುತ್ತಿದ್ದದ್ದು ಐರಾವತ ಹೋಟೆಲ್ ಪಕ್ಕದ ಸೆವೆನ್ ವಿಜಿಯ ಇಸ್ಪೀಟ್ ಕ್ಲಬ್ಬಿನಲ್ಲಿ. ಚಂದ್ರ ಮತ್ತೆ ತನ್ನ ಜೊತೆ ಸೇರುತ್ತಿಲ್ಲ ಎಂದರೆ ಆತ ಸೈಕಲ್ ರವಿ ಜೊತೆ ಸೇರಿ ತನ್ನನ್ನು ಮುಗಿಸಲು ಯತ್ನಿಸುತ್ತಿದ್ದಾನೆಂದೇ ಗಿರಿ ಲೆಕ್ಕ ಹಾಕಿದ.

ಆದರೆ ಮದುವೆಯಾಗಿ ಸಂಸಾರಸ್ಥನಾಗಿದ್ದ ಚಂದ್ರ ತನ್ನ ಪಾಡಿಗೆ ತಾನಿದ್ದು ತರಲೆ ತಾಪತ್ರಯಗಳಿಂದ ದೂರವಿರಲು ನಿರ್ಧರಿಸಿದ್ದ. ಆದರೆ ಗಿರಿಗೆ ಅಹಂಕಾರದ ಪಿತ್ಥ ನೆತ್ತಿಗೇರಿತ್ತಲ್ಲ; ತನ್ನದೇ ಗ್ಯಾಂಗಿನ ಕಾಂತ ಉರ್ಫ್ ಶ್ರೀಕಾಂತ ಎಂಬಾತನ ತಂಗಿ ಬಗ್ಗೆ ಕೆಟ್ಟದಾಗಿ ಮಾತಾಡಿದ್ದೂ ಅಲ್ಲದೆ ಪದೇಪದೇ ಕಾಟವನ್ನೂ ಆರಂಭಿಸಿದ. ಇಸ್ಪೀಟ್ ಕ್ಲಬ್ ಹೆಸರಲ್ಲಿ ತನ್ನದೇ ಸ್ನೇಹಿತರಾದ ಗಂಗಾ ಮತ್ತು ಸ್ಯಾಂಟ್ರೋ ಮಹೇಶರನ್ನೂ ವಂಚಿಸಿದ. ಆ ಕಾಲದಿಂದಲೂ ಜೊತೆಗಿದ್ದ ಮರಿಯಾ, ಲೋಕಿ, ವಸಂತ ಮುಂತಾದವರೆಲ್ಲ ಚಂದ್ರನ ಬೆನ್ನಲ್ಲೇ ಗಿರಿಯಿಂದ ದೂರಾಗಿದ್ದರು. ದುಡ್ಡೆಷ್ಟೇ ಬಂದರೂ ಯಾರಿಗೂ ಕೊಡದೆ ತಾನೇ ಜೇಬಿಗಿಳಿಸುತ್ತಿದ್ದ. ಬೇಕಾಬಿಟ್ಟಿ ಕೆಲಸ ಮಾಡಿಸಿಕೊಂಡೂ ಅವಾಚ್ಯವಾಗಿ ಬಯ್ಯುತ್ತಿದ್ದ.

ಹೀಗೆ ಗಿರಿಯಿಂದ ದೂರಾದ ಆತನ ಸಹಚರರೆಲ್ಲ ಚಂದ್ರನ ಜೊತೆ ಸೇರುತ್ತಿದ್ದಾರೆಂಬ ಮಾಹಿತಿಯಿಂದ ಇನ್ನಷ್ಟು ರೊಚ್ಚಿಗೆದ್ದ ಗಿರಿ ಇಲ್ಲಿಗೆ ನಾಲ್ಕು ತಿಂಗಳ ಹಿಂದೆಯೇ ಚಂದ್ರನ ಹತ್ಯೆಗೆ ಯತ್ನಿಸಿದ್ದ. ಆವತ್ತು ಹೇಗೋ ಬಚಾವಾದ ಚಂದ್ರ ಬ್ಯಾಟರಾಯನಪುರ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟನಾದರೂ ಗಿರಿ ಪೊಲೀಸರಿಗೇ ಪೇಡಾ ತಿನ್ನಿಸಿ ಚಂದ್ರನನ್ನು ಕಿಚಾಯಿಸಿದ್ದ. ಇಲ್ಲಿಗೆ ಎರಡು ತಿಂಗಳ ಹಿಂದೆ ಚಂದ್ರನ ಪತ್ನಿ ಹೆರಿಗೆಗೆಂದು ಗಿರಿ ನಗರದ ಚಿರಂಜೀವಿ ನರ್ಸಿಂಗ್ ಹೋಮಿಗೆ ದಾಖಲಾಗಿದ್ದಾಳೆ. ಹೇಗೋ ಇದರ ಮಾಹಿತಿ ಪಡೆದ ಗಿರಿ ಬರೋಬ್ಬರಿ 20 ಮಂದಿಯ ಗ್ಯಾಂಗ್ ಕರೆದೊಯ್ದದ್ದೇ ನರ್ಸಿಂಗ್ ಹೋಮಿನಲ್ಲೇ ಚಂದ್ರನನ್ನು ಮುಗಿಸಲು ಸ್ಕೆಚ್ ಹಾಕಿದ್ದ.

ಕೂದಲೆಳೆಯಿಂದ ಬಚಾವಾಗಿ ಪ್ರಾಣ ಉಳಿಸಿಕೊಂಡ ಚಂದ್ರ ಆವತ್ತೇ ನಿರ್ಧರಿಸಿರಬೇಕು. ಹೊರ ಜಗತ್ತಿಗಾತ ಮತ್ತೆಂದೂ ಕಾಣಿಸಲಿಲ್ಲ, ತನ್ನ ಪಾಡಿಗೆ ತಾನಿದ್ದರೂ ಅನ್ಯಾಯವಾಗಿ ಪದೇ ಪದೇ ಕಾಟಕೊಡುವ ಗಿರಿಯ ಪಾಪದ ಕೊಡ ತುಂಬಿರಬೇಕು. ತಂಗಿಗಾದ ಅವಮಾನದ ವಿರುದ್ಧ ಕುದಿಯುತ್ತಿದ್ದ ಕಾಂತ, ವಂಚನೆಗೊಳಗಾಗಿದ್ದ ಗಂಗರಾಜ, ಐಟಿಐ ಲೇಔಟಿನ ಮಂಜ, ಕದಿರೇನಹಳ್ಳಿ ಮಧು, ತ್ಯಾಗರಾಜನಗರ ಮರನ್ ಮುಂತಾದ 20ಕ್ಕೂ ಅಧಿಕ ಹಂತಕರ ಪಡೆ ಚಂದ್ರನ ನೇತೃತ್ವದಲ್ಲಿ ಜಮೆಯಾಗಿದೆ.

ಆಗಸ್ಟ್ 10ರ ಶನಿವಾರ ಐಟಿಐ ಲೇಔಟಿನ ಸೆವೆನ್ ವಿಜಿಯ ಇಸ್ಪೀಟ್ ಕ್ಲಬ್ಬಿನಲ್ಲಿ ಮಾಮೂಲಿನಂತೆ ಇಸ್ಪೀಟ್ ಆಡಲು ಬಂದಿದ್ದ ಸರ್ಕಲ್ ಗಿರಿ ಇಸ್ಪೀಟು ಮುಗಿಸಿ ಮಧ್ಯಾಹ್ನದ ಊಟಕ್ಕೆಂದು ಮನೆಗೆ ಕಾರೆತ್ತಿಕೊಂಡು ಕೆಂಗೇರಿಯ ಐರಾವತ ಹೋಟೆಲ್ ಬಳಿ ಬಂದಿದ್ದಾನೆ. ಆಯುಸ್ಸು ಮುಗಿದಿತ್ತೇನೊ, ಹಿಂದಿನಿಂದ ಕ್ವಾಲೀಸ್ ಗಾಡಿಯನ್ನು ತಂದು ಚಂದ್ರ ಗುದ್ದುತ್ತಿದ್ದಂತೆ ಆತನ ಡ್ರೈವರ್ ನವೀನನೂ ಕಾರು ಬಿಟ್ಟು ಪರಾರಿಯಾಗಿದ್ದಾನೆ. ಬೆಂಗಾವಲಿಗಿದ್ದ ಬರೋಬ್ಬರಿ ಒಂದು ಡಜನ್ ರೌಡಿಗಳಿಂದಲೂ ಗಿರಿಯನ್ನು ಕಾಪಾಡಲಾಗಲಿಲ್ಲ.

ಜೊತೆಗಿದ್ದವರನ್ನು ಚೆನ್ನಾಗಿಟ್ಟುಕೊಳ್ಳಬೇಕು. ಹಾಗೊಮ್ಮೆ ದೂರಾದರೆಂದರೆ ಮೇಲೆ ಬಿದ್ದು ಹಿಂಡಿಹಾಕುತ್ತಾರು. ಸ್ನೇಹಿತರು, ಆತ್ಮೀಯರಿಗಿಂತ ದುಷ್ಟ ಮುಳ್ಳುವಾಯಿತೆಂದರೆ ಅದು ಸಾವಿನ ಮುನ್ಸೂಚನೆ ಮಾತ್ರ ಎಂಬುದನ್ನು ಗಿರಿ ಅರಿಯದೇ ಹೆಣವಾಗಿದ್ದಾನೆ.


■ ರಾ.ಸೋ.

ಅವನು ಬಾವಾ ಪರ, ಇವನು ಜಮೀರ್ ಸೈಡ್!

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗಿರಿ ಮತ್ತು ಆತನ ಪಡೆ ಚಾಮರಾಜಪೇಟೆಯ ಕಾಂಗ್ರೆಸ್ ಅಭ್ಯರ್ಥಿ ಜಿ.ಎ. ಬಾವಾ ಪರ ಪ್ರಚಾರಕ್ಕಿಳಿದರೆ ಚಂದ್ರನ ಇಡೀ ತಂಡ ಜೆಡಿಎಸ್ ನಾಯಕ ಜಮೀರ್ ಪರ ದುಡಿದಿತ್ತು. ಇದು ಚಂದ್ರನ ವಿರುದ್ಧ ಗಿರಿಯ ಜಿದ್ದನ್ನು ಮತ್ತಷ್ಟು ಹೆಚ್ಚಿಸಿತ್ತು. ಪ್ರಾರಂಭದಲ್ಲಿ ಬನಶಂಕರಿಯ ನಟೋರಿಯಸ್ ಸುಪಾರಿ ಕಿಲ್ಲರ್ ಬಳ್ಳನಿಗೆ ಚಂದ್ರನನ್ನು ಮುಗಿಸುವಂತೆ 5 ಲಕ್ಷದ ಸುಪಾರಿ ಕೊಟ್ಟಿದ್ದ. ಒಂದಲ್ಲ ಎರಡು ಬಾರಿ ಚಂದ್ರನ ಹತ್ಯೆಗೆ ಯತ್ನಿಸಿದ ಬಳ್ಳ ಆಮೇಲೋ ಸುಮ್ಮನಾಗಿಬಿಟ್ಟ. ಆದರೆ ಗಿರಿ ಬಿಡಲಿಲ್ಲ, ಕತ್ತಿಗುಪ್ಪೆ ಮತ್ತು ಗೋರಿಪಾಳ್ಯದ [illegible] ಬಾಡಿಗೆ ಹಂತಕರಿಗೂ ಚಂದ್ರನನ್ನು ಮುಗಿಸುವಂತೆ ದೀಲು ಕೊಟ್ಟಿದ್ದ.

ಇದು ಗೊತ್ತಾಗಿಯೇ ಗಿರಿಯ ಒಂದಾನೊಂದು ಕಾಲದ ಗುರು ಕಪಾಲಿ ಆನಂದ್ ಕರೆದು ಬುದ್ಧಿ ಹೇಳಿದ್ದರು. ಬನಶಂಕರಿಯ ಬಿಲ್ಡರ್ ಸಿ.ಡಿ. ಪ್ರಸಾದ್ ಕೂಡ ಚಂದ್ರ ಮತ್ತು ಗಿರಿ ಮಧ್ಯೆ ಒಂದಲ್ಲ ಎರಡು ಬಾರಿ ರಾಜಿಗೆ ಯತ್ನಿಸಿ ವಿಫಲರಾದರು. ದುರಹಂಕಾರದ ಪಿತ್ಥ ನೆತ್ತಿಗೇರಿದ್ದಾಗ ಸಾವು [illegible] ಸರ್ಕಲ್ ಗಿರಿ ತಾನು ಮುಟಾಮನಿಗೆ ಸರಿಸಮನಾದ ರೌಡಿ ಎಂದೇ ಭಾವಿಸಿಕೊಂಡಿದ್ದ, ಅದೇ ಭ್ರಮೆಗೆ ಬಿದ್ದು ಬಲಿ ಹೆಣವಾದ.

ಬಿಜೆಪಿ-ಕೆಜೆಪಿ ಎಂಜಲೆಲೆ ಮೇಲೆ ಜೆಡಿಎಸ್ ಉರುಳು ಸೇವೆ!



ದೇವೇಗೌಡರೇಕೆ ದಲಿತರಿಗೆ ಟಿಕೆಟ್ ಕೊಡಲಿಲ್ಲ?

'ದಲಿತ ಸಮುದಾಯದ ಖರ್ಗೆ ಸಿಎಂ ಆಗುವುದನ್ನು ಸಿದ್ದರಾಮಯ್ಯ ತಪ್ಪಿಸಿದರು' ಎಂದು ಪದೇ ಪದೇ ಹೇಳುತ್ತಿದ್ದಾರೆ ದೇವೇಗೌಡ.

ಈ ದೇವೇಗೌಡರಿಗೆ ದಲಿತರ ಬಗ್ಗೆ ಕಾಳಜಿ ಇರುವುದೇ ನಿಜವಾಗಿದ್ದರೆ ಕೊರಟಗೆರೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಪರಮೇಶ್ವರ ವಿರುದ್ಧ ಜೆಡಿಎಸ್ ಅಭ್ಯರ್ಥಿ ಸುಧಾಕರ್ ಲಾಲ್‌ರನ್ನೂ ಹಾಕಿ ಯಾಕೆ ಪರಮೇಶ್ವರನ್ನು ಸೋಲಿಸಿದರು? ಅಲ್ಲಿ ಪರಮೇಶ್ವರ್ ಗೆದ್ದಿದ್ದಿದ್ದರೆ ದೇವೇಗೌಡರ ಆಸೆಯಂತೆ ಅವರೂ ಸಿಎಂ ಹುದ್ದೆಗೆ ಸ್ಪರ್ಧಿಯಾಗಿರುತ್ತಿರಲಿಲ್ಲವೇ?

ಅದು ಹೋಗಲಿ,

ದಲಿತರ ಬಗ್ಗೆ ಇಷ್ಟೊಂದು ಪ್ರೀತಿ ಇರುವ ದೇವೇಗೌಡರು ಮಂಡ್ಯ ಅಥವಾ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳೆರಡರಲ್ಲಿ ಒಂದರಲ್ಲಾದರೂ ಜೆಡಿಎಸ್‌ನ ದಲಿತ ನಾಯಕರೊಬ್ಬರಿಗೆ ಟಿಕೆಟ್ ಕೊಡಬೇಕಾಗಿತ್ತಲ್ಲವೆ?

ಯಾಕೆ ಕೊಡಲಿಲ್ಲ?



ದೇವೇಗೌಡ ಮತ್ತವರ ಪುತ್ರರತ್ನ ಕುಮಾರಸ್ವಾಮಿಯವರು ಕರ್ನಾಟಕದ ಜನರನ್ನು ತೀರಾ ಪೆದ್ದರೆಂದು ನಂಬಿಕೊಂಡಿರಬಹುದು!

ನಿನ್ನೆಮೊನ್ನೆಯ ತನಕ ಕೆಜೆಪಿ-ಬಿಜೆಪಿ-ಜೆಡಿಎಸ್ ಪಾರ್ಟಿಗಳೆಲ್ಲಾ ಒಬ್ಬರನ್ನೊಬ್ಬರು ಮೂರನೇ ದರ್ಜೆ ಭಾಷೆಯಲ್ಲಿ ಬೈಯ್ದಾಡಿಕೊಳ್ಳುತ್ತಿದ್ದವರು...

ಈಗ ಅರ್ಜೆಂಟಾಗಿ ಅದನ್ನೆಲ್ಲಾ ಮರೆತು ಒಂದೇ ಎಲೆಯಲ್ಲಿ ಊಟಕ್ಕೆ ಕುಳಿತು ಬಿಟ್ಟಿದ್ದಾರೆ.

ಬಹಳ ಮುಖ್ಯವಾಗಿ ಜಾತ್ಯತೀತ ಜನತಾ ದಳದ ಪಾಲಿಗದು ಎಂಜಲೆಲೆ...!

ಆದರೆ ಗತಿಗೆಟ್ಟ ರಾಜಕೀಯ ಮಾಡುವವರಿಗೆ ಎಂಜಲೆಲೆಯಾದರೇನು. ತಿಪ್ಪೆಯಾದರೇನು ತಿನ್ನಲು ಒಂಚೂರು ಎಲ್ಲಾದರೂ, ಏನಾದರೂ ಸಿಕ್ಕರೆ ಸಾಕೆಂದು ಕಾದಿರುತ್ತಾರೆ.

ಈಗಿನ ಕಾಂಗ್ರೆಸ್ ವಿರೋಧಿ ಮೈತ್ರಿಕೂಟವನ್ನು ಈ ರೀತಿಯಲ್ಲದೆ ಬೇರೆ ಮಾತುಗಳಲ್ಲಿ ವರ್ಣಿಸಲು ಅಸಾಧ್ಯ.

ಒಂದು ವೇಳೆ ಜೆಡಿಎಸ್‌ನವರು ಏಕಾಂಗಿಯಾಗಿ ಸಂಸತ್ ಉಪಚುನಾವಣೆಗೆ ಇಳಿದಿದ್ದರೆ ಸೋಲೋ-ಗೆಲುವೋ ಅದರ ಮಾತು ಬೇರೆ. ಆದರೆ ಆ ಪಕ್ಷಕ್ಕೊಂದು ಮರ್ಯಾದೆ ಇರುತ್ತಿತ್ತು, ಜೆಡಿಎಸ್‌ನ ಭವಿಷ್ಯದ ದೃಷ್ಟಿಯಿಂದಲೂ ಮುಂದಿನ ದಿನಗಳಲ್ಲಿ ಜನರಿಗೆ ನಿರೀಕ್ಷೆಗಳು ಉಳಿದಿರುತ್ತಿದ್ದವು.

ಈಗ ದೇವೇಗೌಡ & ಸನ್ಸ್ ತಾವೇ ತಮ್ಮ ಕೈಯಾರೆ ಜೆಡಿಎಸ್ ಪಾರ್ಟಿಯನ್ನು ಕೋಮುವಾದಿ ರಾಜಕೀಯದ ಚೌಕಟ್ಟಿಗೆ ತಂದು ನಿಲ್ಲಿಸಿದ್ದಾರೆ.

ಆದರೂ ಕರ್ನಾಟಕದ ಜನ ತಮ್ಮನ್ನು ಈಗಲೂ ಜಾತ್ಯತೀತ, ಸ್ವಾವಲಂಬಿ, ಸ್ವಾಭಿಮಾನಿ ಪಕ್ಷವೆಂದು ಪರಿಗಣಿಸಬೇಕೆಂದು ಬಯಸುತ್ತಿದ್ದಾರೆ.

ಹುಚ್ಚುನಾಯಿ ಕೈಲಿ ಕಚ್ಚಿಸಿಕೊಂಡವರೂ ಬಹುಶಃ ಇವರನ್ನು ನಂಬಲಾರರು. ಈ ನಡೆ ರಾಜ್ಯದ ಜನರಲ್ಲಿ ಜೆಡಿಎಸ್ ಬಗ್ಗೆ ಅಸಹ್ಯ ಭಾವನೆಯನ್ನೂ ಮೂಡಿಸುತ್ತಿದೆ. ಮಂಡ್ಯ ಹಾಗೂ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ತನ್ನ ಕೈಲಿದ್ದ ಸ್ಥಾನಗಳನ್ನು ಪುನಃ ಗೆದ್ದುಕೊಳ್ಳಲೇಬೇಕೆಂಬ ಹಟ ಜೆಡಿಎಸ್‌ಗಿದೆ.

ಆದರೆ ಈ ಕ್ಷೇತ್ರಗಳು ಈಗಾಗಲೇ ಜೆಡಿಎಸ್ ತೆಕ್ಕೆಯಲ್ಲೇ ಇದ್ದವುಗಳು. ಮತ್ತೆ ಈ ಕ್ಷೇತ್ರಗಳಲ್ಲೇ ಉಪಚುನಾವಣೆ ನಡೆಯುವಂತಾಗಿರುವುದೇ ದೇವೇಗೌಡರ ಕುಟುಂಬ ರಾಜಕೀಯದ ಸ್ವಾರ್ಥದಿಂದ.

ತಮಗೆ ತಾವೇ ಡಿಕ್ಕಿ

ಕರ್ನಾಟಕದ ಬೇರೆ ಯಾವ ರಾಜಕೀಯ ಪಕ್ಷಗಳಲ್ಲೂ ನೋಡಲು ಸಿಗದಂತಹ ತಿಕ್ಕಲು ವ್ಯವಹಾರಗಳು ಜೆಡಿಎಸ್‌ನಲ್ಲಿ ಕಾಣಸಿಗುತ್ತವೆ.

ಅದು, ಒಂದೇ ಪ್ರದೇಶದಲ್ಲಿ ಏಕಕಾಲದಲ್ಲಿ ಒಬ್ಬರೇ ವ್ಯಕ್ತಿ ತರೇವಾರಿ ಎಲೆಕ್ಷನ್‌ಗಳಲ್ಲಿ ಸ್ಪರ್ಧೆಗಿಳಿಯುವ ಚಾಳಿ. ಈಗ ಉಪಚುನಾವಣೆ ಬಂದಿರುವುದೂ ಇದೇ ಕಾರಣಕ್ಕೇನೆ.

ಕಳೆದ ನಾಲ್ಕೂವರೆ ವರ್ಷಗಳಲ್ಲಿ ಅನಿತಾ ಕುಮಾರಸ್ವಾಮಿಯವರಿಗೆ ಇದು ಮೂರನೇ ಚುನಾವಣೆ. ಜೆಡಿಎಸ್‌ನ ಪ್ಯಾದೇ ಚೆನ್ನಿಗಪ್ಪ ಆಪರೇಷನ್ ಕಮಲದಲ್ಲಿ ಹಣ ತಿಂದು ಬಿಜೆಪಿ ಸೇರಿದ ಮೇಲೆ 2008ರ ಡಿಸೆಂಬರ್‌ನಲ್ಲಿ ಮಧುಗಿರಿಯಲ್ಲಿ ಉಪ ಚುನಾವಣೆ ಆಯಿತು. ಜೆಡಿಎಸ್‌ಗೆ ಅಲ್ಲಿ ಬೇಕಾದಷ್ಟು ಸ್ಥಳೀಯ ನಾಯಕರಿದ್ದಾಗಲೂ ಅವರನ್ನೆಲ್ಲ ಮೂಲೆಗೆ ತಳ್ಳಿ ಬೆಂಗಳೂರಿನಲ್ಲಿದ್ದ ಅನಿತಾರನ್ನು ಮಧುಗಿರಿಗೆ ಕಳಿಸಿ ಎಲೆಕ್ಷನ್‌ಗೆ ನಿಲ್ಲಿಸಲಾಯಿತು. ಅವತ್ತು ಅನಿತಾ ಏನೋ ಗೆದ್ದರು. ಆದರೆ ಗೆದ್ದ ಮೇಲೆ ಮಧುಗಿರಿಯನ್ನು ಮರೆತರು. ಈ ಚೆಂದಕ್ಕೆ ಅವರೇಕೆ ಎಂಎಲ್‌ಎ ಆಗಬೇಕಿತ್ತೋ ಭಗವಂತನೇ ಬಲ್ಲ. ಇದಾದನಂತರ 2013ರ ಅಸೆಂಬ್ಲಿ ಎಲೆಕ್ಷನ್ ಬಂದಾಗ ಅನಿತಾ ಮಧುಗಿರಿ ಬಿಟ್ಟು ಚನ್ನಪಟ್ಟಣಕ್ಕೆ ವಲಸೆ ಬಂದರು. ಯೋಗೇಶ್ವರ್ ವಿರುದ್ಧ ಸೋತು ಹೈರಾಣಾದರು. ಇದು ಹೋಗಲಿ, ಅತ್ತ ಮಧುಗಿರಿಯಲ್ಲಾದರೂ ಜೆಡಿಎಸ್ ಉದ್ಧಾರವಾಯಿತಾ ಅಂತಾ ನೋಡಿದರೆ... ಅಲ್ಲೂ ಮಣ್ಣು ಪಾಲಾಯಿತು. ಕಡುಭ್ರಷ್ಟ ಕೆಎಎಸ್ ಅಧಿಕಾರಿ ವೀರಭದ್ರಯ್ಯನಿಗೆ ಟಿಕೆಟ್ ಕೊಟ್ಟು ಅಲ್ಲಿನ ಚೆನ್ನಿಗಪ್ಪನಿಗೆ ದೊಡ್ಡಬಳ್ಳಾಪುರಕ್ಕೆ ಸಾಗ ಹಾಕಿದ್ದರು. ದೊಡ್ಡಬಳ್ಳಾಪುರದಲ್ಲಿ ಗೆಲ್ಲುವ ಛಾನ್ಸ್ ಇದ್ದ ಮುನೇಗೌಡನ ಮನೆ ಹಾಳು ಮಾಡಿ, ಟಿಕೆಟ್ ನೀಡದೆ ವಂಚಿಸಿ ಕೊನೆಗೆ ಮಧುಗಿರಿ ಹಾಗೂ ದೊಡ್ಡಬಳ್ಳಾಪುರ ಎರಡು ಕಡೆ ಸೋತು ಮಾನ-ಮರ್ಯಾದೆ ಎರಡನ್ನೂ ಕಳೆದುಕೊಂಡಿದ್ದರು.

ಈಗ ನೋಡಿದರೆ ಅನಿತಾ ಕುಮಾರಸ್ವಾಮಿ ಬೆಂಗಳೂರು ದಕ್ಷಿಣ ಸಂಸತ್ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಹಾಗೆ ನೋಡಿದರೆ ಇನ್ನೊಬ್ಬ ಜೆಡಿಎಸ್ ಲೀಡರ್ ಪಿ.ಜಿ.ಆರ್. ಸಿಂಧ್ಯಾರಿಗೆ ಟಿಕೆಟ್ ಕೊಡಬಹುದಿತ್ತು, ಆದರೆ ದೇವೇಗೌಡರ ವಿಚಿತ್ರ ರಾಜಕೀಯ ಹೇಗಿರುತ್ತದೆಂದರೆ ಅದು ಎಂಎಲ್‌ಎ ಎಲೆಕ್ಷನ್ ಆಗಿರಲಿ ಇಲ್ಲ ಎಂಪಿ ಎಲೆಕ್ಷನ್ನೇ ಬರಲಿ, ಗೌಡರ ಕುಟುಂಬದವರೋ ಇಲ್ಲ ಅವರ ಎಡಗೈ-ಬಲಗೈ ಭಂಟರಿಗೆ ಮಾತ್ರ ಟಿಕೆಟ್ ಕೊಡುತ್ತಾರೆ. ಇವರ ತಿಕ್ಕಲುತನ ಇನ್ನೂ ಹೇಗಿರುತ್ತದೆಂದರೆ ಹಾಲಿ ಜೆಡಿಎಸ್ ಎಂಪಿಯಾಗಿದ್ದವನು ಎಂಎಲ್‌ಎ ಎಲೆಕ್ಷನ್‌ಗೆ ನಿಂತು ಬಿಡುವುದು, ಎಂಎಲ್‌ಎ ಆಗಿರುವಾಗಲೇ ಎಂಪಿ ಸ್ಥಾನಕ್ಕೂ ಸ್ಪರ್ಧಿಸುವುದೆಲ್ಲಾ ಪದೇಪದೇ ನಡೆಯುತ್ತಿದೆ. ಕರ್ನಾಟಕದ ಜನರ ಪುಣ್ಯವೋ ಏನೋ ಗೌಡರ ಕುಟುಂಬದವರು ಗ್ರಾಮ ಪಂಚಾಯತಿ, ತಾಲ್ಲೋಕು ಪಂಚಾಯತಿಗೂ ನಿಲ್ಲುತ್ತಿಲ್ಲ.

ಸ್ವತಃ ದೇವೇಗೌಡರಿಗೂ ಈ ಅಸಂಬದ್ಧ ರಾಜಕೀಯದ ಹವ್ಯಾಸವಿದೆ. ಹಿಂದೆ ಹೊಳೆನರಸೀಪುರದಿಂದ ನಿಲ್ಲುತ್ತಿದ್ದ ಅವರು ಒಂದು ಸಾರಿ ಸಾತನೂರಿನಿಂದ ಸ್ಪರ್ಧಿಸಿದ್ದರು. ಇನ್ನೊಮ್ಮೆ ಹಾಸನ ಹಾಗು ಕನಕಪುರ ಎರಡೂ ಪಾರ್ಲಿಮೆಂಟ್ ಕ್ಷೇತ್ರದಿಂದ ಒಂದೇ ಸಾರಿ ನಿಂತಿದ್ದರು.

ಕುಮಾರಸ್ವಾಮಿ ತಾನೆ ಇನ್ನೇನು...!

ಸಾತನೂರಿನಿಂದ ಒಂದು ಸಾರಿ, ಕನಕಪುರ ಪಾರ್ಲಿಮೆಂಟರಿಯಿಂದ ಒಮ್ಮೆ, ನಂತರ ರಾಮನಗರ ಅಸೆಂಬ್ಲಿಗೆ ನಿಂತಿದ್ದರು. ಹಾಲಿ ಸಂಸತ್ ಸದಸ್ಯರಾಗಿದ್ದರೂ ವಿನಾಕಾರಣ ರಾಮನಗರ ಅಸೆಂಬ್ಲಿಗೂ ನಿಂತು, ಅಲ್ಲಿ ಗೆದ್ದ ಕಾರಣ ಸಂಸತ್‌ಗೆ ರಾಜೀನಾಮೆ ನೀಡಿ ಈಗ ಅನಗತ್ಯ ಉಪಚುನಾವಣೆಯನ್ನು ಜನರ ತಲೆ ಮೇಲೆ ಹೊರಿಸಿದ್ದಾರೆ.

ಸಿಗುವ ಅಧಿಕಾರವೆಲ್ಲಾ ತಮ್ಮ ಕುಟುಂಬದವರಿಗೇ ಸಿಗಬೇಕೆಂದುಕೊಳ್ಳುವುದು, ಸಾಮರ್ಥ್ಯವಿರುವ ಪಕ್ಷದ ಇತರ ಲೀಡರ್‌ಗಳನ್ನು ಮೂಲೆಗೆ ತಳ್ಳಿ ತುಳಿಯುವುದು... ಕೊನೆಗೆ ಅಧಿಕಾರಕ್ಕಾಗಿ ಯಾರೊಂದಿಗೆ ಬೇಕಾದರೂ ರಾಜಿಯಾಗುವುದು ಜೆಡಿಎಸ್‌ನ ದೊಡ್ಡ ಸಮಸ್ಯೆಯಾಗಿ ಹೋಗಿದೆ.

ಈಗ ಆ ಅವಕಾಶವಾದಿ ರಾಜಕೀಯ ಇನ್ನೊಮ್ಮೆ ಮೇಲೆದ್ದು ಬಂದಿದೆ. ಜೆಡಿಎಸ್ ಕೋಮುವಾದಿ ಬಿಜೆಪಿಯೊಂದಿಗೆ ಹಾಗೂ ಅವಕಾಶವಾದಿ ಕೆಜೆಪಿಯೊಂದಿಗೆ ಮೈತ್ರಿಕೂಟ ರಚಿಸಿಕೊಂಡು ಪುನಃ ಓಟು ಕೇಳಲು ಹೊರಟಿದೆ.

ನಿನ್ನೆಯತನಕ ಒಬ್ಬರನ್ನೊಬ್ಬರು ಬಾಯಿಗೆ ಬಂದಂತೆ ಪಬ್ಲಿಕ್ಕಾಗಿ ಬೈಯ್ದಾಡಿಕೊಳ್ಳುತ್ತಿದ್ದವರೇ ಈಗ ರಾತ್ರೋರಾತ್ರಿ ಮಿತ್ರರಾಗಿಬಿಟ್ಟಿದ್ದಾರೆ.

ತತ್ವಸಿದ್ಧಾಂತಕ್ಕೆ ಬೆಲೆಯೇ ಇಲ್ಲ

ಜೆಡಿಎಸ್ ಪಕ್ಷದ ಬಾಲಂಗೋಚಿಯಂತೆ ನೇತಾಡುತ್ತಿರುವ 'ಜಾತ್ಯತೀತ ಅಥವಾ ಸೆಕ್ಯುಲರ್' ಎಂಬ ಪದ ಬಂದಿದ್ದೇ ಬಿಜೆಪಿಯ ಹಿಂದೂತ್ವವಾದಿ ಕೋಮುವಾದಿ ಸಿದ್ಧಾಂತವನ್ನು ವಿರೋಧಿಸಿ ದೂರ ನಿಂತಿದ್ದರಿಂದ. 1999ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದೊಂದಿಗೆ



ಕೋಮುವಾದಿ ಬಿಜೆಪಿ ಜೊತೆಗಿನ ದೇವೇಗೌಡರ ಮೈತ್ರಿಯನ್ನು ಪ್ರತಿಭಟಿಸುತ್ತಿರುವ ಮುಸ್ಲಿಮರು

"ಮೂಡ್ ಬಂದಾಗೆಲ್ಲಾ 'ಮೂಡಾ' ಸೈಟು ಮಾಡ್ಕಂಡವ್ನೆ"

ರಾಜ್ಯ ರೈತ ಸಂಘದ ಅಭ್ಯರ್ಥಿಯಾಗಿ ಮೇಲುಕೋಟೆಯಿಂದ ಸ್ಪರ್ಧಿಸಿ ಗೆದ್ದು ಶಾಸಕರಾಗಿರುವ ಕೆ.ಎಸ್.ಪುಟ್ಟಣ್ಣಯ್ಯ ಈ ಲೋಕಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹಿರಂಗ ಬೆಂಬಲ ಘೋಷಿಸಿ, ಪ್ರಚಾರಕ್ಕಿಳಿದಿದ್ದಾರೆ. ಈ ಚುನಾವಣೆಯ ಬಗ್ಗೆ ಅವರೊಂದಿಗೆ ಪತ್ರಿಕೆ ನಡೆಸಿದ ಸಂದರ್ಶನದ ಸಂಕ್ಷಿಪ್ತ ರೂಪ ಇಲ್ಲಿದೆ.

ಲಂಕೇಶ್: ಈ ಚುನಾವಣೆಯಲ್ಲಿ ನೀವು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಲು ಏನು ಕಾರಣ?

ಪುಟ್ಟಣ್ಣಯ್ಯ: ಕಾಂಗ್ರೆಸ್‌ಗೆ ನಾವು ಬೆಂಬಲ ವ್ಯಕ್ತಪಡಿಸಿದ್ದು ಒಬ್ಬ ಭ್ರಷ್ಟ ಹಾಗೂ ದುಷ್ಟ ವ್ಯಕ್ತಿ ಎಂ.ಪಿ.ಯಾಗಿ ಆರಿಸಿ ಬರಬಾರದೆಂಬ ಉದ್ದೇಶದಿಂದ. ಒಳಒಪ್ಪಂದ ಮಾಡಿಕೊಂಡು ಜಂಟಿ ಅಭ್ಯರ್ಥಿಯಾಗಿ ನಿಂತಿರುವ ಜೆಡಿಎಸ್‌ನ ಅಭ್ಯರ್ಥಿ ಪುಟ್ಟರಾಜುನಂಥಾ ದುಷ್ಟ ಇಡೀ ಜೆಡಿಎಸ್‌ನಲ್ಲೇ ಇಲ್ಲ, ಆತ ಎಂಎಲ್‌ಎ ಆಗಿದ್ದಾಗ ಮಾಡಿದ ಗೂಂಡಾಗಿರಿ, ಭ್ರಷ್ಟಾಚಾರಗಳಿಂದ ಬೇಸತ್ತಿದ್ದ ಮತದಾರರು ನನ್ನನ್ನು ವಿಧಾನಸಭೆಗೆ ಆರಿಸಿ ಕಳಿಸಿದ್ರು. ಇಲ್ಲದೇ ಹೋಗಿದ್ದರೆ ಹೋರಾಟದ ಹಿನ್ನೆಲೆಯ ನನ್ನಂಥವರು ಗೆಲ್ಲುವುದು ಸಾಧ್ಯವೇ ಇರಲಿಲ್ಲ, ಹಣಬಲ, ತೋಳುಬಲದಲ್ಲಿ ಅವನ ಎದುರು ನಮ್ಮಂಥವರು ಸಾಟಿಯೇ ಅಲ್ಲ, ಜನರ ಬೆಂಬಲದಿಂದ ಮಾತ್ರ ನಾನು ಗೆಲ್ಲಲು ಸಾಧ್ಯವಾಗಿದ್ದು.

ಲಂಕೇಶ್: ಹಾಗಾದರೆ ಕಾಂಗ್ರೆಸ್‌ನ ಅಭ್ಯರ್ಥಿ ನಿಮಗೆ ಯಾವ ರೀತಿಯಲ್ಲಿ ಉತ್ತಮ ಆಯ್ಕೆಯಾಗಿ ಕಂಡರು?

ಪುಟ್ಟಣ್ಣಯ್ಯ: ಕಾಂಗ್ರೆಸ್‌ನ ಅಭ್ಯರ್ಥಿ ಸರ್ವರೀತಿಯಿಂದಲೂ ನಮಗೆ ಉತ್ತಮ ಆಯ್ಕೆ ಅಂತ ನಾನು ಹೇಳುತ್ತಿಲ್ಲ, ಒಳ್ಳೆಯದನ್ನು ಮಾಡಲಾಗದಿದ್ದರೂ ಕೆಟ್ಟದ್ದನ್ನಂತೂ ಮಾಡುವುದಿಲ್ಲ ಎಂಬ ಭರವಸೆಯಿದೆ. ಆದರೆ ಜೆಡಿಎಸ್ ಅಭ್ಯರ್ಥಿ ಪುಟ್ಟರಾಜು ವಿಷಯವೇ ಬೇರೆ. ಆತ ಗೆದ್ದು ಬಂದರೆ ಮಂಡ್ಯಕ್ಕೆ ಒಳ್ಳೆಯದಕ್ಕಿಂತಲೂ ಕೆಟ್ಟದ್ದು ಮಾಡಿದ್ದೇ ಆತನ ಇತಿಹಾಸ. ಹೀಗಾಗಿ ಇಂಥಾ ದುಷ್ಟನನ್ನು ದೂರವಿಡಿ ಅಂತಾ ನಾನು ಮತದಾರರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಲಂಕೇಶ್: ಚುನಾವಣೆಯಲ್ಲಿ ನಿಮ್ಮ ಎದುರಾಳಿಯಾಗಿದ್ದ ಕಾರಣಕ್ಕೆ, ಪುಟ್ಟರಾಜುರನ್ನು ನೀವು ಅಷ್ಟೊಂದು ದ್ವೇಷಿಸುತ್ತೀರಿ ಎಂಬ ಅಭಿಪ್ರಾಯವಿದೆಯಲ್ಲ?

ಪುಟ್ಟಣ್ಣಯ್ಯ: ನನ್ನ ವಿರೋಧ ವೈಯಕ್ತಿಕವಾದುದಲ್ಲ, ಪುಟ್ಟರಾಜು ನಡೆಸಿರುವ 420 ದಂಧೆಗಳನ್ನು ಒಮ್ಮೆ ನೆನಪಿಸಿಕೊಂಡರೆ ಆತ ಎಂಥಾ ಕ್ಯಾಂಡಿಡೇಟು ಅಂತ



ಅರ್ಥಆಗಿಬಿಡುತ್ತೆ, ಮೊದಲನೆಯದಾಗಿ ಆತ ಕಲ್ಲುಗಣಿ ಕಳ್ಳ, ಕನ್ನಂಬಾಡಿ ಕಟ್ಟೆ ಒಡೆದುಹೋಗುತ್ತೆ ಅಂದರೂ ಸರಿಯೇ ಈತ ಕಲ್ಲುಕದಿಯೋದು ಬಿಡೋದಿಲ್ಲ, ಮಂಡ್ಯದಲ್ಲಿ ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಎಲ್ಲೆಂದರಲ್ಲಿ ಅಕ್ರಮ ಸೈಟುಗಳನ್ನು ಮಾಡಿದ್ದಾನೆ. ಮೂಡ್ ಬಂದಾಗೆಲ ಒಂದೊಂದು 'ಮೂಡಾ' ಸೈಟ್ ಮಾಡ್ಕೊಂಡವ್ನೆ. ಈ ಬಗ್ಗೆ 'ಮೂಡಾ'ದವರು ಕೇಸು ಕೂಡ ಹಾಕಿದ್ದಾರೆ.

ಇನ್ನು ಎಂಎಲ್‌ಎ ಆಗಿದ್ದಾಗ ತನ್ನ ಬಂಧು ಬಳಗಕ್ಕೆ ಕೋಟಿಗಟ್ಟಲೆ ಕಾಂಟ್ರಾಕ್ಟ್ ಕೊಡಿಸಿದ್ದೇ ಈತನ ಸಾಧನೆ ರೈತರ ಸಮಸ್ಯೆಗಳ ಬಗ್ಗೆ ನೀರಿನ ಸಮಸ್ಯೆ ಬಗ್ಗೆ ವಸತಿಹೀನ ಸಮಸ್ಯೆ ಬಗ್ಗೆ ಈತ ಮಾಡಿರೋದು ಏನು? ಆಶ್ರಯ ಯೋಜನೆ ಬಗ್ಗೆ ಮೀಟಿಂಗ್ ಕರೆದು ಮೂರೂವರೆ ವರ್ಷ ಆಗಿದೆ. ಮತದಾರರ ಯಾವ ಸಮಸ್ಯೆ ಬಗ್ಗೆಯೂ ತಲೆಕೆಡಿಸಿಕೊಳ್ಳದೆ ನಾನಾ ಥರದ ಡೀಲಿಂಗ್‌ಗಳಲ್ಲಿ ಮುಳುಗಿರೋ ರಾಜಕಾರಣಿ ಈತ. ಕುಮಾರಸ್ವಾಮಿ ಸಿಎ ಆಗಿದ್ದಾಗ ಡಿನೋಟಿಫಿಕೇಷನ್ ದಂಧೆಯಲ್ಲಿ ಮುಳುಗಿದ್ದ ಅವರಿವರ ಹೆಸರಿನಲ್ಲಿ ಭೂಮಿ ಡಿನೋಟಿಫೈ ಮಾಡಿಸೋದು, ಪರ್ಸೆಂಟೇಜು ಹೊಡೆಯೋದು ಇದೆ ಇವನ ಕಾಯಕ ಆಗಿತ್ತು, ಇಷ್ಟೆಲ್ಲಾ ಸಾಲದು ಅಂತ ಓಟ ಕೊಟ್ಟು ಗೆಲ್ಲಿಸಿದ ಮತದಾರರ ಮೇಲೇ ಉದ್ದಕ್ಕೂ ಗೂಂಡಾಗಿರಿ ನಡೆಸಿಕೊಂಡು ಬಂದಿರೋ ಭೂಪ ಈತ.

ಇಂಥಾ ಕ್ಯಾಂಡಿಡೇಟು ಗೆದ್ದು ಬಂದರೆ ಬಡಬಗ್ಗ ಗತಿ ಏನು, ನೀವೇ ಹೇಳಿ?

...ಂಕ. ಬೇಪಡೆ ಎಂಬ ಪ್ರಶ್ನೆ ಬಂದಾಗ ಜನತಾದಳ ...ಎರಡು ಭಾಗವಾಯಿತು.

...ಂದು ಗುಂಪು ಜನತಾದಳ ಯುನೈಟೆಡ್ (JDU) ...ಕರೆದುಕೊಂಡು ಬಿಜೆಪಿ ಮೈತ್ರಿಕೂಟ ಸೇರಿತು. ...ಲ್ಲದ ದೇವೇಗೌಡರ ಜನತಾದಳ ಸೆಕ್ಯುಲರ್ ಎಂಬ ...ಸರಿನಲ್ಲಿ ಪ್ರತ್ಯೇಕ ಪಕ್ಷವಾಗಿ ಮುಂದುವರೆಯಿತು. ...ಟಕದಲ್ಲಿ ಜನತಾದಳ ಪಾರ್ಟಿಯು ಅದ್ಭುತ ...ಮಹುತ ಸಾಧನೆ ತೋರಿಸಿದ್ದು 1994ರ ಅಸೆಂಬ್ಲಿ ...ವಣೆಯಲ್ಲಿ. ಆಗ ದಳ 148ರಲ್ಲೂ ಕಾಂಗ್ರೆಸ್ 35 ...ಗಳಲ್ಲಿ ಗೆದ್ದಿದ್ದವು.

...ಬಳಿಂದಾಚೆಗೆ ದೇವೇಗೌಡರ ಜೆಡಿಎಸ್ ದಿನಕ್ರಮೇಣ ...ಂದು ರಾಜಕಾರಣ ಮಾಡುತ್ತಾ, ಒಕ್ಕಲಿಗ ಜಾತಿ ...ಶೇಯುಕ್ಕೆ ಪ್ರಚೋದನೆ ಕೊಟ್ಟುಕೊಂಡೇ ಬಂತು. ...ಈ ಜಾತಿಯೊಂದಿಗೆ ಜೊತೆಗೊಬ್ಬರಿರಲೆಂದು ದಲಿತ ...ದಾಯದಲ್ಲೂ ಒಡಕು ಸೃಷ್ಟಿಸಿ ಎಡಗೈ-ಬಲಗೈ ಭೇದ ...ತನಗೆ ಲಾಭವಾಗುವಂತೆ ಮಾಡಲು ಯತ್ನಿಸಿತು. ...ಮಧ್ಯೆ 1999 ಹಾಗೂ 2004ರ ಚುನಾವಣೆಗಳಲ್ಲಿ ...ಎಸ್‌ನ ಒಟ್ಟಾರೆ ಓಟ್ ಷೇರ್ ಶೇ. 20 ರಿಂದ ...ನಡುವೆಯೇ ಇತ್ತೇ ವಿನಃ ಹೆಚ್ಚಾಗಲಿಲ್ಲ. ...ಶೀಕವಾಗಿಯೂ ಜೆಡಿಎಸ್‌ನ ವ್ಯಾಪ್ತಿ ಹಿಗ್ಗಿರಲಿಲ್ಲ. ...2004ರಲ್ಲಿ ಕಾಂಗ್ರೆಸ್‌ನೊಂದಿಗೆ ಮೈತ್ರಿ ಸರ್ಕಾರ ...ಕೊಂಡ ದೇವೇಗೌಡ ಮುಂದೆ ಸಿದ್ದರಾಮಯ್ಯರನ್ನೂ ...ಮಾಡಬೇಕಾಗುತ್ತದೆಂದು ಯೋಚಿಸಿ ಅದನ್ನು ...ಕುಮಾರಸ್ವಾಮಿಗೆ ಬಿಜೆಪಿ ಗೆಳೆತನದ ಖತರ್‌ನಾಕ್ ...ಮಾ ಕೊಟ್ಟು ತಾನು ಮಾತ್ರ ಮುಗ್ಧ ಮಗುವಿನಂತೆ ...ಯಲ್ಲಿ ಕೂತರು. ಆಗ ಬಂದ ಕೋ-ಜಾ ಸರ್ಕಾರವೂ ...ಲಿಲ್ಲ. ನಂಬಿದವರ ಕತ್ತು ಕುಯ್ಯುವ ಅಭ್ಯಾಸವಿರುವ ...ಎಸ್ ನಾಯಕರು ಯಡಿಯೂರಪ್ಪನಿಗೂ ಕೈಕೊಟ್ಟರು. ...ವಚನದ್ರೋಹ ಜೆಡಿಎಸ್ ಪಾಲಿಗೆ ಕುತ್ತಿಗೆಗೆ ...ಕೊಂಡ ಕಲ್ಲಾಗಿ 2009ರ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ...ಣ್ಣು ತಿನ್ನುವ ಪರಿಸ್ಥಿತಿ ಬಂತು. ಅಷ್ಟೇ ಅಲ್ಲ, ...ಮುವಾದಿ ಬಿಜೆಪಿಯು ಕರ್ನಾಟಕದಲ್ಲಿ ಮೊದಲ ...ಗೆ ಅಧಿಕಾರಕ್ಕೆ ಬರಲು ಜೆಡಿಎಸ್ಸೇ ಕಾರಣವಾಯಿತು. ...ಬಿಜೆಪಿ ದುರಾಡಳಿತ, ಕೋಮುವಾದಿ ದೌರ್ಜನ್ಯಗಳಿಂದ ...ಹೋದ ಜನ 2013ರ ಚುನಾವಣೆಯಲ್ಲಿ ಜೆಡಿಎಸ್-...ಪಿ-ಕೆಜೆಪಿ ಎಲ್ಲರನ್ನೂ ಹೋಲ್‌ಸೇಲಾಗಿ ತಿರಸ್ಕರಿಸಿ ...ಗ್ರೆಸ್ ಅನ್ನು ಆರಿಸಿದ್ದಾರೆ.

...ಆದರೆ ಕಳೆದ ಎಲೆಕ್ಷನ್‌ನಲ್ಲಿ ಪರಸ್ಪರ ಕತ್ತಿ ಹಿರಿದು ...ಮಾಡಿದ ಕೋಮುವಾದಿ ಕೆಜೆಪಿ-ಬಿಜೆಪಿ ಗಂಟುಕಳ್ಳರೇ ...ಜಾತಿವಾದಿ-ಭ್ರಷ್ಟ ಜೆಡಿಎಸ್ ಜೊತೆ ಸೇರಿದ್ದಾರೆ: ...ವತ್ತು 2 ಪಾರ್ಲಿಮೆಂಟ್ ಉಪಚುನಾವಣೆಯಲ್ಲಿ ...ಎಸ್‌ಗೆ ಬೆಂಬಲಿಸುವ ಮಾತಾಡಿ ನಾಳೆ 2014ರ ...ರ್ಲಿಮೆಂಟ್ ಎಲೆಕ್ಷನ್ ಬಂದಾಗ ಕರ್ನಾಟಕದಲ್ಲಿ ತನಗೇ ...ಸೀಟ್ ಕೇಳುವುದು ಬಿಜೆಪಿಗಳ ಲೆಕ್ಕಾಚಾರವಾಗಿದೆ. ...ದೇವೇಗೌಡ ಹಾಗೂ ಕುಮಾರಸ್ವಾಮಿಗೆ ಇವತ್ತಿನ ...ಹೇಗೊ ಬಗೆಹರಿದರೇ ಸಾಕು ಎಂಬ ಯೋಚನೆ ...ಇವಂತಿದೆ.

...ಜೆಡಿಎಸ್‌ನವರು ಕೋಮುವಾದಿ ಬಿಜೆಪಿಯೊಂದಿಗೆ ...ಮೈತ್ರಿ ಮಾಡಿಕೊಂಡಿರುವುದು ಜೆಡಿಎಸ್ ಅನ್ನು ...ಅವನತಿಯತ್ತಲೇ ದೂಡುತ್ತದೆ.

...ರಾಜಕೀಯ ತತ್ವ-ಸಿದ್ಧಾಂತ ಇರದ ಜೆಡಿಎಸ್‌ನಂತ ...ಇದ್ದರೆಷ್ಟು-ಹೋದರೆಷ್ಟು ಎಂದು ಜನ ತೀರ್ಮಾನಿಸಿದರೆ ...ಆಶ್ಚರ್ಯಪಡಬೇಕಿಲ್ಲ.

...ದೇವೇಗೌಡರಿಗೆ ಕೋಮುವಾದಿ ಬಿಜೆಪಿಯವರ ...ಎಲೆಯ ಮೇಲೆ ಮತ್ತೆ ಉರುಳುಸೇವೆಯ, ಮಡೆಸ್ನಾನ ...ಡುವ ದುರ್ಗತಿ ಏನಿತ್ತು? ■

ಮಂಡ್ಯ: ಜೆಡಿಎಸ್ 'ಚಿಲ್ಲರೆ' ರಾಜಕೀಯ



ಮಂಡ್ಯ ಲೋಕಸಭಾ ಉಪಚುನಾವಣಾ ಕಣ ದಿನೇದಿನೇ ರಂಗೇರುತ್ತಿದೆ. ಜಿಲ್ಲೆಯಲ್ಲಿ ಜೆಡಿಎಸ್ ಭದ್ರಕೋಟೆಯನ್ನು ಛಿದ್ರ ಮಾಡಿ ಕಾಂಗ್ರೆಸ್‌ನ್ನು ಪ್ರತಿಷ್ಠಾಪಿಸಲು ಮುಂದಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಅದಕ್ಕಾಗಿ ಏದುಸಿರು ಬಿಡುತ್ತಿದ್ದಾರೆ. ಆದರೆ ಏನಾದರೂ ಸರಿಯೇ ಜೆಡಿಎಸ್ ಅಧಿಪತ್ಯ ಮುಂದುವರಿಯಬೇಕೆನ್ನುವ ಪ್ರತಿಷ್ಠೆಗೆ ಬಿದ್ದಿರುವ ಮಾಜಿ ಪ್ರಧಾನಿ ದೇವೇಗೌಡ ಹಾಗೂ ಅವರ ಪುತ್ರ ಕುಮಾರಸ್ವಾಮಿ ಕ್ಷೇತ್ರದಾದ್ಯಂತ ಬಿರುಗಾಳಿಯಂತೆ ಸುತ್ತುತ್ತಾ ಮತ್ತೊಮ್ಮೆ ಕಾಂಗ್ರೆಸ್ ಸೋಲಿಸಲು ಹರಸಾಹಸ ಪಡುತ್ತಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ರಮ್ಯಾ ಹಾಗೂ ಜೆಡಿಎಸ್ ಅಭ್ಯರ್ಥಿ ಸಿ.ಎಸ್. ಪುಟ್ಟರಾಜು ನಡುವಿನ ಕಾಳಗ ದಿನದಿಂದ ದಿನಕ್ಕೆ ಜೋರಾಗುತ್ತಿದೆ.

ಮಂಡ್ಯ ಲೋಕಸಭಾ ವ್ಯಾಪ್ತಿಯಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಮದ್ದೂರು, ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ನಾಗಮಂಗಲ, ಮೈಸೂರಿನ ಕೆ.ಆರ್.ನಗರದಲ್ಲಿ ಜೆಡಿಎಸ್ ಶಾಸಕರ ಅಧಿಪತ್ಯವಿದ್ದರೆ, ಮಂಡ್ಯ ಮತ್ತು ಮಳವಳ್ಳಿಯಲ್ಲಿ ಕಾಂಗ್ರೆಸ್, ಮೇಲುಕೋಟೆಯಲ್ಲಿ ಸರ್ವೋದಯ ಕರ್ನಾಟಕದ ಶಾಸಕರಿದ್ದಾರೆ. ಜೆಡಿಎಸ್ ಶಾಸಕರಿರುವ ಕ್ಷೇತ್ರಗಳಲ್ಲಿ ಪುಟ್ಟರಾಜುಗೆ ಹೆಚ್ಚಿನ ಲೀಡ್ ಕೊಡಿಸಬೇಕೆಂದು ದೇವೇಗೌಡ ಹಾಗೂ ಕುಮಾರಸ್ವಾಮಿ ಆಜ್ಞೆ ಮಾಡಿದ್ದಾರೆ. ಅದರಲ್ಲೂ ನಾಗಮಂಗಲ ಶಾಸಕ ಚಲುವರಾಯಸ್ವಾಮಿ ಹೆಗಲಿಗೆ ಲೋಕಸಭಾ ಚುನಾವಣೆಯ ಜವಾಬ್ದಾರಿ ಹೊರಿಸಿರುವ ದೇವೇಗೌಡರು ಶತಾಯಗತಾಯ ಪುಟ್ಟರಾಜು ಅವರನ್ನು ಗೆಲ್ಲಿಸಬೇಕೆಂದು ಆದೇಶಿಸಿದ್ದಾರೆ. ದೊಡ್ಡಗೌಡರ ಆದೇಶವನ್ನು ತಲೆಯ ಮೇಲೆ ಹೊತ್ತುಕೊಂಡಿರುವ ಚಲುವರಾಯಸ್ವಾಮಿ ನಿತ್ಯ ಲೋಕಸಭಾ ಅಖಾಡದಲ್ಲಿ ಪುಟ್ಟರಾಜು ಜೊತೆಜೊತೆಗೆ ನಿಂತು ಸಾಥ್ ನೀಡಿದ್ದಾರೆ.

ಸಿದ್ದುಗೆ ಅಗ್ನಿಪರೀಕ್ಷೆ

ಆಡಳಿತಾರೂಢ ಕಾಂಗ್ರೆಸ್ ಪಕ್ಷ ಕೂಡ ದೇವೇಗೌಡರ ಪಟ್ಟುಗಳಿಗೆ ಪ್ರತಿಯಾಗಿ ಪಟ್ಟುಗಳನ್ನು ಹಾಕುತ್ತಿದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದನಂತರ ಮೊದಲ ಚುನಾವಣೆ ಎದುರಿಸುತ್ತಿರುವ ಸಿಎಂ ಸಿದ್ದರಾಮಯ್ಯನವರಿಗೆ ದಳದ ಪ್ರಾಬಲ್ಯವಿರುವ ಮಂಡ್ಯ ಹಾಗೂ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿ ಅಗ್ನಿಪರೀಕ್ಷೆ ಎದುರಾಗಿದೆ. ಮುಂದಿನ ಲೋಕಸಭಾ ಚುನಾವಣೆಯ ದಿಕ್ಸೂಚಿ ಎಂದೇ ಪರಿಗಣಿಸಲಾಗಿರುವ ಈ ಉಪಚುನಾವಣೆಯಲ್ಲಿ ಗೆಲ್ಲದಿದ್ದರೆ ದೆಹಲಿ ಹೈಕಮಾಂಡ್ ನಾಯಕರ ಅವಕೃಪೆಗೆ ಸಿದ್ದು ಒಳಗಾಗಬೇಕಾಗುತ್ತದೆ. ಅದ್ದರಿಂದ ಅವರು ಕೂಡ ಏನೇ ಆಗಲಿ ಗೆಲುವೊಂದೇ ಮಾನದಂಡ ಎಂದು ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಹೆಗಲಿಗೆ ಚುನಾವಣೆಯ ಜವಾಬ್ದಾರಿ ಹೊರಿಸಿ ಕ್ಷೇತ್ರದಲ್ಲಿ ಸುತ್ತಿಸುತ್ತಿದ್ದಾರೆ.

ಕ್ಷೇತ್ರದಲ್ಲಿ ಜೆಡಿಎಸ್ ಆರ್ಭಟದ ಬಗ್ಗೆ ಅರಿತಿರುವ ಸಿದ್ದರಾಮಯ್ಯ ಕೇವಲ ಅಂಬರೀಶ್ ಅವರನ್ನು ಮಾತ್ರ ಚುನಾವಣಾ ಕಣದಲ್ಲಿ ಬಿಟ್ಟಿಲ್ಲ. ತಮ್ಮ ಆಪ್ತ ಬಳಗದಲ್ಲಿರುವ ಲೋಕೋಪಯೋಗಿ ಸಚಿವ ಹೆಚ್.ಸಿ. ಮಹಾದೇವಪ್ಪನವರಿಗೆ ಚುನಾವಣಾ ಪ್ರಚಾರದ ಉಸ್ತುವಾರಿಯನ್ನು ವಹಿಸಿದ್ದಾರೆ. ಜೊತೆಗೆ ಸಚಿವರಾದ ರಮಾನಾಥ ರೈ, ಸತೀಶ್ ಜಾರಕಿಹೊಳಿ, ಉಮಾಶ್ರೀ, ಕಿಮ್ಮನೆ ರತ್ನಾಕರ್, ವಿ.ಶ್ರೀನಿವಾಸ್ ಪ್ರಸಾದ್, ಹೆಚ್.ಎಸ್. ಮಹದೇವ ಪ್ರಸಾದ್ ಸೇರಿದಂತೆ 11 ಸಚಿವರನ್ನು ಚುನಾವಣಾ ಅಖಾಡಕ್ಕೆ ಕಳುಹಿಸಿದ್ದಾರೆ. ಇದು ತಮ್ಮ ಸರ್ಕಾರದ ಮಾನ- ಮರ್ಯಾದೆಯ ಪ್ರಶ್ನೆ ಎಂದಿರುವ ಸಿದ್ದರಾಮಯ್ಯ ಶತಾಯಗತಾಯ ರಮ್ಯಾರನ್ನು ಗೆಲ್ಲಿಸಬೇಕೆಂದು ಫರ್ಮಾನು ಹೊರಡಿಸಿದ್ದಾರೆ.

ರಮ್ಯಾ-ರಂಜಿತಾ ಎಂಟ್ರಿ

ಆಗಸ್ಟ್ 3ರಂದು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಸಾಕು ತಂದೆ ಆರ್.ಟಿ.ನಾರಾಯಣ್ ಅವರ ಅಕಾಲಿಕ ಮರಣದಿಂದ ರಮ್ಯಾ ಇನ್ನೂ ಸಂಪೂರ್ಣವಾಗಿ ಹೊರಬಂದಿಲ್ಲ. ಆ ಕಾರಣಕ್ಕೆ ಇದುವರೆಗೂ ಕಾಂಗ್ರೆಸ್ ಪ್ರಚಾರ ತೀರಾ ಸಪ್ಪೆಯಾಗಿತ್ತು. ಆಕೆಯ ದಿಗ್ವಿಜಯಸಿಂಗ್, ಸಿದ್ದರಾಮಯ್ಯ, ಅಂಬಿ ಮತ್ತು ಇತರರು ಸಾಂತ್ವನ ಹೇಳಿದ್ದರಿಂದ ಆಕೆ ಆಗಸ್ಟ್ 12ರಿಂದ ಕಣ್ಣೀರು ಹರಿಸುತ್ತಲೇ ಸಕ್ರಿಯ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ. ರಮ್ಯಾ ಎಂಟ್ರಿಯಿಂದ ಪ್ರಚಾರ ಕಾರ್ಯ ಈಗ ಸಾಕಷ್ಟು ಬಿರುಸು ಪಡೆದಿದೆ.



ರಮ್ಯಾ ತಾಯಿ ರಂಜಿತ ಕೂಡ ಪ್ರಚಾರ ಕಣಕ್ಕೆ ಧುಮುಕಿದ್ದಾರೆ. "ನಾನು ಮಂಡ್ಯ ರೈತನ ಮಗಳು. ನನ್ನ ತಂದೆ ಜಿ.ಎಸ್.ಬೋರೇಗೌಡರು ಕೃಷಿಕರಾಗಿದ್ದು ಮಂಡ್ಯದ ರಾಜಕೀಯದಲ್ಲೂ ತೊಡಗಿಸಿಕೊಂಡಿದ್ದರು. ಮಣ್ಣಿನ ಋಣ ತೀರಿಸಲು ನನ್ನ ಮಗಳನ್ನು ಗೆಲ್ಲಿಸಿಕೊಡಿ" ಎಂದು ರಂಜಿತ ಮಗಳ ಪರ ಪ್ರಚಾರ ಮಾಡುತ್ತಿದ್ದಾರೆ.

ಕಾಂಗ್ರೆಸ್‌ಗೆ ಕಲ್ಪನಾ-ಕೃಷ್ಣ

ಯಾವುದೇ ಬೆಲೆ ತೆತ್ತಾದರೂ ಸರಿಯೇ ರಮ್ಯಾಳನ್ನು ಗೆಲ್ಲಿಸಲೇಬೇಕೆಂದು ಪಣ ತೊಟ್ಟಿರುವ ಕಾಂಗ್ರೆಸ್ ಜೆಡಿಎಸ್‌ನ ಬಂಡಾಯ ನಾಯಕರಾದ ಕೆ.ಆರ್.ಪೇಟೆ ಕೃಷ್ಣ ಹಾಗೂ ಮದ್ದೂರಿನ ಕಲ್ಪನಾ ಸಿದ್ದರಾಜುರನ್ನು ಇತ್ತೀಚೆಗೆ ತನ್ನ ಮಡಲಿಗೆ ಸೇರಿಸಿಕೊಂಡಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೇವೇಗೌಡರು ತಮ್ಮ ಬೀಗರಾದ ಡಿ.ಸಿ.ತಮ್ಮಣ್ಣನವರಿಗೆ ರಾಜಕೀಯ ನೆಲೆ ಕಲ್ಪಿಸಲು ಜೆಡಿಎಸ್ ಟಿಕೆಟ್ ನೀಡಿ ಅವರನ್ನು ಗೆಲ್ಲಿಸಿದ್ದರು. ಅವರ ಈ ಕೃತ್ಯದಿಂದಾಗಿ ಜೆಡಿಎಸ್‌ನ ಮಾಜಿ ಶಾಸಕಿ ಕಲ್ಪನಾ ಸಿದ್ದರಾಜು ತಮ್ಮ ರಾಜಕೀಯ ಅಸ್ತಿತ್ವವನ್ನೇ ಕಳೆದುಕೊಂಡು ಮನೆ ಸೇರಿದ್ದರು.

ಅನ್ಯಾಯಕ್ಕೆ ಗುರಿಯಾಗಿದ್ದ ಕಲ್ಪನಾರನ್ನು ಮತ್ತೆ ಜೆಡಿಎಸ್‌ಗೆ ಸೇರಿಸಿಕೊಳ್ಳುವ ಪ್ರಯತ್ನಕ್ಕೆ ತಮ್ಮಣ್ಣ ಅಡ್ಡಗಾಲು ಹಾಕಿದ್ದರು. "ಆಕೆ ಪಕ್ಷಕ್ಕೆ ಕೊಡಿಸುವ ಓಟನ್ನೂ ನಾನೇ ಹಾಕಿಸುತ್ತೇನೆ. ಯಾವ ಕಾರಣಕ್ಕೂ ಆಕೆಯನ್ನು ಮತ್ತೆ ಸೇರಿಸಿಕೊಳ್ಳಬಾರದು" ಎಂಧು ತಮ್ಮಣ್ಣ ಹಟ ಹಿಡಿದರು. ಆದರೆ ಕುಮಾರಸ್ವಾಮಿ ಕಲ್ಪನಾ ಅವರಿಗೆ "ಈ ಚುನಾವಣೆಯಲ್ಲಿ ಪುಟ್ಟರಾಜು ಪರ ಕೆಲಸ ಮಾಡಿ, ಆಮೇಲೆ ನೋಡೋಣ" ಎಂದಿದ್ದರು. ಅಡ್ಡಗೋಡೆ ಮೇಲೆ ದೀಪ ಇಟ್ಟಂತಹ ಕುಮಾರಸ್ವಾಮಿ ಮಾತುಗಳನ್ನು ಕೇಳಿದ ಕಲ್ಪನಾ "ಮಂಡ್ಯದಲ್ಲಿ ಎಸ್.ಡಿ.ಜಯರಾಂ ಅವರ ಪತ್ನಿ ಪ್ರಭಾವತಿಯನ್ನು ಮೂಲೆಗುಂಪು ಮಾಡಿದ ರೀತಿ ನನ್ನನ್ನು, ನನ್ನ ಬೆಂಬಲಿಗರನ್ನು ಮೂಲೆಗುಂಪು ಮಾಡಿದರೆ ಗತಿ ಏನು?" ಎಂದು ಬೆದರಿ ಇತ್ತೀಚೆಗೆ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದರು.

ಮುಂಬೈ ಉದ್ಯಮಿ ನಾರಾಯಣಗೌಡನ ಹಣ ಬಲಕ್ಕೆ ಮನಸೋತ ದೇವೇಗೌಡರು ಅವರನ್ನು ಕೆ.ಆರ್.ಪೇಟೆ ಶಾಸಕರನ್ನಾಗಿ ಮಾಡಿ ಕೃಷ್ಣರನ್ನು ಮೂಲೆಗುಂಪು ಮಾಡಿದ್ದರು. ಈಗ ಕೃಷ್ಣ ಕೂಡ ಕಾಂಗ್ರೆಸ್ ಸೇರಿದ್ದಾರೆ.

ರಮ್ಯಾ ಬೆಂಬಲಕ್ಕೆ ದೇವನೂರು ಮಹದೇವ

ಸಿದ್ದರಾಮಯ್ಯನವರ ಮಾತಿಗೆ ಬೆಲೆಕೊಟ್ಟು ರೈತ ನಯಕ ಮತ್ತು ಮೇಲುಕೋಟೆ ಶಾಸಕ ಪುಟ್ಟಣ್ಣಯ್ಯ ಸರ್ವೋದಯ ಕರ್ನಾಟಕ ಪಕ್ಷದಿಂದ ಕಣಕ್ಕಿಳಿಸಿದ್ದ ನಂದಿನಿ ಜಯರಾಂ ಅವರ ನಾಮಪತ್ರವನ್ನು ವಾಪಸ್ಸು ತೆಗೆಸಿ ರಮ್ಯಾ ಪರ ಮತ ಹಾಕಿಸುವಂತೆ ಪಕ್ಷದ ಮುಖಂಡರಿಗೆ ಆದೇಶಿಸಿದ್ದಾರೆ. ಅಧ್ಯಕ್ಷ ದೇವನೂರು ಮಹದೇವ ಕೂಡ ಅವಕಾಶವಾದಿ ರಾಜಕಾರಣ ಮಾಡುತ್ತಿರುವ ಜೆಡಿಎಸ್ ಅಭ್ಯರ್ಥಿಯನ್ನು ತಿರಸ್ಕರಿಸಿ ರಮ್ಯಾರನ್ನು ಗೆಲ್ಲಿಸುವಂತೆ ಕರೆ ನೀಡಿರುವುದು ಕಾಂಗ್ರೆಸ್ ಪಾಲಿಗೆ ಪ್ಲಸ್‌ಪಾಯಿಂಟ್ ಆಗಿದೆ.

ಭಿನ್ನಮತ ಶಮನ

ಅಂಬಿ ಪ್ರಚಾರಕ್ಕೆ ಕರೆಯಲಿಲ್ಲವೆಂದು ಇದುವರೆಗೂ ಮುನಿಸಿಕೊಂಡಿದ್ದ ಆತ್ಮಾನಂದರ ಮನವೊಲಿಸಿ ಪ್ರಚಾರಕ್ಕೆ ಕರೆತಂದಿದ್ದಾರೆ ಸಿದ್ದು ಆಪ್ತ ಹೆಚ್.ಸಿ.ಮಹದೇವಪ್ಪ. ನಾಗಮಂಗಲದ ಮಾಜಿ ಶಾಸಕ ಸುರೇಶ್ ಗೌಡ ಹಾಗೂ ಶಿವರಾಮೇಗೌಡ ನಡುವಿನ ಮುನಿಸೂ ಈಗ ಶಮನವಾಗಿದೆ. ನಿಮ್ಮ-ನಿಮ್ಮ ನಡುವೆ ಏನೇ ಭಿನ್ನಮತವಿರಲಿ, ಅದನ್ನು ಬದಿಗಿಟ್ಟು ರಮ್ಯಾ ಪರ ಕೆಲಸ ಮಾಡಿ ಎಂದು ಸಿಎಂ ಸಿದ್ದರಾಮಯ್ಯನವರೇ ಹುಕುಂ ಹೊರಡಿಸಿದ್ದರಿಂದ ಈಗ ಎಲ್ಲ ಜಿಲ್ಲಾ ನಾಯಕರೂ ರಮ್ಯಾ ಗೆಲುವಿಗೆ ಟೊಂಕಕಟ್ಟಿ ನಿಂತಿದ್ದಾರೆ.

ಬಿಜೆಪಿಯೊಂದಿಗೆ ಒಪ್ಪಂದ

ಕೋಮುವಾದಿ ಬಿಜೆಪಿಯೊಂದಿಗೆ ಯಾವುದೇ ಹೊಂದಾಣಿಕೆ ಇಲ್ಲವೆಂದು ಹೇಳುತ್ತಲೇ ಮಗ ಕುಮಾರಸ್ವಾಮಿಯನ್ನು ಮುಂದೆಬಿಟ್ಟು ಬಿಜೆಪಿಯೊಂದಿಗೆ ಒಳಗೊಳಗೆ ಮೈತ್ರಿ ಮಾಡಿಕೊಂಡಿರುವ ದೇವೇಗೌಡರು ಗೆಲ್ಲಲು ಯಾವ ಹಂತಕ್ಕೂ ಹೋಗಲು ಸಿದ್ಧ ಎಂಬುದನ್ನು ಸಾಬೀತುಪಡಿಸಿದ್ದಾರೆ.

ರಮ್ಯಾಳ ಜಾತಿ, ತಂದೆಯ ಬಗ್ಗೆ ಪ್ರಶ್ನಿಸಿದ್ದ ಮಾಜಿ ಶಾಸಕ ಎಂ.ಶ್ರೀನಿವಾಸ್ ವಿರುದ್ಧ ಕ್ಷೇತ್ರದಲ್ಲಿ ಹೇಸಿಗೆ ಹುಟ್ಟಿದೆ. ಇದು ಜೆಡಿಎಸ್ ಅಭ್ಯರ್ಥಿಗೆ ನೆಗೆಟಿವ್ ಪಾಯಿಂಟ್ ಆಗುವ ಸಾಧ್ಯತೆಗಳಿವೆ.

● ನಾಗೇಶ್

...ಲಂಕೇಶ್: ಜೆಡಿಎಸ್-ಬಿಜೆಪಿ-ಕೆಜೆಪಿಗಳು ಜಂಟಿಯಾಗಿ ...ನಾವಣೆಗೆ ಇಳಿದಿವೆಯಲ್ಲಾ?

...ಪುಟ್ಟಣ್ಣಯ್ಯ: ನೋಡಿ, ಯಾವುದೇ ಪಕ್ಷಕ್ಕೂ ಸ್ಪಷ್ಟವಾದ ...ಸಿದ್ಧಾಂತವಾಗಲಿ, ಗುರಿಯಾಗಲಿ ಇಲ್ಲ. ಏನಾದರೂ ಸರಿಯೇ ...ಕಾರ ಹಿಡಿದುಬಿಡಬೇಕು. ಇದೊಂದೇ ಇವರೆಲ್ಲರ ... ಇಂಥಾ ಅವಕಾಶವಾದಕ್ಕೆ ಬಲಿಯಾಗಿ ಇದ್ದ ...ಯಡಿಯೂರಪ್ಪ... ಘನತೆ ಗೌರವವನ್ನೂ ಹೀಗೆ ಮಣ್ಣುಪಾಲು ...ಮಾಡಿಕೊಳ್ಳಬಾರದಿತ್ತು, ಏನು ಮಾಡೋದು ಹೇಳಿ; ಇವರ ...ಅಧಿಕಾರದ ದಾಹ ಇಂಥಾ ಕೆಳಮಟ್ಟಕ್ಕೆ ತೆಗೆದುಕೊಂಡು ...ಹೋಗಿದೆ.

... ಇಷ್ಟು ತಮ್ಮ ಪಕ್ಷದ ಹೆಸರಿನ ಜೊತೆಗೆ ಜಾತ್ಯತೀತ ...ಇಟ್ಟುಕೊಂಡಿದ್ದೇವೆ ಎಂಬ ವಿಷಯವೇ ...ಇವರಿಗೆ ಮರೆತುಹೋದಂತೆ ಕಾಣುತ್ತಿದೆ. ಆಚಾರ ...ಬದನೆಕಾಯಿ ತಿನ್ನೋಕೆ ಅನ್ನೋ ಥರಾ ಆಗಿದೆ.

...ಲಂಕೇಶ್: ಈಗ ಉಪಚುನಾವಣೆ ನಡೆಸೋದು ...ಅನಿವಾರ್ಯತೆ ಇತ್ತೆ?

...ಪುಟ್ಟಣ್ಣಯ್ಯ: ಈ ಉಪಚುನಾವಣೆಗೆ ನೇರವಾಗಿ ...ನವರೇ ಕಾರಣ. ಕುಮಾರಸ್ವಾಮಿ ಪಕ್ಷ 2008ರ ...ಸೋತಿತು. ಅದರಿಂದ ಇವರಿಗೆ ಬೇಜಾರಾಗಿ ...ನಿಂತು, ಎಂಪಿ ಆಗಿಸಿಕೊಂಡರು. ಈಗ ... ಆಗೋ ಕನಸು ಬಿದ್ದು ಅಂತ ಕಾಣುತ್ತೆ. ... ಸ್ಥಾನಕ್ಕೆ, ಚೆಲುವರಾಯಸ್ವಾಮಿ, ಕುಮಾರಸ್ವಾಮಿ ಇಬ್ಬರೂ ರಾಜೀನಾಮೆ ಗೀಚಿ ಹಾಕಿ ಉಪಚುನಾವಣೆಗೆ ಕಾರಣ ಆಗಿದ್ದಾರೆ. ಈಗ ಅವರೇ ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿ ಅಂತಾ ಮತ್ತೆ ಬಂದಿದ್ದಾರೆ. ಓಟು ಕೊಟ್ಟ ಮತದಾರರ ಬಗ್ಗೆ ಇವರಿಗೆ ಸ್ವಲ್ಪವಾದರೂ ಗೌರವ ಇದೆಯಾ? ಇವರು ಹೇಳಿದಂತೆಲ್ಲಾ ಕುಣಿಯಲು ಮತದಾರರು ಇವರ ಗುಲಾಮರಾ? ಮಾಜಿ ಪ್ರಧಾನಿ ದೇವೇಗೌಡರು ಎಂಥಾ ಡೆಮಾಕ್ರಸಿಯ ನೀತಿಯನ್ನು ಪ್ರೋತ್ಸಾಹಿಸ್ತಾ ಇದ್ದಾರೆ?

ಲಂಕೇಶ್: ಈ ಉಪ ಚುನಾವಣೆಯಲ್ಲಿ ದೇವೇಗೌಡರ ಪಾತ್ರದ ಬಗ್ಗೆ ನಿಮ್ಮ ಅಭಿಪ್ರಾಯ?

ಪುಟ್ಟಣ್ಣಯ್ಯ: ಇತ್ತೀಚೆಗೆ ದೇವೇಗೌಡರು ಪ್ರಚಾರದಲ್ಲಿ ಒಂದು ಮಾತನ್ನು ಹೇಳಿದ್ದಾರೆ. 'ಇದು ಸಿದ್ದರಾಮಯ್ಯನಿಗೂ ಮತ್ತು ನನ್ನ ನಡುವೆ ನಡೀತಿರೋ ಚುನಾವಣೆ' ಅಂತಾ. ಒಬ್ಬ ಮಾಜಿ ಪ್ರಧಾನಿ ಬಾಯಲ್ಲಿ ಬರೋ ಮಾತಾ ಇದು? ಹಾಗಾದರೆ ಲಕ್ಷಾಂತರ ಮತದಾರರ ಅಭಿಪ್ರಾಯಕ್ಕೆ ಬೆಲೆಯೇನು? ರಾಷ್ಟ್ರದ ಪ್ರಧಾನಿಯಾಗಿ, ಕನ್ನಡಿಗರ ಆತ್ಮಗೌರವವನ್ನು ಹೆಚ್ಚಿಸಿದ ಗೌರವಕ್ಕೆ ಪಾತ್ರವಾಗಿ ಉನ್ನತ ಸ್ಥಾನದಲ್ಲಿರುವ ವ್ಯಕ್ತಿ ಚುನಾವಣೆಯನ್ನು ಇಂಥಾ ಮಟ್ಟಕ್ಕೆ ಇಳಿಸಬಾರದಿತ್ತು. ಇದಕ್ಕಿಂತ ನಾನು ಹೆಚ್ಚಿಗೆ ಹೇಳೋಲ್ಲ. ಅವರ ನೀತಿ-ನಿಲುವು ಏನು ಅಂತಾ ನೀವೇ ಅರ್ಥ ಮಾಡಿಕೊಳ್ಳಿ.

ಸಂದರ್ಶನ - ದೊಡ್ಡಿಪಾಳ್ಯ ನರಸಿಂಹಮೂರ್ತಿ

ರಾಜಕೀಯದೊಂದಿಗೆ ಬೆಳೆದ ಪುಟ್ಟರಾಜು ಆಸ್ತಿಪಾಸ್ತಿ

ಕಳೆದ 20 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿರುವ ಸಿ.ಎಸ್.ಪುಟ್ಟರಾಜು ಪಾಂಡವಪುರ ತಾ. ಬ್ಲಾಕಿನ ಚಿನಕುರುಳಿ ಗ್ರಾಮದ ಸಣ್ಣತಮ್ಮೇಗೌಡರ ಮಗ. ಪಾಂಡವಪುರ ಕ್ಷೇತ್ರವನ್ನು ಮೂರು ಬಾರಿ ವಿಧಾನ ಸಭೆಯಲ್ಲಿ ಪ್ರತಿನಿಧಿಸಿದ ಕೆಂಪೇಗೌಡ ವರಸೆಯಲ್ಲಿ ಪುಟ್ಟರಾಜುಗೆ ಚಿಕ್ಕಪ್ಪನಾಗಬೇಕು. ತಂದೆಯ ಕಾಲದಿಂದಲೂ ಪುಟ್ಟರಾಜು ಕುಟುಂಬ ಕಲ್ಲು ಗಣಿಗಾರಿಕೆಯಲ್ಲಿ ತೊಡಗಿದೆ.

ಪುಟ್ಟರಾಜು ಅಣ್ಣ ಚಿಕ್ಕರಾಮೇಗೌಡ ಶಾಸಕ ಕೆಂಪೇಗೌಡರ ಬಲಗೈ ಭಂಟನಾಗಿದ್ದ ಅವಧಿಯಲ್ಲಿ ಪುಟ್ಟರಾಜು ಸಣ್ಣಪುಟ್ಟ ಗುತ್ತಿಗೆ ಹಿಡಿಯುವ ಮೂಲಕ ಗುತ್ತಿಗೆದಾರನಾಗಿ ಬದಲಾದರು. ಕೆಂಪೇಗೌಡರು ಶಾಸಕರಾಗಿದ್ದ ಅವಧಿಯಲ್ಲಿ ಆರ್ಥಿಕವಾಗಿ ಸಾಕಷ್ಟು ಪ್ರಬಲರಾದ ಪುಟ್ಟರಾಜು ಬಹುಬೇಗ ದೇವೇಗೌಡರ ಕೃಪಾಕಟಾಕ್ಷ ಗಿಟ್ಟಿಸಿದರು. ಜೊತೆಗೆ ರೇವಣ್ಣ ಮತ್ತು ಕುಮಾರಸ್ವಾಮಿಗೆ ಆಪ್ತರಾದರು. 1994ರಲ್ಲಿ ಜಿ.ಪಂ ಟಿಕೆಟ್ ಪಡೆದು ಮೊದಲ ಬಾರಿಗೆ ಜಿ.ಪಂ. ಸದಸ್ಯನಾಗಿ ಆಯ್ಕೆಯಾದರು.


2004ರಲ್ಲಿ ವಿಧಾನಸಭಾ ಚುನಾವಣೆಯಲ್ಲಿ ರೈತಸಂಘದ ಪುಟ್ಟಣ್ಣಯ್ಯನವರನ್ನು ಸೋಲಿಸಿ ಮೊದಲ ಬಾರಿಗೆ ಶಾಸಕ ಸ್ಥಾನಕ್ಕೆ ಲಗ್ಗೆಯಿಟ್ಟ ಪುಟ್ಟರಾಜು ದಿನೇ ದಿನೇ ರಾಜಕೀಯದ ಪಟ್ಟುಗಳನ್ನು ಕರಗತ ಮಾಡಿಕೊಂಡರು. ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ನಂತರ ಕುಮಾರಸ್ವಾಮಿ ಸಿಎಂ ಆದ ಅವಧಿಯಲ್ಲಿ 400 ಕೋಟಿಗೂ ಅಧಿಕ ಅನುದಾನವನ್ನು ಮಂಜೂರು ಮಾಡಿಸಿಕೊಂಡ ಪುಟ್ಟರಾಜು ಗುತ್ತಿಗೆ ಕಾಮಗಾರಿಗಳನ್ನು ತಮ್ಮ ಅಣ್ಣನ ಮಕ್ಕಳು ಹಾಗೂ ಆತ್ಮೀಯರಿಗೆ ಕೊಟ್ಟರು. ಆ ಮೂಲಕ ಕ್ಷೇತ್ರದ ಅಭಿವೃದ್ಧಿಯ ಜೊತೆಗೆ ತಾವೂ ಅಭಿವೃದ್ಧಿಗೊಂಡರು.

ಹೀಗೆ ಗಳಿಸಿದ ದುಡ್ಡನ್ನು 2008 ಚುನಾವಣೆಯಲ್ಲಿ ಚೆಲ್ಲಿ ಎರಡನೇ ಬಾರಿ ಶಾಸಕರಾದರು. ಈಗ ಪುಟ್ಟರಾಜು ಕುಟುಂಬದ ಆದಾಯ ಗಳಿಕೆ ಬರೀ ಕಲ್ಲು ಕ್ವಾರಿಯಿಂದಲ್ಲ, ಬದಲಾಗಿ ಅದು ಗಣಿಗಾರಿಕೆ, ಕ್ರಷರ್, ರೈಸ್‌ಮಿಲ್, ಸಾಮಿಲ್, ಅಂಗಡಿ-ಮಳಿಗೆ, ಪೆಟ್ರೋಲ್ ಬಂಕ್ ಮೊದಲಾದ ಕ್ಷೇತ್ರಗಳಿಗೆ ಹಬ್ಬಿದೆ. ಇವೆಲ್ಲ ಪ್ರತಿದಿನ ಲಕ್ಷಲಕ್ಷ ರೂಪಾಯಿಗಳನ್ನು ತಂದು ಸುರಿಯುತ್ತಿವೆ. ಇಷ್ಟಲ್ಲದೆ ಮಂಡ್ಯ, ಬೆಂಗಳೂರು, ಮೈಸೂರು, ಪಾಂಡವಪುರದಲ್ಲಿ ಮನೆ, ಸೈಟುಗಳನ್ನೂ ಪುಟ್ಟರಾಜು ಕುಟುಂಬ ಗಳಿಸಿದೆ.

ಹುಬ್ಬಳ್ಳಿ: ಆಸಿಡ್ ದಾಳಿಯ ಹಿಂದೆ ಕೇಸರಿ ಭಯೋತ್ಪಾದಕರ

ಹುಬ್ಬಳ್ಳಿಯಲ್ಲಿ ಕೋಮುಗಲಭೆ ಸೃಷ್ಟಿಸುವ ವ್ಯವಸ್ಥಿತ ಸಂಚು ನಡೆಯುತ್ತಿದೆಯೇ?

ಇಂತಹದ್ದೊಂದು ಅನುಮಾನ ಹುಟ್ಟಲು ಕಾರಣವಾಗಿರೋದು ಸರಣಿ ಆಸಿಡ್ ದಾಳಿಯ ಗುಮ್ಮ! ಎರಡು ತಿಂಗಳಿನಿಂದ ಇತ್ತೀಚೆಗೆ ಬೀದಿದನಗಳು ಮತ್ತು ಮುಸ್ಲಿಮ್ ಕೋಮಿನವರ ಮೇಲೆ ನಡೆದಿರುವ ಆಸಿಡ್ ದಾಳಿಯ ಹಿಂದೆ ಕೇಸರಿ ಷಡ್ಯಂತ್ರವಿರುವುದು ದಿನದಿಂದ ದಿನಕ್ಕೆ ಸ್ಪಷ್ಟವಾಗುತ್ತಲೇ ಬರುತ್ತಿದೆ. ಆದರೆ ಪೊಲೀಸಿನವರು ಮಾತ್ರ ಇದನ್ನೊಂದು ಮಾಮೂಲಿ ಪ್ರಕರಣದಂತೆ ಪರಿಗಣಿಸಿ 'ಆಸಿಡ್ ದಾಳಿಗರನ್ನು ಹಿಡಿದು ಕೊಟ್ಟೋರಿಗೆ 10 ಸಾವಿರ ಬಹುಮಾನ' ಎಂದು ಡಂಗೂರ ಸಾರಿ ಸುಮ್ಮನಾಗಿದ್ದಾರೆ. ರಂಜಾನ್‌ನ ಆಸುಪಾಸಿನಲ್ಲಿ, ಅದರಲ್ಲೂ ಮುಂಬರುವ ಲೋಕಸಭಾ ಸಮರದ ಚಡಪಡಿಕೆಯ ಹೊತ್ತಿನಲ್ಲಿ ನಡೆದಿರುವ ಸರಣಿ ಆಸಿಡ್ ದಾಳಿಯ ಅಸಲಿಯತ್ತೇ ಬೇರೆ ಇದೆ.





ಡಿಸಿಪಿ ಶ್ರೀನಾಥ್ ಜೋಷಿ

ಚೆಡ್ಡಿಗಳ ಪಾಲಿಗೆ ಹಸು ಬಂಪರ್ ಸರಕು. ಕೋಮುದಳ್ಳುರಿ ಹೊತ್ತಿಸಬೇಕೆಂದು ಕೇಸರಿ ಟೀಮು ತಂತ್ರ ಹೆಣೆದಾಗಲೆಲ್ಲ ಗೋವು ಅವರ ಅಸ್ತ್ರವಾಗಿಬಿಡುತ್ತೆ. ಹುಬ್ಬಳ್ಳಿಯಲ್ಲಿ ಶುರುವಾಗಿರುವ ವಿನೂತನ ಆಸಿಡ್ ಭಯೋತ್ಪಾದನೆಗೆ ಮೊದಲು ಬಳಸಿಕೊಂಡದ್ದೂ ಇದೇ ಅಮಾಯಕ ಹಸುಗಳನ್ನು. ಬೈಕನ್ನೇರಿ ಬರುತ್ತಿದ್ದ ದಾಳಿಗರ ದಂಡು ಬೀದಿ ದನಗಳ ಕಣ್ಣಿಗೆ ಆಸಿಡ್ ಎರಚಿ ಪರಾರಿಯಾಗಿಬಿಡುತ್ತಿತ್ತು. ಗೋವುಗಳ ಮೇಲೆ ನಡೆದ ಈ ದಾಳಿಯನ್ನೆ ಮುಂದಿಟ್ಟುಕೊಂಡು ಭಾವನಾತ್ಮಕವಾಗಿ ಹಿಂದೂ ಕೋಮಿನವರನ್ನು ಕೆರಳಿಸಿ, ಇದೆಲ್ಲಾ ಮುಸ್ಲಿಮರದ್ದೇ ಕರಾಮತ್ತು ಎನ್ನುವ ವಿಷ ಬೀಜ ಬಿತ್ತಿ ತಾವೇ ಮುಂದೆ ನಿಂತು ದೊಂಬಿ ಎಬ್ಬಿಸುವುದು ಅವರ ಹುನ್ನಾರ ವಾಗಿತ್ತು. ಎರಡು ತಿಂಗಳ ಅವಧಿಯಲ್ಲಿ ಹೀಗೆ ಐದಾರು ದನಗಳ ಕಣ್ಣಿಗೆ ಆಸಿಡ್ ಎರಚಲಾಗಿದೆ. ಆದರೆ ಚೆಡ್ಡಿಗಳ ಈ ಐಡಿಯಾ ಕೈ ಹಿಡಿಯಲಿಲ್ಲ. ಹುಬ್ಬಳ್ಳಿಯ ಜನ ಬೀದಿ ದನಗಳ ಮೇಲಿನ ಈ ಆಸಿಡ್ ದಾಳಿ ಪ್ರಕರಣವನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಲೇ ಇಲ್ಲ. ಪೊಲೀಸರೂ ದನಗಳನ್ನು ಪಿಂಜರಾಪೋಲಕ್ಕೆ ಸಾಗಿಸಿ ಕೈ ತೊಳೆದುಕೊಂಡರೇ ಹೊರತು ದಾಳಿಕೋರರರನ್ನು ಬೆನ್ನತ್ತುವ ಗಟ್ಟಿತನವನ್ನೇ ತೋರಲಿಲ್ಲ. ಅಂತೂ-ಇಂತೂ ಸಂಘಿಗಳ ಈ ಹಕೀಕತ್ತು ಠುಸ್ ಪಟಾಕಿಯಂತಾಯ್ತು.

ಮುಸ್ಲಿಮರ ಮುಖಕ್ಕೆ ಆಸಿಡ್

ಅದ್ಯಾವಾಗ ಬೀದಿದನಗಳ ಪ್ಲಾನು ವರ್ಕ್‌ಔಟ್ ಆಗಲಿಲ್ಲವೋ, ಆಗ ಕಿರಾತಕರು ಟಾರ್ಗೆಟ್ ನೇರ ಮಾಡಿಕೊಂಡದ್ದು ಮುಸ್ಲಿಮರನ್ನು. ರಂಜಾನ್‌ಗೂ ಎರಡು ದಿನ ಮೊದಲು, ಅಂದರೆ 06.08.2013ರಂದು ಬೇರೆ ಬೇರೆ ಕಡೆ ಮೂವರು ಮುಸ್ಲಿಮರ ಮೇಲೆ ಮುಸುಕುಧಾರಿಗಳು ಆಸಿಡ್ ದಾಳಿ ನಡೆಸಿದ್ದರು. ಆ ಮೂಲಕ ರಂಜಾನ್‌ನ ವೇಳೆ ಕೋಮುಗಲಭೆ ಸೃಷ್ಟಿಸಿ ಶಾಂತಿ ಕದಡುವ ಉದ್ದೇಶ ಆ ದಾಳಿಗಳ ಹಿಂದೆ ಇತ್ತು.

ಅವತ್ತು ರಾತ್ರಿ ಸುಮಾರು 10.30ರ ವೇಳೆಗೆ ಹಳೇ ಹುಬ್ಬಳ್ಳಿಯ ಹೆಗ್ಗೇರಿಯಲ್ಲಿ ವಾಸವಿರುವ ಅಬ್ದುಲ್ ರವೂಫ್ ಸೈಫುದೀನ್ ಎಂಬಾತ ಆರೋಗ್ಯ ಸರಿಯಿಲ್ಲದ ಕಾರಣ ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಮರಳುತ್ತಿದ್ದ. ಆತ ರಾಜಧಾನಿ ಕಾಲೋನಿಯಿಂದ ಇಂಡಿಪಂಪ್ ಸಂಪರ್ಕಿಸುವ ಸೇತುವೆಯ ಹತ್ತಿರ ಬರುತ್ತಿದ್ದಂತೆಯೇ ಬೈಕ್‌ನಲ್ಲಿ ಬಂದ ಮುಸುಕುಧಾರಿಗಳು ರವೂಫ್‌ನ ಮುಖಕ್ಕೆ ಆಸಿಡ್ ಎರಚಿ ಪರಾರಿಯಾಗಿದ್ದರು. ಕತ್ತಲು ಆವರಿಸಿತ್ತಾದ್ದರಿಂದ ದಾಳಿಕೋರರನ್ನು ಹಿಡಿಯಲು ಅಥವಾ ಗುರುತಿಸಲು ಸಾಧ್ಯವಾಗಿರಲಿಲ್ಲ.

ಇದಾದ ಒಂದು ಗಂಟೆಯ ನಂತರ ಎರಡನೇ ದಾಳಿ ಶಾಂತಿನಾಥ ಕಾಲೋನಿಯಲ್ಲಿ ನಡೆದಿತ್ತು. ಆ ದಾಳಿಗೆ 47 ವರ್ಷದ ಅಲ್ಲಾಬಕ್ಷ್ ಮಲಿಕಸಾಬ್ ಬಳಗನೂರು ಎಂಬ ಬಡ ಆಟೊ ಡ್ರೈವರ್ ಮತ್ತು ಅವನ ಮಗ ಶಾರೂಕ್ ಇಬ್ಬರೂ ತುತ್ತಾಗಿದ್ದರು. ಅಲ್ಲಾಬಕ್ಷ್‌ನ ಮಗ ಶಾರೂಕ್ ಪಿಯುಸಿ ಓದುತ್ತಿದ್ದರೂ ಮನೆಯ ಬಡತನ ನೀಗಿಸುವ ಸಲುವಾಗಿ ಸಂಜೆ ವೇಳೆ ನ್ಯಾಷನಲ್ ಮಾರ್ಕೆಟ್‌ನಲ್ಲಿರುವ ಬಟ್ಟೆ ಅಂಗಡಿಯಲ್ಲೂ ಕೆಲಸ ಮಾಡಿಕೊಂಡಿದ್ದ. ಅವತ್ತು ಅಲ್ಲಾಬಕ್ಷ್ ಮಗನನ್ನು ಕರೆದುಕೊಂಡು ಬರಲು ಬಟ್ಟೆ ಅಂಗಡಿ ಬಳಿ ಹೋಗಿದ್ದಾನೆ. ರಂಜಾನ್ ಹಬ್ಬದ ಪ್ರಯುಕ್ತ ವ್ಯಾಪಾರ ಜೋರಾಗಿ ನಡೆದಿತ್ತಾದ್ದರಿಂದ ಶಾರೂಕ್ ಹೊರಡುವುದು ಸ್ವಲ್ಪ ತಡವಾಗಿದೆ. ಮಗನ ಕೆಲಸ ಮುಗಿದ ನಂತರ ಇಬ್ಬರೂ ಮನೆಯತ್ತ ಹೊರಟಿದ್ದಾರೆ. ಇನ್ನೇನು ಶಾಂತಿನಾಥ ಕಾಲೊನಿಯ ತಮ್ಮ ಮನೆ ಸಮೀಪಕ್ಕೆ ಬಂದಿರಬೇಕೆನ್ನುವಾಗ ಬೈಕಿನಲ್ಲಿ ಹಠಾತ್ತನೆ ಬಂದ ಇಬ್ಬರು ಮುಸುಕುಧಾರಿಗಳು ಅಲ್ಲಾಬಕ್ಷ್‌ನ ಕಣ್ಣಿಗೆ ಆಸಿಡ್ ಎರಚಿ ಎಸ್ಕೇಪಾಗಲು ಹವಣಿಸಿದ್ದರು. ಕಣ್ಣ ಮುಂದೆಯೇ ತಂದೆ ಮೇಲೆ ನಡೆದ ದಾಳಿಯನ್ನು ಕಂಡು ತಬ್ಬಿಬ್ಬಾದರು ಸಾವರಿಸಿಕೊಂಡ ಶಾರೂಕ್ ದಾಳಿಗಾರರನ್ನು ಹಿಡಿಯಲು ಅವರ ಬೆನ್ನುಹತ್ತಿದ್ದ. ಆಗ ಅವನ ಮುಖಕ್ಕೂ ಆಸಿಡ್ ಚೆಲ್ಲಿದ ಕಿರಾತಕರು ಕತ್ತಲೆಯಲ್ಲಿ ಕಣ್ಮರೆಯಾಗಿ ಹೋಗಿದ್ದರು.



ಅಲ್ಲಾಬಕ್ಷ್‌ನ ಕುಟುಂಬ-ಮುಮತಾಜ್‌ಬಿ-ಗುಡುಲಾಲ್-ರೇಷ್ಮ-ಶಾರೂಕ್

ಅಲ್ಲಾಬಕ್ಷ್‌ನ ಚೀರಾಟ ಕೇಳಿ ಮನೆಯವರು, ಅಕ್ಕಪಕ್ಕದವರು ಜಮಾಯಿಸುವ ವೇಳೆಗಾಗಲೇ ಆತನ ಒಂದು ಕಣ್ಣು ಸಂಪೂರ್ಣವಾಗಿ ಸುಟ್ಟು ಹೋ[...] ಕೂಡಲೇ ಚಂದ್ರಶೇಖರ್ ಗೋಕಾಕ್ ಎಂಬ ನೆರೆ[...] ಅವನನ್ನು ಬೆಂಡಿಗೇರಿ ಸ್ಟೇಷನ್‌ಗೆ ಕರೆತಂದು ಕಂಪ್ಲೆ[...] ಕೊಡಿಸಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದರು. ಒಂದು ಕಣ್[...] ಶಾಶ್ವತವಾಗಿ ಹಾಳಾಗಿದ್ದು, ಮತ್ತೊಂದು ಕಣ್ಣಿಗೆ ದು[...] ಚಿಕಿತ್ಸೆ ಕೊಡಿಸಿದರೆ ದೃಷ್ಟಿ ಮರಳಬಹುದೆಂದು ಹೇ[...] ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಹೈದ್ರಾಬಾದ್‌ನತ್ತ ಕೈ ತೋರಿ[...] ಆಟೋ ನಂಬಿಯೇ ಜೀವನ ಸಾಗಿಸುತ್ತಿದ್ದ ಕುಟುಂ[...] ಖರ್ಚು ಭರಿಸುವ ಆರ್ಥಿಕ ಶಕ್ತಿ ಇಲ್ಲ. ಹುಬ್ಬ[...] ಅಂಜುಮಾನ್ ಸಂಸ್ಥೆಯವರು ಮೂರು ಸಾವಿರ ಧನಸ[...] ಮಾಡಿ ಕೈತೊಳೆದುಕೊಂಡಿದ್ದಾರೆ. ಆದರೆ ಅ[...] ಯಾವುದಕ್ಕೂ ಸಾಲದು. ಘಟನೆಯ ನಂತರ ಶಾಸಕ ಪ್ರ[...] ಅಬ್ಬಯ್ಯ ಸ್ವಲ್ಪಮಟ್ಟಿಗೆ ಹಣಕಾ[...] ನೆರವನ್ನೂ ನೀಡಿ, ಮುಖ್ಯ ಮಂತ್ರಿ ನಿಧಿ[...] ಪತ್ರವನ್ನೂ ಬರೆದಿದ್ದಾರೆ. ದುರಾದೃಷ್ಟವೆಂ[...] ಆಸಿಡ್ ದಾಳಿಗೆ ಒಳ ಗಾದವರಿಗೆ ಸಿ.[...] ರಿಲೀಫ್ ಫಂಡ್‌ನಿಂದ ಪರಿಹ[...] ಸಿಗುವುದು ಕಷ್ಟದ ಮಾತು. ಆಳುವ[...] ಮಾನವೀಯತೆ ಮಾತ್ರ ಬಡ ಅಲ್ಲಾಬ[...] ನೆರವು ನೀಡಬಲ್ಲದು. ಒಟ್ಟಿ[...] ರಂಜಾನ್‌ನ ತಯಾರಿಯಲ್ಲಿದ್ದ ಇ[...] ಕುಟುಂಬವೇ ಕತ್ತಲಲ್ಲಿ ಕೂರುವಂತಾಗಿ[...]




ಕಮೀಷನರ್ ಪದ್ಮನಯನ

ಪೊಲೀಸರ ನಿರ್ಲಕ್ಷ್ಯ

ಮುಂಬರುವ ಲೋಕಸ[...] ಚುನಾವಣೆಗೆ ತಂತ್ರ ಹೆಣೆದಿರುವ ಪ್ರಮೋದ್ ಮುತಾಲಿ[...] ಗ್ಯಾಂಗ್ ಈಗಾಗಲೇ ಹುಬ್ಬಳ್ಳಿಯಲ್ಲಿ ತನ್ನ ಚಟುವ[...] ಪ್ರಾರಂಭಿಸಿದೆ. ಮೊದಲು ಬಹುಧರ್ಮೀಯರ[...] ಸುಲಭವಾಗಿ ಕೆರಳಿಸಬಹುದಾದ ದನಗಳ ಮೇಲೆ ಆಸಿ[...] ದಾಳಿ ನಡೆಸಿದ್ದು, ನಂತರ ಮುಸ್ಲಿಮ್ ಕೋಮಿನವರ[...] ಗುರಿಯಾಗಿಸಿಕೊಂಡು ನಡೆದಿರುವ ದಾಳಿಗಳ ಹಿಂ[...] ಹಿಂದೂ ಭಯೋತ್ಪಾದನೆಯ ಕರಾಳ ಛಾಯೆ ಇರುವು[...] ಸ್ಪಷ್ಟವಾಗಿದೆ. ಆದರೂ ಪೊಲೀಸಿನವರು ಇದನ[...] ಗಂಭೀರವಾಗಿ ಪರಿಗಣಿಸುತ್ತಿಲ್ಲ. ಬಿಜೆಪಿ ಆಡಳಿತದ ಕೊ[...] ದಿನಗಳಲ್ಲಿ ಶೆಟ್ಟರ್‌ರ ಅನುಕೂಲಕ್ಕೆಂದು ಇಲ್ಲಿಗೆ ವಕ್ಕರಿಸಿ[...] ಕಮೀಷನರ್ ಪದ್ಮನಯನ ಮತ್ತು ಡಿಸಿಪಿ ಶ್ರೀನಾ[...] ಜೋಷಿಯವರು ಆಸಿಡ್ ದಾಳಿಗರ ವಿರುದ್ಧ ದಿಟ್ಟ ಕ್ರಮ[...] ಮುಂದಾಗುವ ಮನಸ್ಸನ್ನೇ ಮಾಡಿದಂತಿಲ್ಲ. ಇನ[...] ಮುಂದಾದರು ಪೊಲೀಸ್ ಅಧಿಕಾರಿಗಳು ಸಂಘಿಗಳಿ[...] ಸಲಾಮ್ ಹೊಡೆಯುವ ಕಾಯಕ ಬದಿಗಿಟ್ಟು, ಖಾಕಿ[...] ಖದರ್‌ತನವನ್ನು ಪ್ರದರ್ಶಿಸುವ ನಿಯತ್ತು ತೋರದಿದ್[...] ಕೇಸರಿಗಳ ಕನವರಿಕೆಯಂತೆ ಹುಬ್ಬಳ್ಳಿ ನಗ[...] ಕೋಮುದಳ್ಳುರಿಗೆ ಬಲಿಯಾಗಬೇಕಾದೀತು. ಸರ್ಕಾರವ[...] ಇತ್ತ ಗಮನಹರಿಸಿ ಇಲಾಖೆಗೆ ಸೂಕ್ತ ಸರ್ಜರಿ ಮಾ[...] ಅವಳಿನಗರದ ಶಾಂತಿ ಕಾಪಾಡಬೇಕಿದೆ.

■ ಹುಬ್ಬಳ್ಳಿಯಾಂ[...]



ಡಾಕ್ಟರ್ ಮತ್ತು ಲಾಯರ್‌ಗಳ ಕೆಲಸಾನ 'ಪ್ರಾಕ್ಟೀಸ್' ಅಂತಾರಲ್ಲ ಯಾಕೆ?

- ☛ ಗಂಡಸರು 'ತಾಯಿಯೇ ದೇವರು' ಅಂತಾರೆ, ಆದರೆ ಪರ್ಸ್‌ನಲ್ಲಿ ಹೆಂಡತಿ ಫೋಟೋ ಇಟ್ಟುಕೊಂಡಿರ್ತಾರೆ ಯಾಕೆ?

ಸುಶೀಲಮ್ಮ, ರಾಣೆಬೆನ್ನೂರು

- ಖರ್ಚಿಗೆ ಕಾಸು ಕೊಡುವುದು 'ದೇವರಲ್ಲ' ಅದಕ್ಕೆ.

☛ ರಮ್ಯಾಳ ಸಾಕು ತಂದೆ ಆರ್.ಟಿ. ನಾರಾಯಣ್ ಬಹಳ 'ಗ್ರೇಟ್' ಅಂತಿದ್ದಾರಲ್ಲ, ನಿಜಾನಾ?

ಮಂಜೇಗೌಡ, ಕಿರುಗಾವಲು

- ಪವರ್ ಬ್ರೋಕರ್‌ಗಳೆಲ್ಲಾ ಗ್ರೇಟ್ ಅನಿಸಿಕೊಳ್ಳೊ ಕಾಲ ಇದು.

☛ ನಾನು ಏನೇ ಮಾಡಿದರೂ ನನ್ನ ಹೆಂಡತಿ ಮೆಚ್ಚುತ್ತಿಲ್ಲ ಯಾಕೆ?

ಜೆ.ಬಿ. ನಾಗರಾಜು, ನಾಗವಾರ

- ಒಮ್ಮೆ ಮೆಚ್ಚಿಕೊಂಡು ಮದುವೆ ಮಾಡಿಕೊಂಡ ಮೇಲೆ ಆಕೆಗೆ ಜ್ಞಾನೋದಯವಾಗಿರಬಹುದು.

☛ 'ಕೆಟ್ಟು ಪಟ್ಟಣ ಸೇರು' ಅನ್ನುತ್ತಾರಲ್ಲ, ಏನಿದರ ಅರ್ಥ?

ಶಿವು ಮಾದಾರ, ಗಂಗಾವತಿ

- ಇಲ್ಲಿ ಕೆಡಕನ್ನೂ ಪೊಟ್ಟಣ ಕಟ್ಟಿ ಮಾರುವುದರಿಂದ.

☛ ಉಲ್ಲಾಸ ಕಾರಂತ ಹುಲಿಗಳ ಬಗ್ಗೆ ರಾತ್ರಿ ಸಂಶೋಧನೆ ಶುರು ಮಾಡಿದ್ದಾರಲ್ಲ!

ರಾಜೀವ್, ಶೃಂಗೇರಿ

- ಕೆಟ್ಟ ಕೆಲಸಕ್ಕೆ ರಾತ್ರಿಯೇ ಸೂಕ್ತ.

☛ ಹೆಣ್ಣಿನ ಕುಡಿನೋಟ ನಿಜಕ್ಕೂ ಚೆಂದಾನಾ!

ಚಂದ್ರು, ಸುತ್ತೇಗಾಲ

- ಗಂಡಿನ ಕುಡಿದ ನೋಟಕ್ಕಿಂತ ಉತ್ತಮ.



☛ ಕುಮಾರಸ್ವಾಮಿ-ಯಡ್ಡಿ ಮೈತ್ರಿಯಿಂದ ಕರ್ನಾಟಕ ಜನರಿಗೆ ಏನು ಸಿಗಬಹುದು?

ಪರಮೇಶ್, ಜಗಳೂರು

- ಕೊಚ್ಚೆ ನೀರು.

☛ ವಾಜಪೇಯಿಗೆ ಏನಾಗಿದೆ, ಸುದ್ದಿಯೇ ಇಲ್ಲವಲ್ಲ!

ಇಬ್ರಾಹಿಂ, ಬಳ್ಳಾರಿ

- ಮುಂದಿನ ಚುನಾವಣೆ ಸಮಯಕ್ಕಾಗಿ 'ಸುದ್ದಿ'ಯನ್ನು ಕಾದಿರಿಸಿದ್ದಾನಂತೆ ಮೋದಿ.

☛ ಗಾಂಧೀಜಿ ಈಗ ಸ್ವರ್ಗದಲ್ಲಿ ಏನು ಮಾಡುತ್ತಿರಬಹುದು?

ನವೀನ, ಹುಮ್ನಾಬಾದ್

- ಬಹುತೇಕ ಅಲ್ಲಿಯೂ ಅವರ ಹತ್ಯೆಯಾಗಿರುತ್ತದೆ.

☛ ದೇವೇಗೌಡರು ಪ್ರತಿ ಚುನಾವಣೇಲೂ 'ಇದು ನನ್ನ ಕೊನೆ ಹೋರಾಟ' ಅನ್ನಲು ಕಾರಣ?

ರಮೇಶ್, ಕುಣಿಗಲ್

- 'ಹೋರಾಟ'ವನ್ನು 'ಮಾರಾಟ' ಅಂತಾ ಓದಿಕೊ, ಗೊಂದಲ ಬಗೆಹರಿಯುತ್ತೆ.

☛ ಯಡಿಯೂರಪ್ಪ ಮೋದಿಯನ್ನು ಮೆಚ್ಚುವುದೇಕೆ?

ಸುಧಾಕರ್, ರಾಜಾಜಿನಗರ

- ಒಂದೇ ತಿಪ್ಪೆಯಲ್ಲಿ ಜನಿಸಿರುವುದರಿಂದ.

☛ ಡಾಕ್ಟರ್ ಮತ್ತು ಲಾಯರ್‌ಗಳ ಕೆಲಸಾನ 'ಪ್ರಾಕ್ಟೀಸ್' ಅಂತಾರಲ್ಲ ಯಾಕೆ?

ಶ್ರೀವಿದ್ಯಾ, ಶಿವಮೊಗ್ಗ

- ತೀರಾ 'L' ಬೋರ್ಡ್ ಅಂತಾ ಘೋಷಿಸಿಕೊಳ್ಳಲು ಸಂಕೋಚ.

☛ ಬ್ಯಾಂಕ್‌ಗಳಲ್ಲಿ ಬಾಗಿಲು ಆರಾಮಾಗಿ ತೆಗೆದಿರ್ತಾ[...] ಆದ್ರೆ ಪೆನ್‌ಗೆ ಚೈನ್ ಹಾಕಿರ್ತಾರಲ್ಲ!

ರಾಮಚಂದ್ರ, ಸಂತೆಬೆನ್ನೂ[...]

- ಚಿಲ್ಲರೆ ಕಳ್ಳರ ಕಿರುಕುಳಕ್ಕೆ.

☛ ಡೈವೋರ್ಸ್ ಆಗೋದು ಯಾವ ಹಂತದಲ್ಲಿ?


ಸಂದೀಪ್, ಮಾಲೂ[...]

- ಹೊಸ ಜಗಳಕ್ಕೆ ಕಾರಣ ಸಿಗದಿದ್ದಾಗ.

☛ ಹಾಸಿಗೆ ಹಾಗೂ ಸಮಾಧಿಯ ನಡುವೆ ವ್ಯತ್ಯಾಸ ಏನು[...]

ವೆಂಕಟೇಶ್, ಬಾದಾ[...]

- ಆಳ.



(ಸೂಚನೆ: ಕಣ್ಣಾಮುಚ್ಚಾಲೆಗೆ [...] 9980331427ಗೆ SMS ಮತ್ತು kannamucchale@gmail.com ಗೆ [...])

...ತ್ರದುರ್ಗ- ಸಚಿವ ಆಂಜನೇಯಗೆ ಷಣ್ಮುಕಪ್ಪ ಕಿರುಕುಳ

...ವಾದಕ ನ್ಯಾಯದ ಬಗ್ಗೆ ...ಡಿ ಹೊಂದಿರುವ ...ಸಿದ್ದರಾಮಯ್ಯನವರು ಆಂಜನೇಯರನ್ನು ಸಮಾಜ ...ಣ ಮಂತ್ರಿಯ ಸ್ಥಾನದಲ್ಲಿ ಕೂರಿಸಿದ್ದಾರೆ. ಆದರೆ ಸಚಿವ ...ಜನೇಯ ಪಾಲಿಗೆ ಅವರ ಜೊತೆಗಾರ ಷಣ್ಮುಕಪ್ಪ ...ಗೂ ಸಿರಿಗೆರೆ ಮಠವೇ ಈಗ ...ೊಡರುಗಾಲಾಗಿವೆ.

...ಮಾಜಿ ಇಂಜಿನಿಯರ್ ಹಾಗೂ ಹಾಲಿ ರಾಜಕಾರಣಿ ...ನುಮಲಿ ಷಣ್ಮುಕಪ್ಪ ಎಂಬ ಅಧಿಕ ಪ್ರಸಂಗಿಯೊಬ್ಬ ...ಯ ರಾಜಕಾರಣ ಹಾಗೂ ಆಡಳಿತಗಳ ಮೇಲೆ ಹಿಡಿತ ...ಸುತ್ತಿರುವುದು ಈಗ ಕಂಡುಬರುತ್ತಿದೆ.


...ಮಠದ ಆಸ್ಥಾನ ಧುರೀಣ ಸಾಧು ಲಿಂಗಾಯತ ಜಾತಿಗೆ ...ದ ಹನುಮಲಿ ಷಣ್ಮುಕಪ್ಪ ಈ ಮಂತ್ರಿಯ ಮೇಲೆ ...ಥಾ ಕಂಟ್ರೋಲ್ ಇಟ್ಟುಕೊಂಡಿದ್ದಾನೆ ಎಂಬುದನ್ನು ...ಮಾಡಿಕೊಳ್ಳಲು ಕೊಂಚ ಹಿನ್ನೆಲೆ ನೋಡಬೇಕು.

ಯಾರೀ ಷಣ್ಮುಕಪ್ಪ?


...ಹೊಳಲ್ಕೆರೆ ತಾಲ್ಲೂಕಿನ ಹನುಮಲಿ ಷಣ್ಮುಕಪ್ಪ ...ಜನಿಯರ್ ಆಗಿದ್ದವರು. ಬೆಂಗಳೂರಿನಲ್ಲಿ ...ಕೋಪಯೋಗಿ ಇಲಾಖೆಯಲ್ಲಿ AEE ಆಗಿದ್ದ. ...ಗ್ರೆಸಿನ ಘಟಾನುಘಟಿಗಳಾದ ಧರ್ಮಸಿಂಗ್, ಖರ್ಗೆ, ...ಪಿಯ ವಿ.ಸೋಮಣ್ಣ ಮಾಜಿ ಮುಖ್ಯಮಂತ್ರಿ ಯಡ್ಡಿ ...ಬತಾದವರ ನಂಟನಿಂದಾಗಿ ಭಾರೀ ಗಂಟು ಮಾಡಿ, ...ಜನಿಯರ್‌ಗಿಂತ ರಾಜಕಾರಣಿ ಆಗೋದೇ ...ಕರವೆಂದು ತೀರ್ಮಾನಿಸಿ 2007-08ರ ನಡುವೆ ...ರಿಗೆ ರಾಜೀನಾಮೆ ಬಿಸಾಕಿ ಹೊಳಲ್ಕೆರೆಗೆ ವಕ್ಕರಿಸಿಬಿಟ್ಟ. ...ಈತ ನೌಕರಿಯಲ್ಲಿದ್ದುಕೊಂಡೇ ರಾಮಕೃಷ್ಣ ಹೆಗಡೆ ...ಖ್ಯಮಂತ್ರಿಯಾಗಿದ್ದಾಗಲೇ ರಾಜಕೀಯದ ಹುಚ್ಚು ...ಸ್ಟಿಕೊಂಡಿದ್ದ. ಆವಾಗಲೇ ಷಣ್ಮುಕಪ್ಪ ರಾಮಗಿರಿ ...ಪಂಚಾಯ್ತಿ ಕ್ಷೇತ್ರದಿಂದ ಹೆಂಡತಿಯನ್ನು ನಿಲ್ಲಿಸಿ ಗೆಲ್ಲಿಸಿದ. ...ಡತಿಯನ್ನು ರಾಜಕೀಯಕ್ಕೆ ತಂದು ತಾನೇ ರಾಜಕಾರಣ ...ಡತೊಡಗಿದ. ಜನತಾಪಾರ್ಟಿಯ ದಿಗ್ಗಜರನ್ನೆಲ್ಲ ಪರಿಚಯ ...ಡಿಕೊಂಡವನೇ ಇಲಾಖೆಯಲ್ಲಿ ಉಸ್ತಾದನಂಗೆ ...ಳಮಕ್ಕಳ ಕುಳಿತು ಸಮೃದ್ಧವಾದ ಭೋಜನ



ಷಣ್ಮುಕಪ್ಪ



ಸಚಿವ ಆಂಜನೇಯ



ಸಿರಿಗೆರೆ ಸ್ವಾಮಿ

ಮಾಡತೊಡಗಿದ. ಅಲ್ಲಿಂದ 2007ರ ತನಕ ಗಳಿಸಿದ ಕೋಟಿಗಳಿಗೆ, ಮಾಡಿದ ಆಸ್ತಿಗಳಿಗೆ ಲೆಕ್ಕವಿಲ್ಲ. ಹೊಳಲ್ಕೆರೆಯಲ್ಲಿ ಝಂಡಾ ಹೂಡಿದ ಈ ಆಸಾಮಿ ಸಿರಿಗೆರೆ ಸಾಧುಸದ್ಧರ್ಮ ಮಠದ ಶ್ರೀಮಂತ ಭಕ್ತನಾಗಿ ಸ್ಥಾಪಿತಗೊಂಡ. ಅಲ್ಲಿಂದಾಚೆಗೆ ಕ್ಷೇತ್ರದ ಮೇಲೆ ಷಣ್ಮುಕಪ್ಪನ ಹಿಡಿತ ಬಿಗಿಯಾಗತೊಡಗಿತು.

2008ರಲ್ಲಿ ಹೊಳಲ್ಕೆರೆ ವಿಧಾನಸಭಾ ಮತಕ್ಷೇತ್ರ ಪರಿಶಿಷ್ಟ ಜಾತಿಗೆ ಮೀಸಲಾಗಿದ್ದೇ ತಡ ಲಿಂಗಾಯತರ ಮಠ ತಮ್ಮ ಪ್ರಾಬಲ್ಯವನ್ನು ಮುಂದುವರೆಸಲು ತಂತ್ರ ರೂಪಿಸತೊಡಗಿತು. ನೂರಾರು ಕೋಟಿಯ ಸರದಾರ ಹನುಮಲಿ ಷಣ್ಮುಕಪ್ಪನನ್ನೇ ಮಠ ಮತ್ತು ಕ್ಷೇತ್ರದ ರಾಜಕಾರಣದ ನಡುವೆ ಏಜಂಟ್‌ನನ್ನಾಗಿ ನೇಮಿಸಿಬಿಟ್ಟಿತು. ಷಣ್ಮುಕಪ್ಪ 2008ರ ಚುನಾವಣೆಯಲ್ಲಿ ಆಂಜನೇಯರನ್ನು ಬೆಂಬಲಿಸಿದ. ಯಡ್ಡಿ ಗಾಳಿಬೀಸಿ ಚಂದ್ರಪ್ಪ ಶಾಸಕನಾಗಿದ್ದರಿಂದ ಮಠ ಗೆದ್ದವನ ಬಾಲ ಹಿಡಿಯಿತು. ಹೀಗಾಗಿ ಷಣ್ಮುಕಪ್ಪನನ್ನು ಕಾಂಗ್ರೆಸಿನಿಂದ ಎತ್ತಿ ಬಿಜೆಪಿ ಮಡಿಲಿಗೆ ಹಾಕಿತು.

ಷಣ್ಮುಕಪ್ಪ ಬಿಜೆಪಿಗೆ ವಲಸೆ ಹೋಗಿ ಚಂದ್ರಪ್ಪನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಬೃಹತ್ ಯೋಜನೆಗಳ ಗುತ್ತಿಗೆದಾರನಾಗಿ ಐದು ವರ್ಷ ಮುಂಡಾಮೋಚಿದ. ಮುಖ್ಯಮಂತ್ರಿ ಯಡ್ಡಿಯ ಚೆಡ್ಡಿ ಹಿಡಿದುಕೊಂಡೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧ್ಯಕ್ಷನೂ ಆಗಿಬಿಟ್ಟ.

ಆದರೆ ಚಂದ್ರಪ್ಪ ಹಾಗು ಮಠದ ನಡುವೆ ಬಿರುಕು ಮೂಡಿತು. ಅದೂ ಅಲ್ಲದೆ, ತನ್ನ ಬೋವಿ ಜಾತಿ ವ್ಯಾಮೋಹಿಯಾದ ಚಂದ್ರಪ್ಪನ ವಿರುದ್ಧ ಕ್ಷೇತ್ರದ 35 ಸಾವಿರ ಮತಗಳಿರುವ ಮಾದಿಗ ಸಮುದಾಯ ಮಗ್ಗಲು ಬದಲಾಯಿಸಿತು. ನಾಯಕರು-ಗೊಲ್ಲರು- ಕುರುಬರು-ಮುಸ್ಲಿಮರು ಕಾಂಗ್ರೆಸಿನ ಕಡೆ ಮುಖ ಮಾಡಿದರು.

2012ರ ನಾಟಕೀಯ ಬೆಳವಣಿಗೆಗಳಲ್ಲಿ ಶಾಸಕ ಚಂದ್ರಪ್ಪ ಬಿಜೆಪಿ ಬಿಟ್ಟು ಕೆಜೆಪಿಗೆ ವಲಸೆ ಹೋದ. ಆಗಲೂ ಇದೇ ಷಣ್ಮುಕಪ್ಪ ಯಡ್ಡಿಯ ಚೆಡ್ಡಿ ಬಿಡಲಿಲ್ಲ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ರಾಜೀನಾಮೆ ನೀಡಿ ಕೆಜೆಪಿ ಸೇರಿದ. ಅಲ್ಲಿಂದ ಕ್ಷೇತ್ರದ ರಾಜಕೀಯ ವಾತಾವರಣವೇ ವಿಚಿತ್ರ ತಿರುವು ಪಡೆದುಕೊಂಡಿತು. ಚಂದ್ರಪ್ಪ ಮಾಜಿಯಾಗುವುದು ವರ್ತಮಾನದ ಸತ್ಯವಾಯಿತು. ಮಠ ಬೆಂಬಲಿಸದಿದ್ದರೂ ಆಂಜನೇಯ ಶಾಸಕರಾಗುವುದು ಗ್ಯಾರಂಟಿ ಮಾ...ಯಿತು. ಹಾಗೆ ನೋಡಿದರೆ ಇಂಥದೊಂದು ವಾತಾವರಣವನ್ನು ಸೃಷ್ಟಿಮಾಡಿದ್ದು ಸಿರಿಗೆರೆ ಮಠವಾಗಲಿ ಸ್ವಯಂಘೋಷಿತ ಜಗದ್ಗುರುವಾಗಲೀ ಅಲ್ಲ, ಅದು ಮತದಾರನ ತೀರ್ಮಾನವಾಗಿತ್ತು.

ಮತದಾರ ಕಾಂಗ್ರೆಸಿಗೆ ಜೈಕಾರ ಹಾಕುತ್ತಿದ್ದಂತೆ ಮಠದ ದನಿಯೂ ಸೇರಿಕೊಂಡಿತು. ಚುನಾವಣೆ ಘೋಷಣೆಯಾದ ಮಾರನೇ ದಿನವೇ ಸಿರಿಗೆರೆ ಮಠದ ಹುಕುಮಿನಂತೆ ಷಣ್ಮುಕಪ್ಪ ಕೆಜೆಪಿ ಬಿಟ್ಟು ಕಾಂಗ್ರೆಸಿಗೆ ವಲಸೆ ಬಂದ. ಆಂಜನೇಯರ ಮೂಲಕ ಮಠವೇ ಅದ್ದೂರಿ ಆಹ್ವಾನ ಕೊಡಿಸಿ ಬರಮಾಡಿಕೊಂಡಿತು. ಆಂಜನೇಯರ ಮೇಲೆ ಮಠದ ಹಿಡಿತಕ್ಕೆ ಮುಹೂರ್ತ ಅಂದೇ ಫಿಕ್ಸ್ ಆಗಿಹೋಯಿತು.

ಸಚಿವ ಆಂಜನೇಯರ ಚುನಾವಣಾ ಖರ್ಚಿಗೆಂದು ಸ್ವಲ್ಪ ಹಣ ಸಾಲ ಕೊಟ್ಟಿದ್ದಾನೆಂದು ಹೇಳಲಾಗುತ್ತಿರುವ ಷಣ್ಮುಕಪ್ಪ ಈಗ ಇಡೀ ಚಿತ್ರದುರ್ಗ ಜಿಲ್ಲೆಯ ಆಡಳಿತದ ಮೇಲೆ ಕಂಟ್ರೋಲ್ ಇಟ್ಟುಕೊಳ್ಳಲು ಹೊರಟಿದ್ದಾನೆ. ಈತನ ಹಿಂದೆ ಸಿರಿಗೆರೆ ಮಠವೂ ಇದೆ.

ಇವರಿಂದಾಗಿ ಜಿಲ್ಲಾದ್ಯಂತ ಈಗ ಇವರಿಂದಾಗಿ ಸರಕಾರಿ ಆಯಕಟ್ಟಿನ ಅಧಿಕಾರಿಗಳು ತರಗೆಲೆಯಂತೆ ವರ್ಗವಾಗುತ್ತಿದ್ದಾರೆ. ಯೋಜನಾಧಿಕಾರಿಯಾಗಿ ಓಂಕಾರಪ್ಪ ಪರಮೇಶ್ವರಪ್ಪ, ZP-AEE ಯಾಗಿ ರೇಣುಕಾಚಾರ್ಯ, ಸಣ್ಣ ನೀರಾವರಿಗೆ ತಿಮ್ಮಣ್ಣ ಹೀಗೇ ಸಾಧು ಲಿಂಗಾಯತ ಅಧಿಕಾರಿಗಳ ದಂಡೇ ಜಿಲ್ಲೆಗೆ ಹರಿದುಬರುತ್ತಿದೆ. ಈಗ ಹೊಳಲ್ಕೆರೆ ತಹಶೀಲ್ದಾರರನ್ನೂ ವರ್ಗ ಮಾಡುವ ತರಾತುರಿಯಲ್ಲಿದ್ದಾರೆ.

ಷಣ್ಮುಕಪ್ಪ ನಿರ್ಮಾಣ ಮಾಡಿರುವ ಇದೇ ವಾತಾವರಣ ಮುಂದುವರೆದರೆ ಬರಲಿರುವ ಪಾರ್ಲಿಮೆಂಟ್ ಚುನಾವಣೆಯ ಮೇಲೆ ಪರಿಣಾಮ ಬೀರಲಿದೆ.

ಇವರಿಂದಾಗಿ ಅದು ಕಾಂಗ್ರೆಸ್‌ಗೆ ಮಾರಕ.

■ ಟಿ.ಎನ್.ಷಣ್ಮುಖ


...ರಿಷತ್ ಚುನಾವಣೆ

...ಗೆದ್ದಿದ್ದ ಮಾಜಿ ಮಂತ್ರಿ ಬಸವರಾಜ ಬೊಮ್ಮಾಯಿ ...ದಲ್ಲಿ ಹಿಡಿತ ಸಾಧಿಸಿದ್ದಾರೆ. ಬೊಮ್ಮಾಯಿ ...ರಾಜೀನಾಮೆಯಿಂದ ತೆರವಾದ ಈ ಕ್ಷೇತ್ರಕ್ಕೆ ಆಗ ...ರಾಜ ಸಜ್ಜನನನ್ನ ನಿಲ್ಲಿಸಿ ಗೆಲ್ಲಿಸಿದ್ದು ಅದೇ ...ಮ್ಮಾಯಿ. ಆದರೆ, ಈಗ ಒಂದು ಕಾಲದ ...ರಾಜಕೀಯ ವೈರಿ ಆದರೀಗ ನಾಮಕಾವಸ್ಥೆ ...ಹಿತ ಜಗದೀಶ ಶೆಟ್ಟರ್‌ರ ಸಹೋದರನನ್ನ ...ಸಲು ಬೊಮ್ಮಾಯಿ ತಿಣುಕಾಡುತ್ತಿದ್ದಾರೆ. ...ಮ್ಮಾಯಿಯ ಪ್ರಯತ್ನದಿಂದಲೇ ಕೆಜೆಪಿಯ ...ರ್ಥಿ ಶಿವರಾಜ ಸಜ್ಜನ ಕಣದಿಂದ ಹಿಂದೆ ...ಮ ಶೆಟ್ಟರ್‌ನನ್ನ ಗೆಲ್ಲಿಸುತ್ತೇನೆ ಎನ್ನುತ್ತಿದ್ದರೂ ...ಎಷ್ಟರಮಟ್ಟಿಗೆ ಸತ್ಯ ಎಂಬುದು ಆ ...ರೂಢನೇ ಬಲ್ಲ.

...ಕಾಂಗ್ರೆಸ್ಸಿನ ಅಭ್ಯರ್ಥಿ ನಾಗರಾಜ ಛಬ್ಬಿ 25 ...ದ ರಾಜಕೀಯ ಅನುಭವ ಹೊಂದಿದವರು. ...08ರ ವಿಧಾನಸಭೆ ಚುನಾವಣೆಯಲ್ಲಿ ...ಘಟಗಿಯಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ...ಸಬೇಕಿತ್ತು, ಆದರಾಗ ಅವರು ತಮ್ಮ ಸ್ನೇಹಿತ ...ಜ್ ಲಾಡ್‌ಗೋಸ್ಕರ ಬಿ ಫಾರ್ಮ್ ತ್ಯಾಗ ...ಡಿ, ಅವರ ಗೆಲುವಿನಲ್ಲಿ ಪ್ರಮುಖ ಪಾತ್ರ ...ಸಿದರು. ಮೊನ್ನೆಯ ವಿಧಾನಸಭಾ ...ನಾವಣೆಯಲ್ಲೂ ಧಾರವಾಡ ಶಹರದ ...ಂಕ್ಷಿಯಾಗಿದ್ದರು. ಕೊನೆಕ್ಷಣದಲ್ಲಿ ಟಿಕೆಟ್ ಕೈತಪ್ಪಿದರೂ ...ರು ಪಕ್ಷದ ನಿಷ್ಠೆ ಬಿಟ್ಟವರಲ್ಲ, ಸದಾ ಯುವಕರೊಂದಿಗೆ ...ಕೊಂಡು ಜನಪರ ಹೋರಾಟದಲ್ಲಿ ತೊಡಗುವ ...ಧಾರವಾಡ ಜಿಲ್ಲೆಯ ಚುನಾಯಿತ ಜನಪ್ರತಿನಿಧಿಗಳಿಗೆ ...ಪರಿಚಿತ. ಯಾವ ಹಗರಣ, ಗೊಂದಲದಲ್ಲೂ ಸಿಲುಕಿ ...ರು ಕೆಡಿಸಿಕೊಳ್ಳದ ಛಬ್ಬಿ ಬಗ್ಗೆ ಮತದಾರರಲ್ಲಿ ಉತ್ತಮ ...ಪ್ರಾಯವಿದೆ. ಅಲ್ಲದೆ, ಮೂರೂ ಜಿಲ್ಲೆಗಳ ಒಟ್ಟು 17 ...ಸರ ಪೈಕಿ, 12 ಕಾಂಗ್ರೆಸ್ ಶಾಸಕರ ಬೆಂಬಲದೊಂದಿಗೆ ...ಪ್ರತಿನಿಧಿಸಲಿರುವ ಛಬ್ಬಿಯ ಗೆಲುವು ಕೂಡ ಅಷ್ಟೇ ...ವಾಗಿದೆ.

ಸ್ವಾರ್ಥದ ಒಪ್ಪಂದ

...ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಮತ್ತೆ ...ಸೆಳೆಯಲು, ತಂದು ಚಡ್ಡಿ ತೊಡಿಸಿ ತಮ್ಮ ಬೇಳೆ ...ಬೇಯಿಸಿಕೊಳ್ಳಲು ಚಾತಕಪಕ್ಷಿಯಂತೆ ಕಾಯುತ್ತಿರುವವರ ಪಟ್ಟಿಯಲ್ಲಿ ಮೊದಲಿರುವವರೇ ಮಾಜಿ ಮಂತ್ರಿ ಬಸವರಾಜ್ ಬೊಮ್ಮಾಯಿ. ಬಿಜೆಪಿಯೊಂದಿಗೆ ಕೆಜೆಪಿ ವಿಲೀನಕ್ಕೂ ಮುನ್ನ ಪರಿಷತ್ ಚುನಾವಣೆಗಾಗಿ ಸ್ವಾರ್ಥದ ಡೀಲೊಂದನ್ನ ಬೊಮ್ಮಾಯಿ ಕುದುರಿಸಿದ್ದಾರೆ.





ಪರಿಷತ್ ಚುನಾವಣೆಗೆ ಕೆಜೆಪಿಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಶಿವರಾಜ ಸಜ್ಜನ ತಮ್ಮ ನಾಮಪತ್ರ ವಾಪಸ್ ಪಡೆಯುವಂತೆ ಯಡ್ಡಿಯಿಂದ ಆದೇಶ ಹೊರಡಿಸಿರುವುದರ ಹಿಂದೆ ಮುಂದಿನ ಲೋಕಸಭಾ ಚುನಾವಣೆಯ ಲೆಕ್ಕಾಚಾರ ಅಡಗಿದೆಯೇ ಹೊರತು ಶೆಟ್ಟರ್ ಗೆಲುವಿನದಲ್ಲ.


ಹಾವೇರಿಯ ಹಾಲಿ ಸಂಸದ ಶಿವಕುಮಾರ ಉದಾಸಿ ಬಿಜೆಪಿಯಿಂದ ಹೊರಬಂದು ಅಪ್ಪ ಮಾಜಿ ಮಂತ್ರಿ ಸಿ.ಎಂ.ಉದಾಸಿಯೊಂದಿಗೆ ಕೆಜೆಪಿಯ ತೆಂಗಿನಕಾಯಿ ಹಿಡಿದುಕೊಂಡು ಓಡಾಡಿದ್ದ. ಬರಲಿರುವ ಲೋಕಸಭಾ ಚುನಾವಣೆಯಲ್ಲಿ ಮತ್ತದೇ ತೆಂಗಿನಕಾಯಿ ಹಿಡಿದರೆ, ಠೇವಣಿ ಕೂಡ ಉಳಿಯುವುದಿಲ್ಲ ಎನ್ನುವುದು ಕಳೆದ

ವಿಧಾನಸಭಾ ಚುನಾವಣೆಯ ಫಲಿತಾಂಶದಿಂದಲೇ ಆತನ ಅರಿವಿಗೆ ಬಂತು. ಇನ್ನೊಂದು ಕಡೆ ಧಾರವಾಡದ ಸಂಸದ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಪ್ರಹ್ಲಾದ ಜೋಷಿ ಕ್ಷೇತ್ರಕ್ಕೆ ಕೆಲಸ ಮಾಡಿದ್ದಕ್ಕಿಂತ ಚೆಡ್ಡಿ ತೊಟ್ಟು ಬಾಯಿ ಬಡಿದುಕೊಂಡದ್ದೇ ಜಾಸ್ತಿ. ಕೆಜೆಪಿಯೊಂದಿಗೆ ದೋಸ್ತಿ ಕುದುರದಿದ್ದರೆ ಮುಂದಿನ ಬಾರಿ ಜೋಷಿ ಸೋಲನ್ನ ಯಾರಿಂದಲೂ ತಡೆಯಲಾಗುವುದಿಲ್ಲ. ಎಲ್ಲದಕ್ಕಿಂತ ಮುಖ್ಯವಾಗಿ ಎರಡೂ ಪಕ್ಷಗಳ ಹಲವಾರು ಮುಖಂಡರು, ಕಾರ್ಯಕರ್ತರು ಉಭಯ ಪಕ್ಷಗಳ ಕೂಡಿಕೆಯನ್ನು ಪ್ರತಿಪಾದಿಸುತ್ತಾ ಬಂದಿದ್ದಾರೆ. ಹೀಗಾಗಿ ಸ್ವಾರ್ಥಸಾಧನೆಯ ಲೆಕ್ಕಾಚಾರದ ಮೊದಲ ಫಲಿತಾಂಶವಾಗಿ ಸಜ್ಜನರ ನಾಮಪತ್ರ ವಾಪಾಸ್ ಪಡೆದಿದ್ದಾರೆ ಎನ್ನುವುದಕ್ಕೆ ಬೇರೆ ಸಾಕ್ಷಿಯೇನು ಬೇಕಾಗಿಲ್ಲ.

■ ಹುರಳಿಕುಪ್ಪಿ ವಿನಯ

ವರ್ತಮಾನದ ಮೂರು ಹೆಜ್ಜೆಗಳು

ಹೊಗೆ ಮುಸುಕಿದ ಆಕಾಶದೊಳಗೆ
ವರ್ತುಲದಿಂದಾಚೆ ಇಣುಕು ನೋಟವ ಬೀರಿ
ದೀಪದಾರಿಣಿಯಾಗಿ ಹನಿಧಾರೆ ಹರಿಸಿದ
ಸಂಭ್ರಮದಲ್ಲಿದ್ದ ಬೆಳಕೇ ಸರ್ವಋತುವಿನ ಚೆಲುವೇ?
* * *
ಮುಟ್ಟು ನಿಲ್ಲುವ ಮುನ್ನ
ಥಳಕು ಬಳಕು ತೋರಿದ ದೇಹ
ಮಬ್ಬು ಜಾರಿದ ಕಣಿವೆಯಲಿ
ಹಬ್ಬದೂಟದ ಬಯಕೆ ತೀರಿದ ಮೋಹ
* * *
ಕಂದನ ಕನವರಿಕೆ ಯಾವ
ಕಥನದ ವಿಸ್ತರಣೆಯ ಮಾದರಿ
ಒಮ್ಮೆ ಮಾತ್ರ ಸೃಷ್ಟಿಸಲು ಸಾಧ್ಯವಿರುವ
ನಿಸರ್ಗದ ಪರಿಮಳದ ಪರಿಧಿಯೇ.
* * *
ದೇವ ವೃದ್ಧರ ಬದುಕಿದು
ಕನ್ನಡಿಯೊಳಗಣ ನಂಟು
ವರ್ತಮಾನದ ಮೂರು ಹೆಜ್ಜೆಗಳಲ್ಲಿ
ಬಿಡಿಸಲಾಗದ ಕಾಲದೊಳಗಣ ಗಂಟು
* * *
ಕತ್ತಲ ನೆನಪನರಸಿ ಮತ್ತೆ ಮತ್ತೆ
ಹಾರುವ ರೆಕ್ಕೆ ಮುರಿದ ಹಕ್ಕಿಗದು ಹಕ್ಕೇ?
ಜೋಳಿಗೆ ಕಳೆದ ಜಂಗಮನ ತೆರದಿ
ದಾರಿ ಕಳೆದಿದೆ ಹುಡುಕಿ ಕೊಡಿರೆಂದು
ಕನವರಿಸಿದಂತೆ ಭ್ರಮೆಯೇ?
* * *
ಕಾವ್ಯ, ದಿಗಂತ, ಕೆಂಪುಕಣಗಿಲೆ ಇವಿಷ್ಟು
ಚಂದ್ರಮುಖಿಗೆ ಸಂಕ್ರಮಣ ಕಾಲದ ನೆನಪೇ?
ಮಳೆಗಾಲವೊಂದು ಸಂಜೆಯಲಿ ತೇಲಿ ಬರುವ
ಹುರಿಗಡಲೆಯ ಕರಿದ ವಾಸನೆ ದಾರಿಯಲಿ
ನಿಲುಕಿಗೆ ಮೀರಿ ಹಿಮಯುಗದ ನಡೆದಂತೆಯೇ?






ಡಾ.ಡಿ.ಸಿ.ರಾಜಪ್ಪ
ಬಳ್ಳಾರಿ

"ಇಲ್ಲಿರುವವರೆಗೂ ನಾನು ಬರೆಯಲೇ ಇಲ್ಲ"

■ ಎಂ.ಎಸ್.ಪ್ರಭಾಕರ್

ಕನ್ನಡದ ಪ್ರಸಿದ್ಧ ಬರಹಗಾರ 'ಕಾಮರೂಪಿ' ಅರ್ಥಾತ್ ಎಂ.ಎಸ್.ಪ್ರಭಾಕರ್ ಅವರೊಂದಿಗೆ 'ಸಂಚಯ' ಸಾಹಿತ್ಯ ಮಾಸಿಕದ ಸಂಪಾದಕ ಡಿ.ವಿ.ಪ್ರಹ್ಲಾದ್ ನಡೆಸಿದ ಸಂದರ್ಶನ ಇಲ್ಲಿದೆ.



ಡಿವಿಪಿ: ಮೊದಲನೆಯದಾಗಿ, ನಿಮ್ಮ 'ಕಾಮರೂಪಿ' ಎಂಬ ಹೆಸರಿನ ಬಗ್ಗೆಯೇ ಎಲ್ಲರಿಗೂ ಕುತೂಹಲ. ಅದರ ಬಗ್ಗೆ ಮಾತಾಡಿ.

ಎಂಎಸ್‌ಪಿ: ನಾನು ಕಾಮರೂಪಿ ಅನ್ನೋ ಹೆಸರು ಇಟ್ಟುಕೊಂಡಿದ್ದೇ ಗುವಾಹಟಿಗೆ ಹೋದ ಮೇಲೆ. ನಾನು ಕನ್ನಡ ಬರೆಯಲು ಶುರುಮಾಡಿದ್ದೂ ಕರ್ನಾಟಕ ಬಿಟ್ಟ ನಂತರ. ಕರ್ನಾಟಕ ಬಿಟ್ಟಾಗ ನನಗೆ 25 ವರ್ಷ ವಯಸ್ಸು. ಬಿಡಕ್ಕೆ ಮುಂಚೆ ಕನ್ನಡದಲ್ಲಿ ನಾನು ಏನನ್ನೂ ಬರೀತಾನೂ ಇರಲಿಲ್ಲ, ಬರೆಯೋ ಹವ್ಯಾಸವೂ ಇರಲಿಲ್ಲ, ಬರೀಬೇಕು ಅನ್ನೋ ಇಚ್ಛೆಯಾಗಲಿ, ಒತ್ತಡವಾಗಲಿ ಇರಲಿಲ್ಲ, ಕನ್ನಡದಲ್ಲಿ ಬರೀತಿನಿ ಅಂತ ಮನಸ್ಸಿನಲ್ಲಿ ಕಲ್ಪನೆಯೂ ಇರಲಿಲ್ಲ, ಬರೆಯೋದಕ್ಕೆ ಏನೂ ಇರಲೂ ಇಲ್ಲ.

ನಾನು ಪಾಠ ಮಾಡೋ ಕೆಲಸದಲ್ಲಿದ್ದೆ. ಅಸ್ಸಾಂಗೆ ಹೋದ ಮೇಲೆ ಬರೆಯಲು ಶುರು ಮಾಡಿದೆ. ಆದರೆ ಪ್ರಕಟಿಸೋದಕ್ಕೆ ಅಲ್ಲ, ನಾನೇ ಬರೆಯೋದು; ನಾನೇ ಓದ್ಕೊಳೋದು, ಒಂದಿಷ್ಟು ಫ್ರೆಂಡ್ಸ್‌ಗೆ ತೋರಿಸೋದು ಅಷ್ಟೇ. ಒಮ್ಮೆ ಇದರ ಬಗ್ಗೆ ಜಿ.ಬಿ (ಜೋಷಿ)ಗೆ ಗೊತ್ತಾಯ್ತು, ಅವರು "ನೀನು ಕತೆ ಬರಿದಿದೀಯಾ ಅಂತ ಕೇಳಿದೀನಿ. ಕತೆ ಕಳಿಸು" ಅಂತ ಕೇಳಿದರು. ಅವರಿಗೆ ನನ್ನ ಮೊದಲನೆ ಕತೆ ಕಳಿಸಿದೆ. ಆಮೇಲೆ ನಾನು ಧಾರವಾಡದಲ್ಲಿದ್ದಾಗ ಬರೆದಿದ್ದ 'ಸಾಹಿತ್ಯ ಸೌಂದರ್ಯ' ಮತ್ತು 'ಒಂದು ತೊಲ ಪುನುಗು' ಕತೆಗಳನ್ನು ಕಳಿಸಿದೆ. ಅವರು "ಏ, ಇದು ಭಾಳ ಚೆನ್ನಾಗಿದೆಯೋ. ಆದ್ರೆ ಇದು ಪ್ರಕಟ ಮಾಡಕ್ಕೆ ಕಮ್ಮಿ ಇದೆ. ಇನ್ನೊಂದು ಎರಡು ಮೂರು ಕತೆ ಬರೆದು ಕೊಡು" ಅಂತ ಹೇಳಿದರು. ನನ್ನ ಪ್ರಕಾರ 'ಉಪಪತ್ತಿಯೋಗ', 'ಒಂದು ತೊಲ ಪುನುಗು' ಮತ್ತು ಸ್ವಲ್ಪಮಟ್ಟಿಗೆ 'ಸಾಹಿತ್ಯ ಸೌಂದರ್ಯ' ಈ ಮೂರರಲ್ಲಿ ಮಾತ್ರ ಒಂದಷ್ಟು ಸತ್ವ ಇರೋದು.

ಪ್ರಶ್ನೆ: ನಿಮ್ಮ ತಲೆಮಾರಿನ ಬರಹಗಾರರಲ್ಲಿ ಸುಮಾರಷ್ಟು ಜನ? ಉದಾಹರಣೆಗೆ ನೀವು, ರಾಮಾನುಜನ್, ಎಂ.ಜಿ. ಕೃಷ್ಣಮೂರ್ತಿ, ಕುರ್ತಕೋಟಿ – ನಿಮ್ಮ ಕೆಲಸದ ನಿಮಿತ್ತವಾಗಿ ಬೇರೆ ಬೇರೆ ಊರುಗಳಲ್ಲಿ ವಾಸಿಸಬೇಕಾಗಿ ಬಂತು. ಅದು ನಿಮ್ಮ ಲೋಕದ ಅನುಭವದ ದೃಷ್ಟಿಯನ್ನು ಬದಲಾಯಿಸಿತೇ?

ಉತ್ತರ: ಖಂಡಿತವಾಗಿಯೂ. ನಾನು ಕರ್ನಾಟಕ ಬಿಟ್ಟ ಮೇಲೆನೇ ನನ್ನ ಜೀವನ ಶುರುವಾಯ್ತು ಅಂತ ಹೇಳಬಹುದು. ಈ ನಮ್ಮ ಅತ್ಯಂತ ಪ್ರಿಯ ಕರ್ನಾಟಕದಲ್ಲಿ ಇರೋವರೆಗೂ ನನಗೆ ಏನೂ ಇರಲಿಲ್ಲ, ಹೆಂಡ ಕುಡೀತಿದ್ದೆ ಅಷ್ಟೇ!

ಪ್ರಶ್ನೆ: ನೀವು ಮೇಲ್ವರ್ಗದಿಂದ ಬಂದವರಾಗಿದ್ದರಿಂದ ಕರ್ನಾಟಕದಲ್ಲಿ ಕೆಲಸದ ಅವಕಾಶಗಳು ಇರಲಿಲ್ಲವೇ?

ಉತ್ತರ: ಬೆಂಗಳೂರಲ್ಲಿ ನಾನು ಯಾವ ಕಾಲೇಜಲ್ಲಿ ಕೆಲಸ ಮಾಡಿದೆನೋ ಆ ಕಾಲೇಜಿನ ಬಗ್ಗೆ ಬಹಳ ಬೇಜಾರಾಯ್ತು, ಅದು ಪಕ್ಕಾ ಬ್ರಾಹ್ಮಣರ ಕಾಲೇಜು. ಅದರ ಬಗ್ಗೆ ಈಗಲೂ ನನ್ನ ಮನಸ್ಸಿನಲ್ಲಿ ಬೇಜಾರಿದೆ. ಇದನ್ನೆಲ್ಲ ಬಿಟ್ಟು ಓಡಿಹೋಗಬೇಕು ಅಂತ ಅನ್ನಿಸಿತು. ಧಾರವಾಡಕ್ಕೆ ಹೋದೆ. ಆರಂಭದಲ್ಲಿ ಧಾರವಾಡ ವಿಭಿನ್ನವಾಗಿ ಕಾಣಿಸಿತು. ಬೆಂಗಳೂರಿಗಿಂತ ಧಾರವಾಡ ತುಂಬಾ ಚೆನ್ನಾಗಿದೆ ಅನ್ನಿಸಿತು. ಆದರೆ ಸ್ವಲ್ಪ ದಿನಗಳ ನಂತರ ಬೆಂಗಳೂರಿನಲ್ಲಿದ್ದ ಪರಿಸ್ಥಿತಿಯೇ ಅಲ್ಲಿಯೂ ಇದ್ದದ್ದು ಗೊತ್ತಾಯಿತು. 'ಇದೇನಯ್ಯ ದರಿದ್ರ. ನನ್ನ ಮಟ್ಟಿಗೆ ಇದನ್ನು ಸಹಿಸುವುದು ಸಾಧ್ಯವೇ ಇಲ್ಲ' ಅನ್ನಿಸಿತು. ನಾನು ಹುಟ್ಟಿನಲ್ಲಿ ಬ್ರಾಹ್ಮಣ. ಏನು ಮಾಡಲಿ? ಆದರೆ ನಾನು ಯಾವ ಸಂಪ್ರದಾಯವನ್ನೂ ಪಾಲಿಸಲಿಲ್ಲ, ಎಷ್ಟೋ ಜನ ಹೇಳ್ತಾರೆ 'ನಾನು ಜನಿವಾರ ಹಾಕ್ಕೊಳ್ಳಲ್ಲ' ಅಂತ. ಇದುವರೆಗೂ ನಾನು ಮುಂಜೀನೆ ಮಾಡ್ಕೊಂಡಿಲ್ಲ.



ಎಂ.ಎಸ್.ಪ್ರಭಾಕರ್ ಅವರೊಂದಿಗೆ ಡಿ.ವಿ.ಪ್ರಹ್ಲಾದ್

ಪ್ರಶ್ನೆ: ನಿಮ್ಮ ಕಾದಂಬರಿ 'ಕುದುರೆಮೊಟ್ಟೆ' ಯಲ್ಲಿ ಬ್ರಾಹ್ಮಣ ಸಮುದಾಯ ಒಂದು ರೀತಿಯಲ್ಲಿ ಡಿಗ್ರೇಡ್ ಆಗುತ್ತಿರುವಂಥ ಸಮುದಾಯ ಎಂಬ ತರಹದಲ್ಲೇ ಬಿಂಬಿಸಿದ್ದೀರಿ ಅನ್ನಿಸುತ್ತೆ.

ಉತ್ತರ: ನನ್ನ ಕಾದಂಬರಿಯಲ್ಲಿ ನಾನು ಯಾವ ರೀತಿಯಲ್ಲೂ ಪಾತ್ರ ವಹಿಸಿಲ್ಲ, ಅದರ ಬಗ್ಗೆ ನನಗೆ ಸ್ಪಷ್ಟತೆ ಇದೆ. ಎಲ್ಲ ಪಾತ್ರಗಳೂ ನನ್ನಿಂದ ಹೊರಗೆ ಇರುವಂತಹವು. ಸಾಹಿತ್ಯ ಒಬ್ಬ ವ್ಯಕ್ತಿಯ ಮನೋಭಾವ ಅಷ್ಟೇ. ನೋಡಿ, ನನ್ನ ಲೋಕದಲ್ಲಿ ಬರೀ ಜಾತಿ ಒಂದೇ ಇಲ್ಲ.

ಪ್ರಶ್ನೆ: ಆದರೆ ನೀವು ಬ್ರಾಹ್ಮಣ ಸಮುದಾಯವನ್ನು ಟೀಕಿಸಿದ್ದೀರಿ.

ಉತ್ತರ: ನಾನು ಅದೇ ಸಮುದಾಯದವನಾದ್ದರಿಂದ ಅಷ್ಟೇ. ನಾನು ಗುವಾಹಟಿಗೆ ಹೋದಮೇಲೆ ಜಾತಿಯ ಬಗ್ಗೆ ಬರೆಯಲೇ ಇಲ್ಲ. ಅದು ಮುಗಿದ ಅಧ್ಯಾಯ. ಅಸ್ಸಾಂ ಬಗ್ಗೆ, ನಾಗಾಲ್ಯಾಂಡ್ ಬಗ್ಗೆ 25-30 ವರ್ಷ ಬರೆದಿದೀನಿ. ಆದರೆ ನಾನು ಅಲ್ಲಿದ್ದಾಗ ಜಾತಿ ಬಗ್ಗೆ ಒಂಚೂರೂ ಬರೆಯಲಿಲ್ಲ.

ಪ್ರಶ್ನೆ: ಕರ್ನಾಟಕದಿಂದ ಹೊರಗೆ ಹೋದ ಲೇಖಕರು – ಶಾಂತಿನಾಥ ದೇಸಾಯಿ ಇರಬಹುದು, ನೀವಿರಬಹುದು? ಒಂದು ರೀತಿಯಲ್ಲಿ ಹೊಸ ತರಹದ ವ್ಯಕ್ತಿಗಳನ್ನು ಕಟ್ಟಿಕೊಟ್ಟಿರಿ. ಮುಖ್ಯವಾಗಿ ನೀವುಗಳು ಸೃಷ್ಟಿ ಮಾಡಿದ 'ಡ್ಯಾಂಡಿ' ತರಹದ ನಗರದ ಮನುಷ್ಯನ ಮೂಲಕ ಜಗತ್ತಿನ ಎಲ್ಲ ಮನುಷ್ಯರ ನೋವು, ಒತ್ತಡಗಳು ಒಂದೇ ಎಂಬಂತೆ ಬರೆದಿರಿ. ಇದು ಸಾಧ್ಯವಾಗಿದ್ದು ಹೇಗೆ?

ಉತ್ತರ: ನಾನು ಹೆಚ್ಚು ಓದಿಲ್ಲ, ಆದ್ದರಿಂದ ಬೇರೆಯವರ ಬಗ್ಗೆ ನನಗೆ ಗೊತ್ತಿಲ್ಲ, ನಾನು ನನ್ನ ಬಗ್ಗೆ ಮಾತ್ರ ಹೇಳಬಲ್ಲೆ. 'ಪೊಲಿಟಿಕಲ್ ಮ್ಯಾನ್' ಅಂತ ಹೇಳ್ತಿವಲ್ಲ ಆದರಲ್ಲಿ ನನಗೆ ಹೆಚ್ಚು ಆಸಕ್ತಿ, ಸಮಾಜ ಯಾವ ರೀತಿ ಪರಿವರ್ತನೆ ಆಗುತ್ತೆ ಎಂಬುದು ಮುಖ್ಯ. 'ಕುದುರೆಮೊಟ್ಟೆ' ಕಾದಂಬರಿಯು ಒಂದು ಜಾತಿ ಕುರಿತ ಕೃತಿ ಎಂದು ಹಲವರು ಹೇಳುತ್ತಾರೆ. ಆದರೆ ನನಗೆ ಅದರಲ್ಲಿ ತೋರಿರುವ ಸಾಮಾಜಿಕ ಬದಲಾವಣೆ ಮುಖ್ಯ. ಒಂದು ಜಾತಿ ಹೇಗೆ ಬ್ರಾಹ್ಮಣೀಕರಣಗೊಳ್ಳುತ್ತಿದೆ ಎಂಬುದು ಮುಖ್ಯ.

ಪ್ರಶ್ನೆ: ಎಪ್ಪತ್ತರ ದಶಕದಲ್ಲಿ ದೇವರಾಜ್ ಅರಸು ಅವರು ಕರ್ನಾಟಕದಲ್ಲಿ ಮಾಡಿದಂತಹ ಉಳುವವನಿಗೇ ಭೂಮಿ ಎಂಬ ಯೋಜನೆಯು ನಿಮ್ಮ ಮೇಲೆ ಪ್ರಭಾವವನ್ನು ಬೀರಿತಾ?

ಉತ್ತರ: ಅದಕ್ಕಿಂತ ಹೆಚ್ಚಾಗಿ ನನ್ನ ಮೇಲೆ ಪ್ರಭಾವ ಬೀರಿದ್ದು ಕಮ್ಯೂನಿಸ್ಟ್ ಪಕ್ಷದ ಸಿದ್ಧಾಂತ.

ಪ್ರಶ್ನೆ: ನಿಮಗೆ ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಹೇಗೆ ಆಸಕ್ತಿ ಹುಟ್ಟಿತು?

ಉತ್ತರ: ಕಮ್ಯೂನಿಸ್ಟ್ ಪಕ್ಷದ ಜೊತೆ ನನಗೆ ಅಷ್ಟು ಸಂಪರ್ಕ ಇಲ್ಲ, ಆದರೆ ಅವರ ಚಿಂತನಾಧಾರೆಯ ಜೊತೆಗೆ ನನಗೆ ಬಹಳ ಸಂಪರ್ಕ ಇದೆ. ಒಂದು ಕಡೆ ಕಳ್ಳ ನನ್ನ ಮಕ್ಕಳು ಆರೆಸ್ಸೆಸ್‌ನವರು ಇದ್ದರು, ಇನ್ನೊಂದು ಕಡೆ ಕಮ್ಯೂನಿಸ್ಟರು ಇದ್ದರು. ಕಾಂಗ್ರೆಸ್ ಕೂಡ ಇತ್ತು, ಆಗಿನ ಕಾಲದಲ್ಲಿ ಜಾತಿ ವ್ಯವಸ್ಥೆ ವಿರುದ್ಧ ತಳ ಮಟ್ಟದಲ್ಲಿ ಕೆಲಸ ಮಾಡಿದವರು ಕಮ್ಯೂನಿಸ್ಟ್ ಪಕ್ಷದವರು.

ಪ್ರಶ್ನೆ: ಕಮ್ಯೂನಿಸ್ಟ್ ಸಿದ್ಧಾಂತದ ಬಗ್ಗೆ ಓದಿಕೊಂಡಿದ್ದು ನಿಮ್ಮನ್ನು ರೂಪಿಸಿತು ಎನ್ನಬಹುದೇ?

ಉತ್ತರ: ಓದಿಕೊಂಡಿದ್ದಕ್ಕಿಂತ ನನ್ನ ಜೀವನಾನುಭವ ನನ್ನನ್ನು ರೂಪಿಸಿತು ಎನ್ನಬಹುದು. ಇವನ್ನೆಲ್ಲ ಕ್ಲಿನಿಕಲ್ ಆಗಿ ವಿವರಿಸಲಾಗುವುದಿಲ್ಲ, ಓರ್ವ ಮನುಷ್ಯನ ವ್ಯಕ್ತಿತ್ವವನ್ನು ಹಲವಾರು ಅಂಶಗಳು ರೂಪಿಸುತ್ತವೆ. ಸಮಾಜದಲ್ಲಿ ಉತ್ಪಾದನೆ ಮತ್ತು ವಿತರಣೆ ಹೇಗೆ ಕೆಲಸ ಮಾಡುತ್ತದೆ ಎಂಬುದು ಮುಖ್ಯ. ಯಾವನು ಒಂದು ವಸ್ತುವನ್ನು ಉತ್ಪಾದಿಸುತ್ತಾನೆ, ಆ ವಸ್ತುವನ್ನು ಯಾವನು ಅನುಭವಿಸುತ್ತಾನೆ, ಇವೆರಡರ ನಡುವಿನ ದ್ವಂದ್ವ ಒಂದು ಸಮಾಜವನ್ನು ರೂಪಿಸುತ್ತದೆ. ಇಂತಹ ವಿಷಯಗಳು ನನ್ನನ್ನು ರೂಪಿಸಿದವು.

ಪ್ರಶ್ನೆ: ನೀವು ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದೀರಾ?

ಉತ್ತರ: ಈಗ ಅದರ ಅಗತ್ಯ ಇಲ್ಲ. ಆದರೆ ನಾನು ಯಾವ ಕಮ್ಯೂನಿಸ್ಟ್ ಪಕ್ಷದ ಸದಸ್ಯನಾಗಿರಲಿಲ್ಲ.

ಪ್ರಶ್ನೆ: ನೀವು ಕನ್ನಡ, ತಮಿಳು, ತೆಲುಗು, ಇಂಗ್ಲಿಷ್ ಭಾಷೆಗಳನ್ನು ಕಲಿಸುತ್ತಿದ್ದಿರಿ. ನೀವು ಕನ್ನಡದಲ್ಲಿ ಬರೀತಿರಿ. ನಿಮ್ಮ ಬರವಣಿಗೆಯಲ್ಲಿ ಬೇರೆ ಭಾಷೆಗಳು ಇಣುಕುತ್ತವೆ. ಉದಾಹರಣೆಗೆ ನೀವು ಕೆಲವು ಕಡೆ 'ಮೂಳೆ', 'ಇವನಿಗೆ ಮೂಳೆ ಇಲ್ಲ' ಅಂತ ಬಳಸಿದ್ದೀರಿ. ಕನ್ನಡದಲ್ಲಿ ಸಾಮಾನ್ಯವಾಗಿ 'ಬುದ್ಧಿ ಇಲ್ಲ' ಅಂತೀವಿ. ನಿಮ್ಮ ಪದ ಪ್ರಯೋಗ ತಮಿಳಿನ ಮೂಲದ್ದು ಅಲ್ಲವೆ?

ಉತ್ತರ: ಅದರ ಅರ್ಥ ಮೊಣಕೈ.

ಪ್ರಶ್ನೆ: ಹಾಗೆಯೇ 'ಭತ್ತಾಳು' ಅಂತ ಬಳಸಿದೀರಿ. ಅದು ತೆಲುಗಿನ ಮೂಲ. ಇನ್ನೂ ಅನೇಕ ಹಿಂದಿ ಮತ್ತು ಅಸ್ಸಾಮಿ ಪದಗಳನ್ನು ಬಳಸಿದ್ದೀರಿ. ಅಂದರೆ ನಿಮ್ಮ ಭಾಷೆ ಬೇರೆ ತರಹದ ಚೌಕಟ್ಟು ಪಡೆದುಕೊಂಡಿದೆ ಎನ್ನಬಹುದಾ?

ಉತ್ತರ: ಬರವಣಿಗೆ ಎನ್ನುವುದು ನಿಮ್ಮ ಹೃದಯದಲ್ಲಿ ಅಡಗಿರುವ ವಿಕ್ಷೋಭದ ಅಭಿವ್ಯಕ್ತಿ ಅನ್ನೋದೆಲ್ಲ ಬುಲ್ ಶಿಟ್. ಅಂತಹದರಲ್ಲಿ ನನಗೆ ನಂಬಿಕೆ ಇಲ್ಲ, ಬರವಣಿಗೆ ಎಂಬುದು ಒಬ್ಬ ವ್ಯಕ್ತಿ ಭಾಷೆಯೊಂದಿಗೆ, ಆದರ ಪದಗಳೊಂದಿಗೆ ನಡೆಸುವ ಸೆಣಸಾಟ. ಭಾಷೆ ಯಾವಾಗಲೂ ನಮ್ಮನ್ನ ಕಾಡ್ತಾ ಇರುತ್ತದೆ. ಕನಸಿನಲ್ಲಿ ಕಾಡುತ್ತಿರುತ್ತದೆ, ಬರೀತಿರುವಾಗ ಕಾಡುತ್ತದೆ, ಓದುತ್ತಿರುವಾಗಲೂ ಕಾಡುತ್ತದೆ. ಬದುಕಿರುವವರೆಗೂ ಭಾಷೆಯ ಕಾಟದಿಂದ ನಮಗೆ ಮುಕ್ತಿಯೇ ಇರಲ್ಲ, ಆದ್ದರಿಂದ ನೀವು ಸದಾ ಅದರೊಂದಿಗೆ ಸೆಣೆಸಬೇಕು. ಪದ, ವಾಕ್ಯ ಇವುಗಳ ಒಳಸಂಬಂಧ ಅಷ್ಟು ಸಹಜವಾಗಿ ಬರೋದಿಲ್ಲ, ಎಷ್ಟರಮಟ್ಟಿಗೆ ಹೇಳಿಕೊಂಡರು ಎಷ್ಟು ಪುನೀತರಾದರೂ ಬರೆಯಕ್ಕೆ ಕೂತುಕೊಂಡಾಗ ಇದ್ಯಾಕೆ ನಾನು ಈ ಶಬ್ದ ಉಪಯೋಗಿಸ್ತಾ ಇದೀನಿ ಎಂದು ಯೋಚನೆ ಆಗುತ್ತೆ, ಪದಗಳ ಬಗ್ಗೆ, ಭಾಷೆ ಬಗ್ಗೆ ನನಗೆ ಮೊದಲಿಂದಲೂ ಆಸಕ್ತಿ ಇದೆ. ಒಂದು ಶಬ್ದ ಹೇಗೆ ಹುಟ್ಟಿಕೊಂಡಿತು, ಅದರ ಮೂಲ ಎಲ್ಲಿದೆ, ಅದರ ಅರ್ಥ

ಸುದ್ದಿಗನ್ನ

ಸಾಹಿತಿ-ಕಲಾವಿದ-ಚಿಂತಕರ

ಸಂದರ್ಶನ

ಯಾವ ರೀತಿ ಬದಲಾಗಿದೆ, ಒಂದು ಪದದ ಅ
ಯಾವ ರೀತಿ ಪರಿವರ್ತನೆಗೊಂಡಿದೆ, 18ನೇ ಶತಮಾನ
ಅದನ್ನು ಯಾವ ರೀತಿ ಉಪಯೋಗಿಸ್ತಾ ಇದ್ದರು,
ಯಾವ ರೀತಿ ಉಪಯೋಗಿಸ್ತಾರೆ ಎಂದೆಲ್ಲ ನಾ
ಡಿಕ್ಷನರಿಯಲ್ಲಿ ನೋಡುತ್ತಿರುತ್ತೇನೆ. ನನ್ನ ಮಟ್ಟಿಗೆ ಬರವ
ಒಂದು ರೀತಿಯಲ್ಲಿ ಭಾಷೆಯೊಂದಿಗಿನ ಸೆಣಸಾಟ.

ಪ್ರಶ್ನೆ: ನಿಮ್ಮ ಇಂಗ್ಲಿಷ್ ಬರವಣಿಗೆ ಬಗ್ಗೆ ಒಂಚು
ಹೇಳಿ.

ಉತ್ತರ: ಇಂಗ್ಲಿಷ್‌ನಲ್ಲಿ ದಂಡಿಯಾಗಿ ಜರ್ನಲ
ಬರ್ದೀದಿನಿ.

ಪ್ರಶ್ನೆ: ನೆಲ್ಸನ್ ಮಂಡೇಲಾ ಅವರನ್ನು ಸಂದ
ಮಾಡಿರುವ ಪ್ರಥಮ ಭಾರತೀಯ ನೀವು.

ಉತ್ತರ: ಆಗ ನಾನು ದಕ್ಷಿಣ ಆಫ್ರಿಕಾಗೆ ಹೊಸ
ಹೋಗಿದ್ದೆ, ಆಗ ಅಲ್ಲಿದ್ದ ಏಕೈಕ ಭಾರತೀಯ ಪತ್ರ
ನಾನಾಗಿದ್ದರಿಂದ ನನಗೆ ಅವರನ್ನು ಸಂದರ್ಶಿಸಲು ಅವ
ಸಿಕ್ಕಿತು. ಅದಕ್ಕಿಂತ ಮುಖ್ಯವಾಗಿ ನಾನು ಇಲ್ಲಿದ್ದಾ
ಹಲವು ಜನ ವಿರೋಧಿ ಕಾನೂನುಗಳ ಬಗ್ಗೆ ಅ
ಮೂಡಿತ್ತು. ಅದರಲ್ಲೂ, ದಸ್ತಗಿರಿ ಮಾಡುವು
ಮುನ್ನೆಚ್ಚರಿಕೆಯ ಬಂಧನ (Preventive Detenti
ಮಾಡುವುದು... ಇಂತಹವುಗಳ ಬಗ್ಗೆ ನನಗೆ ಹೇಳಿಕೊಟ್ಟ
ಎ.ಕೆ.ಗೋಪಾಲನ್. ಅವರು 1957ರಲ್ಲಿ ಕೋಲಾ
ಬಂದಿದ್ದರು. ಆಗ ಪಾರ್ಲಿಮೆಂಟ್‌ನಲ್ಲಿ ಮುನ್ನೆಚ್ಚರಿಕೆ
ಬಂಧನದ ಸುತ್ತ ದೊಡ್ಡ ಚರ್ಚೆ ನಡೆದಿತ್ತು. ಅಲ್ಲಿಯ
ಪೊಲೀಸರು ಇರುವುದು ನಮ್ಮ ರಕ್ಷಣೆಗೆ ಎಂದು
ಭಾವಿಸಿದ್ದರು. ಅವರು ಕಳ್ಳನನ್ನು ಹಿಡಿದರೆ ಒಳ್ಳೇದಾ
ಎಂದು ಜನ ಅನ್ನುತ್ತಿದ್ದರು. ಆದರೆ ಅವನು ಯ
ಕಳ್ಳತನ ಮಾಡಿದ? ಅವನೇ ನಿಜವಾದ ಕಳ್ಳನಾ? ನೂರ
ಕಡೆ ಕಳ್ಳತನವಾಗುತ್ತಿದ್ದಾಗ ಇವನನ್ನೇ ಯಾಕೆ ಹಿಡಿ
ಎಂದು ಜನ ಪ್ರಶ್ನಿಸುತ್ತಿರಲಿಲ್ಲ, ದೇಶಕ್ಕೆ ಸ್ವತಂತ್ರ ಬಂದಿ
ಬ್ರಿಟಿಷರು ಜನರ ಆಶೋತ್ತರಗಳನ್ನು ದಮನ ಮಾ
ರೂಪಿಸಿದ್ದ ಕಾನೂನುಗಳನ್ನೇ ನಾವೂ ಅಳವಡಿಸಿಕೊಂ
ಅಪ್ಪಟ ಪ್ರಜಾತಂತ್ರವಾದಿಯಾಗಿದ್ದ ಜವಾಹರ್ ಲ
ನೆಹರೂ ಕೂಡ ಇದಕ್ಕೆ ಸಮ್ಮತಿಸಿದ್ದರು. ಜನರು ಸರ
ವಿರುದ್ಧ ದಂಗೆ ಮಾಡಬಹುದು, ದೇಶದ ವಿರುದ್ಧ ಪಿ
ಮಾಡಬಹುದು ಎಂಬ ಅನುಮಾನವಿದ್ದರೆ ಸಾಕು ಜನ
ಜೈಲಿಗೆ ಹಾಕುವ ಕಾನೂನು ಇತ್ತು. 1950ರಲ್ಲಿ ಕಮ್ಯೂ
ಪಕ್ಷ ನಿಷೇಧಕ್ಕೆ ಒಳಗಾದಾಗ ಈ ಕಾನೂನುಗಳನ್ನು ಜಾ
ತರಲಾಗಿತ್ತು. ಆಗ ಗೋಪಾಲನ್ ಅವರು ಇ
ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಆಗಿನಿಂದ ಜನ ವಿರೋ
ಕಾನೂನುಗಳ ಬಗ್ಗೆ ನನಗೆ ಆಸಕ್ತಿ ಇತ್ತು, ಇದು ನ
ದಕ್ಷಿಣ ಆಫ್ರಿಕಾದಲ್ಲಿ ಪತ್ರಕರ್ತನಾಗಿ ಕೆಲಸ ಮಾ
ನೆರವಾಯಿತು.

ಪ್ರಶ್ನೆ: ತುರ್ತುಪರಿಸ್ಥಿತಿ ಕಾಲದಲ್ಲಿ ನೀವೇನು ಮಾಡಿ

ಉತ್ತರ: ನಾನು ಈ ದೇಶ ಬಿಟ್ಟು ಹೋದೆ. ನ
ತಿಂಗಳು ನಾನು ಇಲ್ಲಿ ಇರಲೇ ಇಲ್ಲ, ಇದರ ಬಗ್ಗೆ
ಪುಸ್ತಕದಲ್ಲಿ ಸ್ವಲ್ಪ ಬರೆದಿದ್ದೀನಿ.

ಪ್ರಶ್ನೆ: ನೀವು ಹೆಚ್ಚಿನ ಕಾಲವನ್ನು ರಾಜ್ಯದಿಂದ ಹೊ
ಕಳೆದಿರಿ. ಆದರೆ ನಿಮಗೆ ಕರ್ನಾಟಕಕ್ಕೆ ಬರಬೇಕು ಅನ್ನಿ
ಯಾಕೆ?

ಉತ್ತರ: ನನಗೆ ಕರ್ನಾಟಕಕ್ಕೆ ಬರಬೇಕು ಅನ್ನಿಸಿರ
ಆದರೆ ನನ್ನ ಅಣ್ಣನ ಮಗ ತೀರಿಕೊಂಡುಬಿಟ್ಟ, ಅ
ನಾನು ಇಲ್ಲಿಗೆ ಬಂದೆ ಅಷ್ಟೇ. ಇಲ್ಲಾಂದ್ರೆ ನಾನು
ಬರ್ತಾನೆ ಇರಲಿಲ್ಲ, ಬರೋ ಐಡಿಯಾನೇ ನನಗೆ ಇರ


ಪ್ರಶ್ನೆ: ನಿಮ್ಮ ಬ್ಲಾಗ್ ಬರವಣಿಗೆಯ ಬಗ್ಗೆ
ಹೇಳಿ.

ಉತ್ತರ: ಬ್ಲಾಗ್‌ಅಂತ ಇದೆ ಅನ್ನೋದೆ
ಇತ್ತೀಚಿನವರೆಗೂ ಗೊತ್ತಿರಲಿಲ್ಲ, ಗೊತ್ತಾದ ಮೇಲೆ
ಸಿಕ್ಕಿತು, ಬರೆದೆ ಅಷ್ಟೇ.. ಬ್ಲಾಗ್‌ನ ವಿಶೇಷತೆ ಏನ
ಬರೆದು ಕೂಡಲೇ ಅದು ಎಲ್ಲರಿಗೂ ಲಭ್ಯವಾಗುತ್ತ

ಪ್ರಶ್ನೆ: ನೀವು ಅಧ್ಯಾಪಕರಾಗಿಯೂ, ಪತ್ರಕರ್ತರಾಗಿ
ಕೆಲಸ ಮಾಡಿದ್ದೀರಿ. ಇವೆರಡರಲ್ಲಿ ನಿಮಗೆ ಇಷ್ಟ
ವೃತ್ತಿ ಯಾವುದು?

ಉತ್ತರ: ಇದು ಮಹಾಭಾರತದಲ್ಲಿ ಬರೋ ಭಂಗಾ
ಕತೆಯ ಹಾಗೆ. ಎರಡೂ ಚೆನ್ನಾಗಿತ್ತು.

ಸಾಮಾಜಿಕ ನ್ಯಾಯದ ಮುಖ್ಯಮಂತ್ರಿ’ ಜೈಲಿನ ಪರಿವರ್ತನೆ ತರಬಲ್ಲರೇ?



(13.08.2013) ಸಿದ್ದರಾಮಯ್ಯನವರು ಹುಟ್ಟಿದ ...ಹುಟ್ಟು ಹಬ್ಬ ಆಚರಿಸಿಕೊಳ್ಳುವುದು ತಪಾಗಿಷ್ಟವಿಲ್ಲ' ...ಹೇಳುವುದರ ಮುಖಾಂತರ ತಮ್ಮ 'ಭಿನ್ನತೆ'ಯನ್ನು ...ದ್ದಾರೆ. ಅದೇ ದಿನ ಪತ್ರಿಕೆಗಳಲ್ಲಿ ಜೈಲು ಕೈದಿಗಳಿಗೆ ...ಸಿದ ಮೂರು ಸುದ್ದಿಗಳು ಪ್ರಕಟವಾಗಿದ್ದವು. ...ಸುದ್ದಿ ಪ್ಯಾಲೆಸ್ಟೈನ್ - ಇಸ್ರೇಲ್‌ದು. ಪ್ಯಾಲೆಸ್ಟೈನ್‌ನಲ್ಲಿ ನಡೆಸುತ್ತಿರುವ ಹಮಾಸ್‌ನ ಕಾರ್ಯಕರ್ತರನ್ನು ಸರ್ಕಾರ ಬಂಧಿಗಳನ್ನಾಗಿಟ್ಟುಕೊಂಡಿದೆ. ಒಂದು ...ಹಮಾಸ್ ಶಾಂತಿ ಮಾತುಕತೆಗೆ ಮುಂದಾದರೆ, ...ಂತವಾಗಿ' ಅವರನ್ನು ಬಿಡುಗಡೆ ಮಾಡುವುದಾಗಿ ... ಮೈಸೂರು ಜಿ.ಪಂ ಮಾಜಿ ಅಧ್ಯಕ್ಷ ಮರಿಗೌಡರು ...ಮ ಜೈಲಿನಲ್ಲಿ ಕೆಲವು ನೂರು ಅಥವಾ ಸಾವಿರ ... ದಂಡ ಕಟ್ಟಲಿಕ್ಕಾಗದೇ ವರ್ಷಾನುಗಟ್ಟಲೆ ...ಬೇಕಾಗಿ ಬಂದಿದ್ದವರ ಪರವಾಗಿ ಹಣ ಕಟ್ಟಿದ್ದಾರೆ. ...ಎರಡನೇ ಸುದ್ದಿ. ಮರಿಗೌಡರು ದುಡ್ಡು ಕಟ್ಟಿದ್ದು ...ರಾಮಯ್ಯನವರ ಮೇಲಿನ ಅಭಿಮಾನಕ್ಕಾಗಿ, ಅವರ ...ಹಬ್ಬದ ದಿನ ಕೆಲವರಿಗೆ ಹೊಸ ಜೀವನ ಸಿಗಲಿ ... ಮೂರನೆಯ ಸುದ್ದಿ ಕರ್ನಾಟಕದ ಎಲ್ಲಾ ...ಗಳಲ್ಲಿನ ಜೀವಾವಧಿ ಶಿಕ್ಷೆಗೊಳಗಾದ ಕೈದಿಗಳ ...ಗ 'ಅವಧಿ ಪೂರ್ವ ಬಿಡುಗಡೆ'ಗೆ ಕೋರಿ ...ವ ಮನವಿಯದ್ದು.

...ಲ್ ಮುಂದಿರಿಸಿರುವ ಪ್ರಸ್ತಾಪವು ಸಂಪೂರ್ಣವಾಗಿ ...ಳುವವರ ವ್ಯೂಹ ಮತ್ತು ತಂತ್ರಗಳ ಭಾಗವಾಗಿ ...ವ ಆಟದ ಒಂದು ತುಣುಕು. ಮರಿಗೌಡರು ...ಟ್ಟು ಕೈದಿಗಳನ್ನು ಬಿಡಿಸಿದ್ದು ಒಂದು ವಿಪರ್ಯಾಸದ ... ಹುಟ್ಟುಹಬ್ಬ ಆಚರಿಸಿಕೊಳ್ಳಲು ಇಷ್ಟಪಡದ ...ನ ಹುಟ್ಟಿದ ದಿನ ಅವರು ಕೆಲವರಿಗೆ ಮುಕ್ತಿ ...ದ್ದಾರೆ. ಆದರೆ ಖತರ್ನಾಕ್ ವ್ಯಕ್ತಿಗಳೆಂದು ನಾಗರಿಕ ...ದ ನ್ಯಾಯಾಲಯವು ತೀರ್ಮಾನಿಸಿರುವ ಕೈದಿಗಳ ...ಬಳಿ ಕೆಲವು ನೂರುಗಳ ಹಣ ಇರಲಿಲ್ಲವೆಂಬುದನ್ನು ಆ ... ಎತ್ತಿ ತೋರಿದೆ. ಅದೇನೇ ಇರಲಿ, ಕಟೌಟ್ ...ವ ಬದಲು ಈ ಕೆಲಸ ಮಾಡಿದ್ದಕ್ಕಾಗಿ ಅವರಿಗೆ ...ದಿಸಬೇಕು.

...ದೇರೀತಿ ಅವಧಿಪೂರ್ವ ಬಿಡುಗಡೆ ಕೇಳುತ್ತಿರುವ ...ದ್ದೂ ಸಹ ಒಂದು ಮಾನವೀಯ ದುರಂತದ ... ಹಿಂದಿನ ಬಿಜೆಪಿ ಸರ್ಕಾರ ಮತ್ತು ರಾಜ್ಯಪಾಲ ...ಜ್‌ರ ನಡುವೆ ನಡೆದ ಜುಗಲ್‌ಬಂದಿಯ ...ಬಂದ ಅದು ಒಂದು ರಾಜಕೀಯ ದುರಂತ ...ವಾಗಿಯೂ ಮಾರ್ಪಟ್ಟಿದೆ. 2011ರಲ್ಲಿ ಸರ್ಕಾರೀ ...ಮುಚ್ಚಬಾರದೆಂದು ಆಗ್ರಹಿಸಿ ಸಿಎಂ ಸದಾನಂದ ... ಕಾರ್ಯಕ್ರಮದಲ್ಲಿ ಒಳಗೆ ನುಗ್ಗಿ ಪ್ರತಿಭಟನೆ ಮಾಡಿ ... ಹೋಗದಿದ್ದರೆ, ನನಗೂ ಅದರ ಪೂರ್ಣ ...ಗುವುದು ಸಾಧ್ಯವಿರಲಿಲ್ಲ. ಆ ಮೊಕದ್ದಮೆಯಲ್ಲಿ ... ಎರಡು ದಿನ ಪರಪ್ಪನ ಅಗ್ರಹಾರ ಜೈಲಿಗೆ ...ಬಂಧದ 19 ಜನ ಸಂಗಾತಿಗಳಿಗೆ ನಾಗರಿಕ ಲೋಕದ ... ಇನ್ನೊಂದು ಜಗತ್ತಿನ ಪರಿಚಯವಾಯಿತು.

...ಲು ಯಥಾವತ್ ಈ ದೇಶ ಇದ್ದ ಹಾಗೇ ಇದೆ. ... ಒಂದು ರೀತಿ ಹೇಳುವುದಾದ್ದರೆ ಜೈಲು ಈ ...ವನ್ನು ಮತ್ತಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ... ಕನ್ನಡಿಯಾಗಿದೆ. ಒಂದೇ ಒಂದು ಸಂಗತಿಯ ...ಸಿತರ ಅದನ್ನು ಹೀಗೆ ವಿವರಿಸಬಹುದು. ...ಣಾಧೀನ ಕೈದಿಗಳಲ್ಲಿ ನೀವು ಶ್ರೀಮಂತರು, ...ರಣಿಗಳು, ಅಧಿಕಾರಿಗಳು, ಮೇಲ್ಜಾತಿಯವರು, ದೊಡ್ಡ ...ಗಳು, ಡಾನ್‌ಗಳು ಸೇರಿದಂತೆ ಎಲ್ಲರನ್ನೂ ...ಬಹುದು. ಆದರೆ ಶಿಕ್ಷೆಯಾದ ಕೈದಿಗಳಲ್ಲಿ ಶೇ.98ರಷ್ಟು ...ರು, ಕೆಳ ಮಧ್ಯಮವರ್ಗದವರು, ಹಿಂದುಳಿದ, ದಲಿತ ... ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರು, ...ಗ್ಗದು, ಗ್ರಾಮಾಂತರ ಪ್ರದೇಶಕ್ಕೆ ಸೇರಿದವರೇ ಇದ್ದಾರೆ. ...ದೇಶದ ಯಾವುದೇ ಜೈಲಿಗೆ ಹೋಗಿ ನೋಡಿದರೂ ... ರೀತಿ ಇದೆ. ಇದರರ್ಥವೇನು? ಕಾನೂನಿನಪ್ರಕಾರ ... ಮಾಡುವವರಲ್ಲಿ ಶೇ.98ರಷ್ಟು ಜನ ಶೋಷಿತ ...ದಾಯಗಳಿಗೆ ಸೇರಿದವರೆಂದೇ? ಖಂಡಿತಾ ಅಲ್ಲ. ... ದಾಖಲಾಗದಂತೆ ನೋಡಿಕೊಳ್ಳುವುದು ಉಳ್ಳವರಿಗೆ ... ಕೇಸು ದಾಖಲಾದರೂ ಅತ್ಯುತ್ತಮ ವಕೀಲರನ್ನು ...ಕೊಳ್ಳುವುದು ಮತ್ತು ಸಾಕ್ಷಿಗಳನ್ನು ಹೆದರಿಸುವುದು ... ಅವರಿಗೆ ಅನುಕೂಲವಾಗುವುದು ಯಾರಿಗೆ ಸಾಧ್ಯವೋ ...ಗೆ ಶಿಕ್ಷೆಯಾಗದಂತೆ ನಮ್ಮ ನ್ಯಾಯ ವ್ಯವಸ್ಥೆ ಇದೆ.

...ಗಾಗಿ ನಮ್ಮ ಜೈಲುಗಳು ಈ ದೇಶದಂತೆ ಮಾತ್ರ ... ಈ ದೇಶದ ಸಾಮಾಜಿಕ, ರಾಜಕೀಯ ಮತ್ತು ... ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿವೆ. ಆದ್ದರಿಂದ ... ಸುಧಾರಣೆ ಬಗ್ಗೆ ಮಾತಾಡುವ ಯಾವುದೇ ... ಸಂಘಟನೆ ಇದರ ಕುರಿತು ಗಂಭೀರವಾಗಿ ... ಆಲೋಚಿಸುವ ಅಗತ್ಯವಿದೆ. ಒಂದು ರೀತಿಯಲ್ಲಿ, ... ಈ ... ಸುಧಾರಣೆಯ...

ಜೊತೆಗೆ ಈ ವಿದ್ಯಮಾನದ ಬದಲಾವಣೆಯೂ ಹೊಂದಿಕೊಂಡಿದೆ.

ಸದ್ಯಕ್ಕೆ ಇದನ್ನು ಪಕ್ಕಕ್ಕಿಟ್ಟು, ಹಾಲಿ ವ್ಯವಸ್ಥೆಯ ಒಳಗೇ ಆಗಬಹುದಾದ 'ಸುಧಾರಣೆ'ಗಳ ಕಡೆಗಷ್ಟೇ ಗಮನ ಕೊಡೋಣ. ಒಂದು, ಜೈಲನ್ನು ಒಂದು ಸುಧಾರಣಾ/ಪರಿವರ್ತನಾ ಕೇಂದ್ರವನ್ನಾಗಿ ಮಾಡಲು ಯಾವೆಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದು. ಎರಡನೆಯದು, ಹಾಲಿ ಕರ್ನಾಟಕದ ಜೈಲುಗಳಿಂದ 'ಅವಧಿ ಪೂರ್ವ' ಬಿಡುಗಡೆಗೆ ಅರ್ಹರಾದ ಕೈದಿಗಳ ಬಿಡುಗಡೆಗೆ ಸಂಬಂಧಿಸಿದ್ದು. ಮೊದಲನೆಯದ್ದನ್ನು ಕೊನೆಗೆ ನೋಡೋಣ. ಕಳೆದ ಆರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಎರಡನೆಯ ಸಂಗತಿಗೆ ಈಗ ಮಹತ್ವ ಬಂದಿದೆ. ಈ ಸ್ವಾತಂತ್ರ್ಯ ದಿನದಂದು ತಮ್ಮ ಬದುಕಿಗೆ ಒಂದು ಹೊಸ



ತಿರುವು ಬರುತ್ತದೆಂದು ಕಾದಿರುವ ನೂರಾರು ಕೈದಿಗಳಿಗೆ ನಿರಾಶೆ ಕಾದಿದೆ. ಸಿದ್ದರಾಮಯ್ಯನವರ ಸರ್ಕಾರ ಸಿಕ್ಕಿ ಹಾಕಿಕೊಂಡಿರುವ ನಿತ್ಯದ ಗೋಜಲುಗಳಲ್ಲಿ ಜೈಲುಗಳಲ್ಲಿ ಸಿಕ್ಕಿಹಾಕಿಕೊಂಡಿರುವ ನೂರಾರು ಜನರ ಕಡೆಗೆ ಗಮನ ಹರಿಸದೇ ಇರುವುದರಿಂದ ಆಗಸ್ಟ್ 15ರ ಬಿಡುಗಡೆಯ ಭಾಗ್ಯ ಅವರುಗಳಿಗೆ ಸಿಕ್ಕಿಲ್ಲ.

ಆಗಸ್ಟ್ 15, ನವೆಂಬರ್ 1 ಅಥವಾ ಜನವರಿ 26ರಂತಹ ದಿನಗಳಲ್ಲಿ 'ಸನ್ನಡತೆ' ತೋರಿದ ಕೈದಿಗಳಿಗೆ ಅವರ ಶಿಕ್ಷೆಯ ಅವಧಿಯನ್ನು ಕಡಿಮೆ ಮಾಡಿ ಬಿಡುಗಡೆ ಮಾಡುವುದು ಪದ್ಧತಿ ಹಾಗೂ ನಿಯಮ. ಏಕೆಂದರೆ, ಮಾಡಿದ ತಪ್ಪಿಗೆ ಶಿಕ್ಷೆ ಮಾತ್ರ ನೀಡಬೇಕೆನ್ನುವುದು ಅನಾಗರಿಕ ಸಮಾಜದ ನೀತಿ. ಶಿಕ್ಷೆ ನೀಡುವುದು ಒಂದು ನಿಯಮವಿರಲಿ ಎಂಬುದಕ್ಕಷ್ಟೇ ಹೊರತು, ಸುಧಾರಣೆ ಮಾಡುವುದು ನಾಗರಿಕ ಸಮಾಜದ ನೀತಿ. ಹಾಗಾಗಿ ನಾಗರಿಕ ಸಮಾಜದ ಎಲ್ಲಾ ಜೈಲುಗಳೂ ಸುಧಾರಣಾ ಕೇಂದ್ರಗಳಾಗಿರಬೇಕು ಎಂಬುದು ಎಲ್ಲೆಡೆ ಚಾಲ್ತಿಯಲ್ಲಿದೆ. ಎಷ್ಟೇ ಭಯಾನಕ ವಿದ್ಯಮಾನಗಳಿಗೆ ಸಾಕ್ಷಿಯಾಗಿದ್ದರೂ, ನಮ್ಮೆಲ್ಲಾ ಜೈಲುಗಳಲ್ಲಿ ನಾಮಮಾತ್ರಕ್ಕಾದರೂ ಸುಧಾರಣಾ ಕ್ರಮಗಳು ಜಾರಿಯಲ್ಲಿವೆ. ಇಂತಹ ಕ್ರಮಗಳು ಅಧಿಕೃತವಾಗಿ ಜಾರಿಯಲ್ಲಿರುವುದಕ್ಕಿಂತಲೂ ಹೆಚ್ಚಾಗಿ 'ಆಕಸ್ಮಾತಾಗಿ' ಜೈಲು ಸೇರಿದ ಪ್ರಜ್ಞಾವಂತ ಹಾಗೂ ಮಾನವೀಯ ವ್ಯಕ್ತಿಗಳಿಂದ ನಿಜವಾದ ಅರ್ಥದಲ್ಲಿ ಜಾರಿಗೊಳ್ಳುತ್ತಿವೆ. ಪರಪ್ಪನ ಅಗ್ರಹಾರದ ಜೈಲಿನ ಲೈಬ್ರರಿಯಲ್ಲಿ ನಮಗೆ ಕಂಡ ಬಾಗೇಪಲ್ಲಿಯ ನರಸಿಂಹರೆಡ್ಡಿ, ಅದರ ಪಕ್ಕದಲ್ಲೇ ಎಳೆಯ ಕೈದಿಗಳ ಬ್ಯಾರಕ್‌ಗಳನ್ನು ನಡೆಸುತ್ತಿದ್ದ ಸುಬ್ರಮಣಿ ಹಾಗೂ ಅವರ ಸಂಗಾತಿಗಳು ಜೈಲಿನೊಳಗೇ ಬದುಕಲು ಕಂಡುಕೊಂಡ ವಿಧಾನ ಅನನ್ಯವಾದದ್ದು. ನಾವು ಜೈಲಿಗೆ ಹೋಗುವುದಕ್ಕೆ ಸ್ವಲ್ಪ ಮುಂಚೆ ಬೆಳಗಾವಿಯ ಜೈಲಿಗೆ ಕಮಾನೆತ್ತಿ ಕಳಿಸಿದ್ದ ಧರಣೇಶ್ ಅಲ್ಲಿನ ಸಜಾಬಂದಿಗಳ ಮುಂದಾಳು. ಅಲ್ಲಿ ಮಾಡುವ ಕೆಲಸಕ್ಕೆ ಕೊಡುತ್ತಿದ್ದ ದಿನಗೂಲಿ 10 ರೂ. ಅನ್ನು 50 ರೂ.ಗಳಿಗೆ ಏರಿಸಲು ಯಶಸ್ವಿಯಾದ ಹೋರಾಟಕ್ಕೆ ನಾಯಕತ್ವ ಕೊಟ್ಟಿದ್ದಕ್ಕಾಗಿ ಅವರಿಗೆ ಇನ್ನೊಂದು ಶಿಕ್ಷೆಯಾಗಿ ಹಿಂಡಲಗಾ ಜೈಲಿಗೆ ವರ್ಗಾವಣೆಯಾಗಿತ್ತು. ಬಿಹಿಎಲ್ ಕಾರ್ಮಿಕರ ಹೋರಾಟದ ಕೇಸಿನಲ್ಲಿ ಆಡಳಿತ ಮಂಡಳಿಯ ಸಂಚಿನ ಭಾಗವಾಗಿ ಶಿಕ್ಷೆಗೊಳಗಾದವರಲ್ಲಿ ಅವರೂ ಒಬ್ಬರು. ಇಂತಹ ಪ್ರಜ್ಞಾವಂತರು ಹೊರಗಿನ ಸಮಾಜದಲ್ಲೂ ಸುಧಾರಣೆಯನ್ನು ತರಬಲ್ಲ ಶಕ್ತರಾದವರು.

ಇನ್ನು ಜೈಲಿನ ಸಾಮಾನ್ಯ ಕೈದಿಗಳ ವಿಚಾರಕ್ಕೆ ಬರುವುದಾದರೆ, ನಮ್ಮನ್ನು ಮೊದಲ ರಾತ್ರಿಯೇ 'ಅಡ್ಮಿಟ್' ಮಾಡಿಕೊಂಡ ಬ್ಯಾರಕ್‌ನಲ್ಲಿನ ಇಬ್ಬರು ಯುವಕರು ಮನಸ್ಸಿನಿಂದ ಮರೆಯಾಗಿಯೇ ಇಲ್ಲ. ತೀರ್ಥಹಳ್ಳಿಯ ಕೇಶವ ಮತ್ತು ಕೊಡಗಿನ ಜಯ. ಇಬ್ಬರೂ ಕೊಲೆ ಕೇಸಿನಲ್ಲಿ ಒಳಗೆ ಹೋಗಿರುವವರು. ಎರಡೂ ಪ್ರಕರಣಗಳು ನಡೆಯುವ ಮುಂಚೆ ಮತ್ತು ನಂತರ ಅವರು ಅಂತಹ ಯಾವ ಕೃತ್ಯವನ್ನೂ ಎಸಗಿದವರಲ್ಲ. ಅನ್ಯಾಯವಾಗಿ ತಮಗೆ ತೊಂದರೆ ಕೊಟ್ಟವರ ಮೇಲೆ ಸಿಟ್ಟಿನಿಂದ ಮಾಡಿದ ಕೃತ್ಯವು ಕೊಲೆಯಲ್ಲಿ ಪರ್ಯವಸಾನವಾಗಿತ್ತು. ಜಯನ ಕೈಲಿ ಕೊಲೆಯಾದ ವ್ಯಕ್ತಿಯ ಕುಟುಂಬದವರು, ಆರೋಪಿಯ ತಂದೆ ತಮಗೊಂದು ಮಾತು ಹೇಳಿದರೆ ತಾವು ಕೋರ್ಟಿನಲ್ಲಿ ವಿರುದ್ಧ ಸಾಕ್ಷಿ ಹೇಳುವುದಿಲ್ಲ ಎಂದು ಹೇಳಿದ್ದರು. ಜಯನ ತಂದೆ ಸೀದಾ ಅವರ ಮನೆಗೆ ಹೋಗಿ 'ನನ್ನ ಮಗ ತಪ್ಪು ಮಾಡಿದ್ದಾನೆ; ನೀವು ಅವನ ವಿರುದ್ಧ ಸಾಕ್ಷಿ ಹೇಳಿ' ಎಂದು ಹೇಳಿ ಬಂದಿದ್ದರು! ಅವರ ಮಗನಿಗೆ ಜೀವಾವಧಿ ಶಿಕ್ಷೆಯಾಯಿತು.

ಇಂತಹ ನೂರಾರು ಜನರು ಒಳಗೆ ಇದ್ದಾರೆ. ಅವರುಗಳ ಕುಟುಂಬದ ಏಕೈಕ ಆಸರೆಯಾಗಿರುವವರು; ಕುಟುಂಬದ ಕಣ್ಮಣಿಗಳಾಗಿದ್ದವರು; ಅತ್ಯಂತ ಎಳೆಯ ವಯಸ್ಸಿನಲ್ಲಿ ಆಕಸ್ಮಿಕಗಳಲ್ಲಿ ಅಕಸ್ಮಾತ್ತಾಗಿ ಭಾಗಿಯಾದವರು; ಘಟನೆಯ ಹಿಂದೆ ಮುಂದೆ ಎಂದೂ ಅಪರಾಧ ಪ್ರವೃತ್ತಿ ತೋರದವರು; ಒಳ್ಳೆಯ ವಕೀಲರನ್ನು ಇಟ್ಟುಕೊಳ್ಳಲು ಸಾಧ್ಯವಾಗದವರು; ಸಾಕ್ಷಿಗಳನ್ನು ಬೆದರಿಸಲಾಗದವರು. ಇಂತಹವರಲ್ಲಿ 65 - 70 ವರ್ಷ ದಾಟಿದ, ಮೊಮ್ಮಕ್ಕಳಿರುವ ಮುದುಕರೂ ಇದ್ದಾರೆ. ಜೈಲಿನ ಆಸ್ಪತ್ರೆಯ ಕಾಯಂ ರೋಗಿಗಳಾಗಿರುವ ಆ ಮುದುಕರು ನಿಂತರೆ ಕಾಲುಗಳು ನಡುಗುತ್ತವೆ; ಕೂತರೆ ತಲೆ ನಡುಗುತ್ತಿರುತ್ತದೆ. ಅಂತಹವರು ಪೆರೋಲ್ ಮೇಲೆ ಹೊರಗೆ ಬಂದರೆ 'ಕಾನೂನು ಸುವ್ಯವಸ್ಥೆ ಸಮಸ್ಯೆ' ಆಗುತ್ತದೆ ಎಂದು ಸಂಬಂಧಪಟ್ಟ ಠಾಣೆಗಳ ಪೊಲೀಸ್ ಅಧಿಕಾರಿಗಳು ಬರೆದು ಕಳಿಸುತ್ತಾರೆ! ಹಾಗಾಗಿ ಎಷ್ಟೇ ವರ್ಷಗಳಾದರೂ ಕೆಲವು ತಿಂಗಳುಗಳ ಮಟ್ಟಿಗಾದರೂ ಕುಟುಂಬದ ಜೊತೆ ಕಾಲ ಕಳೆಯಲು ಸಾಧ್ಯವಾಗುವ ಪೆರೋಲ್‌ನ ಅವಕಾಶವೂ ದಕ್ಕಿಲ್ಲ. ಹೊರಗಿನ ಜಗತ್ತನ್ನೇ ಮರೆತಂತಿರುವ ಕೆಲವರಿಗೆ ತಾವು ಜೈಲಿಗೆ ಬಂದು ಎಷ್ಟು ವರ್ಷಗಳಾಯಿತು ಅಂತಲೇ ನೆನಪಿಲ್ಲ; ಇನ್ನು ಕೆಲವರನ್ನು ಹೊರಗೆ ಕಳಿಸಿದರೆ ಎಲ್ಲಿಗೆ ಹೋಗಬೇಕು ಎಂಬುದೇ ಗೊತ್ತಿಲ್ಲ.


ಇದ್ಯಾವ ನಾಗರಿಕ ಸಮಾಜ? ಇದರಿಂದ ಏನು ಸುಧಾರಣೆ ಸಾಧ್ಯ? ತಪ್ಪು ಯಾರದು? ಇಂತಹ ಸಾಲುಸಾಲು ಪ್ರಶ್ನೆಗಳು ಜೈಲಿಗೆ ಹೋಗಿ ಬಂದಂದಿನಿಂದ ಕಾಡುತ್ತಲೇ ಇವೆ.

ಈ ರೀತಿಯಲ್ಲಿ ಸನ್ನಡತೆ ಹೊಂದಿರುವ, ಅಭ್ಯಾಸೀ/ಹವ್ಯಾಸೀ ಅಪರಾಧಿಗಳಲ್ಲದವರಿಗೆ ಬಿಡುಗಡೆಯ ಭಾಗ್ಯ ಕರುಣಿಸಲು ಸಂವಿಧಾನದಲ್ಲಿ ಅವಕಾಶವಿದೆ. ಕಲಂ 72 ಮತ್ತು 161ರ ಅಡಿಯಲ್ಲಿನ ಅವಕಾಶಗಳನ್ನು ದೇಶದ ಎಲ್ಲಾ ರಾಜ್ಯಗಳಲ್ಲಿ ಪ್ರತೀ ವರ್ಷ ಬಳಸಿಕೊಂಡು ಬಿಡುಗಡೆಯೂ ನಡೆಯುತ್ತಿದೆ. ಆದರೆ ಕರ್ನಾಟಕದಲ್ಲಿ ಮಾತ್ರ 2006ರಿಂದ ಇಲ್ಲಿಯವರೆಗೆ ಒಬ್ಬ ಕೈದಿಯ ಬಿಡುಗಡೆಯೂ ಆಗಲಿಲ್ಲ. ಮೊದಲು ಸರ್ಕಾರ ನಿರ್ಲಕ್ಷ್ಯ ವಹಿಸಿತ್ತು, ನಂತರ ರಾಜ್ಯಪಾಲರು ತಡೆಹಿಡಿದುಬಿಟ್ಟರು. ಈ ರೀತಿ ಬಿಡುಗಡೆಯಾಗುತ್ತಿರುವವರಲ್ಲಿ ಸಂಘಪರಿವಾರದ ಕಾರ್ಯಕರ್ತರೇ ಹೆಚ್ಚು ಎಂಬ ಅಭಿಪ್ರಾಯ ರಾಜ್ಯಪಾಲರ ತಲೆಗೆ ಹೇಗೆ ಹೊಕ್ಕಿತೋ ಗೊತ್ತಿಲ್ಲ. ಒಂದಿಲ್ಲೊಂದು ಕಾರಣ ನೀಡುತ್ತಾ ಬಿಡುಗಡೆಯ ವಿಚಾರ ತಳ್ಳಿಹಾಕುತ್ತಾ ಬಂದರು.


ವಾಸ್ತವವೇನೆಂದರೆ ಸಂಘಪರಿವಾರದ ಯೋಜಿತ ಕುಕೃತ್ಯಗಳಲ್ಲಿ ನಿಜಕ್ಕೂ ಭಾಗಿಯಾದ ಒಬ್ಬೇ ಒಬ್ಬ ಕೈದಿಗೂ ಜೀವಾವಧಿ ಶಿಕ್ಷೆಯಾಗಿಲ್ಲ, ಕೆಲವು ಮಹತ್ವದ ಪ್ರಕರಣಗಳಲ್ಲಿ ಯಾವ ಶಿಕ್ಷೆಯೂ ಆಗಿಲ್ಲ. ರಾಮಸೇತು ವಿಚಾರವಿಟ್ಟುಕೊಂಡು ಬಸ್‌ಗೆ ಬೆಂಕಿ ಹಚ್ಚಿ ತಮಿಳುನಾಡಿನ ಇಬ್ಬರು ವ್ಯಕ್ತಿಗಳನ್ನು ಕೊಲೆ ಮಾಡಿದ ಒಂದು ಪ್ರಕರಣ ನಡೆಯಿತು. ಆ ಮೊಕದ್ದಮೆಯಲ್ಲಿ ಆರೋಪಿಗಳನ್ನು ಗುರುತಿಸುವ ಹಂತದಲ್ಲೇ ಹಳಿ ತಪ್ಪಿಸಿಬಿಡಲಾಯಿತು. ಆಗ ಅಧಿಕಾರದಲ್ಲಿದ್ದದ್ದು ಕುಮಾರಸ್ವಾಮಿ ನೇತೃತ್ವದ ಸರ್ಕಾರ!

ಈ ಎಲ್ಲಾ ತಪ್ಪುಗಳನ್ನು ಸರಿಪಡಿಸುವ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆದ್ಯತೆಯ ಮೇಲೆ ಮಾಡಬೇಕಿದೆ. ನೂರಾರು ಕುಟುಂಬಗಳ ಆಸರೆಯನ್ನು ಮರುಸ್ಥಾಪಿಸಬೇಕು. ಜೈಲುಲೋಕದಲ್ಲಿ ಸಾಮಾಜಿಕ ನ್ಯಾಯ ಸಾಧನೆಯಾಗಬೇಕು. ಅದರಲ್ಲಿ ಮೊದಲ ಕಾರ್ಯಕ್ರಮವೇ ಈ ಅವಧಿಪೂರ್ವ ಬಿಡುಗಡೆ. ಈ ಸ್ವಾತಂತ್ರ್ಯ ದಿನದ ಅವಕಾಶ ತಪ್ಪಿಹೋಗಿದೆ. ಅಕ್ಟೋಬರ್ 2, ನವೆಂಬರ್ 1 ಹತ್ತಿರದಲ್ಲೇ ಇದೆ. ತಮ್ಮ ಹುಟ್ಟಿದ ದಿನ ಮರಿಗೌಡರು ಕೊಡಿಸಿದ ಬಿಡುಗಡೆಗಿಂತ ಮಹತ್ವದಾದ್ದನ್ನು ಗಾಂಧಿ ಹುಟ್ಟಿದ ದಿನ ಅಥವಾ ಈ ನಾಡು ಹುಟ್ಟಿದ ದಿನ ಸಿದ್ದರಾಮಯ್ಯನವರು ಮಾಡುತ್ತಾರೆಂದು ಆಶಿಸೋಣ.

ಇನ್ನು ಜೈಲೊಳಗೇ ಇರಬೇಕಾದವರ ಸುಧಾರಣೆ ಮಾಡಬೇಕೆಂದರೆ ಮೊದಲು ಜೈಲು ಸುಧಾರಣೆಯಾಗಬೇಕು. ಆ ಕಾರ್ಯಕ್ರಮವನ್ನು ಅತ್ಯಂತ ಅದ್ಭುತವಾಗಿ ರೂಪಿಸಬಲ್ಲವರು ಬೇರಾರೂ ಅಲ್ಲ; ಜೈಲಿನಲ್ಲಿ 4-5 ವರ್ಷ ಕಳೆದಿರುವ, ಈಗ ಬಿಡುಗಡೆಗೆ ಅರ್ಹರಾಗಿರುವವರದ್ದೇ ಒಂದು ಸಮಿತಿ ಅದನ್ನು ಸೂಕ್ತವಾಗಿ ಮತ್ತು ಪರಿಣಾಮಕಾರಿಯಾಗಿ ಮಾಡಬಲ್ಲದು. ತಾವೂ ಸುಧಾರಣೆಯಾಗಿ, ದೇಶದ ಸುಧಾರಣೆಗೂ ಕೆಲಸ ಮಾಡಬಲ್ಲ ಒಂದು ಪಡೆಯನ್ನೇ ಸಿದ್ಧಗೊಳಿಸುವುದು ಇದರಿಂದ ಸಾಧ್ಯ. ಇಂತಹ ಸಾಧ್ಯತೆಗಳ ಬಗ್ಗೆ ಹೊಸ ರೀತಿಯಲ್ಲಿ ಮುಖ್ಯಮಂತ್ರಿಗಳು ಯೋಚಿಸಲಿ. ●



ನಂಬಿ ಕೆಟ್ಟವರಿಲ್ಲವೆ?



ಮಕ್ಕಳು ಚಿಕ್ಕವರಿದ್ದಾಗ ತಂದೆತಾಯಿ ಅವರ ಕೈಹಿಡಿದು ನಡೆಯುವುದನ್ನು ಕಲಿಸುತ್ತಾರೆ. ಬಿದ್ದು ಗಾಯವಾಗ ದಂತೆ ಜೋಪಾನ ಮಾಡುತ್ತಾರೆ. ಅಂತಹ ಒಂದು ದೃಶ್ಯವನ್ನು ನೋಡುವುದು ಕೂಡ ಎಷ್ಟೋ ಖುಷಿ ಕೊಡುತ್ತದೆ. ಅದೇ ರೀತಿ ಮಕ್ಕಳು ಕೂಡ ತಂದೆತಾಯಿ ಜೊತೆ ಇದ್ದಾಗ ಅದೆಷ್ಟು ನಿರ್ಭೀತಿಯಿಂದ ಇರುತ್ತವೆಂದರೆ ಅವರು ಬರಿ ಕೈ ಮಾಡಿದರೆ ಸಾಕು ಎಲ್ಲಿಂದ ಬೇಕಾದರೂ ಜಿಗಿದು ಬಿಡುತ್ತವೆ. ಅಷ್ಟೊಂದು ವಿಶ್ವಾಸ, ಅವರು ಹಿಡಿದೇ ಹಿಡಿಯುತ್ತಾರೆಂಬ ಭರವಸೆ.

20-25 ವರ್ಷಗಳ ನಂತರ ಈ ಸಂಬಂಧಗಳು ಹೇಗಿರುತ್ತವೆ, ಏನು ಬದಲಾಗಿರುತ್ತವೆ ಎಂದು ನೋಡಿದರೆ ಈ ಕಾಳಜಿ, ವಿಶ್ವಾಸ, ಭರವಸೆಗಳು ಪರಸ್ಪರರ ಪರವಾಗಿ ಬೆಳೆದಿರುವ ಸಾಧ್ಯತೆಗಳೇ ಹೆಚ್ಚು. ಅಕಸ್ಮಾತ್ ಹಾಗಾಗದೆ ಮಕ್ಕಳು ದೊಡ್ಡವರಾದ ಮೇಲೂ ತಮ್ಮೆಲ್ಲ ನಿರ್ಣಯಗಳಿಗೂ ತಂದೆತಾಯಿಯನ್ನೇ ಆಶ್ರಯಿಸಿದರೆ ಅಥವಾ ತಂದೆತಾಯಿ, ಮಕ್ಕಳ ಜೀವನದ ಪ್ರತಿಯೊಂದು ಆಗು ಹೋಗುಗಳಲ್ಲಿ ಮೂಗು ತೂರಿಸಿ ಸಲಹೆ ಕೊಡಲು ಪ್ರಾರಂಭಿಸಿದರೆ ಒಂದಂತೂ ಖಂಡಿತ.

ಈ ಕಾಳಜಿ ಹಾಗೂ ಭರವಸೆಯ ಅಡಿಯಲ್ಲಿ ಸಿಲುಕಿ ಮಕ್ಕಳ ಸಂಸಾರಗಳು ನಜ್ಜುಗುಜ್ಜಾಗುವುದು. ಈ ಪ್ರೀತಿ, ವಿಶ್ವಾಸ, ಕಾಳಜಿ, ನಂಬಿಕೆ, ಪರಸ್ಪರ ಸಲಹೆ ಸೂಚನೆ ಇವೆಲ್ಲ ಇಲ್ಲದೆ ಜೀವನ ನಡೆಯುವುದಿಲ್ಲ, ಆದರೆ ಅವಶ್ಯಕತೆ ಗಿಂತ ಹೆಚ್ಚಾದಾಗಲೂ ಜೀವನ ನಡೆಯುವುದಿಲ್ಲ.

ಭುವನಾ ಹಾಗೂ ಸುನೀತಾರ ಜೀವನದಲ್ಲಿ ಆದದ್ದೂ ಅದೇ. ಇಬ್ಬರದೂ ಬೇರೆ ಬೇರೆಯದೇ ಹಿನ್ನೆಲೆ ಹಾಗೂ ಕತೆ.

ಆದರೆ ಕಾರಣ ಮಾತ್ರ ಒಂದೇ. ತಂದೆ ತಾಯಿಯರ ಅತಿಯಾದ ಅವಲಂಬನೆ ಅಥವಾ ಮಧ್ಯ ಪ್ರವೇಶಿಸುವಿಕೆ.

ಭುವನಾ ನೋಡಲು ಸುಂದರವಾಗಿದ್ದಾಳೆ. ಡಿಗ್ರಿ ಮುಗಿಸಿ ಸರ್ಕಾರಿ ಕೆಲಸದಲ್ಲಿದ್ದಾಳೆ. ಬಹಳ ದೊಡ್ಡ ಹುದ್ದೆ ಅಲ್ಲದಿದ್ದರೂ, ಸಂಬಳ ಹಾಗೂ ಅದರ ಜೊತೆಗೆ ಕ್ವಾರ್ಟರ್ಸ್ ಹಾಗೂ ಇತರ ಅನುಕೂಲಗಳು ತುಂಬಾ ಚೆನ್ನಾಗಿವೆ. ಸೌಮ್ಯವಾಗಿ ಮಾತಾಡುತ್ತಾಳೆ. ಅವಳ ನಮ್ಮ ಆಫೀಸಿಗೆ ತಂದೆತಾಯಿ ಜೊತೆ ಬಂದು ಗಂಡ ಹಾಗು ಅವನ ಮನೆಯವರ ವಿರುದ್ಧ ವರದಕ್ಷಿಣೆ ದೂರು ಹೇಳುವಾಗ ಅವಳ ಮದುವೆ ಆಗಿ ಕೇವಲ ಒಂದು, ಒಂದೂವರೆ ವರ್ಷವಷ್ಟೇ ಆಗಿತ್ತು, ಆರು ತಿಂಗಳ ಬಸುರಿ ಭುವನಾ ಕಣ್ಣೀರು ಹಾಕಿ ತನ್ನ ದುಃಖದ ಕತೆ ಹೇಳುವಾಗ, ಮನಸ್ಸು ಕರಗುವಂತಿತ್ತು, ಆದರೆ ಆ ದುಃಖಕ್ಕೆ ಆಳಅಗಲಗಳಿರಲಿಲ್ಲ, ಅವಳ ಕತೆಯಲ್ಲಿ ಅವಳು ಕಷ್ಟ, ಕಿರುಕುಳ ಎಂದುಕೊಂಡು ವಿವರಿಸುತ್ತಿದ್ದ ಘಟನೆಗಳು ಹೊಸದಾಗಿ ಗಂಡನ ಮನೆಗೆ ಹೋದಾಗ ಅತ್ಯಂತ ಸುರಕ್ಷತೆಯಿಂದ ಬೆಳೆದುಬಂದ ಹುಡುಗಿಯರು ಎದುರಿಸಬಹುದಾದ ಸಾಮಾನ್ಯ ಸಮಸ್ಯೆಗಳೇ ಆಗಿದ್ದವು. ಆದರೆ ಜೀವನದಲ್ಲಿ ಹೆಚ್ಚಿನ ಅನುಭವವನ್ನು ಹೊಂದಿರದ ಭುವನಾಗೆ ಅವೆಲ್ಲ ಬಹಳ ದೊಡ್ಡ ಸಮಸ್ಯೆಯಂತೆ ಕಾಣಿಸುತ್ತಿದ್ದವು. ಕೆಲವು ಮುಖ್ಯ ಘಟನೆಗಳನ್ನು ಹೇಳು ಎಂದಾಗ ಅವಳು ಹೇಳಿದ್ದು:

"ಮೇಡಂ, ಮದುವೆ ನಂತರ ನನ್ನ ಗಂಡ ಶರತ್ ಮನೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿದ್ದರು. ನಾನು ನನ್ನ ಫೇವರಿಟ್ ಡಾರ್ಕ್ ಬ್ಲೂ ಕಲರ್ ಸೀರೆ ಉಟ್ಕೊಂಡಿದ್ದೆ, ನಮ್ಮ ಅತ್ತೆ ಬಂದು ನನ್ನ ಗಂಡನಿಗೆ

'ಜನ ಮನೆಗೆ ಬರ್ತಾರೆ ಭುವನಾಗೆ ಕೆಂಪು ಅಥವಾ ಮೆರೂನ್ ಕಲರ್ ಸೀರೆ ಉಟ್ಕೊಳ್ಳೊಕೆ ಹೇಳು ಅದರಲ್ಲಿ ಅವಳು ಚೆನ್ನಾಗಿ ಕಾಣ್ತಾಳೆ' ಎಂದರು.

ಅದಕ್ಕೆ ನನ್ನ ಗಂಡ ಹಿಂದೆ ಮುಂದೆ ವಿಚಾರಿಸದೆ "ಕೆಂಪು ಸೀರೆ ಉಟ್ಕೊ ಅಮ್ಮ ಹೇಳ್ತಿದ್ದಾರೆ" ಎಂದ. ಒಂದು ಬಾರಿಯೂ ನನಗ್ಯಾವ ಕಲರ್ ಇಷ್ಟ ಎಂದು ಕೇಳಲು ಹೋಗಲಿಲ್ಲ ಎಂದಳು.

"ಅಲ್ಲ ಭುವನಾ ಜನರ ಎದುರು ಸೊಸೆ ಸುಂದರವಾಗಿ ಕಾಣಲಿ ಎಂದುಕೊಂಡರೆ ತಪ್ಪಾ?" ಎಂದರೆ

"ಹಾಗಲ್ಲ ಮೇಡಂ ನಮ್ಮ ಅತ್ತೆ ಉದ್ದೇಶ ಏನೆಂದರೆ 'ನೋಡು ನಿನ್ನ ಗಂಡ ನಿನಗಿಂತ ನನಗೇ ಹೆಚ್ಚಿಗೇ ಇಂಪಾರ್ಟನ್ಸ್ ಕೊಡ್ತಾನೆ ಎಂದು ತೋರಿಸುವುದಿತ್ತು' ಎಂದಳು. "ಇರಬಹುದು. ಆದರೆ ಈಗಷ್ಟೇ ಮದುವೆ ಆಗಿದ್ದೀರಿ. ಜೀವನ ಇನ್ನೂ ಬಹಳ ದೊಡ್ಡದಿದೆ ಪ್ರಾರಂಭದಲ್ಲಿ ಎಲ್ಲಾ ಅತ್ತೆಯಂದಿರಿಗೂ ಸ್ವಲ್ಪ ಆತಂಕ ಅಥವಾ ಮಗನ ಬಗ್ಗೆ ಪೊಸೆಸ್ಸಿವ್‌ನೆಸ್ ಇರುತ್ತದೆ. ಆದರೆ ಸ್ವಲ್ಪ ಸಮಯದ ನಂತರ ಎಲ್ಲಾ ಬದಲಾಗುತ್ತದೆ. ಸ್ವಲ್ಪ ತಾಳ್ಮೆಯಿಂದ ಇದ್ದರೆ ಎಲ್ಲಾ ಸರಿ ಆಗ್ತದೆ. ಶರತ್ ನಿನ್ನ ಜೊತೆ ಚೆನ್ನಾಗಿದ್ದಾನಲ್ಲಾ, 'ಅದು ಮುಖ್ಯ' ಎಂದಾಗ ಅವಳು ಸ್ವಲ್ಪ ಗೊಂದಲದಲ್ಲಿ ಬಿದ್ದವಳಂತೆ ಕಂಡಳು. ಕೂಡಲೇ ಅವಳ ತಂದೆ ಜೋರಾಗಿ ಮಾತಾಡಲು ಶುರುಮಾಡಿ "ಎಷ್ಟೂಂತ ತಾಳ್ಮೆ ತೋರಿಸ್ಬೇಕು ಮೇಡಂ, ಈಗಾಗಲೇ ಮದುವೆ ಆಗಿ ವರ್ಷವಾಗಿ ಹೋಯ್ತು, ಇನ್ನೂ ಬಿಟ್ಟರೆ ಮುಂದೆ ನಮ್ಮ ಮಗಳ ಬದುಕು ನರಕ ಆಗುತ್ತದೆ. ಗಿಳಿಯಂತೆ ಸಾಕಿ ಹದ್ದಿನ ಕೈಗೆ ಕೊಟ್ಟಂತಾಯ್ತು" ಎಂದರು. "ಶರತ್‌ಗೆ ಬುದ್ಧಿ ಕಲಿಸಬೇಕು ಇಷ್ಟಕ್ಕೆ ಬಿಡಬಾರದು ವರದಕ್ಷಿಣೆ ಕಿರುಕುಳದ ಕೇಸು ಹಾಕಿ" ಎಂದಾಗ ಅವರಿಗೆ ಬಹಳ ಹೊತ್ತು ತಿಳಿಸಿ ಹೇಳಿ ಅಂತಹ ಕೆಲಸ ಮಾಡಬೇಡಿ ಎಂದು ಹೇಳಿದಾಗ, 'ಯಾಕೆ ಅದರಿಂದ ಏನೇನು ಆಗುತ್ತದೆ' ಎಂದು ಕೇವಲ ಕುತೂಹಲಕ್ಕಾಗಿ ಎಂಬಂತೆ ಕೇಳಿದರು.

ವರದಕ್ಷಿಣೆ ಹಿಂಸೆ ಕೇಸಿನ ನಂತರ ನಡೆಯುವ ಅರೆಸ್ಟು, ಬೇಲ್ ಮುಂತಾದ ಎಲ್ಲ ಪ್ರಕ್ರಿಯೆಗಳನ್ನು ವಿವರಿಸಿ "ನೋಡಿ ಒಂದು ಬಾರಿ ಪೊಲೀಸ್ ಕಂಪ್ಲೇಟ್ ಎಂದೆಲ್ಲ ಹೋದರೆ ಮುಂದೆ ಸಂಧಾನದ ದಾರಿಗಳು ಬಹಳ ಕಡಿಮೆ ಆಗುತ್ತವೆ. ಮುಂದೆ ಹುಟ್ಟೋ ಮಗುವಿಗೆ ತಂದೆಯ ಮುಖವೂ ಸಿಗದಂತಾಗುತ್ತದೆ" ಎಂದಾಗ, "ನೀವು ಹೇಳುವುದು ನಿಜ. ಮತ್ತೆ ವಿಚಾರ ಮಾಡಿ ವಾಪಸು ಬರ್ತೀವಿ" ಎಂದು ಹೊರಟು ಹೋದರು. ಆದರೆ ಒಂದು ವಾರದ ನಂತರ ಆಫೀಸಿಗೆ ಫೋನ್ ಮಾಡಿ, "ನಾವಿಲ್ಲಿ ಪೊಲೀಸ್ ಸ್ಟೇಷನ್‌ನಲ್ಲಿದ್ದೀವಿ ಪ್ಲೀಸ್ ಯಾರಾದರೂ ಬನ್ನಿ" ಎಂದರು. ಏನೋ ಅನಾಹುತ ನಡೆದಿದೆ ಎಂದುಕೊಂಡು ಹೋಗಿ ನೋಡಿದಾಗ ಗೊತ್ತಾಗಿದ್ದು, ನಮ್ಮ ಆಫೀಸ್‌ನಿಂದ ಪೊಲೀಸ್ ಕಂಪ್ಲೇಂಟ್ ಬಗ್ಗೆ ಮಾಹಿತಿ ಪಡೆದುಕೊಂಡು ಹೋದ ನಂತರ ಮಗಳನ್ನು ಗಂಡನ ಮನೆಗೆ ಬಿಟ್ಟು ಬಂದವರಂತೆ ನಾಟಕವಾಡಿ, ಬಿಟ್ಟು ಬಂದ ಮರುದಿನವೇ ಭುವನಾಳನ್ನೂ ಕರೆದುಕೊಂಡು ಹೋಗಿ, ಗಂಡ ಹಾಗೂ ಅತ್ತೆ ಸೀಮೆಎಣ್ಣೆ ಸುರಿದು ಕೊಲೆ ಮಾಡಲು ಪ್ರಯತ್ನಿಸಿದರು ಎಂದು ಅವಳ ತಂದೆ ಅವಳಿಂದ ಕಂಪ್ಲೇಂಟ್ ಕೊಡಿಸಿದ್ದರು. ಅವಳನ್ನು ಗಂಡನ ಮನೆಗೆ ಬಿಟ್ಟು ಕಂಪ್ಲೇಂಟ್‌ಗಾಗಿ ಒಂದು ಸಂದರ್ಭವನ್ನೂ ರಚನೆ ಮಾಡಿದ್ದರು. ಪೊಲೀಸರನ್ನು ಚೆನ್ನಾಗಿ ಅಡ್ಜಸ್ಟ್ ಮಾಡಿ ಅಳಿಯ ಶರತ್ ಹಾಗೂ ಅವನ ತಾಯಿ ಇಬ್ಬರನ್ನೂ ಅರೆಸ್ಟ್ ಮಾಡಿಸಿ ಎಲ್ಲ ಮುಗಿದ ಮೇಲೆ ನಮಗೆ ವಿಷಯ ತಿಳಿಸಿದ್ದರು. ಬಹಳ ಜಾಣತನದಿಂದ ಎಲ್ಲ ವಿಷಯಗಳನ್ನು ನಿಭಾಯಿಸುವ ಎಷ್ಟೋ ಜನರನ್ನು ನೋಡಿರುತ್ತೇವೆ. ಆದರೆ ಈ ಮನುಷ್ಯ ತನ್ನ ಮಗಳ ಬದುಕು ಹಾಳು ಮಾಡಲು ಇಷ್ಟು ಬುದ್ಧಿ ಏಕೆ ಉಪಯೋಗಿಸುತ್ತಿದ್ದಾನೆ ಎಂಬುದು ಅರ್ಥವಾಗಲಿಲ್ಲ. ಸ್ಟೇಷನ್‌ನಲ್ಲಿ ಕುಳಿತ ಶರತ್ ಏನೊಂದೂ ಅರ್ಥವಾಗದೆ ಕಂಗಾಲಾಗಿದ್ದ. ಅವನ ವಯಸ್ಸಾದ ತಾಯಿ ಅಲ್ಲಿನ ಕುರ್ಚಿಯಲ್ಲಿ ಕೂರಲಾಗದೆ ಮೊಣಕಾಲು ನೋವಿನಿಂದ ಒದ್ದಾಡುವಾಗ ಅವನ ಕಣ್ಣಂಚಲ್ಲಿ ನೀರು ಬಂದದ್ದು ಸುಳ್ಳಲ್ಲ.

ಇಷ್ಟಕ್ಕೆ ಬಿಡದ ಭುವನಾಳ ತಂದೆ ಮಗಳಿಗೆ ಡೈವೋರ್ಸ್ ಕೊಡಿಸಿ ಎಂದು ದುಂಬಾಲು ಬಿದ್ದರು. ಬಹುಶಃ ಪರಿಹಾರಧನ ಏನಾದರೂ ಹೊಂಚು ಹಾಕಿ ಈ ರೀತಿ ಮಾಡುತ್ತಿದ್ದಾರಾ ಎಂಬ ಸಂಶಯ ಬಂತು. ಆದರೆ "ಮೇಡಂ ಆ ರಾಕ್ಷಸನಿಂದ ನಮ್ಮ ಮಗಳಿಗೆ ಏನೂ ಬೇಕಾಗಿಲ್ಲ, ಬರೀ ಡೈವೋರ್ಸ್ ಕೊಡಿಸಿ ಸಾಕು" ಎಂದಾಗ ತಲೆಯಲ್ಲಿ ಏನೇನೋ ಪ್ರಶ್ನೆಗಳು ಮೂಡಲು ಶುರುವಾದವು. ಆಯ್ತು ಭುವನಾಳ ಜೊತೆ ಪರ್ಸನಲ್ ಆಗಿ ಮಾತಾಡಿ ಕೇಸ್ ರೆಡಿ ಮಾಡೋಣ ಎಂದು ಹೇಳಿ ಅವಳೊಂದಿಗೆ ಮಾತಾಡುವಾಗ ಕೆಲವು ವಿಷಯಗಳು ಹೊರಬಂದವು. ಅವಳ ತಂದೆಗೆ ಮೊದಲ ಹೆಂಡತಿಯಿಂದ ಇಬ್ಬರು ಗಂಡು ಮಕ್ಕಳಿದ್ದು, ಮೊದಲ ಹೆಂಡತಿ ಸತ್ತ ನಂತರ ಮತ್ತೊಬ್ಬಳನ್ನು ಮದುವೆ ಆಗಿದ್ದು ಅವಳಿಂದ ಭುವನಾ ಹುಟ್ಟಿದ್ದು ಎಂದಳು. "ನಿನ್ನ ಅಣ್ಣಂದಿರು ನಿಮ್ಮ ಜೊತೆಗೆ ಇರೋದಿಲ್ಲವಾ" ಎಂದದಕ್ಕೆ, "ಇಲ್ಲ ಮೇಡಂ ಅವರಿಬ್ಬರದೂ ಮದುವೆ ಆಗಿ ಬೇರೆ ಮನೆ ಮಾಡಿಕೊಂಡಿದ್ದಾರೆ. ನನ್ನ ಅಮ್ಮನ ಜೊತೆ ಅವರ ಸಂಬಂಧ ಅಷ್ಟಕ್ಕಷ್ಟೇ ಇದೆ. ಹೀಗಾಗಿ ನಾವು ಬೇರೆ ಇರುತ್ತೇವೆ. ನನ್ನ ಸರ್ಕಾರಿ ಕ್ವಾರ್ಟರ್ಸ್‌ನಲ್ಲಿ" ಎಂದಳು. "ನಿನ್ನ ತಂದೆ ರಿಟೈರ್ಡ್ ಆಗಿದ್ದಾರಲ್ಲಾ, ಮನೆ ಖರ್ಚು ಹೇಗೆ ನಿಭಾಯಿಸ್ತಾರೆ" ಎಂದರೆ "ನನ್ನ ಸಂಬಳ ಇದೆಯಲ್ಲಾ ಮೇಡಂ, ಇರಲು ಕ್ವಾರ್ಟರ್ಸ್ ಇದೆ. ಹೀಗಾಗಿ ಹಣಕ್ಕೇನು ಪ್ರಾಬ್ಲಮ್ ಇಲ್ಲ" ಎಂದಳು.

ವಿಷಯ ಸ್ಪಷ್ಟವಾಗಿತ್ತು, ಭುವನಾ ಗಂಡನ ಮನೆಗೆ ಹೋದರೆ ಅವಳ ಹೆಸರಿನ ಕ್ವಾರ್ಟರ್ಸ್ ಕೂಡ ಹೋಗುತ್ತದೆ. ಅವಳ ಸಂಬಳವು ಅವಳ ಹಾಗೂ ಗಂಡನ ಪಾಲಿಗೆ ಆಗುತ್ತದೆ. ಭುವನಾಳ ತಂದೆಯ ಸಣ್ಣ ಪೆನ್ಷನ್ ಹಣದಲ್ಲಿ ಮನೆ ಬಾಡಿಗೆ ಕೊಟ್ಟು ಜೀವನ ನಡೆಸಲು ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಅವಳ ಸಾಂಸಾರಿಕ ಜೀವನವನ್ನು ಹಾಳು ಮಾಡಲೂ ಅವಳ ತಂದೆ ಹಿಂಜರಿಯುತ್ತಿಲ್ಲ. ಎಲ್ಲ ಗೊತ್ತಿದ್ದೂ ಅವಳ ತಾಯಿ ಅಸಹಾಯಕ ಪರಿಸ್ಥಿತಿಯಲ್ಲಿದ್ದಾಳೆ. ತನ್ನ ಎಲ್ಲಾ ನಿರ್ಧಾರಗಳಿಗೂ ತಂದೆಯನ್ನೇ ನೆಚ್ಚಿರುವ ಭುವನಾ ತನ್ನ ಗಂಡ ಹಾಗೂ ತನ್ನ ಸಂಸಾರವನ್ನೂ ಕೂಡ ಅವರ ದೃಷ್ಟಿಯಿಂದಲೇ ನೋಡುತ್ತಿದ್ದಾಳೆ.

ಇಷ್ಟೆಲ್ಲ ಆದನಂತರವೂ ಭುವನಾ ಡೈವೋರ್ಸ್‌ಗೆ ಅರ್ಜಿ ಸಲ್ಲಿಸಿದಾಗ ಶರತ್ ಡೈವೋರ್ಸ್ ಕೊಡಲು ಒಪ್ಪಲಿಲ್ಲ. ಅಷ್ಟರಲ್ಲಾಗಲೇ ಭುವನಾಗೆ ಮಗು ಹುಟ್ಟಿ ಅದಕ್ಕೆ ವರ್ಷವಾಗುತ್ತಾ ಬಂದಿತ್ತು. ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಅವಳು ಕೋರ್ಟಿಗೆ ಬಂದಾಗೆಲ್ಲ ಅವಳ ತಂದೆ ಅವಳಿಗೆ ಸರ್ಪಗಾವಲಾಗಿ ಬರುತ್ತಿದ್ದರು. ಕೋರ್ಟಿನಲ್ಲಿ ಶರತ್ ಎಷ್ಟು ಬಾರಿ ಮಗುವನ್ನು ಮಾತಾಡಿಸಲು ಪ್ರಯತ್ನಿಸಿದಾಗಲೂ ಅವಳು ದೂರ ಹೋಗಿ ನಿಲ್ಲುತ್ತಿದ್ದಳು. ಈ ಮಧ್ಯೆ ಶರತ್ ಜೊತೆ ಮಾತಾಡಲು ಅವಕಾಶ ಸಿಕ್ಕಾಗ ಅವನು "ನಾನು ಭುವನಾ ಹಾಗೂ ಮಗುವನ್ನು ಕಳೆದುಕೊಳ್ಳಲು ತಯಾರಿಲ್ಲ ಮೇಡಂ. ಹಿಂದೆ ಆಗಿರುವುದನ್ನೆಲ್ಲ ಮರೆತೂ ಬಿಟ್ಟಿದ್ದೇನೆ. ನನ್ನ ತಾಯಿ ಕೂಡ ಈಗ ನನ್ನ ಜೊತೆ ಇಲ್ಲ, ನಮ್ಮ ಅಣ್ಣನ ಮನೆಗೆ ಹೋಗಿದ್ದಾರೆ. ನಮ್ಮನ್ನು ಒಂದು ಮಾಡಿ ಮೇಡಂ" ಎಂದು ಅಂಗಲಾಚಿದ.

ಆಗಿನ್ನೂ ಮಧ್ಯಸ್ಥಿಕಾ ಕೇಂದ್ರಗಳು ಅಸ್ತಿತ್ವಕ್ಕೆ ಬಂದಿರಲಿಲ್ಲ. ಆದರೆ ಭುವನಾಳನ್ನು ಪ್ರತ್ಯೇಕವಾಗಿ ಆಫೀಸಿಗೆ ಕರೆದು ಹಾಗೂ ಫೋನ್ ಮೂಲಕ ಅನೇಕ ಬಾರಿ ತಿಳಿಸಿ ಹೇಳಿದಾಗ ನಿಧಾನವಾಗಿ ಸ್ವಲ್ಪ ಬದಲಾಗತೊಡಗಿದಳು. ಕೋರ್ಟಿನಲ್ಲಿ ಶರತ್ ಜೊತೆ ಮಾತಾಡಲು ತೊಡಗಿದಳು. ಒಂದು ಸಲ ಅವಳ ಜೊತೆ ತಂದೆ ಬರದೇ ಇದ್ದಾಗ ಇಬ್ಬರನ್ನೂ ಕೂಡಿಸಿ ಹೊರಗೆ ತಿರುಗಾಡಿ ಬನ್ನಿ ಎಂದು ಕಳಿಸಿದೆ. ಅವರಿಬ್ಬರು ವಾಪಸ್ ಬಂದ ನಂತರ ಮಾತಾಡಿದಾಗ ಇಬ್ಬರೂ ಒಂದಾಗಿ ಹೋಗಲು ಒಪ್ಪಿದರು. ನನ್ನ ಖುಷಿಗೆ ಮಿತಿಯೇ ಇರಲಿಲ್ಲ, ಇಬ್ಬರನ್ನೂ ಕರೆದುಕೊಂಡು ನ್ಯಾಯಾಧೀಶರ ಎದುರು ನಿಲ್ಲಿಸಿ ಅವರ ಇಚ್ಛೆ ತಿಳಿಸಿದಾಗ, ನ್ಯಾಯಾಧೀಶರು ಕೂಡ 'ಒಳ್ಳೆಯ ನಿರ್ಧಾರ ಮಾಡಿದ್ದೀರಿ, ಮುಂದೆ ಚೆನ್ನಾಗಿರಿ. ಆರ್ಡರ್‌ನ್ನು ಲಂಚ್ ಬ್ರೇಕ್ ನಂತರ ಮಾಡೋಣ. ಊಟ ಮಾಡಿ ಬನ್ನಿ' ಎಂದು ಕಳಿಸಿದರು. ನಾನು ಕೂಡ ಊಟಕ್ಕೆಂದು ಆಫೀಸ್‌ಗೆ ಬಂದು ವಾಪಸು ಕೋರ್ಟಿಗೆ ಹೋಗುವಷ್ಟರಲ್ಲಿ ಭುವನಾಳ ತಂದೆ ಅಲ್ಲಿಗೆ ಬಂದಿದ್ದು ಭುವನಾ ಮತ್ತೆ ತನ್ನ ನಿರ್ಧಾರ ಬದಲಿಸಿದ್ದಳು. "ಅಲ್ಲಾ ಮೇಡಂ, ಈಗ ಒಪ್ಕೊಂಡು ಆಮೇಲೆ ತೊಂದರೆ ಕೊಡೋದಿಲ್ಲಾ ಅಂತ ಏನು ಗ್ಯಾರಂಟಿ. ನೀನು ನಿರ್ಧಾರ ತಗೊಂಡರೆ ನಾನು ಸಪೋರ್ಟ್ ಮಾಡಲ್ಲ ಅಂತಿದ್ದಾರೆ ನಮ್ಮ ತಂದೆ. ನನಗೆ ಒಬ್ಬಳೇ ನಿರ್ಧಾರ ತಗೊಳ್ಳೋಕೆ ಹೆದರಿಕೆ ಆಗ್ತಿದೆ. ನಾನು ಹೋಗಲ್ಲ ಮೇಡಂ" ಎಂದಳು.

ಮತ್ತೆ ಮೊದಲಿನ ಜಾಗಕ್ಕೇ ಬಂದು ನಿಂತಿತ್ತು ಕೇಸು.

ಆ ನಂತರ ಡೈವೋರ್ಸ್ ಆಗುವವರೆಗೂ ಶರತ್ ಅದೆ[...] ಬಾರಿ ನನಗೆ ಫೋನು ಮಾಡಿ ಅವಳಿಗೆ ತಿಳಿಸಿ ಹೇಳು[...] ಗೋಗರೆದಿದ್ದ, ಪ್ರಯೋಜನವಾಗಲಿಲ್ಲ.

ಸುನೀತಾಳದ್ದು ಇಂಥದ್ದೇ ಕಥೆ, ಆದರೆ ಅ[...] ಓದಿದವಳಲ್ಲ, ಅವಳ ಗಂಡನೂ ಓದಿಲ್ಲ, ಆದರೆ ಒ[...] ಸಣ್ಣ ಅಂಗಡಿ ಇಟ್ಟುಕೊಂಡು ಚಿಲ್ಲರೆ ವ್ಯಾ[...] ಮಾಡಿಕೊಂಡಿದ್ದಾನೆ. ಸುನೀತಾಳ ತಂದೆ ಸರ್ಕಾರಿ ಕಚೇರಿ[...] ಗುಮಾಸ್ತನಾಗಿ ರಿಟೈರ್ಡ್ ಆಗಿದ್ದಾರೆ. ಸುನೀತಾಗೆ [...] ಸೋದರ ಮಾವನೊಂದಿಗೆ ಮದುವೆ ಮಾಡಲಾ[...] ಗಂಡ ರಮೇಶ್ ಅಕ್ಕನ ಮಗಳನ್ನೇ ಮದುವೆ ಆದ[...] ಅಷ್ಟೇ ಸಲುಗೆಯಿಂದ ವ್ಯವಹರಿಸುತ್ತಿದ್ದ. ತನಗೂ[...] ಚಿಕ್ಕ ಸರ್ಕಾರಿ ಕೆಲಸ ಕೊಡಿಸುವಂತೆ ಮಾವನನ್ನು ಕೇ[...] ನೋಡೋಣ ಎಂದು ಹೇಳಿದ ಸುನೀತಾಳ ತಂದೆ [...] ಇಲ್ಲಿ ಅಳಿಯ ಕೆಲಸಕ್ಕಾಗಿ ಸ್ವಲ್ಪ ಹಣ ಖರ್ಚು ಮಾ[...] ಆದರೆ ದುಡ್ಡಿನ ವಿಷಯದಲ್ಲಿ ಭಾರೀ ಲೆಕ್ಕಾಚಾ[...] ಮನುಷ್ಯನಾಗಿದ್ದ ಆತ ತನ್ನ ಹೆಂಡತಿಯ ಕಡೆಯಿ[...] ಅಳಿಯನ ಹತ್ತಿರ ಸಾಲ ಕೇಳಿಸಿದ. ಏನೋ ಸ್ವಂತ [...] ಕೇಳುತ್ತಿದ್ದಾಳೆ ಎಂದು ರಮೇಶ ಹಣ ಸಾಲ ನೀ[...] ಆದರೆ ಸ್ವಲ್ಪ ದಿನಗಳ ನಂತರ ಎಲ್ಲಿಯೋ ಕೆಲಸ ಸಿ[...] ಅವಕಾಶ ಹತ್ತಿರವಾದಾಗ ರಮೇಶ್ ಮಾವನಲ್ಲಿ [...] ವಾಪಸು ನೀಡುವಂತೆ ಕೇಳಿದ. ಇದರಿಂದ ಕೆರ[...] ಸುನೀತಾಳ ತಂದೆ ಕೋಪದಲ್ಲಿ ಮಗಳನ್ನು ವಾಪಸು ತ[...] ಕರೆದುಕೊಂಡು ಬಂದರು. ತನ್ನ ಜೀವನದಲ್ಲೇ ಎಂ[...] ಸ್ವಂತ ವಿಚಾರ ಮಾಡಿ ಗೊತ್ತಿರದ ಸುನೀತಾ ಏನೊಂ[...] ಪ್ರಶ್ನೆ ಕೇಳಲಿಲ್ಲ, ಹೆಂಡತಿಯನ್ನು ವಾಪಸ್ಸು ಕಳಿಸು ಎಂ[...]

'ಹಣದ ಸಲುವಾಗಿ ನಮ್ಮ ತಂದೆತಾಯಿ ಜ[...] ಜಗಳ ಮಾಡಿದವರ ಮನೆಗೆ ನಾನು ಬರುವುದಿಲ್ಲ' ಎಂ[...] ಬದಲಾಗಿ ರಮೇಶನ ಮೇಲೆ ವರದಕ್ಷಿಣೆ ಕಿರುಕು[...] ದೂರು ನೀಡಿದಳು. ಅದಕ್ಕೆ ಪ್ರತಿಯಾಗಿ ರಮೇ[...] ಡೈವೋರ್ಸ್‌ಗೆ ಕೇಸು ದಾಖಲಿಸಿದ. ಕುಟುಂಬದ ಹಿರಿ[...] ಸಂಸಾರ ಸರಿ ಮಾಡಲು ಪ್ರಯತ್ನಿಸಿದಾಗಲೂ ಸುನೀ[...] ತಂದೆ ತನ್ನ ಮಾತನ್ನು ಕ್ರಿಯೆಯನ್ನು ಸಮರ್ಥಿಸಿಕೊ[...] ಸುಳ್ಳಿನ ಕತೆಗಳನ್ನು ಹೆಣೆಯುತ್ತಲೇ ಹೋದ. ಸುನಿ[...] ಅವನ್ನು ನಿಜ ಎಂದೇ ನಂಬಿದಳು ಮತ್ತು ರಮೇ[...] ಡೈವೋರ್ಸ್ ಕೊಡದೆ ಜೀವನವಿಡೀ ಕಾಡುವ ಅ[...] ತಂದೆಯ ನಿರ್ಧಾರಕ್ಕೆ ಸಮ್ಮತಿಸಿ ತವರಿನಲ್ಲಿಯೇ ಉಳಿ[...] ಜನರ ಎದುರು ತಮ್ಮ ನಿರ್ಧಾರವನ್ನು ಸಮರ್ಥಿಸಿಕೊ[...] ಸುನಿತಾಳ ತಂದೆ ಒಂದಾದ ಮೇಲೆ ಒಂದರಂತೆ ರಮೇ[...] ಮೇಲೆ ಕೇಸುಗಳನ್ನು ಹಾಕುತ್ತಲೇ ಹೋದರು. ಎಲ್ಲದ[...] ಸಿಕ್ಕು ಒದ್ದಾಡಿ ರಮೇಶ್ ಸುಸ್ತಾದ. ಒಂದಲ್ಲ, ಎ[...] 16 ವರ್ಷಗಳಿಂದ ನಿರಂತರವಾಗಿ ಕೇಸುಗಳಲ್ಲಿ [...] ಆಗಿರುವ ಸುನೀತಾಗೆ ತಾನು ಏನು ಕಳೆದುಕೊಂಡಿ[...] ಅಥವಾ ಏನು ಪಡೆದುಕೊಂಡಿದ್ದೇನೆ ಎಂಬುದೂ ಗೊ[...] ಆದರೆ ಸಂಪೂರ್ಣ ಶ್ರದ್ಧೆ ಹಾಗೂ ನಿಷ್ಠೆಯಿಂದ ಕೇಸುಗ[...] ನಡೆಸುತ್ತಿದ್ದಾಳೆ.

ಈ ಇಬ್ಬರೂ ಹೆಂಗಸರ ಜೀವನವನ್ನು ಹಾಳು ಮಾ[...] ಕಾರಣರಾದ ತಂದೆಯರು ಯಾವ ಕಾರಣಕ್ಕೆ [...] ಮಾಡಿದರು ಎಂಬುದು ಮೇಲ್ನೋಟಕ್ಕೆ ಗೊತ್ತಾಗು[...] ದ್ದರೂ, ಅವರನ್ನೇ ಕಣ್ಣುಮುಚ್ಚಿ ನಂಬಿರುವ ವಿಶ್ವಾಸ ಇಟ್ಟ[...] ಅವರ ಹೆಣ್ಣು ಮಕ್ಕಳಿಗೆ ಅದು ಕಾಣಿಸುವುದಿಲ್ಲ.

ಭುವನಾಳ ತಂದೆಯ ವಿಷಯದಲ್ಲಿ ಹೇಳುವುದಾ[...] ಅವರ ಜೀವನದ ಅಭದ್ರತೆ ಭಯ, ಮುಂದೆ ಬರಬಹು[...] ವೃದ್ಧಾಪ್ಯದ ಒಂಟಿತನ, ಗಂಡು ಮಕ್ಕಳಿಂದ ಸಿಗದ ಯಾ[...] ಸಹಾಯ ಅವರನ್ನು ಅಂತಹ ನಿರ್ಧಾರ ತೆಗೆದುಕೊಳ್ಳ[...] ಮಾಡಿದೆ ಎನ್ನಬಹುದು. ಆದರೆ ಇದ್ಯಾವುದಕ್ಕೂ ಸಂಬ[...] ವಿಲ್ಲದ ಶರತ್ ಹಾಗೂ ಅವನ ಜಗತ್ತನ್ನೇ ನೋಡ[...] ಮಗುವಿಗೆ ಅವರು ಮಾಡಿರುವ ಅನ್ಯಾಯ ಸಣ್ಣ[...] ಶರತ್ ತನ್ನ ಕಣ್ಣೆದುರೇ ವಿನಾಕಾರಣ ತನ್ನ ಸಂ[...] ಹಾಳಾಗುತ್ತಿದ್ದರೂ ಏನೂ ಮಾಡಲಾಗದ ಸ್ಥಿತಿಯ[...] ಭುವನಾ ಶರತ್ ಒಳ್ಳೆಯವನೋ ಕೆಟ್ಟವನೋ [...] ಬೇಸಿಕ್ ಪ್ರಶ್ನೆಗೇ ಇನ್ನೂ ಉತ್ತರ ಕಂಡುಕೊಳ್ಳಲು [...] ಸ್ಥಿತಿಯಲ್ಲಿದ್ದಳು. ಸುನೀತಾಳ ತಂದೆ ತನ್ನ ಸ್ವಾರ್ಥ, [...] ಅಹಂ ಹಾಗೂ ತಾನೇ ಸರಿ ಎಂದು ಸಾಧಿ[...] ಹುಮ್ಮಸ್ಸಿನಲ್ಲಿ ತಮ್ಮ ಹೆಂಡತಿ ಹಾಗೂ ಅವಳ ತ[...] ಸಂಬಂಧದ ಜೊತೆಗೆ ತಮ್ಮದೇ ಮಗಳ ಜೀವನಕ್ಕೆ [...] ಹಚ್ಚಿದ್ದರು.

ಈ ಇಬ್ಬರು ಪುರುಷರ ಜೀವನದಲ್ಲೀಗ ಆಸರೆ[...] ಅವರ ಹೆಣ್ಣು ಮಕ್ಕಳಿದ್ದಾರೆ. ಆದರೆ ತಮ್ಮ ನಂತರ [...] ಮಗಳ ಬದುಕಲ್ಲಿ ಯಾರನ್ನು ಆಸರೆಯಾಗಿ [...] ಹೋಗುತ್ತೇನೆ ಎಂಬ ಪ್ರಶ್ನೆಯ ನ್ನಾದರೂ ತಮ್ಮಲ್ಲಿ ಕೇಳಿ[...] ಬೇಕು.

ಅದು ಒಬ್ಬ ವ್ಯಕ್ತಿಯೇ ಆಗಿರಬೇಕೆಂದಿಲ್ಲ.


ವ್ಯಕ್ತಿತ್ವವಾದರೂ ಆಗಿರ ಬೇಕಿತ್ತು.



● ರಾಜಲಕ್ಷ್ಮೀ ಅಂಕಲಗಿ

...ರಾವಳಿಗರ ಜೀವಹಿಂಡಲು ಬರುತ್ತಿದೆ ನಿಡ್ಡೋಡಿ ಉಷ್ಣ ವಿದ್ಯುತ್ ಸ್ಥಾವರ

...ನೈಸರ್ಗಿಕ ಸಂಪತ್ತಿನಿಂದ ಸಂಪದ್ಭರಿತವಾಗಿರುವ ...ವಳಿಯ ಭೂಮಿಯನ್ನು ನಾಗಾರ್ಜುನ, ನಂದಿಕೂರು, ...ರ್, ಯು.ಪಿ.ಸಿ.ಎಲ್ ಮುಂತಾದ ಜನಕಂಟಕ, ಪರಿಸರ ...ರೋಧಿ ಕೈಗಾರಿಕೆಗಳು ಬಂಜರಾಗಿಸಿವೆ. ಈ ...ಜನೆಗಳಿಂದ ಈಗಾಗಲೇ ಹೈರಾಣಾಗಿರುವ ಕರಾವಳಿಗೆ ...ಗುಡಿಯಿಡಲು ಸಿದ್ಧವಾಗಿ ನಿಂತಿದೆ 4,000 ...ಮೆಗಾವ್ಯಾಟ್ ಉಷ್ಣ ವಿದ್ಯುತ್ ತಯಾರಿಕೆಯ ನಿಡ್ಡೋಡಿ ...ರ್ಮಲ್ ಪವರ್ ಪ್ರಾಜೆಕ್ಟ್.



...ಈ ಹಿಂದಿನ ಎಲ್ಲಾ ಕಲ್ಲಿದ್ದಲು ಆಧಾರಿತ ಉಷ್ಣ ...ದ್ಯುತ್ ಸ್ಥಾವರ ವಿರೋಧಿ ಹೋರಾಟದ ಸಂದರ್ಭದಲ್ಲಿ ... ಸಾವಿರ ಬಾರಿ ಸಾರಿ ಸಾರಿ ಹೇಳಿದ ನೋವನ್ನೇ ...ದು ನಿಡ್ಡೋಡಿಯ ಜನತೆ ಹೇಳುತ್ತಿದ್ದಾರೆ. ಆದರೆ ...ರ ಜನರ ನೋವಿಗೆ ಸ್ಪಂದಿಸುವ ಬದಲಾಗಿ ಅದನ್ನು ...ಡಿ ವಿಕೃತಾನಂದ ಅನುಭವಿಸುತ್ತಿದೆ ಯೇನೋ...? ... ಅಳಲನ್ನು ಲೆಕ್ಕಕ್ಕಿಟ್ಟುಕೊಳ್ಳದೇ ಆಳುವ ವರ್ಗ ...ವಳಿಯ ನೆಲ, ಜಲವನ್ನು ಅತ್ಯಾಚಾರಗೈಯಲು ...ಡವಾಳ ಶಾಹಿಗಳಿಗೆ ಹಸಿರುನಿಶಾನೆ ತೋರಿದೆ. ಅದಕ್ಕಾಗಿ ...ಾರು ರೈತರನ್ನು ಬೀದಿಪಾಲು ಮಾಡಲು ಸಮಾಜವಾದಿ ...ರಾಮಯ್ಯನವರೇ ತುದಿಗಾಲಲ್ಲಿ ನಿಂತಿರುವುದು ಕಾಲದ ... ವ್ಯಂಗ್ಯವಲ್ಲವೇ ಇನ್ನೇನು? ಒಂದೆಡೆ ಇವರದೇ ... ಕೇಂದ್ರ ಸರಕಾರ 'ಯಾವುದೇ ಯೋಜನೆಗೆ ಫಲವತ್ತಾದ ... ಭೂಮಿಯನ್ನು ಕಸಿದುಕೊಳ್ಳಲಾಗದು. ಯಾವುದೇ ...ೕಜನೆಯನ್ನು ಜಾರಿಗೆ ತರುವುದಕ್ಕಿಂತ ಮುಂಚೆ ಜನರ ...ಪ್ರಾಯ ಸಂಗ್ರಹಿಸಲಾಗುವುದು ಮತ್ತು ಜನಾಭಿಪ್ರಾಯಕ್ಕೆ ...ನ್ನಣೆ ಕೊಡಲಾಗುವುದು' ಎನ್ನುತ್ತಿದೆ. ಇನ್ನೊಂದೆಡೆ ...ರಾಮಯ್ಯನವರ ಸರಕಾರ ಬಲವಂತದ ಭೂಸ್ವಾಧೀನಕ್ಕೆ ...ಮುಂದಾಗಿದೆ. ಬಂಡವಾಳಶಾಹಿಗಳ ಹಿತಕಾಯುವ ...ವಿಚಾರದಲ್ಲಿ ಕಾಂಗ್ರೆಸ್‌ಗೂ, ಬಿಜೆಪಿಗೂ ಅಂತಹ ...ವ್ಯತ್ಯಾಸವೇನಿಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ...ಜೆಪಿಯ ಜನದ್ರೋಹಿ ನಿಲುವುಗಳಿಂದ ಮುಕ್ತಿ ಬಯಸಿದ ...ರ್ನಾಟಕದ ಜನತೆ- ಅದರಲ್ಲೂ ತಮ್ಮ ಬದುಕಿಗಿಂತಲೂ ...ಧರ್ಮ ಶ್ರೇಷ್ಠತ್ವವೇ ಮುಖ್ಯ ಎಂಬಷ್ಟು ನಶೆಯೇರಿಸಿಕೊಂಡಿದ್ದ ...ಕರಾವಳಿಯ ಜನತೆ ಬಿಜೆಪಿಗೆ ಮುಖ ಮೂತಿ ನೋಡದೇ ...ಕಾಂಗ್ರೆಸ್‌ನತ್ತ ಆಶಾಭಾವದ ನೋಟ ಬೀರುತ್ತಿರುವಾಗಲೇ ...ದರಲ್ಲೇ ಜನಪರ ಎಂದು ಜನತೆ- ಗ್ರಹಿಸಿದ್ದ ...ರಾಮಯ್ಯನವರೇ ಜನರ ಅಳಲನ್ನು ಲೆಕ್ಕಿಸದೇ ...ದಾತರಿಗೆ ಬೆನ್ನಲ್ಲಿ ಇರಿಯುತ್ತಿರುವುದು ದುರದೃಷ್ಟಕರ. ...ಕಂಟಕವನ್ನು ಕಿತ್ತಲು ಮುಕ್ತ ರಾಜ್ಯವಾಗಿಸುವ ಭರಾಟೆಯಲ್ಲಿ ...ಭಾಗ್ಯ'ದ ಹೀರೋ ಸಿದ್ದರಾಮಯ್ಯನವರೇ ಅನ್ನದಾತರ ...ಅಳಲನ್ನು ಅರ್ಥಮಾಡಿಕೊಳ್ಳದಿದ್ದರೆ ಇನ್ನಾರು ...ಅರ್ಥಮಾಡಿಕೊಂಡಾರು?


...ಒಂದೆಡೆ ಕೇಂದ್ರ ಸರಕಾರ ಆಹಾರ ಭದ್ರತೆಯ ...ಮಸೂದೆಯನ್ನು ಪಾಸು ಮಾಡುತ್ತದೆ. ಇನ್ನೊಂದೆಡೆ ... ಕಾಂಗ್ರೆಸ್ ಪಕ್ಷದ ರಾಜ್ಯ ಸರಕಾರವು 90% ...ಫಲವತ್ತಾದ ಭತ್ತದ ಕೃಷಿ ಭೂಮಿಯನ್ನೇ ಹೊಂದಿರುವ ...ಪಶ್ಚಿಮ ಘಟ್ಟದ ತಪ್ಪಲಿನ ಮೂಡಬಿದರೆ ಬಳಿಯ ನಿಡ್ಡೋಡಿ ...ಎಂಬ ಹಸಿರು ಆಚ್ಛಾದಿತ ಹಳ್ಳಿಯನ್ನು ಪರಿಸರ ಕಂಟಕ ಮತ್ತು ಜನಕಂಟಕ ಉಷ್ಣ ವಿದ್ಯುತ್ ಸ್ಥಾವರಕ್ಕೆ ಧಾರೆಯೆರೆದು ಕೊಡಲು ಸನ್ನದ್ಧವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳೆದು ತಿಂಗಳು ಮಂಡಿಸಿದ ಬಜೆಟ್‌ನಲ್ಲಿ ಅಸ್ಪಷ್ಟವಾಗಿ ತೇಲಿ ಬಿಟ್ಟ ಒಂದು ವಿಚಾರ ಕರಾವಳಿಯ ಪ್ರಜ್ಞಾವಂತರ ನಿದ್ದೆಗೆಡಿಸಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಡೋಡಿ ಎಂಬಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಬೃಹತ್ ಉಷ್ಣ ವಿದ್ಯುತ್ ಸ್ಥಾವರಕ್ಕೆ 500 ಕೋಟಿ ರೂಪಾಯಿ ತೆಗೆದಿರಿಸಲಾಗಿದೆ ಎಂದಾಗಲೇ ಕರಾವಳಿ ಭಾಗದ ಕಾಂಗ್ರೆಸ್ ಜನಪ್ರತಿನಿಧಿಗಳಿಗೆ ಉಭಯ ಸಂಕಟ ಪ್ರಾರಂಭವಾಗಿತ್ತು. ಇದೀಗ ಕರಾವಳಿಯ ಜನರ ಪ್ರತಿರೋಧದ ಕಾವು ಏರತೊಡಗಿದಾಗ 'ಮೀನು ಮಂತ್ರಿ' ಅಭಯ ಚಂದ್ರ ಅದು ಬಿಜೆಪಿ ಸರಕಾರದ ಯೋಜನೆ ಎಂದು ತಿಪ್ಪೆ ಸಾರಿಸುವ ಪ್ರಯತ್ನ ಮಾಡುತ್ತಿದ್ದಾರೆ. ಗುಲಾಮಿ ಸಂಸ್ಕೃತಿಯ ಪಳೆಯುಳಿಕೆಗಳಾದ ಕಾಂಗ್ರೆಸ್‌ನ ಬಡ್ಡೆತ್ತುಗಳಿಗೆ, ತಮ್ಮನ್ನಾರಿಸಿದ ಜನರ ಪರವಾಗಿ ಪ್ರಭುತ್ವದ ಜನವಿರೋಧಿ ನಿಲುವಿನ ವಿರುದ್ಧ ಧ್ವನಿಯೆತ್ತುವ ಧೈರ್ಯ ಎಲ್ಲಿಂದ ಬರಬೇಕು?

ಕೆಲವೇ ತಿಂಗಳ ಹಿಂದೆ ಶೆಟ್ಟರ್ ಸರಕಾರ ಇದೇ ಯೋಜನೆಯ ಕುರಿತಂತೆ ಪ್ರಸ್ತಾಪಿಸಿದಾಗ ಜಾಣ ಮೌನ ತಾಳಿದ್ದ ಸಂಸದ ನಳಿನ್ ಕುಮಾರ್ ಕಟೀಲು ಮತ್ತು ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ಇಂದು ಉಲ್ಟಾ ಹೊಡೆದು ಸ್ಥಾವರ ವಿರೋಧಿ ಹೋರಾಟ ಕುರಿತಂತೆ ವೀರಾವೇಶದ ಮಾತುಗಳನ್ನಾಡುತ್ತಾ ಹುತಾತ್ಮರಾಗ ಹೊರಟಿದ್ದಾರೆ. ಬಿಜೆಪಿ ಮುಖಂಡರ ಸ್ಥಾವರ ವಿರೋಧಿ ಮಾತುಗಳು ಜನಪರ ಚಿಂತನೆಯ ಪ್ರತೀಕವಲ್ಲ, ಬದಲಾಗಿ 2014ರ ಲೋಕಸಭಾ ಚುನಾವಣೆಯ ಪೂರ್ವ ತಯಾರಿ ಎಂಬುದನ್ನು ಅರ್ಥೈಸಲು ವಿಶೇಷ ರಾಜಕೀಯ ಜಾಣ್ಮೆಯೇನೂ ಬೇಕಾಗಿಲ್ಲ.

ಪರಿಸರ ಅಧ್ಯಯನ ವರದಿಯೆಂಬ ವಂಚನೆಯ ಜಾಲ

ಬಂಡವಾಳಶಾಹಿಗಳ ಬೂಟು ನೆಕ್ಕುವ ಕೇಂದ್ರದ ಅಧ್ಯಯನ ನಿಯೋಗವೊಂದು ಮೇ 16ರಂದು ನಿಡ್ಡೋಡಿಗೆ ಭೇಟಿ ಕೊಡುವ ಮೂಲಕ ಅಧ್ಯಯನ ವರದಿಯೆಂಬ ಬೃಹತ್ ವಂಚನೆಯ ಜಾಲದ ಬ್ರಹ್ಮಗಂಟೊಂದು ಬಿಚ್ಚಿಕೊಂಡಿದೆ. ಸದ್ರಿ ಅಧ್ಯಯನ ನಿಯೋಗವು ನಿಡ್ಡೋಡಿಯಲ್ಲಿರುವುದು ಬಹುತೇಕ ವಾಣಿಜ್ಯ ಬೆಳೆಗಳೇ ಆಗಿವೆ. ಅಲ್ಲಿ ಅಡಿಕೆ, ಗೋಡಂಬಿಯಂತಹ ವಾಣಿಜ್ಯ ಬೆಳೆಗಳಿವೆಯೇ ಹೊರತು ಆಹಾರ ಬೆಳೆಗಳಿಲ್ಲ ಎಂಬ ಅಪ್ಪಟ ಸುಳ್ಳು ವರದಿಯನ್ನು ನೀಡಿದೆ. ವಾಸ್ತವಾಂಶ ಏನೆಂದರೆ ನಿಡ್ಡೋಡಿ ಪರಿಸರದಲ್ಲಿರುವುದು 90% ಭತ್ತದ ಕೃಷಿ ಭೂಮಿ. 2004 ರಲ್ಲಿ ಮಂಗಳೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿಯವರು ಸರಕಾರಕ್ಕೆ ಸಲ್ಲಿಸಿದ ವರದಿಯಲ್ಲಿನ ಅಂಕಿಅಂಶಗಳನ್ನು ಮತ್ತು ಮೇ 16ರಂದು ಭೇಟಿಕೊಟ್ಟು ಅಧ್ಯಯನ ವರದಿ ತಯಾರಿಸಿದ ನಿಯೋಗದ ವರದಿಯನ್ನು ಸೂಕ್ಷ್ಮವಾಗಿ ತುಲನೆ ಮಾಡಿದಾಗ ಸತ್ಯಾಸತ್ಯತೆ ಏನೆಂದು ಮನವರಿಕೆಯಾಗುತ್ತದೆ. 2004ರ ವರದಿಯಲ್ಲಿ ಬಡಗ ಮಿಜಾರು, ತೆಂಕ ಮಿಜಾರು, ನಿಡ್ಡೋಡಿ ಗ್ರಾಮಗಳು ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿದ್ದು ಅದು ವಿಶಿಷ್ಟ ಜೀವಿ ಸಂಕುಲ ತಾಣವಾಗಿದೆ ಎಂದು ಉಲ್ಲೇಖಿಸಲಾಗಿತ್ತು. ಅದರಲ್ಲಿ 57 ಎಕರೆ ರಕ್ಷಿತಾರಣ್ಯ, 602.80 ಎಕರೆ ಡೀಮ್ಡ್ ಫಾರೆಸ್ಟ್ ಮತ್ತು 447.06 ಎಕರೆ ಕಂದಾಯ ಜಮೀನು ಎಂದು ಉಲ್ಲೇಖಿಸಲಾಗಿತ್ತು. ಯಾವಾಗ ತದಡಿಯಲ್ಲಿ ಸ್ಥಾಪಿಸಲುದ್ದೇಶಿಸಿದ್ದ ಉಷ್ಣ ವಿದ್ಯುತ್ ಸ್ಥಾವರಕ್ಕೆ ಪ್ರಬಲ ವಿರೋಧ ಎದುರಾಯಿತೋ ಅಂದೇ ಉಷ್ಣ ವಿದ್ಯುತ್ ಬ್ರಹ್ಮರಕ್ಕಸನ ಮಾರಿಕಣ್ಣು ನಿಡ್ಡೋಡಿಗೆ ಬಿತ್ತು. ಅದರ ಪರಿಣಾಮ ಎಂಬಂತೆ 2004ರ ವರದಿಯ ವಾಸ್ತವಾಂಶವನ್ನು ತಿರುಚುವ ಪ್ರಯತ್ನ ಸಾಗಿತು. 2004ರಲ್ಲಿ ಯಾವ ಮಂಗಳೂರು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಕಚೇರಿಯಿಂದ ನಿಡ್ಡೋಡಿಯನ್ನು ಪಶ್ಚಿಮಘಟ್ಟ ವ್ಯಾಪ್ತಿಯ ಪ್ರದೇಶವೆಂದು ವರದಿ ಸಲ್ಲಿಸಲಾಗಿತ್ತೋ ಅದೇ ಕಚೇರಿಯಿಂದ ಕೇವಲ ಎರಡು ವರ್ಷಗಳಲ್ಲಿ ಅಂದರೆ 2006ರಲ್ಲಿ ಸತ್ಯದ ತಲೆಗೆ ಹೊಡೆಸಲಾಯಿತು. ಅರ್ಥಾತ್ ಅಂದಿನ ಆಳುವ ವರ್ಗದ ಬಂಡವಾಳಶಾಹಿ ಪರ ನೀತಿಯನ್ವಯ ಅವರ ಹಿತಾಸಕ್ತಿ ಕಾಪಾಡುವ ವರದಿ ಸಲ್ಲಿಕೆಯಾಯಿತು. 2004ರಲ್ಲಿ ಪಶ್ಚಿಮಘಟ್ಟ ವ್ಯಾಪ್ತಿಯ ಪ್ರದೇಶ 2006ಕ್ಕಾಗುವಾಗ ಹೊತ್ತಿಗೆ ಪಶ್ಚಿಮಘಟ್ಟ ರಹಿತ ಪ್ರದೇಶವಾಯಿತು!!!



ಜಾಗತೀಕರಣದ ಅಬ್ಬರಕ್ಕೆ ರಾಜ್ಯದ ಇತರೆಡೆಗಳಿಗಿಂತಲೂ ವೇಗವಾಗಿ ಕರಾವಳಿಯ ಹಸಿರು ಮಾಯವಾಗಿ ಅದರ ಜಾಗಕ್ಕೆ ಕಾಂಕ್ರೀಟು ಕಾಡುಗಳು ಬರುತ್ತಿವೆ. ಕೇವಲ ಹತ್ತು ವರ್ಷಗಳ ಹಿಂದಿನ ಸ್ಥಿತಿಗೂ ಇಂದಿನ ಪರಿಸ್ಥಿತಿಗೂ ಹೋಲಿಸಿದರೆ 50% ರಷ್ಟು ಕೃಷಿಭೂಮಿಗಳು ಇಲ್ಲವಾಗಿವೆ. ಪ್ರಸ್ತುತ ಕರಾವಳಿಯಲ್ಲಿ ಉಳಿದಿರುವ ಏಕೈಕ ಆಹಾರ ಕೃಷಿ ಭತ್ತದ ಕೃಷಿ. ಇನ್ನುಳಿದ ಹಸಿರೆಲ್ಲವೂ ಅಡಿಕೆ, ತೆಂಗುಗಳೆಂಬ ವಾಣಿಜ್ಯ ಕೃಷಿಗಳೇ ಆಗಿವೆ. ಕರಾವಳಿಯಲ್ಲಿ ಅಳಿದುಳಿದ ಭತ್ತದ ಕೃಷಿ ಭೂಮಿಗಳೆಲ್ಲವೂ ನಂದಿಕೂರು, ನಾಗಾರ್ಜುನ, ಯುಪಿಸಿಎಲ್‌ನ ದೆಸೆಯಿಂದ ಎಕ್ಕುಟ್ಟಿ ಹೋಗಿವೆ. ಇಷ್ಟಾಗ್ಯೂ ನಿಡ್ಡೋಡಿ ಪರಿಸರಕ್ಕೆ ಕಾಂಕ್ರಿಟೀಕರಣದ ವಿಷವಾಯು ಬೀಸದೇ ಅಲ್ಲೆಲ್ಲ ಸಮೃದ್ಧ ಹಸಿರು ಹೊನ್ನು ಬೆಳೆಯಲಾಗುತ್ತಿದೆ. ಈ ನಿಡ್ಡೋಡಿ ಪ್ರಾಜೆಕ್ಟ್ ಏನಾದರೂ ಸ್ಥಾಪನೆಯಾದರೆ ಅದಕ್ಕೆ ಕಂಟಕ ಬರುವುದರಲ್ಲಿ ಯಾವ ಅನುಮಾನವೂ ಇಲ್ಲ. ಇವೆಲ್ಲವನ್ನೂ ಆಳುವ ವರ್ಗ ಗಣನೆಗೆ ತೆಗೆದುಕೊಳ್ಳುವ ಬಗ್ಗೆ ನಿಡ್ಡೋಡಿ ಮತ್ತು ಪರಿಸರದ ಜನತೆಗೆ ಯಾವ ನಂಬಿಕೆಯೂ ಉಳಿದಿಲ್ಲ. ಯಾಕೆಂದರೆ ಅಧ್ಯಯನ ವರದಿಗಳ ವಂಚನೆಯ ಜಾಲ ನಿಡ್ಡೋಡಿಯ ಪ್ರತಿಯೋರ್ವ ನಾಗರಿಕನಿಗೂ ಮನದಟ್ಟಾಗಿದೆ.

ಯೋಜನೆ ಯಾಕೆ ಬೇಡ?

ಈಗಾಗಲೇ ಪಡುಬಿದ್ರಿಯಲ್ಲಿ ನೆಲೆಯಾಗಿರುವ ಯುಪಿಸಿಎಲ್‌ನಿಂದಾಗಿ ಸಾವಿರಾರು ಎಕರೆ ಕೃಷಿಭೂಮಿ ಉಪ್ಪು ನೀರಿನಿಂದ ತುಂಬಿಕೊಂಡಿದೆ. ಅಂತರ್ಜಲ ಕಲುಷಿತಗೊಂಡಿರುವುದರಿಂದ ಬಾವಿಯ ನೀರು ಕುಡಿಯಲು ಯೋಗ್ಯವಾಗಿಲ್ಲ. ಇದೇ ಪರಿಣಾಮ ನಿಡ್ಡೋಡಿಯಲ್ಲೂ ಆಗುವುದರ ಬಗ್ಗೆ ಯಾವ ಸಂಶಯವೂ ಇಲ್ಲ. ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರಗಳು ಹೊರಸೂಸುವ ಹಾರು ಬೂದಿಯ ದೆಸೆಯಿಂದ ಮಲ್ಲಿಗೆ ಕೃಷಿಗೆ ಮಾರಕ ಹೊಡೆತ ಬೀಳಲಿದೆ. ಅಡಿಕೆ ಗಿಡಗಳ ಹಿಂಗಾರಗಳಲ್ಲಿ (ಹೂಬಿಡುವ ಹಾಳೆ) ಹಾರುಬೂದಿಯು ಕೂತು ಹಿಂಗಾರಗಳನ್ನು ಅವು ಉದುರಿಸುತ್ತವೆ. ಈಗಾಗಲೇ ಹಳದಿ ಎಲೆರೋಗ, ನುಸಿರೋಗ, ಕೊಳೆರೋಗಗಳಿಂದ ಹೈರಾಣಾಗಿರುವ ಅಡಿಕೆ ಕೃಷಿಕ ಹಾರುಬೂದಿಯ ಉಪಟಳದಿಂದ ಬೀದಿಗೆ ಬೀಳುವ ಸಾಧ್ಯತೆ ನಿಚ್ಚಳವಾಗಿದೆ. ಕರಾವಳಿಯ ಪ್ರಮುಖ ವಾಣಿಜ್ಯ ಬೆಳೆಗಳಲ್ಲೊಂದಾದ ತೆಂಗು ಕೃಷಿಯನ್ನು ಹಾರುಬೂದಿ ವಿನಾಶದಂಚಿಗೆ ತಳ್ಳುತ್ತಿದೆ. ಯುಪಿಸಿಎಲ್‌ನಿಂದಾಗಿ ಈಗಾಗಲೇ ಸುತ್ತಮುತ್ತಲ 10 ಕಿಲೋ ಮೀಟರ್ ಪ್ರದೇಶದ ಜನರಲ್ಲಿ ಉಸಿರಾಟದ ತೊಂದರೆ, ಅಸ್ತಮಾ, ಅಲರ್ಜಿ ರೋಗಗಳು ಕಾಣಿಸಿಕೊಂಡಿವೆ. ಹಾರುಬೂದಿಯು ಚರ್ಮ ರೋಗ ಮತ್ತು ಚರ್ಮಕ್ಕೆ ಸಂಬಂಧಿಸಿದ ಕ್ಯಾನ್ಸರ್ ಕಾಯಿಲೆಗೆ ಕಾರಣವಾಗುತ್ತದೆ ಎಂಬುವುದನ್ನು ಜಗತ್ತಿನಾದ್ಯಂತ ವೈದ್ಯಕೀಯ ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ.

ನಿಡ್ಡೋಡಿ ಪ್ರಾಜೆಕ್ಟ್‌ನಿಂದಾಗಿ ಅಲ್ಲಿನ ಎರಡು ಮುಖ್ಯ ನದಿಗಳಾದ ಶಾಂಭವಿ ಮತ್ತು ನಂದಿನಿ ಬತ್ತುವ ಸಾಧ್ಯತೆಯೂ ಇದೆ ಅಥವಾ ಕಲ್ಲಿದ್ದಲು ಆಧಾರಿತ ಉಷ್ಣ ವಿದ್ಯುತ್ ಸ್ಥಾವರವು ಹೊರಸೂಸುವ ಕಲ್ಮಶಗಳಿಂದಾಗಿ ನದಿ ನೀರು ಕಲುಷಿತಗೊಂಡು ಇದೇ ನದಿಗಳ ನೀರನ್ನೇ ಆಧರಿಸಿ ಬೆಳೆಯುವ ಆಹಾರ ಬೆಳೆಗಳು ವಿಷಕಾರಕ ರಾಸಾಯನಿಕಗಳಿಂದ ತುಂಬುವ ಸಾಧ್ಯತೆ ಇದೆ. ನದಿ ನೀರು ಆಶ್ರಿತ ಈ ಭಾಗದ ಕೃಷಿ ಭೂಮಿ ಬರಡಾಗಲಿದೆ. ಕೈಗಾರಿಕೆಯ ಕಲ್ಮಶಗಳಿಂದ ತುಂಬಿದ ನೀರು ಪ್ರದೇಶದ ಮಣ್ಣಿನ ಫಲವತ್ತತೆಯನ್ನು ಕಸಿದುಕೊಳ್ಳಲಿದೆ.

ವಿಮಾನಾಪಘಾತದಲ್ಲೂ ಉಷ್ಣ ವಿದ್ಯುತ್ ಸ್ಥಾವರದ ಪಾತ್ರವಿದೆ ಎಂದರೆ ನಾವು ನಂಬಲೇಬೇಕು. ಸದ್ರಿ ಕ್ಷೇತ್ರದ ವಿಷಯ ಪರಿಣತರೇ ಈ ಸತ್ಯವನ್ನು ಒಪ್ಪುತ್ತಾರೆ. ವಿಷಯ ಪರಿಣತರ ಪ್ರಕಾರ ಯಾವುದೇ ಉಷ್ಣವಿದ್ಯುತ್ ಸ್ಥಾವರಗಳು ವಿಮಾನ ನಿಲ್ದಾಣವೊಂದರಿಂದ ವೈಮಾನಿಕ ಅಂತರ 25 ಕಿಲೋಮೀಟರ್ ದೂರವಿರಬೇಕು. ಯುಪಿಸಿಲ್ ಮತ್ತು ಮಂಗಳೂರು ಬಜ್ಪೆ ವಿಮಾನ ನಿಲ್ದಾಣದ ಮಧ್ಯೆ ಅಷ್ಟು ಅಂತರವಿಲ್ಲ. ಕಳೆದ ಮೂರು ವರ್ಷಗಳ ಹಿಂದೆ ಮಂಗಳೂರಿನಲ್ಲಿ ಘಟಿಸಿದ ವಿಮಾನಾಪಘಾತದಲ್ಲಿ ಯುಪಿಸಿಎಲ್‌ನ ಕೊಡುಗೆ ಇದ್ದಿರಲೂಬಹುದು. ನಿಡ್ಡೋಡಿ ಪ್ರಾಜೆಕ್ಟ್ ಪ್ರದೇಶದಿಂದ ಬಜ್ಪೆ ವಿಮಾನ ನಿಲ್ದಾಣಕ್ಕಿರುವ ವೈಮಾನಿಕ ಅಂತರ 20 ಕಿಲೋಮೀಟರ್‌ಗಳಿಗಿಂತಲೂ ಕಡಿಮೆ. ಇದು ವೈಮಾನಿಕ ದುರಂತಗಳಿಗೆ ದಾರಿ ಮಾಡಿಕೊಡಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.

ನಿಡ್ಡೋಡಿ ಯೋಜನೆಗೆ ನಾಲ್ಕು ಗ್ರಾಮಗಳಿಂದ 4,000 ಎಕರೆ ಜಮೀನನ್ನು ಸ್ವಾಧೀನಪಡಿಸಲು ಸರಕಾರ ಮುಂದಾಗಿದೆ. ಮುಂದಿನ ಹಂತದಲ್ಲಿ ಮತ್ತೆ 8,000 ಎಕರೆ ಜಮೀನನ್ನು ಸ್ವಾಧೀನಪಡಿಸುವ ಯೋಚನೆಯೂ ಸರಕಾರಕ್ಕಿದೆ. ಅದಕ್ಕಾಗಿ ಮತ್ತಷ್ಟು ಗ್ರಾಮಗಳು ಬಲಿಯಾಗಬೇಕಾಗುತ್ತದೆ. ಅಳಿದುಳಿದ ಭತ್ತದ ಕೃಷಿಯು ಸಂಪೂರ್ಣವಾಗಿ ಇಲ್ಲವಾಗುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ. ಇಂತಹ ಆತಂಕದ ಹಿಂದೆ ವಾಸ್ತವಾಂಶ ಇದೆ. ಯಾಕೆಂದರೆ ಕರಾವಳಿ ಜಿಲ್ಲೆಗಳಲ್ಲಿ ವಿವಿಧ ಯೋಜನೆಗಳಿಗಾಗಿ ಜನರಿಂದ ಕಿತ್ತುಕೊಳ್ಳಲಾದ ಭೂಮಿಗಳಲ್ಲಿ ಬಹುತೇಕ ಭೂಮಿ ಮೂರು ಬೆಳೆ ಬೆಳೆಯುತ್ತಿದ್ದ ಭತ್ತದ ಕೃಷಿ ಭೂಮಿಗಳೇ ಆಗಿವೆ. ಸರಕಾರಗಳ ಇಂತಹ ಜನವಿರೋಧಿ ನೀತಿಗಳ ಪರಿಣಾಮವಾಗಿಯೇ ಆಹಾರ ಸಾಮಗ್ರಿಗಳ ಬೆಲೆಯು ದಿನೇದಿನೇ ಗಗನಮುಖಿಯಾಗಿರುವುದು. ಮಂಗಳೂರು ಆಸುಪಾಸಿನಲ್ಲಿ ಸರಕಾರ ಬಂಡವಾಳಶಾಹಿಗಳ ಜೇಬು ತುಂಬಿಸಲು ರೈತರಿಂದ ಕಸಿದುಕೊಂಡ ಫಲವತ್ತಾದ ಕೃಷಿ ಭೂಮಿಯ ಪ್ರಮಾಣ ಮತ್ತು ಹಾಗೆ ಕಸಿದುಕೊಂಡ ಫಲವತ್ತಾದ ಜಮೀನುಗಳಲ್ಲಿ ಸ್ಥಾಪಿಸಲಾದ ಪರಿಸರ ಕಂಟಕ ಯೋಜನೆಗಳ ಪಟ್ಟಿಯನ್ನೊಮ್ಮೆ ಅವಲೋಕಿಸಿದರೆ ಮುಂದಿನ ದಿನಗಳಲ್ಲಿ ಕರಾವಳಿಯಲ್ಲಿ ಭತ್ತದ ಕೃಷಿ ಸಂಪೂರ್ಣ ಇಲ್ಲವಾಗುವ ಕುರಿತಾದ ಜನರ ಆತಂಕದಲ್ಲಿ ಖಂಡಿತವಾಗಿಯೂ ಹುರುಳಿದೆ.

ದಿನಕ್ಕೆ ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು 1,400 ಟ್ರಕ್ ಕಲ್ಲಿದ್ದಲನ್ನು ಉರಿಸಬೇಕು. ನಾಲ್ಕು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು 5,600 ಟ್ರಕ್ ಕಲ್ಲಿದ್ದಲನ್ನು ಉರಿಸಬೇಕು. ಒಂದೆಡೆ ಸಮುದ್ರ, ಇನ್ನೊಂದೆಡೆ ಪಶ್ಚಿಮ ಘಟ್ಟ ಇರುವ ನಿಡ್ಡೋಡಿಯಲ್ಲಿ ಇಷ್ಟು ಬೃಹತ್ ಪ್ರಮಾಣದ ಕಲ್ಲಿದ್ದಲನ್ನು ಉರಿಸಿದರೆ ಅದು ಪರಿಸರದ ಮೇಲೆ, ಜನಾರೋಗ್ಯದ ಮೇಲೆ ಬೀರಬಲ್ಲ ಪ್ರತಿಕೂಲ ಪರಿಣಾಮದ ಬಗ್ಗೆ ಊಹಿಸಿದರೆ ಮೈ ಜುಮ್ಮೆನ್ನುತ್ತದೆ.

● ಇಸ್ಮತ್ ಫಜೀರ್

...ಸಹಜ ಬದುಕಿನ ನೆಮ್ಮದಿಗಾಗಿ


...ಮನುಷ್ಯ ಸಹಜವಾಗಿರಬೇಕು, ನೈಸರ್ಗಿಕವಾಗಿರಬೇಕು. 'ನೀನು ತಲೆಗೆ ... ಹಾಕಿಕೊಳ್ಳುವುದನ್ನು ನಿಲ್ಲಿಸು' ಎಂದು ಆತ ಗೆಳೆಯನಿಗೆ ಹೇಳಿದ. ...ಗಾದರೆ ನೀನೂ ಕೆಲವು ಶರತ್ತುಗಳಿಗೆ ಬದ್ಧನಾಗಿರಬೇಕಾಗುತ್ತದೆ.'

'ಯಾವ ಶರತ್ತು?'

'ನೀನು ನಾಳೆಯಿಂದ ಶೇವ್ ಮಾಡಿಕೊಳ್ಳದಿದ್ದರೆ, ಬಟ್ಟೆ ಹಾಕಿಕೊಳ್ಳದಿದ್ದರೆ, ...ದು ಕತ್ತರಿಸಿಕೊಳ್ಳದಿದ್ದರೆ, ಪುಸ್ತಕ ಓದದಿದ್ದರೆ, ಪೂಜೆ ಮಾಡದಿದ್ದರೆ, ... ಉಜ್ಜಿಕೊಳ್ಳದಿದ್ದರೆ....' ಎಂದು ದೊಡ್ಡ ಪಟ್ಟಿಯನ್ನೇ ಆತ ಕೊಟ್ಟ.

...ಈಗ ಯೂರೋಪಿನಲ್ಲಿ ಪಾರ್ಲಿಮೆಂಟ್ ಚುನಾವಣೆ ನಡೆಯುತ್ತಿದೆ; ...ನಲ್ಲೂ ಒಂದು ಪಾರ್ಲಿಮೆಂಟನ್ನು ರೂಪಿಸಲಾಗಿದೆ. ಈ ಪಾರ್ಲಿಮೆಂಟ್‌ಗೆ ...ರ್ಗಿಕವಾಗಿ ರೂಪಿಸುವುದರಲ್ಲಿ ಎಲ್ಲರ ಕುತೂಹಲ ಕೆರಳಿಸುವುದು ಇಂಗ್ಲೆಂಡಿನ ...ಫ್ ದಿ ಹಾರ್ಟ್'. ಇದಕ್ಕೆ ಬಾಸ್ ರಾಜಕುಮಾರ ಚಾರ್ಲ್ಸ್. ಈತನಿಗೆ ಹೈಬ್ರಿಡ್ ಕಂಡರಾಗುವುದಿಲ್ಲ; ಹಸು, ಗೋಧಿ, ಭತ್ತ, ಹಣ್ಣು ಎಲ್ಲವೂ ಮೂಲದಲ್ಲಿ ಇದ್ದಂತೆಯೇ ಇರಬೇಕೆಂದು ಚಾರ್ಲ್ಸ್ ವಾದಿಸುತ್ತಾನೆ. ಆತನಿಗೆ ಉತ್ತರಿಸುವವರು, 'ಯಾವುದು ನ್ಯಾಚುರಲ್? ಜೆನೆಟಿಕ್ ಇಂಜಿನಿಯರಿಂಗ್‌ನ್ನು ಪ್ರಕೃತಿಯೇ ಮಾಡಿದ್ದರೆ ಏನನ್ನುತ್ತೀರಿ? ಕಾಡಿನ ತೋಳಕ್ಕೂ ಊರಿನ ನಾಯಿಗೂ ವ್ಯತ್ಯಾಸವಿದೆ; ತೋಳದ ಒಂದು ಮಾದರಿ ನಾಯಿ. ಹಾಗೆಯೇ ಗೋಡಂಬಿಯ ಒಂದು ರೂಪ ಮಾವು. ಇಂಥ ಸಾವಿರಾರು ಉದಾಹರಣೆ ನಿಸರ್ಗದಲ್ಲೇ ಇವೆ. ಇವತ್ತು ಮನುಷ್ಯ ಹೈಬ್ರಿಡ್ ತಳಿ ರೂಪಿಸಿ ಭಾರತದಂಥ ಕಡೆ ಒಂದಕ್ಕೆ ಐದರಷ್ಟು ಹೆಚ್ಚು ಬೆಳೆದು ಎಲ್ಲರ ಹಸಿವು ನೀಗಿಸುತ್ತಿದ್ದಾನೆ...

ಹಾಗಾದರೆ ನೈಸರ್ಗಿಕವಾದದ್ದು ಯಾವುದು? ಇದು ವಿಜ್ಞಾನದ ಪ್ರಶ್ನೆಯಲ್ಲ, ಯಾಕೆಂದರೆ ಪ್ರಕೃತಿಯೇ ವಿಚಿತ್ರ ವಿಜ್ಞಾನಿ. ಇದು ನೈತಿಕತೆಯ ಪ್ರಶ್ನೆ, ಯಾವುದು ನಮ್ಮನ್ನು ಖುಷಿಪಡಿಸುತ್ತದೆ ಎನ್ನುವುದು ಮಾತ್ರ ಇಲ್ಲಿಯ ಪ್ರಶ್ನೆ. ನಾವು ಚಿಕ್ಕವರಾಗಿದ್ದಾಗ ಹುಟ್ಟಿಸಿದ ದೀಪ, ಆಮೇಲೆ ಬಂದ ಲಾಟೀನು, ಆಳವಾದ ಬಾವಿಗಳು, ಬಟ್ಟೆ ಒಗೆಯುತ್ತಿದ್ದ ಕೆರೆಗಳು.... ಎಲ್ಲವೂ ನೆನಪಿನಲ್ಲಿ ಸುಂದರವಾಗಿ



ಮಾತ್ರ ಉಳಿಯುತ್ತವೆ. ರಾಗಿ ಬೀಸುವುದು ಒಂದು ಸುಂದರ ಜಾನಪದ ಕ್ರಿಯೆ; ಹಾಡುತ್ತಾ, ಹಳ್ಳಿಯ ಮೌನಕ್ಕೆ ಹಾಡುಗಳ ಗೆರೆ ಬರೆಯುತ್ತಿದ್ದ ಹಳ್ಳಿಗರು ಇವತ್ತು ಆದರ್ಶ ವ್ಯಕ್ತಿಗಳಾಗಿ ಕಾಣುತ್ತಾರೆ. ಆದರೆ ಅದೆಲ್ಲ ಸುಳ್ಳು. ರಾಗಿ ಬೀಸುವವರಿಗೆ ಅದರ ಕಷ್ಟ ಗೊತ್ತು. ಹಾಗೆಯೇ ಮನೆಗೆ ಬೇಕಾದಷ್ಟು ನೀರು ಸೇದುತ್ತಿದ್ದವರಿಗೆ. ಈಗ ಕೋಣಮೋಟಾರುಗಳಿವೆ ಹಲ್ಲರ್‌ಗಳಿವೆ. ಜನಕ್ಕೆ ಸಾಕಷ್ಟು ವೇಳೆ ಉಳಿಯುತ್ತದೆ. ಈ ಬದುಕಿನ ವೇಳೆಯಲ್ಲಿ ಜನರ ಕೈಗೆ ಕೆಲಸವಿಲ್ಲದಿದ್ದರೆ ಅದು ನಿರುದ್ಯೋಗ; ಬದುಕಲು ಬೇಕಾದಷ್ಟು ಅನ್ನ, ಮನೆ, ಲೈಂಗಿಕ ನೆಮ್ಮದಿ, ಕುಟುಂಬ ಸೌಖ್ಯ ದೊರಕಿಸಿಕೊಳ್ಳಲಾಗದಿದ್ದರೆ ಅದು ನಿರುದ್ಯೋಗದ, ವಿಕೃತ ಸ್ಥಿತಿ.' ಹೀಗೆಂದು ಹೇಳಿದಾಗ ರಾಜಕುಮಾರ ಚಾರ್ಲ್ಸ್ ಮುಂತಾದ... ಆದರೆ ಅವನಿಗೆ ಧೈರ್ಯ ಕೊಡಬೇಕಾದಷ್ಟು ಎಲ್ಲರ ಕರ್ತವ್ಯ. ಇವತ್ತಿಗೂ ನೈಸರ್ಗಿಕ ಬದುಕು ಎಷ್ಟು ಬೇಕು ಎಂದು ಎಲ್ಲರೂ ಅರಿತುಕೊಂಡರೆ ಒಳ್ಳೆಯದು. ಈ ನೆಲದ ಮೇಲೆ ಬದುಕುವವರು ತಮ್ಮ ಮಾನಸಿಕ, ದೈಹಿಕ ಆರೋಗ್ಯಕ್ಕೆ ತಕ್ಕಂತೆ ಅಂಗಸಾಧನೆ ಬೆಳೆಸಿಕೊಳ್ಳುವ ಹಾಗೆಯೇ ಇದು.

● ಜೂನ್ 16, 1999

ರಂಗ-ಅಂತರಂಗ

ಮಂಡ್ಯದ 'ಗೆಳೆಯರ ಬಳಗ' ನಾಟಕ ತಂಡ

1979ನೇ ಇಸವಿ ಆಗತಾನೇ ಎಂ.ಎ. ಪದವಿ ಮುಗಿಸಿ ಅಧ್ಯಾಪನ ವೃತ್ತಿಯನ್ನು ಹಿಡಿದಿದ್ದ ಪಿ.ಇ.ಎಸ್. ವಿಜ್ಞಾನ ಮತ್ತು ಕಲಾ ಕಾಲೇಜು ಮತ್ತು ಪಿ.ಇ.ಎಸ್. ಸಂಜೆ ಕಾಲೇಜುಗಳ ಕೆಲವು ಆಸಕ್ತ ಅಧ್ಯಾಪಕರುಗಳ


ಬಿ.ವಿ. ಕಾರಂತ ನಿರ್ದೇಶನದ, ಜಯಂತ ಕಾಯ್ಕಿಣಿ ರಚಿಸಿರುವ ಸೇವಂತಿ ನಾಟಕ ಅಭಿನಯಿಸುತ್ತಿರುವವರು : ಲೈಬ್ರರಿ ಶಿವರಾಂ, ಕೋಣನಹಳ್ಳಿ ಚಂದ್ರು, ಸುಷ್ಮಾ.

ರಂಗಾಸಕ್ತಿಯಿಂದ ಮೈದಳೆದಿದ್ದೇ ಮಂಡ್ಯದ ಗೆಳೆಯರ ಬಳಗ ರಂಗ ತಂಡ. ಆರಂಭದಲ್ಲಿ ಪಿ.ವಿ.ಲಲಿತಾರ ಶಾಸ್ತ್ರೀಯ ಸಂಗೀತದ ಮೂಲಕ ಉದ್ಘಾಟನೆಯಾದರೂ ಬಳಗದ ಎಲ್ಲಾ ಸದಸ್ಯರ ಮನಸ್ಸಿನೊಳಗೂ ನಾಟಕದ ಗುಂಗೇ ಪ್ರಧಾನವಾಗಿತ್ತು. ಹೀಗಾಗಿ ನಾಟಕದ ಸಂಕ್ರಮಣ ಶುರುವಾದದ್ದ 'ಸಮುದಾಯ' ರಂಗತಂಡದ ಖ್ಯಾತ ರಂಗಕರ್ಮಿ ಎಂ.ಎಸ್. ಸತ್ಯು ನಿರ್ದೇಶನದ 'ಕುರಿ' ನಾಟಕದ ಮೂಲಕ. ಮಂಡ್ಯದ ನೆಲದಲ್ಲಿ ಹೊಸ ಅಲೆಯ ನಾಟಕವನ್ನು ಜನತೆಗೆ ಪರಿಚಯಿಸಿದ ಕೀರ್ತಿ ಗೆಳೆಯರ ಬಳಗದ್ದು. ನಂತರ ರಂಗಸಂಪದದ ಮೂರು ನಾಟಕಗಳಾದ ಚೋಮ, ಸಂಗ್ಯಾ-ಬಾಳ್ಯಾ, ಕದಡಿದ ನೀರು ನಾಟಕೋತ್ಸವ ನಾಟಕಗಳ ತಂತ್ರಜ್ಞಾನ, ರಂಗಸಜ್ಜಿಕೆ, ಬೆಳಕು, ರಂಗಶಿಸ್ತು ಬೆರಗುಗೊಳಿಸುವಂತಹ ಅಭಿನಯ, ಹಾಡುಗಾರಿಕೆ ಇವೆಲ್ಲಾ ಮಂಡ್ಯದ ಜನರಲ್ಲಿ ಹೊಸ ಸಂಚಲನ ಉಂಟುಮಾಡಿ ಹೊಸ ಪ್ರೇಕ್ಷಕವಲಯವನ್ನು ಹುಟ್ಟುಹಾಕಿದ್ದಲ್ಲದೇ, ಬಳಗದಿಂದ ಹೊಸ ನಾಟಕವೊಂದನ್ನು ಅಭಿನಯಿಸುವಂತೆ ಪ್ರೇರೇಪಿಸಿತು. ಇಷ್ಟರಲ್ಲಾಗಲೇ ಈ ಸಂಘಟಕರು ಆಗಿನ ರಂಗಚೇತನ, ನಿತ್ಯಸಚಿವ ಕೆ.ವಿ.ಶಂಕರಗೌಡರ ಕಣ್ಣಿಗೆ ಗೋಚರಿಸಿ ಅವರೂ ಇವರ ಸಾಹಸಕ್ಕೆ ಬೆನ್ನುತಟ್ಟುತ್ತಾ ಆರ್ಥಿಕ ನೆರವು ನೀಡುತ್ತಾ ಬಳಗದ ಪೋಷಕರಾದರು. ಆಗಲೇ ಅಶೋಕ ಬಾದರದಿನ್ನಿಯವರು ಮಂಡ್ಯಕ್ಕೆ ಬಂದು ಒಂದು ರಂಗ ಕಾರ್ಯಾಗಾರದ ಜೊತೆಗೆ ಲಂಕೇಶ್‌ರ ಸಂಕ್ರಾಂತಿ, ಎ.ಎಸ್.ಮೂರ್ತಿರವರ ದನಿ ಇಲ್ಲದವರು ಎಂಬ ಎರಡು ನಾಟಕಗಳನ್ನು ನಿರ್ದೇಶಿಸಿದರು. ಈ ಎರಡು ನಾಟಕಗಳ ಮೂಲಕ ಬೆಳಕಿಗೆ ಬಂದ ಕಾಂತರಾಜು, ಲೈಬ್ರರಿ ಶಿವರಾಂ, ಜಯಪ್ರಕಾಶ್‌ಗೌಡ, ಮಂಡ್ಯ ರಮೇಶ್, ಮೋಹನ್‌ರಾಜ್, ರಾಮಕೃಷ್ಣ ಮುರುಳೀಧರ್, ನಾರಾಯಣಶೆಟ್ಟಿ, ನಾಗರಾಜಮೂರ್ತಿ, ಆಟೋಪ್ರಕಾಶ್ ಮುಂತಾದ ನಟರು ಗೆಳೆಯರ ಬಳಗದ ಐಕಾನ್‌ಗಳಾಗಿ ಮಿಂಚತೊಡಗಿದರು. ಇದೆಲ್ಲಾ ಆದದ್ದು ಮಂಡ್ಯ ನೆಲದಲ್ಲಿ ಒಂದು ಸುಸಜ್ಜಿತ ರಂಗಮಂದಿರ ಇಲ್ಲದ 1980-81ರ ಕಾಲಘಟ್ಟದಲ್ಲಿ ಎಂಬುದನ್ನು ಗಮನಿಸಬೇಕು. ಇವರೆಲ್ಲರ ಪ್ರಾಮಾಣಿಕ ಆಸಕ್ತಿ ಗಮನಿಸಿದ ಕೆ.ವಿ.ಶಂಕರೇಗೌಡರು ಕಾಲೇಜಿನ ಆವರಣದಲ್ಲಿಯೇ ಶ್ರೀ ವಿವೇಕಾನಂದ ರಂಗಮಂದಿರವನ್ನು ನಿರ್ಮಿಸಿಕೊಟ್ಟರು. ಇದು ಈಗಲೂ ಮಂಡ್ಯದಲ್ಲಿ ಪ್ರೊಸೀನಿಯಂ ನಾಟಕ ಎಂದಾಕ್ಷಣ ನೆನಪಾಗುವ ಸುಸಜ್ಜಿತ ರಂಗಮಂದಿರ ಎನಿಸಿಕೊಂಡಿದೆ.

ನಂತರ ಉತ್ತರ ಪ್ರದೇಶದ ಅತುಲ್ ತಿವಾರಿ ನಿರ್ದೇಶಿಸಿದ ಜೂಲಿಯಸ್ ಸೀಸರ್ ನಾಟಕವು ಮಂಡ್ಯದಲ್ಲಿ ಪ್ರಪ್ರಥಮವಾಗಿ ಪ್ರದರ್ಶನಗೊಂಡ ಆಪ್ತರಂಗಭೂಮಿಯ ಪ್ರಯೋಗ. ಈ ನಾಟಕ ಪ್ರದರ್ಶನದ ಇನ್ನೊಂದು ವಿಶೇಷವೆಂದರೆ ದಿನಕ್ಕೆ ಮೂರು ಪ್ರದರ್ಶನದಂತೆ (ಬೆಳಗ್ಗೆ, ಮಧ್ಯಾಹ್ನ, ಸಂಜೆ ಪ್ರದರ್ಶನ) ನಿರಂತರ ಎಂಟು ದಿನಗಳು ಪ್ರದರ್ಶನ ಕೊಟ್ಟಿದ್ದು ತಂಡದ ನಟರ ಸಂಘಟಕರ ಗಟ್ಟಿತನವನ್ನು ಅಂದಾಜು ಮಾಡಬಹುದಾಗಿದೆ.



ಅಶೋಕ ಬಾದರದಿನ್ನಿ ನಿರ್ದೇಶನದ, ಗಿರೀಶ್ ಕಾರ್ನಾಡ್ ರಚಿಸಿರುವ ತುಘಲಕ್ ನಾಟಕ. ಅಭಿನಯಿಸುತ್ತಿರುವವರು: ಲೈಬ್ರರಿ ಶಿವರಾಂ, ವಿನಯ್ ಕುಮಾರ್, ಶಶಿಅಪೂರ್ವ.


ನಂತರ ಬಂದ ಸಿ.ಜಿ.ಕೆ. ಬರೇ ಏಳು ದಿನಗಳಲ್ಲಿ ತಬರನಕತೆಯನ್ನು ನಾಟಕ ಮಾಡಿಸಿದ್ದು ಒಂದು ಇತಿಹಾಸವೇ ಸರಿ. ಈ ನಾಟಕದಲ್ಲಿ ಲೈಬ್ರರಿ ಶಿವರಾಂ ಅವರು ತಬರನಾಗಿ ಅದ್ಭುತವಾಗಿ ನಟಿಸಿದ್ದು ಇನ್ನೂ ಮಂಡ್ಯ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಜಯತೀರ್ಥಜೋಶಿ ಅವರು ಡಾ.ಬೆಸಗರಹಳ್ಳಿ ರಾಮಣ್ಣರವರ ಕಥೆ ಆಧರಿಸಿದ


'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ವ 'ಚಲುವನ ಪರಂಗಿ ಗಿಡಗಳು' ನಾಟಕಗಳ ಪ್ರಯೋಗಿಸಿದರು. ಇಷ್ಟೆಲ್ಲಾ ವೇಗ ಗೆಳೆಯರ ಬ ಸಾಧ್ಯವಾಗಿದ್ದು ಜೆಪಿ ಎಂದೇ ಪ್ರಖ್ಯಾತರಾಗಿ ಜಯಪ್ರಕಾಶಗೌಡರಂತಹ ಸೇನಾನಿ ಮತ್ತು ಇವ ಸಂಘಟನೆಗೆ ತಳಮಟ್ಟದಲ್ಲಿ ಶಿಸ್ತಿನ ಸಿಪಾಯಿಯ ದುಡಿಯುತ್ತಿದ್ದ ಲೈಬ್ರರಿ ಶಿವರಾಮ್ ಅವರಿಂದಾಗಿ. ಆಗಿ ಬಳಗದ ಪದಾಧಿಕಾರಿಗಳಿರಲಿ, ನಿರ್ದೇಶಕರೂ ಆಗಿರ ಎಂಬುದು ಇವರ ನಿಶ್ಕಲ್ಮಶ ರಂಗಪ್ರೀತಿಗೆ ಸಾಕ್ಷಿಯಾ ಇವರಿಬ್ಬರ ಹಿಂದೆ ಪ್ರೋತ್ಸಾಹಕರಾಗಿ ಅಧ್ಯಕ್ಷ ರಾಮೇಗೌ ಮತ್ತು ಕಾರ್ಯದರ್ಶಿಯಾಗಿ ಜೆ.ಟಿ.ವೀರಪ್ಪನವರು ಹಾ ಖಜಾಂಚಿಯಾಗಿ ಆರ್.ಎ.ಕುಮಾರ್ ಇದ್ದೇ ಇ ಅನ್ನುವುದನ್ನು ಮರೆಯುವಂತಿಲ್ಲ. ಇದಲ್ಲದೇ ವ ಒಂದಾವರ್ತಿ 'ಕೀಲಾರ ವೀರಪ್ಪ ವೀರಮ್ಮ' ರಾಜ್ಯಮ ಭಾವಗೀತೆ ಸ್ಪರ್ಧೆ ಮಂಡ್ಯದಲ್ಲಿ ಏರ್ಪಡಿಸಿ ಇಲ್ಲಿಯವ ಅಂದರೆ ಸತತ 34 ವರ್ಷಗಳಿಂದ ಸ್ಪರ್ಧೆಯ ವಿಜೇತರಾದವರಿಗೆ ಬಳಗದ ವತಿಯಿಂದ ಪಾರಿತೋಷಕ ನೀಡುತ್ತಾ ಬಂದಿದೆ. ಆಗಿನ ಹೊಸ ತಲೆಮಾರಿನ ನಿರ್ದೇಶಕರೆನಿಸಿದ ಸಿ.ಬಸವಲಿಂಗಯ್ಯ 'ಅಂಧಯುಗ' ವ 'ಸಾಯೋ ಆಟ ಮತ್ತು ಜಾತ್ರೆ' ಎಂಬ ನಾಟಕಗ ನಿರ್ದೇಶಿಸಿದ್ದಾರೆ.


ಮೂರು ಬಾರಿ ಗೆಳೆಯರ ಬಳಗ ಭಾರತದ ರಾಜ ದೆಹಲಿಗೆ ಇಡೀ ನಾಟಕ ತಂಡವನ್ನು ಕರೆದೊ ನಾಟಕಗಳನ್ನು ಪ್ರದರ್ಶಿಸಿದೆ.

ಈ ನಾಟಕಗಳೇ ಹೀಗೆ.... ರೋಚಕತೆ, ಅ ಅತಿರೇಕದ ದೃಶ್ಯ ಮುಗಿಯುತ್ತಿದ್ದಂತೆಯೇ ಗಾಢ ದು ಬಾರದ ದೃಶ್ಯಗಳು ಬರುವಂತೆ ಗೆಳೆಯರ ಬಳಗವೂ ಗತಿಗೆ ಬಂದುನಿಂತಿತ್ತು. ಸಾಹಿತ್ಯಿಕ ಭಾಷೆಯಲ್ಲಿನ 'ಒ


ಗೆಳೆಯರ ಬಳಗದ ಸೇನಾನಿ, ಸಂಸ್ಥಾಪಕ ಪ್ರೊ.ಜಯಪ್ರಕಾಶಗೌಡ


ಗೆಳೆಯರ ಬಳಗದ ಸಿಪಾಯಿ ಎಂದೇ ಖ್ಯಾತಿಯ ದಿವಂಗತ ಲೈಬ್ರರಿ ಶಿವರಾಂ.



ಗೆಳೆಯರ ಬಳಗದ ಮೊದಲ ಕಾರ್ಯದರ್ಶಿ ಪ್ರೊ.ಜೆ.ಟಿ.ವೀರಪ್ಪ


ಗೆಳೆಯರ ಬಳಗದ ಅರ್ಧವಷ್ಟು ನಾಟಕ ಮುಖ್ಯ ಪಾತ್ರ ವಹಿಸುತ್ತಿದ್ದ ನಾಗರಾಜಮೂರ್ತಿ (ನಾಮೂ)

'ರಣಧೀರ' ಋಣಭಾರದಿಂದ ಹೊರಬರುವಂತಾಗಲಿ

ಕನಸುಗಾರ ರವಿಚಂದ್ರನ್ ಕೋಟಿ ಸಾಲಗಳ ದುಸ್ವಪ್ನದಲ್ಲಿ ಮುಳುಗಿರುವ ಸುದ್ದಿ ಓದಿ ಬೇಸರವಾಯಿತು. ಇತ್ತೀಚೆಗೆ ಟಿವಿ ಚಾನೆಲ್ ಒಂದರಲ್ಲಿ ಇದೇ ರವಿ "2013 ರವಿಚಂದ್ರನ್ ವರ್ಷವಾಗಲಿದೆ ನೋಡಿ" ಎಂಬಂತಹ ಮಾತಾಡಿದ್ದರು. ಕನ್ನಡ ಚಿತ್ರರಂಗದ ಮರೆಯಲಾಗದ ಮಹನೀಯರಲ್ಲಿ ಒಬ್ಬರಾದ ವೀರಾಸ್ವಾಮಿಯವರ ಮಗನಾದ ರವಿಚಂದ್ರನ್‌ರ ಕೊಡುಗೆಯೂ ಕನ್ನಡ ಚಿತ್ರರಂಗಕ್ಕೆ ಸಾಕಷ್ಟಿದೆ. ಸಾಲಗಳಿದ್ದ ಮಾತ್ರಕ್ಕೆ ವ್ಯಕ್ತಿಯೊಬ್ಬ ಮುಳುಗಿಹೋದ ಎಂದೇನಿಲ್ಲ. ಆದರೆ ಆತ ತನ್ನ ಎಡವಟ್ಟುಗಳನ್ನು ತಿದ್ದಿಕೊಳ್ಳದೇ ಹೋದರೆ ಆತನನ್ನು ಯಾವ ದೇವರೂ ಖಂಡಿತ ಕಾಪಾಡಲಾರ.





ಪಾರ್ವತೀಶ ಅವರು ತಮ್ಮ ಲೇಖನದಲ್ಲಿ ಎಚ್ಚರಿಸಿದಂತೆ ರವಿ ಮೊದಲು ತನ್ನ ಅಹಂಭಾವವನ್ನು ಮೂಟೆಗಟ್ಟಿ ಬಿಸಾಕಿ ಬರಬೇಕು. ಈ ಕಾರಣಕ್ಕೇ ಬೇರೆಯಾದ ಹಂಸಲೇಖ ಪ್ರಕರಣವೇ ಅವರಿಗೆ ಅವತ್ತು ಪಾಠವಾಗಬೇಕಿತ್ತು. ಗಟ್ಟಿ ಕಥೆಯೇ ಇಲ್ಲದಿದ್ದರೂ (ಡಿಸೈನ್ ಡಿಸೈನ್ ಅಂಗಿ ಹಾಕಿದಾಕ್ಷಣ ನಾಯಕನನ್ನು ಚಿತ್ರದ ನಾಯಕಿ ಬೇರೆಯಾಗಿಯೇ ಗುರುತಿಸುತ್ತಾಳೆ) ಅದ್ದೂರಿತನ, ಸನ್ನಿವೇಶಗಳನ್ನು ಹೆಣೆದ ಬಗೆ, ರುಚಿಗೊಪ್ಪುವ ಮಸಾಲೆಗಳ ಹದವಾದ ಬೆರಕೆ ಇತ್ಯಾದಿಗಳಲ್ಲದೇ ಹಂಸಲೇಖರ ಸಾಂದರ್ಭಿಕವಾಗಿ ಸೆಳೆಯುವ ಸಂಗೀತ ಸರಣಿಯೂ 'ಪ್ರೇಮಲೋಕ'ದ ಅದ್ಭುತ ಯಶಸ್ಸಿಗೆ ಕಾರಣವಾಗಿತ್ತು. (ಬಾಲಿವುಡ್‌ನ ಖ್ಯಾತ 'ಹಮ್ ಆಪ್ ಕೆ ಹೈ ಕೌನ್'ಗೆ ಈ ಚಿತ್ರವೇ ಪ್ರೇರಣೆ ಎಂದು ಅದಕ್ಕೆ ಸಂಬಂಧಿಸಿದವರೊಬ್ಬರು ಹೇಳಿದ್ದು ಈ ಕಾರಣಕ್ಕೇ). ನಂತರದ ಬಿದ್ದು ರವಿಚಂದ್ರನ್ನರದ್ದೇ ಯೋಚನೆ ಹಾಗು ಮಹತ್ವಾಕಾಂಕ್ಷೆಯ 'ಶಾಂತಿ ಕ್ರಾಂತಿ' ಹಾಗು 'ಏಕಾಂಗಿ'ಗಿಂತಲೂ ಅಷ್ಟೊಂದು ಅಬ್ಬರದ ಸುದ್ದಿಯಿಲ್ಲದೇ ಮಾಡಿಮುಗಿಸಿದ್ದ 'ಪುಟ್ನಂಜ', 'ರಾಮಾಚಾರಿ'ಗಳೇ ಸೂಪರ್ ಹಿಟ್ಟಾಗಿ ರವಿಯ ಕೈಹಿಡಿದಿದ್ದವು. ಕನ್ನಡ ಚಿತ್ರ ಹಾಗು ಚಿತ್ರರಂಗಕ್ಕೆ ಶ್ರೀಮಂತಿಕೆಯನ್ನು ತುಂಬಿದವರಲ್ಲಿ ರವಿಚಂದ್ರನ್ ಕೂಡ ಒಬ್ಬರು. ರವಿಚಂದ್ರನ್ ಮೆರೆಯುವ ಕಾಲದಲ್ಲಿ ದ್ವಾರಕೀಶರಂತವರು 'ಹಳೆಕಾಲ'ದವರಾಗಿದ್ದರು. ಇಂದಿನ ಪರಿಸ್ಥಿತಿಯಲ್ಲಿ ರವಿಚಂದ್ರನ್ ಸ್ಥಿತಿಯೂ ಅದೇ ರೀತಿಯಿದೆ. ಈ ಕಾಲದ ಪಲ್ಲಟವನ್ನು ಒಪ್ಪಿ ರವಿಚಂದ್ರನ್ - ಅದರಲ್ಲೂ ನೆಲದಲ್ಲಿ ನಿಂತ ರವಿ - ಕನ್ನಡ ಚಿತ್ರರಂಗವನ್ನು ಮುನ್ನಡೆಸಲು ಖಂಡಿತವಾಗಿಯೂ ಬೇಕು. ಜೂಹಿ ಚಾವ್ಲಾರಿಂದ ಉಮಾಶ್ರೀವರೆಗೆ ಹಲವಾರು ಮಂದಿಗೆ ಬ್ರೇಕ್ ಕೊಟ್ಟ ರವಿಚಂದ್ರನ್‌ರನ್ನ ಬೆಂಬಲಿಸುವವರು ಚಿತ್ರರಂಗದಲ್ಲಿ ಇಲ್ಲ ಎನ್ನಲಾಗದು.

- ಶಶಿ. ಪುತ್ತೂರು

'ಕಂಡಹಾಗೆ' ಅಂಕಣದಲ್ಲಿ (ಆಗಸ್ಟ್ 14, 2013 ಸಂಚಿಕೆ) ಗೌರಿ ಲಂಕೇಶರು ಮಹೇಶ್ ದತ್ತಾನಿಯವರ 'ವೇರ್ ದೇರೀಸ್ ಎ ವಿಲ್' ನಾಟಕದ ಸಾರಂಶವನ್ನು ಬರೆಯುತ್ತಾ ಕೊನೆಗೆ 'ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೋ ಅಥವಾ ಆಸಕ್ತ ತಂಡಗಳಿಗೆ ಕೊಟ್ಟು ಸುಮ್ಮನಾಗಬೇಕೋ' ಎಂಬ ಗೊಂದಲವನ್ನು ವ್ಯಕ್ತಪಡಿಸಿದ್ದಾರೆ.

ಹವ್ಯಾಸಿ ತಂಡಗಳಿಗೆ ಆ ನಾಟಕದ ಪ್ರತಿಯನ್ನು ಕೊಟ್ಟರೆ ಅದು ಒಂದೆರಡು ತಂಡಗಳ ಸ್ವತ್ತಾಗುವ ಸಾಧ್ಯತೆ ಇದೆ.



ಯಾಕೆಂದರೆ ಅವರು ಇತರೆ ತಂಡಗಳಿಗೆ ಅದರ ಪ್ರತಿ ಕೊಡುವುದಿಲ್ಲ. ಆದರೆ ಪುಸ್ತಕ ರೂಪದಲ್ಲಿ ಬಂದರೆ ನಾಡಿನಾದ್ಯಂತ ಎಲ್ಲಾ ಹವ್ಯಾಸಿ ತಂಡಗಳಿಗೂ ಸಿಗುವ ಪ್ರದರ್ಶನಗೊಳ್ಳುವ ಸಾಧ್ಯತೆಗಳಿವೆ. ಹಾಗೆಯೇ ಆಸ ಕೊಂಡು ಓದುವಂತಾಗುತ್ತದೆ. ಆದ್ದರಿಂದ ಹಿಂದೆ ಮ ನೋಡದೆ ಇದನ್ನು 'ಲಂಕೇಶ್ ಪ್ರಕಾಶನ'ದ ಮ ಪ್ರಕಟಿಸಿದರೆ ಒಳ್ಳೆಯದು ಎಂಬುದು ನನ್ನ ಕೋರಿ

-ವಸುಂಧರ ವರದರಾಜ್, ಕೋ

ಗೌರಿ ಲಂಕೇಶರು ಬರೆದ 'ಸೂಪರ್ ಗೊ ಲೇಖನ ಎದೆ ತಟ್ಟಿತು. ಪತ್ರಿಕೆಯಲ್ಲಿ ಇನ್ನಷ್ಟು ಸಾ ಟಚ್ ಬೇಕಿದೆ.

-ಕುಂಸಿ ಉಮೇಶ್, ಶಿವ

ನರ್‌ಕಟ್ಟುವ' ಸೃಜನಶೀಲತೆಯ ನೀತಿಯಂತೆ ಒಂದಿದ್ದ ಬಳಗ ಎರಡಾಗುವಂತೆ ತರ್‌ಯುದ್ಧ ನಿಶ್ಯಬ್ಧವಾಗಿಯೇ ನಡೆದು ಸೇನಾನಿಯಂತೆ ಕೆಲಸ ಮಾಡುತ್ತಿದ್ದ ಮುಷಕಾಶಗೌಡರು ಹೊರಬಿದ್ದರು. ಇವರನ್ನೆಲ್ಲಾ ತಂದೆಯಂತೆ ಪ್ರೀತಿ, ಶಿಸ್ತು ಪಾಟ್ಸಾರಿಗಳಿಂದ, ಎಚ್ಚರಿಕೆಗಳಿಂದ ಸದಾ ಮುನ್ನಡೆಸುತ್ತಿದ್ದ ಕೆ.ವಿ.ಶಂಕರಗೌಡರು ಲೇ ವಿಧಿವಶರಾಗಿದ್ದರು. ಗೆಳೆಯರ ಬಳಗ ಎಂಬ ದೊಡ್ಡ ಹಡಗು ಸಮುದ್ರ ದ್ಯದಲ್ಲಿ ಹಾಲತೊಡಗಿತು. ಆಗ ಅದರ ಕೈಹಿಡಿದು ಮುನ್ನಡೆಸಿದ್ದು .ಶಂಕರಗೌಡರ ಮಗ ಕೆ.ಎಸ್. ಸಚ್ಚಿದಾನಂದರು. ಇವರು ಪೋಷಕ ಸ್ಥಾನದಲ್ಲಿ ತಮೇಲೆ ನೀನಾಸಂನ ಎಲ್ಲಾ ತಿರುಗಾಟಗಳನ್ನು ಕರೆಸಿ ಮಂಡ್ಯದಲ್ಲಿ ದರ್ಶಿಸತೊಡಗಿದರು. ಜೊತೆಗೆ ಗೋಪಾಲಕೃಷ್ಣ ನಾಯರಿಯವರ ನಿರ್ದೇಶನದಲ್ಲಿ ರಿ ಯಾವುದಯ್ಯ ಸ್ವರ್ಗಕ್ಕೆ ಮತ್ತು ಬಾದರದಿನ್ನಿರವರ ನಿರ್ದೇಶನದಲ್ಲಿ ಕಂಬಾರರ ಬಾ ಶಿವ ಪ್ರಹಸನ, ತುಘಲಕ್, ಒಂದು ಸಾವಿನ ಸುತ್ತಾ, ಸಿಂಗಾರವ್ವ ಮತ್ತು ಮನೆ, ಕುರಿದೊಡ್ಡಿ ಕುರುಕ್ಷೇತ್ರ, ಕೃಷ್ಣಮೂರ್ತಿ ಕವತ್ತಾರ್‌ರವರ ಎನಾ ಹೇಳಲವ್ವಾ ರತಿ ಮತ್ತು ಚಂದ್ರಹಾಸ, ನೀನಾಸಂ ಅಶ್ವಥ್‌ರವರ ಮತ್ತ ವಿಲಾಸ ಪ್ರಹಸನ ವಾದಿ ನಾಟಕಗಳು ಮಾಡಿದರೂ ಯಶಸ್ವಿಯಾಗಲಿಲ್ಲ.

ಆದರೆ...


ಒಂದೇ ಒಂದು ನಾಟಕ ಮಾತ್ರ ತುಂಬ ಯಶಸ್ಸು ಕಂಡಿತು. ಅದು ಗಸಂಗೀತ ಮಾಂತ್ರಿಕ ಬಿ.ವಿ. ಕಾರಂತರ ಕಟ್ಟಕಡೆಯ ನಿರ್ದೇಶನದ ನಾಟಕ ವಂತಿ.' ಈ ನಾಟಕವು ಅಂತರರಾಷ್ಟ್ರೀಯ ಗುಣಮಟ್ಟದ ನಾಟಕವಾಗಿತ್ತು.

ಈ ನಡುವೆ....

ಇದ್ದ ಒಂದು ಆಶ್ರಯದ ಕೊಂಡಿ ಕಳಚಿತು. ಅದು ಪೋಷಕ ಪಾತ್ರ ಸಿದ್ದ ಕೆ.ಎಸ್.ಸಚ್ಚಿದಾನಂದರ ಸಾವು. ಬರೀ ಗೆಳೆಯರ ಬಳಗಕ್ಕೆ ಅಷ್ಟೇ ಅಲ್ಲ ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಲೋಕಕ್ಕೆ ತಂಬಲಾರದ ನಷ್ಟ ಉಂಟಾಯಿತು. ರಿಂದ ಮತ್ತೆ ವಾಲತೊಡಗಿದ ಗೆಳೆಯರ ಬಳಗವೆಂಬ ಹಡಗು ಸ್ವಲ್ಪಸ್ವಲ್ಪವೇ ಳುಗತೊಡಗಿತು. ಆದರೂ ಸಿಪಾಯಿ ಲೈಬ್ರರಿ ಶಿವರಾಂರವರು ಮುಂದುವರೆಸಿದ ರಾಟವನ್ನು ಇಲ್ಲಿ ಸ್ಮರಿಸಲೇಬೇಕು. ಹಿನ್ನೆಡೆಗಳಿಂದ ಒಂದು ಚೂರು ಲಿತರಾಗದೇ ಗೆಳೆಯರ ಬಳಗದ ಶಿಶುವಾದ ನನ್ನ ನಿರ್ದೇಶನದಲ್ಲಿ ಜಲಗಾರ ಟಕವನ್ನು ರಾಜ್ಯದ 24 ಕಡೆ ಪ್ರದರ್ಶನ ಏರ್ಪಡಿಸಿದರು. ಮತ್ತೆ ಬಾದರದಿನ್ನಿ ರನ್ನು ಮಂಡ್ಯಕ್ಕೆ ಕರೆಯಿಸಿ ತುಘಲಕ್ ಮತ್ತು ಒಂದು ಸಾವಿನ ಸುತ್ತ ಟಕಗಳನ್ನು ಹಾಗೂ ಬಳಗದಿಂದಲೇ ಹುಟ್ಟಿ ಬೆಳೆದು ಈಗ ಸಿನಿಮಾಕ್ಷೇತ್ರದಲ್ಲಿ ಬೆಳೆಯುತ್ತಿರುವ ಮಂಡ್ಯ ರಮೇಶ್ ಅವರನ್ನು ಕರೆತಂದು ಸಂಸಾರದಲ್ಲಿ ಸನಿದಪ ಮುದಿ ನಾಟಕವನ್ನು ಮಾಡಿಸಿದರು. ಆದರೆ ದುರಾದೃಷ್ಟವಶಾತ್ ಯಾವ ಟಕವೂ ಬಳಗ ಮುಳುಗುವುದನ್ನು ತಪ್ಪಿಸಲಿಲ್ಲ. ಒಂದು ರಂಗತಂಡ ಗೆಲುವು ಡಯಬಹುದಾದ ತಿರುವು ಬಳಗಕ್ಕೆ ಸಿಕ್ಕಲಿಲ್ಲ.

ಬಳಗವನ್ನು ಆದಷ್ಟೂ ಮೇಲೆ ಎತ್ತಲು, ಯಥಾಸ್ಥಿತಿಯನ್ನಾದರೂ ದಕ್ಕಿಸಲು ಹೆಣಗಾಡುತ್ತಿದ್ದ ರಂಗ ಸಿಪಾಯಿ ಲೈಬ್ರರಿ ಶಿವರಾಂರವರು ಎರಡು ತಿಂಗಳ ಹಿಂದೆ ಕಾಲನ ಹೊಡೆತಕ್ಕೆ ಸಿಕ್ಕಿ ಆಕಸ್ಮಿಕ ಅಂತ್ಯ ಕಂಡಿದ್ದಾರೆ.

ಇನ್ನೆಲ್ಲಿ.... ಗೆಳೆಯರ ಬಳಗದ ಆ ರಂಗ ವೈಭವ......?



ದಿಕ್ಕೆಟ್ಟ ಸೈನಿಕರಂತೆ ಅಳಿದುಳಿದ ಬಳಗದ ಪದಾಧಿಕಾರಿಗಳು ಒಂದಷ್ಟು ಉಸಿರು ತುಂಬಬಲ್ಲವರಾದರೂ ಅವರಿಗೆ ವಯಸ್ಸು, ಮುಲೆಗಳು, ಕೌಟುಂಬಿಕ ಸಮಸ್ಯೆಗಳು ಬಿಡಕೊಡುತ್ತಿಲ್ಲ. ಇನ್ನು ರಂಗಾಸಕ್ತರು ಏನು ಮಾಡಬೇಕು ನೀವೇ ಹೇಳಿ....?

ಲೇಖಕ: ಶಶಿಅಪೂರ್ವ,
ಮಂಡ್ಯ.

ತಮಿಳು ಭಾವನೆಗಳ ಮೇಲೆ ಓಡುವ 'ಚೆನ್ನೈ ಎಕ್ಸ್‌ಪ್ರೆಸ್'

'ಚೆನ್ನೈ ಎಕ್ಸ್‌ಪ್ರೆಸ್' ಗಾಡಿಗಾಗಿ ಕನ್ನಡಿಗರು ಕಾಯುವುದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಒಂದು, ಚಿತ್ರವನ್ನು ನಿರ್ದೇಶಿಸಿದಾತ ಕನ್ನಡಿಗ. ಇನ್ನೊಂದು, ಗಾಡಿಯನ್ನೇರಿ ಬರುವ ನಾಯಕನೂ ಕನ್ನಡಿಗ! ಮುಖ್ಯವಾಗಿ ಇಬ್ಬರೂ ಮಂಗಳೂರಿಗರು. ರೋಹಿತ್ ಶೆಟ್ಟಿ ತನ್ನ 'ಗೋಲ್‌ಮಾಲ್' ಚಿತ್ರಗಳಿಗಾಗಿಯೇ ಬಾಲಿವುಡ್‌ನಲ್ಲಿ ಸುದ್ದಿಯಾದವರು. ಹಾಸ್ಯ ಮತ್ತು ಸ್ಟಂಟ್ ಎರಡನ್ನೂ ಸೇರಿಸಿ ಸಿನಿಮಾ ಮಾಡುವುದರಲ್ಲಿ ಎತ್ತಿದ ಕೈ. ಇವರ ಜೊತೆಗೆ 'ಮಂಗಳೂರು ಮೂಲದ ಶಾರುಕ್' ಸೇರಿದರೆ ಇನ್ನೇನಾಗಬಹುದು?

ತನ್ನ ಚಿತ್ರ 'ಚೆನ್ನೈ ಎಕ್ಸ್‌ಪ್ರೆಸ್' ಬಿಡುಗಡೆಗೆ ಒಂದು ವಾರ ಮೊದಲು, ತಾನು ಮಂಗಳೂರಿನಲ್ಲಿ ಹುಟ್ಟಿರುವುದನ್ನು ಶಾರುಕ್ ಮಾಧ್ಯಮಗಳಲ್ಲಿ ಜಾಹೀರು ಮಾಡಿದ್ದರು. ತನ್ನ ಹುಟ್ಟಿನ ಮೂಲವನ್ನು 'ಚೆನ್ನೈ ಎಕ್ಸ್‌ಪ್ರೆಸ್'ನ ಪ್ರಚಾರಕ್ಕೆ ಪರೋಕ್ಷವಾಗಿ ಬಳಸಿಕೊಂಡರು. ಹಿಂದೆ, ಬಜ್ಪೆ ವಿಮಾನ ನಿಲ್ದಾಣ ದುರಂತದ ಸಂದರ್ಭದಲ್ಲಿ ಟ್ವಿಟ್ಟರ್‌ನಲ್ಲಿ ಶಾರುಕ್ ಇದನ್ನು ಸಣ್ಣದಾಗಿ ಪ್ರಸ್ತಾಪಿಸಿದ್ದರೂ, ಅಧಿಕೃತವಾಗಿ 'ತಾನು ಹುಟ್ಟಿದ್ದು ಮಂಗಳೂರಿನಲ್ಲಿ, ಆದುದರಿಂದ ತಾನು ದಕ್ಷಿಣ ಭಾರತೀಯನೂ ಹೌದು' ಎನ್ನುವುದನ್ನು ಆಂಗ್ಲ ಪತ್ರಿಕೆಯೊಂದರಲ್ಲಿ ಹೇಳಿಕೊಂಡರು. ಈ ಹೇಳಿಕೆಯೇ 'ಚೆನ್ನೈ ಎಕ್ಸ್‌ಪ್ರೆಸ್' ಚಿತ್ರಕ್ಕೆ ನಿರೀಕ್ಷಣಾ ಜಾಮೀನಿನಂತಿದೆ. ಚಿತ್ರದುದ್ದಕ್ಕೂ ತಮಿಳು ಭಾಷೆ ಮತ್ತು ಸಂಸ್ಕೃತಿಯನ್ನು 'ಹಾಸ್ಯ'ಕ್ಕೆ ಬಳಸಿಕೊಂಡಿರುವ ಶಾರುಕ್, ಎಲ್ಲಿ ಇದು ತಮಿಳರ ಸಿಟ್ಟಿಗೆ ಕಾರಣವಾಗಬಹುದೋ ಎನ್ನುವ ಅಂಜಿಕೆ ಅವರ ಆಳದಲ್ಲಿ ಇದ್ದಂತಿದೆ.




'ಚೆನ್ನೈ ಎಕ್ಸ್‌ಪ್ರೆಸ್' ಅಪ್ಪಟ ರೋಹಿತ್ ಶೆಟ್ಟಿ ಚಿತ್ರ. ರುಚಿಗೆ ತಕ್ಕ ಹಾಗೆ ಶಾರುಕ್ ತನ್ನ 'ದಿಲ್ ವಾಲೇ ದುಲ್ಹನೀಯ ಲೇ ಜಾಯೆಂಗೆ' ಚಿತ್ರದ ಕ್ರೀಮನ್ನು ಅದಕ್ಕೆ ಲೇಪಿಸಿದ್ದಾರೆ. ಒಂದು ತೆಳು ಕತೆಯ ಎಳೆಯನ್ನು ತಮಾಷೆಯ ದಾರಗಳಿಂದ ಉದ್ದಕ್ಕೆ ಎಳೆದಿರುವ ರೋಹಿತ್ ಶೆಟ್ಟಿ, ತನ್ನ ಚಿತ್ರದಲ್ಲಿ ಉತ್ತರ ಮತ್ತು ದಕ್ಷಿಣವನ್ನು ಜೋಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಮಿಠಾಯಿ ವಾಲಾ ರಾಹುಲ್ (ಶಾರುಕ್ ಖಾನ್) ತನ್ನ ಅಜ್ಜನ ಅನಿರೀಕ್ಷಿತ ಸಾವಿನಿಂದಾಗಿ ಒಮ್ಮೆಲೆ ಸರ್ವಸ್ವತಂತ್ರನಾಗಿಬಿಡುತ್ತಾನೆ. ಗೆಳೆಯರು ಅವನ ಜೊತೆ ಸೇರಿ, ಗೋವಾದಲ್ಲಿ ಮಜಾ ಮಾಡುವ ಯೋಜನೆಯನ್ನು ರೂಪಿಸುತ್ತಾರೆ. ಆದರೆ, ದುರದೃಷ್ಟಕ್ಕೆ ಅಜ್ಜನ ಬೂದಿಯನ್ನು ರಾಮೇಶ್ವರದ ಕಡಲಿಗೆ ವಿಸರ್ಜಿಸುವ ಹೊಣೆ ಅವನ ಹೆಗಲಿಗೆ ಬೀಳುತ್ತದೆ. ಅಜ್ಜಿಯ ಒತ್ತಡದಿಂದಾಗಿ ಗೋವಾದ ಕಾರ್ಯಕ್ರಮ ರದ್ದು ಪಡಿಸಬೇಕಾದ ಸನ್ನಿವೇಶ ಎದುರಾಗುತ್ತದೆ. ಆದರೆ, ರಾಮೇಶ್ವರಕ್ಕೆ ಹೋದಂತೆ ಮಾಡಿ, ಗೋವಾದ ಕಡಲಲ್ಲಿ ಅಜ್ಜನ ಬೂದಿಯನ್ನು ವಿಸರ್ಜಿಸುವುದು, ಹೇಗೂ ಕಡಲ ನೀರಿನ ಮೂಲಕ ಆ ಬೂದಿ ರಾಮೇಶ್ವರ ಸೇರಬಹುದು ಎನ್ನುವುದು ಗೆಳೆಯರ ಸೂಚನೆ. ಅಂತೆಯೇ ಅಜ್ಜಿಯನ್ನು ನಂಬಿಸುವುದಕ್ಕಾಗಿ ಚೆನ್ನೈ ಎಕ್ಸ್‌ಪ್ರೆಸ್ ಏರುತ್ತಾನೆ. ಆದರೆ ಆ ಟ್ರೈನ್‌ನಲ್ಲಿ ಅವನು ಸಂಧಿಸುವ ಮೀನಾಲೋಚಣಿ ಯಾನೆ ಮೀನಮ್ಮ (ದೀಪಿಕಾ ಪಡುಕೋಣೆ) ಅವನ ಎಲ್ಲ ಯೋಜನೆ ಹಳಿ ತಪ್ಪುವುದಕ್ಕೆ ಕಾರಣವಾಗುತ್ತಾಳೆ. ಗೋವಾ ಸೇರಬೇಕಾದವನು, ಆಕೆಯ ತಂದೆಯ ಆಳ್ವಿಕೆಯ ತಮಿಳುನಾಡಿನ ಕೊಂಬನ್ ಸೇರಬೇಕಾಗುತ್ತದೆ. ಇಲ್ಲಿಂದ ನಾಯಕನ ಕಷ್ಟಗಳು, ತಮಾಷೆಗಳು ಆರಂಭವಾಗುತ್ತವೆ.

ಒಂದಿಷ್ಟು ಹಾಸ್ಯ ತಮಾಷೆ ಮತ್ತು ಫೈಟಿಂಗ್. ರೋಹಿತ್ ಶೆಟ್ಟಿಯಿಂದ ಇದರಾಚೆಗೆ ನಿರೀಕ್ಷಿಸುವುದು ದುಬಾರಿಯಾಗುತ್ತದೆ. ಈ ನಿರೀಕ್ಷೆಯನ್ನು ರೋಹಿತ್ ಶೆಟ್ಟಿ ಹುಸಿಗೊಳಿಸುವುದಿಲ್ಲ ಕೂಡ. ಇಡೀ ಚಿತ್ರದ ಶಕ್ತಿ ಶಾರುಕ್. 'ದಿಲ್ ವಾಲೇ ದುಲ್ಹನಿಯ ಲೇ ಜಾಯೆಂಗೆ'ಯ ಲವಲವಿಕೆ ಇಲ್ಲಿ ತುಸು ಮಂಗಚೇಷ್ಟೆಯ ರೂಪವನ್ನು ಪಡೆದಿರುವುದನ್ನು ಪ್ರೇಕ್ಷಕ ಕ್ಷಮಿಸಬೇಕಾಗುತ್ತದೆ. ತನ್ನ ಪ್ರತಿಭೆ, ಮೈಕಟ್ಟು ಮತ್ತು ವರ್ಚಸ್ಸನ್ನು ಸಂಪೂರ್ಣ ಧಾರೆಯೆರೆದು ಶಾರುಕ್ ಈ ಚಿತ್ರದಲ್ಲಿ ತೊಡಗಿದ್ದಾರೆ. ಗ್ರಾಮೀಣ ತಮಿಳು ಹುಡುಗಿಯಾಗಿ ದೀಪಿಕಾ ಅಭಿನಯ ಅವರ ಸಾಮರ್ಥ್ಯಕ್ಕೆ ತಕ್ಕ ಹಾಗೆಯೇ ಇದೆ. ಅವರ ತಮಿಳು ಪ್ರಭಾವಿತ ಹಿಂದಿ ಚಿತ್ರದುದ್ದಕ್ಕೂ ಪ್ರೇಕ್ಷಕರನ್ನು ಖುಷಿಪಡಿಸುತ್ತದೆ. ತಮಿಳಿನ ಮಾಜಿ ಸ್ಟಾರ್ ಸತ್ಯರಾಜ್ ಮೀನಮ್ಮಳ ತಂದೆ ಹಾಗೂ ಸ್ಥಳೀಯ ತಲೈವರ್ ಆಗಿ ಪಾತ್ರದ ಗಾಂಭೀರ್ಯಕ್ಕೆ ಪೂರಕವಾಗಿ ನಟಿಸಿದ್ದಾರೆ. ಸಂಗೀತ ಮತ್ತು ಛಾಯಾಗ್ರಹಣ ಚಿತ್ರದ ಹೆಗ್ಗಳಿಕೆ. ಮುಂಬಯಿ-ಚೆನ್ನೈ-ರಾಮೇಶ್ವರದ ರಮ್ಯ ಪ್ರಕೃತಿ ಪ್ರತಿ ಫ್ರೇಮ್‌ನಲ್ಲೂ ಅದ್ಭುತವಾಗಿ ಮೂಡಿ ಬಂದಿದೆ.

ಚಿತ್ರ ಮುಗಿದಾಗ, ನಾವು ಯಾತಕ್ಕೆ ಚಿತ್ರಮಂದಿರದೊಳಗೆ ನಕ್ಕೆವು ಎನ್ನುವುದನ್ನು ಒಂದಿಷ್ಟು ಗಂಭೀರವಾಗಿ ಯೋಚಿಸತೊಡಗಿದರೆ, ನಮ್ಮೊಳಗೆ ವಿಷಾದವೊಂದು ಸುಳಿಯಬೇಕು. ಇಡೀ ಚಿತ್ರದ ಹಿಂದೆ ಬಾಲಿವುಡ್‌ನ 'ಸುಪೀರಿಯಾರಿಟಿ' ಕೆಲಸ ಮಾಡಿರುವುದು ಹೊಳೆಯುತ್ತಾ ಹೋಗುತ್ತದೆ. ತಮಿಳು ನಟರನ್ನು ಶಾರುಕ್ ಗೇಲಿ ಮಾಡುವುದು ಇದೇ ಹೊಸತೇನಲ್ಲ. ಇಂದು ಬಾಲಿವುಡ್ ತಮಿಳು-ತೆಲುಗನ್ನೇ ಭಾಗಶಃ ಅವಲಂಬಿಸಿದ್ದರೂ ಆ ಭಾಷೆ ಮತ್ತು ಸಂಸ್ಕೃತಿಯ ಕುರಿತಂತೆ ಅವರಿಗಿರುವ ಉಡಾಫೆ ಕಮ್ಮಿಯಾಗಿಲ್ಲ. 'ಚೆನ್ನೈ ಎಕ್ಸ್‌ಪ್ರೆಸ್'ನಲ್ಲಿ ಅದು ಮತ್ತೊಮ್ಮೆ ವ್ಯಕ್ತವಾಗಿದೆ. ಹಾಸ್ಯ ತಮಾಷೆಗಳಿಗಾಗಿ ತಮಿಳು ಭಾಷೆ ಮತ್ತು ಅವರ ಜನಜೀವನವನ್ನು ಬಳಸಿಕೊಂಡಿರುವುದು ಪ್ರಜ್ಞಾಪೂರ್ವಕವಲ್ಲದೇ ಇರಬಹುದು. ಆದರೆ, ಬಾಲಿವುಡ್‌ನ ಜನರಿಗಿರುವ ಮೇಲರಿಮೆ ಮತ್ತು ದಕ್ಷಿಣ ಭಾರತೀಯರ ಕುರಿತಂತೆ ಅವರಿಗಿರುವ ಕೀಳರಿಮೆ ಕಥೆಯ ಹೆಣಿಗೆಯಲ್ಲಿ ಬೇಡ ಬೇಡವೆಂದರೂ ಇಣುಕುತ್ತದೆ. ಮತ್ತು ತಮ್ಮ ಈ ಚೇಷ್ಟೆಗೆ ದಕ್ಷಿಣ ಭಾರತೀಯ, ಅದರಲ್ಲೂ ಕನ್ನಡಿಗ ನಿರ್ದೇಶಕನನ್ನೇ ಬಳಸಿಕೊಂಡಿರುವುದು ಇನ್ನೊಂದು ವಿಪರ್ಯಾಸವಾಗಿದೆ.

ತಾನೂ ದಕ್ಷಿಣ ಭಾರತೀಯ ಎಂಬ ಶಾರುಕ್ ಖಾನ್ ಕೊಡುಗೆ ಪರೋಕ್ಷವಾಗಿ ದಕ್ಷಿಣ ಭಾರತೀಯರ ಕುರಿತಂತೆ ಮತ್ತೊಂದು ಅಣಕವೋ ಎಂಬ ಅನುಮಾನ ಕಾಡುವುದು ಇದೇ ಕಾರಣಕ್ಕೆ. "ದಕ್ಷಿಣ ಭಾರತೀಯರೆಂದು ನೀವು ಸಂಕೋಚ ಪಡಬೇಕಾಗಿಲ್ಲ... ನಾನು ಕೂಡ ಇಲ್ಲೇ ಹುಟ್ಟಿರುವುದು" ಎಂಬ ಧ್ವನಿಯೊಂದು ಆ ಉದಾರತನದ ತಳದಲ್ಲಿ ಕೆಸರುಗಟ್ಟಿದೆಯೇ ಎನ್ನುವುದನ್ನು ನಮಗೆ ನಾವೇ ಕೇಳಿಕೊಳ್ಳುವಂತೆ ಮಾಡುತ್ತದೆ 'ಚೆನ್ನೈ ಎಕ್ಸ್‌ಪ್ರೆಸ್'.

● ಸ್ಪಂದನಾ



ಸರಕಾರದ ಹಣ ದುರುಪಯೋಗ ತಡೆಗೊಂದು ಉಪಾಯ

ನಮ್ಮ ಸರಕಾರವು ವಿಧವಾ ಮತ್ತು ಅನಾಥ ಮಹಿಳೆಯರಿಗೆ ಮಾಸಾಶನವನ್ನು ಕೊಡುತ್ತದೆ. ಇದು ಒಂದು ಶ್ರೇಯ ಕಾರ್ಯವೇ, ಯಾಕೆಂದರೆ ಕೆಲವು ಮಹಿಳೆಯರು ವಯಸ್ಸಾದಾಗ ದುಡಿಯಲು ಶಕ್ತಿ ಹೊಂದಿರುವುದಿಲ್ಲ, ಅವರಿಗೆ ತಮ್ಮವರು ಎನ್ನುವವರು ಯಾರು ಇರುವುದಿಲ್ಲ, ಅದಕ್ಕೆ ಇಂತಹವರಿಗೆ ಈ ವ್ಯವಸ್ಥೆ ಬಹಳ ಒಳ್ಳೆಯದು.


ಆದರೆ ಈ ವ್ಯವಸ್ಥೆಯನ್ನು ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಕೆಲವು ಮಹಿಳೆಯರಿಗೆ ಮಕ್ಕಳು ಇದ್ದರೂ 'ನನಗೆ ಯಾರು ಇಲ್ಲಾ, ನಾನು ಅನಾಥೆ' ಎಂದು ಸುಳ್ಳು ಹೇಳಿ ಈ ಹಣವನ್ನು ಪಡೆದುಕೊಳ್ಳುತ್ತಿದ್ದಾರೆ. ಇನ್ನೂ ಕೆಲವರು ತಮ್ಮ ಗಂಡ ಇನ್ನೂ ಜೀವಂತ ಇದ್ದರೂ [illegible] 'ನಾನು ವಿಧವೆ' ಎಂದು ವಿಧವಾ ವೇತನವನ್ನು ಪಡೆದುಕೊಳ್ಳುತ್ತಿದ್ದಾರೆ. ಈ ವಿಷಯಗಳ ಬಗ್ಗೆ ಇದಕ್ಕೆ ಸಂಬಂಧಿಸಿದ ಮೇಲಧಿಕಾರಿಗಳು ಸೂಕ್ಷ್ಮವಾಗಿ [illegible] ನಡೆಸಿ, ಸೂಕ್ತ ಕ್ರಮ ಕೈಗೊಳ್ಳಬೇಕು.

ಅನಾಥ ಊರುಗಳಲ್ಲಿ ಸರ್ಕಾರ ಒಂದು ದೊಡ್ಡದಾದ [illegible] ಅಲ್ಲಿ ಇಂತಹ ಮಹಿಳೆಯರಿಗೆ [illegible] ಮಾಡಬೇಕು. ಅಲ್ಲಿಯೇ ಅವರಿಗೆ ಕೆಲವು ಸಣ್ಣಪುಟ್ಟ ಕೆಲಸ ಕೊಡಬೇಕು. ಊದುಬತ್ತಿ ತಯಾರಿಕೆ, ಮೇಣದ ಬತ್ತಿ ತಯಾರಿಕೆ, ಹಪ್ಪಳ ಸಂಡಿಗೆ ತಯಾರಿಕೆ, ಚಾಕಪೀಸ್ ತಯಾರಿಕೆ, ನೂಲುವುದು- ಹೀಗೆ ಅನೇಕ ಕೆಲಸಗಳನ್ನು ಕೊಡಬಹುದು. ಅವರು ಮಾಡಿದ ಕೆಲಸಗಳಿಗೆ ಅನುಗುಣವಾಗಿ ಅವರಿಗೆ ಸಂಬಳವನ್ನು ಕೊಡಬಹುದು. ಹೀಗೆ ಮಾಡಿದರೆ ಈ ಹಣ ದುರುಪಯೋಗ ಆಗುವುದನ್ನು ತಪ್ಪಿಸಬಹುದು. ಜೊತೆಗೆ ನಿಜವಾಗಲೂ ಅನಾಥ ಮತ್ತು ವಿಧವೆ ಮಹಿಳೆಯರಿಗೆ ಆಶ್ರಯ ಕೊಟ್ಟಂತಾಗುತ್ತದೆ.

-ಸಂತೋಷಕುಮಾರ ದಿ. ಪಾಲಿ, ರಾಮದುರ್ಗ

ದಲಿತರು ಸ್ವತಂತ್ರ ಭೂಮಿ ಹೊಂದಿರದಂತೆ ಕುತಂತ್ರ ನಡೆಸಿದವರು ಯಾರು?

ಕರ್ನಾಟಕ ರಾಜ್ಯದಲ್ಲಿ ಭೂಮಾಲೀಕರು ಸಾಮಾಜಿಕ ಶ್ರೇಣೀಕರಣದಲ್ಲಿ ಅತ್ಯಂತ ಮೇಲು ಜಾತಿಯವರಾದ ಬ್ರಾಹ್ಮಣರಲ್ಲ. ಅದೇ ರೀತಿಯಲ್ಲಿ ಅತ್ಯಂತ ಕೆಳಜಾತಿಯವರಾದ ದಲಿತರೂ ಅಲ್ಲ, ಭೂಮಾಲೀಕರೆಲ್ಲ ಬಹುತೇಕ ಮಧ್ಯಮ ಜಾತಿಯವರೇ ಆಗಿದ್ದಾರೆ. ಕರ್ನಾಟಕದಲ್ಲಿ ಸ್ಥೂಲವಾಗಿ ಒಕ್ಕಲಿಗರು ಭೂಮಾಲೀಕರು, ಉತ್ತರ ಕರ್ನಾಟಕದಲ್ಲಿ ಸ್ಥೂಲವಾಗಿ ಲಿಂಗಾಯತರು ಭೂಮಾಲೀಕರು. ಉಳಿದಂತೆ ಕುರುಬರು ಹಾಗೂ ಇನ್ನಿತರೆ ಜಾತಿಯವರೂ ಭೂಮಿಯ ಒಡೆತನ ಹೊಂದಿದ್ದಾರೆ. ಆದರೆ ಪ್ರಬಲವಾದ ಬಲಾಢ್ಯ ಭೂಮಾಲಿಕರೆಂದರೆ ಒಕ್ಕಲಿಗರು



ಮತ್ತು ಲಿಂಗಾಯತರು. ಇವರಲ್ಲೂ ಕೆಲವರು ಕಡಿಮೆ ಭೂಮಿ ಹೊಂದಿರುವ ಬಡವರೂ ಇದ್ದಾರೆ. ಕರ್ನಾಟಕದ ಆಳುವ ವರ್ಗದ ರಾಜಕೀಯವು ಅಂದಿನಿಂದ ಇಂದಿನವರೆಗೆ ಈ ಭೂಮಾಲೀಕ ವರ್ಗಗಳ ಕೈಯಲ್ಲೇ ಇದೆ. ಯಾವುದೇ ಪಕ್ಷ ಅಧಿಕಾರಕ್ಕೆ ಬರಲಿ ಆಳುವವರು ಮಾತ್ರ ಭೂಮಾಲೀಕರ ಆಗಿದ್ದಾರೆ. ಹಾಗಾಗಿ ಪಕ್ಷ ಯಾವುದು ಬಂದರೇನು, ಬಿಟ್ಟರೇನು? ಭೂಮಾಲಿಕರದ್ದಲ್ಲದ ಪಕ್ಷ ಏನಾದರೂ ಅಧಿಕಾರಕ್ಕೆ ಬಂದಿದೆಯೇ? ಇದು ಮುಖ್ಯ ಪ್ರಶ್ನೆ. ಈ ಮಧ್ಯಮ ಜಾತಿಯ ಭೂಮಾಲೀಕರು ಗ್ರಾಮ ಪಂಚಾಯತಿಯಿಂದ ಹಿಡಿದು, ವಿಧಾನಸೌಧದವರೆಗೆ ಅನ್ಯಾಯ ಮತ್ತು ಶೋಷಣೆಯ ಕೆಲಸದಲ್ಲೇ ತೊಡಗಿದ್ದಾರೆ. ಸರಕಾರಿ ಸವಲತ್ತುಗಳನ್ನು ಇವರು ನೇರವಾಗಿ ತಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳುತ್ತಾರೆ. ಅದು ಯಾವುದೇ ಯೋಜನೆಯಾಗಿರಲಿ, ಇವರೇ ಅದನ್ನು ನೇರವಾಗಿ ಮತ್ತು ಮುಕ್ತವಾಗಿ ಅನುಭವಿಸುತ್ತಿದ್ದಾರೆ. ಆದರೆ ವೈಚಾರಿಕ ವಲಯದಲ್ಲಿ ಪುರೋಹಿತಶಾಹಿ, ಬ್ರಾಹ್ಮಣಶಾಹಿಯ ವಿರೋಧಿ ಚಿಂತಕರು ಈ ಕ್ರೂರ ವಾಸ್ತವವನ್ನು ನಯವಾಗಿ ಮುಚ್ಚಿಡುತ್ತಾ ಬಂದಿದ್ದಾರೆ. ಅವರು ಮಾತೆತ್ತಿದರೆ 'ಎಲ್ಲಾ ವಲಯಗಳಲ್ಲೂ, ಈಗಿನ ಐಟಿ. ಬಿ.ಟಿ. ವಲಯಗಳಲ್ಲೂ ಬರೀ ಬ್ರಾಹ್ಮಣರೇ ಇದ್ದಾರೆ ನೋಡಿ' ಎಂದುಬಿಡುತ್ತಾರೆ. ಇದು ಹಳ್ಳಿಗಳ ಭೂಮಾಲೀಕರ ಕ್ರೌರ್ಯ ಮತ್ತು ಅವರು ನಡೆಸುತ್ತಿರುವ ಅನ್ಯಾಯಗಳನ್ನು ಮುಚ್ಚಿಡಲು ನಯವಾದ ಕುತಂತ್ರ. ಇದನ್ನು ಯಾಕೆ ಒತ್ತಿ ಹೇಳಬೇಕಾಗಿದೆ ಎಂದರೆ ದಲಿತರಿಗೆ ಹಳ್ಳಿಗಳ ಮಟ್ಟದಲ್ಲಿ ಎಲ್ಲಿಯೂ ಬ್ರಾಹ್ಮಣರು ಸಮಸ್ಯೆಯಾಗಿಲ್ಲ; ಶತ್ರುಗಳೂ ಅಗಿಲ್ಲ. ದಲಿತರನ್ನು ನೇರವಾಗಿ ತುಳಿಯುತ್ತಿರುವವರೇ ಈ ಮಧ್ಯಮ ಜಾತಿಯ ಭೂಮಾಲೀಕರು. ಆದರೆ ಭೂಮಾಲೀಕರ ಲಾಭವು ಜಾಗತೀಕರಣದ ಮಾರುಕಟ್ಟೆಯ ಸಂದರ್ಭದಲ್ಲಿ ಅವರು ನಿರೀಕ್ಷೆ ಮಾಡಿದ ಮಟ್ಟದಲ್ಲಿ ಬರುತ್ತಿಲ್ಲ. ಹಾಗಾಗಿ ಈ ವರ್ಗವು ಒಂದು ಬಗೆಯ ಅಮೂರ್ತವೆನ್ನಬಹುದಾದ ಅಸಹನೆ ಹಾಗೂ ಅಸಹಾಯಕತೆಯಲ್ಲಿದೆ. ಇಂತಹ ಸಮಯದಲ್ಲಿ ಅದಕ್ಕೆ ಧೈರ್ಯ ತುಂಬುವ ಪರೋಕ್ಷ ಕೆಲಸವೂ ಶೈಕ್ಷಣಿಕ ವಲಯದಲ್ಲಿ ನಡೆಯುತ್ತಿದೆ. ಹಳ್ಳಿಗಳಿಂದ ಹಿಡಿದು ದೆಲ್ಲಿಯವರೆಗೆ ಭೂಮಾಲೀಕರು ನಡೆಸುತ್ತಿರುವ ದರ್ಪ ದೌರ್ಜನ್ಯಗಳನ್ನು ಮುಚ್ಚಿಟ್ಟು, ಎಲ್ಲದಕ್ಕೂ ಬ್ರಾಹ್ಮಣರನ್ನು ತೋರಿಸುವ ಕುತಂತ್ರ ನಿರಂತರವಾಗಿ ಸಾಗಿದೆ.

- ಎಚ್. ಎಸ್. ಬೇನಾಳ, ಗುಲಬರ್ಗಾ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮೇಲ್ [illegible] ಅಥವಾ ಬರಹ [illegible] 9980331427 [illegible] SMS [illegible]



“ಏನಾದ್ರೂ ವಿಶೇಷವಾಗಿ ಸಿನಿಮಾ ಮಾಡೋ ಆಸೆ ನನಗೆ”

ನಟ-ನಿರ್ಮಾಪಕ ದುನಿಯಾ ವಿಜಿ

ಆನೇಕಲ್‌ನ ರುದ್ರಪ್ಪ-ನಾರಾಯಣಮ್ಮ ಎಂಬ ಬಡ ದಂಪತಿಯ ಮಗ ವಿಜಯ್ ಈಗ ಕನ್ನಡ ಸಿನಿಮಾ ನಿರ್ಮಾಪಕ. 2007ರಲ್ಲಿ 'ದುನಿಯಾ' ಸಿನಿಮಾ ಮೂಲಕ ಹೀರೋ ಆದ ವಿಜಿ ಇದುವರೆಗೂ ನಟಿಸಿದ್ದು ಹದಿನೇಳು ಸಿನಿಮಾಗಳಲ್ಲಿ, ಆದರೆ ಈ ಹಿಂದಿನ ಪೀಳಿಗೆಯ ನೂರು



ನೂರು ಸಿನಿಮಾಗಳಲ್ಲಿ ನಟಿಸಿರುವ ಹೀರೋಗಳೂ ಮಾಡಿರದ ಸಾಹಸಕ್ಕೆ ಈಗ ವಿಜಿ ಕೈಹಾಕಿದ್ದಾರೆ.

'ಜಯಮ್ಮನ ಮಗ' ಸಿನಿಮಾಗೆ ವಿಜಿಯೇ ನಿರ್ಮಾಪಕರಾಗುವ ಮೂಲಕ ಕನ್ನಡದಲ್ಲಿ ಸುದೀಪ್, ದರ್ಶನ್ ತರ ನಟ-ನಿರ್ಮಾಪಕರ ಸಾಲಿಗೆ ಸೇರಿದ್ದಾರೆ. ಹಾಗೆ ನೋಡಿದರೆ ದುನಿಯಾ ವಿಜಿಯ ಈ ಹಿಂದಿನ ದುನಿಯಾ ಸಲೀಸಾಗೇನೂ ಇರಲಿಲ್ಲ. ಓದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳದಿದ್ದ ವಿಜಿಗೆ ಶಾಲಾ-ಕಾಲೇಜು ದಿನಗಳಲ್ಲಿ ಆಟೋಟಗಳೇ ಪ್ರಿಯವಾಗಿದ್ದವು. ಕೆಲವರ್ಷ ಜಿಮ್ ಒಂದರಲ್ಲಿ ತರಬೇತಿದಾರನಾಗಿಯೂ ಕೆಲಸ ಮಾಡಿದ್ದ ವಿಜಿಗೆ ಆಗಲೇ ಸಿನಿಮಾ ಕನಸುಗಳಿದ್ದವು. ಸೂರಿ ಹಾಗೂ ಯೋಗರಾಜ್ ಭಟ್‌ರ ಗೆಳೆತನದಿಂದ 2004ರ ಸುಮಾರಿಗೆ ರಂಗ ಎಸ್ಎಸ್ಎಲ್‌ಸಿ, ಜೋಗಿಯಲ್ಲಿ ಪುಟ್ಟ ಪಾತ್ರಗಳಲ್ಲಿ ನಟಿಸಿದ ವಿಜಿ ಚಡಪಡಿಸುತ್ತಲೇ ತಾಳ್ಮೆಯಿಂದ ಕಾಯುತ್ತಿದ್ದಾಗ 'ದುನಿಯಾ' ಬಂತು.

ಸೂರಿ ಆದೆಲ್ಲಿಂತ ಹುಡುಕಿ ತಂದ ಸರಕೋ ಅದು, 'ದುನಿಯಾ' ಸಿನಿಮಾ ಕನ್ನಡ ಪ್ರೇಕ್ಷಕರನ್ನು ಅಪಾರವಾಗಿ ಡಿಸ್ಟರ್ಬ್ ಮಾಡಿತು, ಗೆದ್ದಿತು. ವಿಜಿಗೆ ರಾಜ್ಯ ಪ್ರಶಸ್ತಿ-ಫಿಲಂಫೇರ್ ಪ್ರಶಸ್ತಿಯನ್ನೂ ತಂದುಕೊಟ್ಟಿತು.

ಅಲ್ಲಿಂದ ಶುರುವಾದ ವಿಜಿಯ ಸಿನಿಮಾ ಪ್ರಯಾಣ ಕೆಲವು ಗೆಲುವು-ಸೋಲುಗಳ ಹಾದಿಯಲ್ಲಿ ಕರೆದೊಯ್ಯುತ್ತಿದೆ. ಹಲವು ವಿವಾದ, ಸಾಧನೆಗಳ ಜೊತೆಗೆ ಸಾಗಿಬಂದ ನಿರ್ಮಾಪಕ ವಿಜಿಯೊಂದಿಗೆ 'ಲಂಕೇಶ್' ಮಾತಾಡಿದ್ದು ಇಲ್ಲಿದೆ.

ಪ್ರಶ್ನೆ: ಸಹಕಲಾವಿದರಾಗಿದ್ದವರು ಹೀರೊ ಆದಿರಿ, ಈಗ ನಿರ್ಮಾಪಕರೂ ಆಗಿದ್ದೀರಾ ಏನನಿಸುತ್ತೆ?

ವಿಜಿ: ಖುಷಿಯಾಗಿದ್ದೀನಿ. ಮನಸು ಮಾಡಿದರೆ ಏನು ಬೇಕಾದ್ರೂ ಆಗಬಹುದು. ನಾನೀಗ ನಿರ್ಮಾಪಕನಾಗಿರೋದೆ ಅದಕ್ಕೆ ಸಾಕ್ಷಿ. ಎಲ್ಲದಕ್ಕೂ ಛಲ ಬೇಕು. ವಿಘ್ನಗಳು ಬರುತ್ತೆ ತಲೆ ಕೆಡಿಸಿಕೋಬಾರ್ದು ಅಷ್ಟೆ. ಹೊಸ ಹುಡುಗರಿಗೆ ಅವಕಾಶ ಕೊಡಬೇಕು ಅನ್ನಿಸಿದೆ.

ಪ್ರಶ್ನೆ: 'ಜಯಮ್ಮನ ಮಗ'ನ ಕತೆ ಏನು?

ವಿಜಿ: ಹ್ಹ. ಹ್ಹ. ಹ್ಹಾ... ! ಜಯ ತಂದು ಕೊಟ್ಟವರ ಮಗ... ಅಂದುಕೊಳ್ಳಿ. ಕ್ಲಾಸೂ-ಮಾಸೂ ಇಬ್ಬರಿಗೂ ಇಷ್ಟ ಆಗೋ ರೀತಿ. ಸಿನಿಮಾ ಮಾಡಿದೀವಿ. ಒಂಥರಾ ವಾಮಾಚಾರದ ವಿಭಿನ್ನ ಸಿನಿಮಾ ಕತೆ ಇದು.

ಪ್ರಶ್ನೆ: ಪುನೀತ್, ಸುದೀಪ್, ದರ್ಶನ್ ತರ ನೀವೂ ನಿಮ್ಮದೇ ಸಿನಿಮಾ ಸ್ಪೆಷಲಿಸ್ಟ್‌ಗಳ ಟೀಂ ಕಟ್ಟಿಕೊಳ್ಳುತ್ತಿದ್ದೀರಾ?

ವಿಜಿ: ... ಇದೇನೆಂದರೆ ಈ ಸಿನಿಮಾದಲ್ಲಿ ಯಾವ ಜನಬೆಂಬಲ ಇರದೆ ಬಂದವರು ನಾವು. ನಮ್ಮ ರವಿ, ಎಡಿಟರ್, ಕ್ಯಾಮೆರಾಮನ್ ಟೀಂ ಎಲ್ಲಾ ನನ್ನ ತರದ ಹಿನ್ನೆಲೆಯಿಂದಲೇ ಬಂದವರು.

ಪ್ರಶ್ನೆ: ಜಯಮ್ಮನ ಮಗನಿಗೆ ಎಷ್ಟು ಖರ್ಚು ಮಾಡಿದ್ದೀರಿ!

ವಿಜಿ: (ಪುನಃ ನಗು) ... ಹಾಗೇನು ಲೆಕ್ಕಾ ಹಾಕಿಲ್ಲ, ಸುಮ್ಮನೆ ಖರ್ಚು ಮಾಡಿಕೊಂಡು ಹೋಗಿದ್ದೇನೆ. ಅಂದಾಜು ಐದೂವರೆ ಕೋಟಿ ದಾಟಿರಬೇಕೇನೊ.

ಪ್ರಶ್ನೆ: ಮುಂದಿನ ಪ್ರಾಜೆಕ್ಟ್ ಏನು?

ವಿಜಿ: ಶಿವಾಜಿನಗರ ರೆಡಿಯಾಗ್ತಿದೆ. ಆಮೇಲೆ ಸಿಂಹಾದ್ರಿ... ಇನ್ನೊಂದು ಸಿನಿಮಾಗೆ ಇನ್ನೂ ಹೆಸರಿಟ್ಟಿಲ್ಲ. ನಮ್ಮ ಟೀಂಗೆ ಏನಾದ್ರೂ ವಿಶೇಷವಾಗಿ ಸಿನಿಮಾ ಮಾಡೋ ಆಸೆ. ನಮಗೆ ಅದೇ ಪ್ರಚೋದನೆ.

ಪ್ರಶ್ನೆ: ಇಂಡಸ್ಟ್ರಿಯವರ ಪ್ರಕಾರ ನಟನಾಗಿ ಇರೋದು ಸುಲಭ. ಆದರೆ ನಟನೇ ನಿರ್ಮಾಪಕನೂ ಆದ್ರೆ ರಿಸ್ಕ್ ಜಾಸ್ತಿ ಅಂತಾರೆ ನಿಮಗೇನನಿಸುತ್ತೆ?

ವಿಜಿ: ನಾನು ಎಲ್ಲಾನೂ ಸ್ಪೋರ್ಟೀವ್ ಆಗಿ ತಗೋತೀನಿ. ಸಾಧನೆಗಳ ನಡುವೆ ಹೋರಾಟನೂ ಚೆನ್ನಾಗಿರುತ್ತೆ ಅಲ್ವಾ. (ನಗು...)

ಸಂದರ್ಶನ

ಪ್ರಶ್ನೆ: ತೃಪ್ತಿ-ಖುಷಿ ನೀಡಿದ ಸಿನಿಮಾ ಯಾ

ವಿಜಿ: ಎಲ್ಲಾನೂ ಖುಷಿ ನೀಡಿದೆ. ಕೆಲವು ಸ ಕೆಲವು ಗೆದ್ದಿವೆ. ಆದರೆ ನಾನು ಆಸೆ ಪಟ್ಟಿದ್ದು ಮಾಡಲಿಲ್ಲ ಅಷ್ಟೇ ಹ್ಹ.. ಹ್ಹಾ..

ಪ್ರಶ್ನೆ: ಕನ್ನಡ ಸಿನಿಮಾದಲ್ಲಿ ದುನಿಯಾ ವಿಜಿಯ ಎಷ್ಟನೇದು?

ವಿಜಿ: ನಾನು ಕರ್ನಾಟಕದ ಜನರ ಹೃದಯ ಮನೆಮನೇಲೂ ಇದೀನಿ, ನನಗಷ್ಟೇ ಸಾಕು.

ಪ್ರಶ್ನೆ: ಇಷ್ಟಪಡುವ ಕಲಾವಿದ ಯಾರು?

ವಿಜಿ: ರಜನಿಕಾಂತ್.

ಅವರ ಸರಳತೆ, ಬೆಳೆದ ರೀತಿ ಯೋಚಿಸಿದರೆ ಆ ಆಗುತ್ತೆ, ಗೌರವ ಅನ್ಸುತ್ತೆ. ಅಣ್ಣಾವ್ರು ಮತ್ತು ಅಮಿ ಬಚ್ಚನ್ ಕೂಡ ನನ್ನ ಮೆಚ್ಚಿನ ನಟರು.

ಪ್ರಶ್ನೆ: ಒಂದು ವೇಳೆ ಸಿನಿಮಾ ನಟ ಆಗದೆ ಏನಾಗುತ್ತಿದ್ದಿರಿ?

ವಿಜಿ: ಪ್ರತಿಯೊಬ್ಬರಲ್ಲೂ ಕಲೆ ಇರುತ್ತೆ, ಯಾವುದೂಂತ ಅವರೇ ಕಂಡುಕೋಬೇಕು. ಬೆಳೆಯಬಹುದು. ಏನೇ ಕಷ್ಟ ಬಂದರೂ ಸೋಂಭೇರಿತನ ಮಾಡಲಿಲ್ಲ, ನೋವು ಬ ಅಲುಗಾಡಲಿಲ್ಲ, ಇದನ್ನೆಲ್ಲ ಮೀರಿ ಬದುಕಿ ಪುನಃ ಬಂದಾಗ ಮಜಾ ಅನ್ಸುತ್ತೆ.

–ವಿಜಿಯ ಈ ಸಾಹಸ ಪ್ರವೃತ್ತಿ ಹಾಗೂ ಹೊ ಸಿನಿಮಾ ಮಾಡುವ ಕನಸಿಗೆ ಯಶ ಸಿಗಲಿ.

ಅಪ್‌ಡೇಟ್‌ನೊಂದಿಗೆ ಮರಳಿ ಗೂಡಿಗೆ...

ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ 'ನಿನ್ನಿಂದಲೆ' ಚಿತ್ರದ ಮುಹೂರ್ತ ಮೊನ್ನೆ ನಡೆಯಿತು. ಈ ಚಿತ್ರವನ್ನು ನಿರ್ದೇಶಿಸುತ್ತಿರುವ ಜಯಂತ್ ಪಾರಂಜಿ ತೆಲುಗು ಚಿತ್ರರಂಗದಲ್ಲಿ ದೊಡ್ಡ ಹೆಸರು ಮಾಡಿರುವವರು. ಇವರು ಸೋಲನ್ನೇ ಕಾಣದಿರುವ ಸರದಾರ ಎಂದೇ ಆಂಧ್ರದಲ್ಲಿ ಖ್ಯಾತಿ ಪಡೆದಿದ್ದಾರೆ. ಖ್ಯಾತ ನಟರಾದ ವೆಂಕಟೇಶ್, ಜ್ಯೂನಿಯರ್ ಎನ್.ಟಿ.ಆರ್, ಮಹೇಶ್‌ಬಾಬು, ಬಾಲಕೃಷ್ಣ ಮೊದಲಾದವರ ಚಿತ್ರಗಳನ್ನು ನಿರ್ದೇಶಿಸಿದ ಜಯಂತ್ ಕನ್ನಡ. ಚಿತ್ರರಂಗಕ್ಕೆ ಮೊದಲ ಬಾರಿಗೆ ಬಂದಿರುವುದನ್ನು ಗಾಂಧಿನಗರದ ಇತರೆ ನಿರ್ದೇಶಕರು ಕುತೂಹಲದಿಂದ ವೀಕ್ಷಿಸುತ್ತಿದ್ದಾರೆ.

ಹಾಗೆಯೇ ಪುಟ್ಟಣ್ಣ ಕಣಗಾಲ್ ನಂತರ ಕನ್ನಡ ಚಿತ್ರರಂಗ ಕಂಡ ಅತ್ಯಂತ ಕ್ರಿಯಾಶೀಲ ನಿರ್ದೇಶಕ ಎನಿಸಿರುವ ಸುನೀಲ್‌ಕುಮಾರ್ ದೇಸಾಯಿ ಸುಮಾರು ಆರು ವರ್ಷಗಳ ಅಜ್ಞಾತವಾಸದ ನಂತರ ಸಿನಿಮಾ ಮಾಡಲು ಮತ್ತೆ ಕ್ಯಾಮರಾ ಹಿಂದೆ ನಿಂತಿದ್ದಾರೆ. ಇವರು ನಿರ್ದೇಶಿಸುತ್ತಿರುವ 'ತಂದಾನ ತಂದನಾನ' ಚಿತ್ರದಲ್ಲಿ ಅನಂತ್ ನಾಗ್, ರಮೇಶ್ ಅರವಿಂದ್, ರಂಗಾಯಣ ರಘು, ರಮೇಶ್‌ಭಟ್, ಕಿಶೋರ್, ಜಿ.ಕೆ.ಗೋವಿಂದ ರಾವ್, ಶ್ರೀನಿವಾಸಮೂರ್ತಿ, ಲೋಕನಾಥ್, ಶರಪಂಜರ ಶಿವರಾಂ... ಹೀಗೆ ಹಿರಿಯ ನಟರ ದೊಡ್ಡ ಪಟಾಲಂ ಇದೆ.



ಮೊನ್ನೆ ನಡೆದ ಮುಹೂರ್ತದಲ್ಲಿ ಅನಂತ್ ನಾಗ್ 'ಸುನೀಲ್ ಕುಮಾರ್ ದೇಸಾಯಿ ಕನ್ನಡ ಚಿತ್ರರಂಗದ ಜೀನಿಯಸ್. ಇವರಿಗಾಗಿ ಈ ಚಿತ್ರದಲ್ಲಿ ಪಾತ್ರ ಮಾಡಲು ಒಪ್ಪಿಕೊಂಡೆ' ಎಂದು ಹೇಳಿದರು. ಇತರೆ ಕಲಾವಿದರೂ ದೇಸಾಯಿ ಅವರನ್ನು ಹೊಗಳುತ್ತಾ, ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು. ಅವರೆಲ್ಲರ ಮಾತಿನ ತಾತ್ಪರ್ಯ ಇಷ್ಟೇ: 'ಸುನೀಲ್‌ಕುಮಾರ್ ದೇಸಾಯಿ ಅವರು ಮತ್ತೆ ಹಿಂದಿನಂತೆ ಮೆರೆಯುವಂತಾಗಬೇಕು'.

ಈ ಚಿತ್ರದ ನಿರ್ಮಾಪಕ ವಿನಾಯಕ ಜ್ಯುವೆಲ್ಲರ್ಸ್‌ನ ಚಿದಂಬರಂ ಮೊದಲ ಬಾರಿಗೆ ಚಿತ್ರ ನಿರ್ಮಿಸುತ್ತಿದ್ದಾರೆ. ದೇಸಾಯಿಯಂತವರು ಕನ್ನಡ ಚಿತ್ರರಂಗಕ್ಕೆ ಮತ್ತೆ ಬರಬೇಕು ಎಂಬ ಏಕೈಕ ಉದ್ದೇಶದಿಂದ ಅವರನ್ನು ಹುಡುಕಿಕೊಂಡು ಹೋಗಿ ಅವರಿಂದ ಈ ಚಿತ್ರವನ್ನು ಚಿದಂಬರಂ ಮಾಡಿಸುತ್ತಿದ್ದಾರೆ.



ದೇಸಾಯಿ ಕ್ರಿಯಾಶೀಲ ಎಂಬುದರಲ್ಲಿ ಸಂಶಯವೇ ಇಲ್ಲ ಆದರೆ ಇತ್ತೀಚೆಗೆ ಅವರು ಸಿನಿಮಾ ಆರಂಭಿಸಿದ ನಂತರ ಅದನ್ನು ನಿಗದಿತ ಸಮಯದಲ್ಲಿ ಮುಗಿಸದೇ ನಿರ್ಮಾಪಕರ ಪಾಲಿಗೆ ದೊಡ್ಡ ತಲೆನೋವಾಗಿದ್ದೂ ಇದೆ. ಈ ಚಿತ್ರದಲ್ಲಿ ಅವರು ಹಾಗೆ ಮಾಡಲಾರರು ಎಂಬುದನ್ನು ಎಲ್ಲರೂ ನಿರೀಕ್ಷಿಸುತ್ತಿದ್ದಾರೆ. ಒಂದು ವೇಳೆ ದೇಸಾಯಿಯವರು ತಮ್ಮ ಹಳೆ ಚಾಳಿಯನ್ನು ಬಿಡದೆ ವರ್ಷಾನುಗಟ್ಟಲೆ ಚಿತ್ರ ಮಾಡಿದ್ರೇ ಆದಲ್ಲಿ ಅವರ ಎರಡನೇ ಇನ್ನಿಂಗ್ಸ್ ವಿಫಲವಾಗುವುದು ಗ್ಯಾರಂಟಿ.

ಗಾಂಧಿನಗರಕ್ಕೆ ಸುಮಾರು ಆರೇಳು ವರ್ಷಗಳ ನಂತರ ಮತ್ತೆ ಬರುತ್ತಿರುವ ಇನ್ನೊಬ್ಬ ನಿರ್ದೇಶಕ ಎಂದರೆ ಶಿವಮಣಿ. ಇವರು ನಿರ್ದೇಶಿಸಿದ ಕೊನೆಯ ಚಿತ್ರ 'ಜೋಶ್'. ಹೊಸಬರನ್ನು ಹಾಕಿಕೊಂಡು ಮಾಡಿದ ಈ ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲದಿದ್ದರೂ ವಿಮರ್ಶಕರ ಮೆಚ್ಚುಗೆಯನ್ನು ಪಡೆದಿತ್ತು. ಇದನ್ನು ತಮಿಳಿನಲ್ಲಿ ಡಬ್ಬಿಂಗ್ ಮಾಡುವ ವಿಷಯದಲ್ಲಿ ನಿರ್ಮಾಪಕ ಎಸ್.ವಿ.ಬಾಬು ಅವರ ಜೊತೆಗೆ ಭಿನ್ನಾಭಿಪ್ರಾಯ ಉಂಟಾದ ನಂತರ ಶಿವಮಣಿ ಉದ್ಯಮದಿಂದ ಸ್ವಲ್ಪ ದೂರವಾಗಿದ್ದರು. ಈಗ ಆರ್.ಎಸ್.ಗೌಡ ನಿರ್ಮಿಸುತ್ತಿರುವ, ದುನಿಯಾ ವಿಜಯ್ ನಾಯಕನಾಗಿ ನಟಿಸುತ್ತಿರುವ 'ಸಿಂಹಾದ್ರಿ' ಎಂಬ ಚಿತ್ರದ ಮುಖಾಂತರ ಮತ್ತೆ ಗಾಂಧಿನಗರಕ್ಕೆ ಬರುತ್ತಿದ್ದಾರೆ.

ಶಿವಮಣಿ ಮೂಲತಃ 'ಥಿಶುಂ' ಚಿತ್ರಗಳ ನಿರ್ದೇಶಕ. ವಿಶೇಷವಾಗಿ ಡೈ ಸ್ಟಾರ್ ದೇವರಾಜ್ ಅವರಿಗೆ ಒಂದು ಹೊಸ ಇ ಕೊಟ್ಟ ಕೀರ್ತಿ ಶಿವಮಣಿಗೆ ಸಲ್ಲುತ್ತದೆ. ಶಿ ನಿರ್ದೇಶನದ 'ರಾಜಕೀಯ' ಮತ್ತು 'ಗೋಲಿಬಾರ್' ಬ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿ ಭಾರಿ ಅದೇರೀತಿ ಶಿವರಾಜ್‌ಕುಮಾರ್ ಅಭಿ 'ದೊರೆ' ಚಿತ್ರಪ್ರೇಕ್ಷಕರ ಮತ್ತು ವಿಮ ಮೆಚ್ಚುಗೆ ಪಡೆದಿತ್ತು.

ಇಷ್ಟು ವರ್ಷಗಳ ಕಾಲ ಚಿತ್ರರಂ ದೂರ ಉಳಿದ ಬಗ್ಗೆ ಶಿವಮಣಿ ಹ ಇಷ್ಟೇ: "ನನ್ನ ಚಿತ್ರಗಳು ಬಾಕ್ಸ್ ಆಫೀ ಸೋತ ನಂತರ ನಾನು ನನ್ನ ಬಗ್ಗೆ ಆಲೆ ಮಾಡುತ್ತ, 'ಅಪ್‌ಡೇಟ್' ಆ ಪ್ರಯತ್ನಿಸಿದೆ. ಈ ಸಂದರ್ಭದಲ್ಲಿ ಜನಾಂಗಕ್ಕೆ ಏನೇನು ಅಗತ್ಯವಿದೆ ಎಂಬ ಅರಿತು ಸಂಪೂರ್ಣವಾಗಿ ಹೊಸ ಹುಮ್ಮಸ್ಸಿನಿಂದ ಮಾಡಲು ಬಂದಿದ್ದೇನೆ."



PRINTER, PUBLISHER, PROPRIETOR AND EDITOR : GAURI LANKESH, No. 9, E.A.T Street, Basav